ಅಧ್ಯಕ್ಷರು.— ಈಗ ವಿತ್ತೀಯ ಕಾರ್ಯಕಲಾಪಗಳ ವಿಷಯದಲ್ಲಿ, ಭೂಸಾರ ಜಲ ರಕ್ಷಣೆ ಮತ್ತು ವ್ಯವಸಾಯ ಮತ್ತು ತೋಟಗಾರಿಕೆ ಇಲಾಖೆಗಳ ಬೇಡಿಕೆಯ ಮೇಲೆ ಚರ್ಚೆ. ಮೊದಲು ಮಾನ್ಯ ಬಿ. ಲಕ್ಕಪ್ಪನವರು ಮಾತನಾಡಲಿ.

ವಿತ್ತೀಯ ಕಾರ್ಯಕಲಾಪಗಳು

೧೯೮೮–೮೯ನೇ ಸಾಲಿಗೆ ಸಂಬಂಧಿಸಿದ ಅನುದಾನಗಳ ಬೇಡಿಕೆಗಳ ಮೇಲಿನ ಚರ್ಚೆ

ಬೇಡಿಕೆ ಕ್ರಮಸಂಖ್ಯೆ ೧ ಭೂಸಾರ ಜಲರಕ್ಷಣೆ ವ್ಯವಸಾಯ ಮತ್ತು
ಮತ್ತು ೩ ತೋಟಗಾರಿಕೆ ಬೇಡಿಕೆಗಳ ಮೇಲೆ ಚರ್ಚೆ

† ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ)ಸ.—ಮಾನ್ಯ ಅಧ್ಯಕ್ಷರೇ, ಈ ದಿನ ಪ್ರಮುಖವಾದ ಬೇಡಿಕೆಯಾದ ವ್ಯವಸಾಯ ಇಲಾಖೆಯ ಮೇಲೆ ಕರ್ನಾಟಕ ರಾಜ್ಯದ ಕೃಷಿ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ಅದರಲ್ಲಿರತಕ್ಕಂಥ ನಾನಾ ಲೋಪದೋಷಗಳಿಗಾಗಿ ವಿರೋಧ ಮಾಡುತ್ತಾ ನನ್ನ ಭಾಷಣವನ್ನು ಪ್ರಾರಂಭಿಸುತ್ತಿದ್ದೇನೆ.

ವ್ಯವಸಾಯದ ಪ್ರಾಮುಖ್ಯತೆ ಬಗ್ಗೆ ಹೇಳುವುದಾದರೆ ದಿನಗಟ್ಟಲೆ ಬೇಕಾಗುತ್ತದೆ. ವ್ಯವಸಾಯ ಬಹಳ ಪ್ರಮುಖವಾದ ವೃತ್ತಿ. ಈ ರಾಷ್ಟ್ರದಲ್ಲಿ ಸುಮಾರು ೧೦೦ಕ್ಕೆ ೭೦ ರಷ್ಟು ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸುವುದಲ್ಲದೆ, ಮಾನವ ಜೀವಂತವಾಗಿ ಬದುಕುವುದಕ್ಕೆ ಅಗತ್ಯವಾಗಿ ಬೇಕಾಗಿರತಕ್ಕಂಥ ಆಹಾರ ಧಾನ್ಯಗಳನ್ನು ಬೆಳೆದು ಸರಬರಾಜು ಮಾಡತಕ್ಕಂಥ ಒಂದು ಪ್ರಮುಖವಾದ ಇಲಾಖೆಯಾಗಿದೆ. ಮಾನವನಿಗೆ ಆಹಾರಧಾನ್ಯಗಳು, ಜಾನುವಾರುಗಳಿಗೆ ಮೇವು ಮತ್ತು ರಾಷ್ಟ್ರದಲ್ಲಿ ಕೈಗಾರಿಕೆಗಳು ಹೆಚ್ಚು ಬೆಳೆದು ವ್ಯಾಪಕವಾಗಿ ರಾಷ್ಟ್ರದ ಸಂಪತ್ತು ಅಭಿವೃದ್ಧಿ ಆಗಬೇಕಾಗಿದ್ದರೂ ಕೂಡಾ ವ್ಯವಸಾಯವೇ ಕಾರಣ. ಕೈಗಾರಿಕೆಗಳಿಗೆ ಅಗತ್ಯವಾಗಿ ಬೇಕಾಗಿರತಕ್ಕಂಥ ಕಚ್ಚಾವಸ್ತುಗಳನ್ನು ಒದಗಿಸತಕ್ಕಂಥ ಒಂದು ಮುಖ್ಯವಾದ ಇಲಾಖೆ ಇದಾಗಿದೆ.

ಆದರೆ ದುರ್ದೈವದಿಂದಾಗಿ ಈ ಒಂದು ಕಸುಬನ್ನು ಅವಲಂಬಿಸಿರತಕ್ಕಂಥ ಜನರ ಸಮಸ್ಯೆಗಳು ಎಷ್ಟು ಎಂದು ನಾವು ಲೆಕ್ಕ ಹಾಕಿ ಹೇಳುವುದಕ್ಕೆ ಸಾಧ್ಯ ಇರದಷ್ಟು ಇವೆ. ಅವುಗಳನ್ನು ನಾನು ಒಂದೊಂದಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ರಾಜ್ಯದಲ್ಲಿ ನಾಲ್ಕು ಕೋಟಿ ಎಪ್ಪತ್ತಾರು ಲಕ್ಷ ಎಕರೆಯಷ್ಟು ಭೂಪ್ರದೇಶ ಇದೆ. ಇದರಲ್ಲಿ ಸುಮಾರು ಎರಡು ಕೋಟಿ ಅರವತ್ತು ಲಕ್ಷ ಎಕರೆ ಭೂಮಿಯನ್ನು ನಾವು ವ್ಯವಸಾಯಕ್ಕಾಗಿ ಉಪಯೋಗಿಸುತ್ತಿದ್ದೇವೆ. ಎಂದರೆ ನಮ್ಮ ರಾಜ್ಯದಲ್ಲಿರತಕ್ಕಂಥ ಭೂಪ್ರದೇಶದಲ್ಲಿ ಸುಮಾರು ೫೫ ಪರ್ಸೆಂಟ್‌ನಷ್ಟು ಭೂಮಿಯನ್ನು ನಾವು ವ್ಯವಸಾಯಕ್ಕಾಗಿ ಉಪಯೋಗಿಸುತ್ತಿದ್ದೇವೆ. ಆದರೂ ಸಹ ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕ ವ್ಯವಸಾಯಗಾರರಲ್ಲಿರುವ ನಿರುದ್ಯೋಗವನ್ನು ಹೋಗಲಾಡಿಸುವುದಕ್ಕೆ ಸಾಧ್ಯವಾಗಿಲ್ಲ. ಸುಮಾರು ೫೫ ಪರ್ಸೆಂಟ್‌ನಷ್ಟು ಭೂಮಿಯನ್ನು ನಾವು ವ್ಯವಸಾಯಕ್ಕೆ ಉಪಯೋಗಿಸುತ್ತಿದ್ದರೂ ಕೂಡಾ ಇನ್ನೂ ಸುಮಾರು ೩೯ ಲಕ್ಷ ಎಕರೆಭೂಮಿಯನ್ನು ನಾವು ಹಾಳುಬಿಟ್ಟಿದ್ದೇವೆ. ಈ ಭೂಮಿಯನ್ನು ವ್ಯವಸಾಯಕ್ಕೆ ಯೋಗ್ಯವಾಗಿದ್ದರೂ ಕೂಡ ಈ ಭೂಮಿಯನ್ನು ಉಪಯೋಗಿಸಿ ಬೆಳೆಯನ್ನು ಬೆಳೆದು ಉತ್ಪಾದನೆ ಮಾಡುವುದರಲ್ಲಾಗಲೀ ಅಥವಾ ಭೂಹೀನ ರೈತರಿಗೆ, ಬಡರೈತರಿಗೆ ಈ ಭೂಮಿಯನ್ನು ಕೊಟ್ಟು ಅವರಿಗೆ ಉದ್ಯೋಗಾವಕಾಶವನ್ನು ಕಲ್ಪನೆ ಮಾಡತಕ್ಕ ಕಾರ್ಯವನ್ನಾಗಲೀ ನಾವು ಇನ್ನೂ ಮಾಡಬೇಕಾಗಿದೆ. ಇರತಕ್ಕಂಥ ಒಟ್ಟು ಪ್ರದೇಶದಲ್ಲಿ ಎಂಟು ಪರ್ಸೆಂಟ್‌ನಷ್ಟು ಭೂಮಿಯನ್ನು ಎಂದರೆ ಮೂವತ್ತೊಂಬತ್ತು ಲಕ್ಷ ಎಕರೆ ಭೂಮಿಯನ್ನು ನಾವು ಪಾಳು ಬಿಟ್ಟಿದ್ದೇವೆ. ಈ ಭೂಮಿಯ ಉಪಯೋಗವನ್ನು ಮಾಡಿ ಗ್ರಾಮಾಂತರ ಪ್ರದೇಶದಲ್ಲಿರುವ ನಿರುದ್ಯೋಗವನ್ನು ಹೋಗಲಾಡಿಸತಕ್ಕ, ಇದರಲ್ಲಿ ಬೆಳೆಯನ್ನು ಬೆಳೆದು ರಾಜ್ಯದಲ್ಲಿ ಆಹಾರಧಾನ್ಯಗಳ ಉತ್ಪಾದನೆಯನ್ನು ಅಧಿಕಗೊಳಿಸತಕ್ಕ ಅಥವಾ ಈ ಭೂಮಿಯನ್ನು ಯಾರು ಯಾರು ಭೂಹೀನರಿದ್ದಾರೆ ಅವರಿಗೆ ಇದನ್ನು ಕೊಟ್ಟು ಅಭಿವೃದ್ಧಿ ಪಡಿಸತಕ್ಕಂಥ ಒಂದು ಕೆಲಸ ನಮ್ಮ ರಾಜ್ಯದಲ್ಲಿ ಇನ್ನೂ ಆಗಬೇಕಾಗಿದೆ.

ಈ ರಾಜ್ಯದಲ್ಲಿ ಮೂರು ಕೋಟಿ ಎಪ್ಪತ್ತೈದು ಲಕ್ಷ ಮೂವತ್ತೈದು ಸಾವಿರ ಜನಸಂಖ್ಯೆ ಇದೆ. ಇದರಲ್ಲಿ ಸುಮಾರು ಎಪ್ಪತ್ತು ಪರ್ಸೆಂಟ್‌ನಷ್ಟು ಜನ ಗ್ರಾಮಾಂತರ ಪ್ರದೇಶದಲ್ಲಿ ಇದ್ದು ಈ ವ್ಯವಸಾಯ

ವೃತ್ತಿಯನ್ನು ಅವಲಂಬಿಸಿದ್ದಾರೆ. ಅಂದರೆ ಎರಡು ಕೋಟಿ ಅರವತ್ತನಾಲ್ಕು ಲಕ್ಷ ಆರುಸಾವಿರ ಜನ ನಮ್ಮ ಕರ್ನಾಟಕ ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ವಾಸ ಮಾಡುತ್ತಾ ವ್ಯವಸಾಯವನ್ನೇ ಮುಖ್ಯ ಕಸಬನ್ನಾಗಿ ಅವಲಂಬಿಸಿ ಜೀವನ ನಡೆಸತಕ್ಕ ಪರಿಸ್ಥಿತಿ ಇದೆ. ಇದರಲ್ಲಿ ಕೇವಲ ಶಿಲ ಪರ್ಸೆಂಟ್ ನಷ್ಟು ಜನಗಳು ಪಟ್ಟಣದಲ್ಲಿ ಇದ್ದಾರೆ. ಉಳಿದ ಬಹುಭಾಗ ಜನ ಗ್ರಾಮಾಂತರ ಪ್ರದೇಶಗಳಲ್ಲಿ ವಾಸ ಮಾಡಿಕೊಂಡು ವ್ಯವಸಾಯವನ್ನು ಅವಲಂಬಿಸಿಕೊಂಡು ಜೀವನ ಮಾಡಬೇಕಾದಂಥ ಪರಿಸ್ಥಿತಿ ಇದೆ.

ಇದರಲ್ಲಿ ಬಹುಶಃ ನಾವು ೫೫ ಪರ್ಸೆಂಟ್‌ನಷ್ಟು ಭೂಮಿಯನ್ನು ಮಾತ್ರ ವ್ಯವಸಾಯಕ್ಕೆ ಉಪಯೋಗಿಸುತ್ತಿದ್ದೇವೆ. ಈ ರಾಷ್ಟ್ರದಲ್ಲಿ ವ್ಯವಸಾಯವನ್ನು ಲಾಭದಾಯಕವಾದ ಕಸಬನ್ನಾಗಿ ಮಾಡಬೇಕಾದರೆ ಅನೇಕ ಅಂಶಗಳನ್ನು ನಾವು ಗಮನದಲ್ಲಿಡಬೇಕಾಗುತ್ತದೆ. ಇಡೀ ಭೂಮಿ ಫಲವತ್ತಾಗಿರುವುದರ ಜೊತೆಗೆ ಆ ಭೂಮಿಗೆ ಬೇಕಾದಷ್ಟು ನೀರನ್ನು ಸಹ ಒದಗಿಸಿಕೊಡಬೇಕಾಗುತ್ತದೆ. ಆದರೆ ಇವತ್ತು ನಮ್ಮಲ್ಲಿ ಪರಿಸ್ಥಿತಿ ಏನಾಗಿದೆ ಎಂದರೆ ಭೂಮಿ ಫಲವತ್ತಾಗಿದ್ದರೆ ನೀರು ಸಿಗುವುದಿಲ್ಲ. ನೀರು ಸಿಕ್ಕಿದರೆ ಫಲವತ್ತಾದ ಭೂಮಿ ಸಿಗುವುದಿಲ್ಲ. ಈ ರೀತಿಯಾದರೆ ವ್ಯವಸಾಯವನ್ನು ಮಾಡುವುದಕ್ಕಾಗುವುದಿಲ್ಲ. ಇದಕ್ಕೆ ಸರಿಯಾದ ಯೋಜನೆಗಳನ್ನು ರೂಪಿಸಿಕೊಳ್ಳದ ಹೊರತು ವ್ಯವಸಾಯವನ್ನು ಅಭಿವೃದ್ಧಿಗೊಳಿಸುವುದಕ್ಕೆ ಆಗುವುದಿಲ್ಲ. ಇವತ್ತಿನ ಪರಿಸ್ಥಿತಿ ಏನಾಗಿದೆ ಎಂದರೆ ನಮ್ಮ ರಾಷ್ಟ್ರದಲ್ಲಿ ವ್ಯವಸಾಯವನ್ನು ಹಿಂಗಾರು ಮತ್ತು ಮುಂಗಾರುಗಳಿಗೆ ಅವಲಂಭಿಸತಕ್ಕಂಥದ್ದು ಜಾಸ್ತಿ ನಾವು ಕಾಣುತ್ತಿದ್ದೇವೆ. ಈ ಎರಡು ಮಾನ್‌ಸೂನ್‌ಗಳನ್ನು ರೈತರು ಅವಲಂಬಿಸಿ ಯಾವ ರೀತಿಯಲ್ಲಿ ವ್ಯವಸಾಯ ಮಾಡಿ ಜೀವನ ಮಾಡುವುದಕ್ಕೆ ಆಗುತ್ತದೆ ? ಕರ್ನಾಟಕ ರಾಜ್ಯದಲ್ಲಿ ನಾವು ಎಷ್ಟು ನೀರಾವರಿ ಅಭಿವೃದ್ಧಿಯನ್ನು ಮಾಡಿದ್ದೇವೆಂದು ನೋಡಿದರೆ ಕೇವಲ ೧೪.೨೩ ರಷ್ಟು ಮಾತ್ರ ಇಷ್ಟು ಪ್ರದೇಶದ ಭೂಮಿಯನ್ನು ಮಾತ್ರ ನೀರಾವರಿಗೆ ಅಳವಡಿಸಲು ಇರಿಗೇಷನ್ ಪ್ರಯತ್ನ ನಡೆದಿದೆ. ಅದು ಈಗ ಸ್ವಲ್ಪ ಹೆಚ್ಚು ಕಡಿಮೆ ೧೭½ ಪರ್ಸೆಂಟ್ ಹೋಗಿರಬಹುದು ಆಗಿದ್ದರೂ ಕೂಡ ಇನ್ನುಳಿದ ಬಹು ಭಾಗದ ಭೂಮಿ ಖುಷ್ಕಿ ಸಾಗುವಳಿಯಲ್ಲಿಯೇ ವ್ಯವಸಾಯ ಮಾಡಿ ಬದುಕುತ್ತಿದ್ದಾರೆ. ಇದಕ್ಕೆಲ್ಲಾ ಕಾರಣ ನಾವು ನೋಡುತ್ತಿದ್ದೇವೆ, ಅನಿಶ್ಚಿತ್, ಅಕಾಲಿಕವಾಗಿ ಬರುವಂತಹ ಮಳೆ, ಈ ಅಕಾಲಿಕವಾಗಿ ಬರತಕ್ಕಂಥ ಮಳೆಯನ್ನು ಆಧರಿಸಿ ವ್ಯವಸಾಯ ಮಾಡತಕ್ಕ ರೈತ ಜೀವನ ಮಾಡುವುದಾದರೂ ಹೇಗೆ ? ಅವನು ಬದುಕುವುದಾದರೂ ಹೇಗೆ ? ಇವರ ಬಗ್ಗೆ ಯಾರಾದರೂ ಯೋಚನೆ ಮಾಡಿದ್ದೀರಾ ? ಇವರಿಗೆ ಯಾವುದೇ ರೀತಿಯಿಂದಲೂ ಅನುಕೂಲ ಮಾಡಿಕೊಡದಿದ್ದರೆ ತಪ್ಪಾಗುವುದಿಲ್ಲವೇ ? ಯಾವುದೇ ವೇದಿಕೆಗಳನ್ನು ತೆಗೆದುಕೊಂಡರೂ ಸಹ ರೈತರ ಬಗ್ಗೆ ಮಾತನಾಡದೆ, ಕಾರ್ಮಿಕರ ಬಗ್ಗೆ ಮಾತನಾಡದೆ ಆ ವೇದಿಕೆಗಳಲ್ಲಿ ಭಾಷಣಗಳು ಮುಕ್ತಾಯವಾಗುವುದೇ ಇಲ್ಲ. ಈ ರೈತರ ಬಗ್ಗೆ ರಾಜಕಾರಣಿಗಳು ಮಾತನಾಡುತ್ತಾರೆ, ಅವರು ಯಾವ ಪಕ್ಷದವರೇ ಇರಲಿ. ವೇದಿಕೆಯ ಮೇಲೆ ನಿಂತ ಕೂಡಲೆ ರೈತರ ಬಗ್ಗೆ ರೈತ ಕಾರ್ಮಿಕರ ಬಗ್ಗೆ ಮಾತನಾಡುತ್ತಾ ರೈತ ಈ ದೇಶದಲ್ಲಿ ಅಭಿವೃದ್ಧಿ ಹೊಂದದಿದ್ದರೆ ಈ ರಾಷ್ಟ್ರದ ಪ್ರಗತಿ ಇಲ್ಲ. ಇತ್ಯಾದಿ, ಇತ್ಯಾದಿಗಳನ್ನು ನಾವು ವೇದಿಕೆಗಳಲ್ಲಿ ಹೇಳುತ್ತೇವೆ. ಆದರೆ ಮಾತಿಗೂ ಕೃತಿಗೂ ಹೊಂದಾಣಿಕೆಯಾಗುವಂತಿರಬೇಕು. ಇವತ್ತು ನಾವು ನಮ್ಮ ರಾಜ್ಯದಲ್ಲಿ ಕೇವಲ ಹದಿನೇಳೂವರೆ ಪರ್ಸೆಂಟ್‌ನಷ್ಟು ಮಾತ್ರ ಇರಿಗೇಷನ್ ಇಟ್ಟುಕೊಂಡಿದ್ದೇವೆ. ಶೇಕಡ ೫೫ ಪರ್ಸೆಂಟ್‌ನಷ್ಟು ಭೂಮಿಯನ್ನು ಮಾತ್ರ ನಾವು ವ್ಯವಸಾಯಕ್ಕೆ ಉಪಯೋಗಿಸಿ ಇನ್ನುಳಿದ ಭೂಮಿಯನ್ನು ಒಣ ಪ್ರದೇಶವನ್ನಾಗಿ ಬಿಟ್ಟಿದ್ದೇವೆ. ರೈತರ ಬಗ್ಗೆ ಆಗಲಿ, ರೈತರ ಹೊಲಗಳಿಗೆ ನೀರು ಒದಗಿಸಿ ಅವರನ್ನು ಅಭಿವೃದ್ಧಿಪಡಿಸಲು ಪ್ರಯತ್ನ ನಡೆಸಿಲ್ಲ, ಅವರ ಬಗ್ಗೆ ಕಳಕಳಿ ಇಲ್ಲ, ಅವರ ಬಗ್ಗೆ ಆಸಕ್ತಿ ಇಲ್ಲ, ಇದನ್ನು ನಾವು ಈ ಒಂದು ನಿದರ್ಶನದಿಂದ ಒಪ್ಪಿಕೊಳ್ಳಬೇಕಾಗುತ್ತದೆ. ಇದಕ್ಕಿಂತ ಬೇರೆ ಕೈಗನ್ನಡಿ ಬೇಕಾಗಿಲ್ಲ. ರೈತನನ್ನು ನಾವು ಈ ದೇಶದ ಬೆನ್ನುಮೂಳೆ ಎಂದೂ ರಾಷ್ಟ್ರದ ಸರ್ವರಿಗೂ ಅನ್ನ ಕೊಡುವ ಅನ್ನದಾತನೆಂದೂ ಹೇಳುತ್ತೇವೆ, ಆದರೆ ಅವನ ಜೀವನವನ್ನು ಲಾಭದಾಯಕವನ್ನಾಗಿ ಮಾಡಲು ಇದುವರೆವಿಗೂ ಯಾವ ಪ್ರಯತ್ನ ಸಹ ನಡೆದಿಲ್ಲ. ಅವನ ಭೂಮಿಗೆ ನೀರು ಒದಗಿಸಿಕೊಡತಕ್ಕಂಥ ಪ್ರಯತ್ನ ನಾವು ಮಾಡಿಲ್ಲ. ಹೊರರಾಜ್ಯಗಳಿಗೆ ನಮ್ಮ ರಾಜ್ಯವನ್ನು ಹೋಲಿಕೆ ಮಾಡಿ ನೋಡಿದರೆ ಆ ರಾಜ್ಯಗಳಲ್ಲಿ ಆಗಿರುವಂತಹ ಪ್ರಗತಿ, ಅಭಿವೃದ್ಧಿಯನ್ನು ನೋಡಿದರೆ ನಿಜವಾಗಿಯೂ ನಾಚಿಕೆಯಾಗುವಂತಹ ಪರಿಸ್ಥಿತಿಯಲ್ಲಿ ನಾವೀದ್ದೇವೆ. ರೈತರನ್ನು ನಾವು ಪೂರ್ಣವಾಗಿ ಕಡೆಗಣಿಸಿದ್ದೇವೆ. ವೇದಿಕೆಗಳಲ್ಲಿ ಮತ್ತು ಸಂದರ್ಭ ಬಂದಾಗ ಅವರಿಂದ ಲಾಭ ಪಡೆದುಕೊಳ್ಳುವುದಕ್ಕಾಗಿ ಅಂದರೆ ಚುನಾವಣೆ ಸಂದರ್ಭ ಬಂದಾಗ ಮಾತನಾಡತಕ್ಕಂಥ ಮಾತಿದು ಎಂದು

ನಾನು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ವ್ಯವಸಾಯ ಲಾಭದಾಯಕವಾದ ಒಂದು ಕಸಬು ಆಗಬೇಕಾದರೆ ನೀರಾವರಿ ಬಗ್ಗೆ ಹೆಚ್ಚಿನ ಆದ್ಯತೆ ನಾವು ಕೊಡಲೇಬೇಕಾಗುತ್ತದೆ. ಇವತ್ತು ನಾವು ಉದಾಹರಣೆಗೆ ಆಂಧ್ರಪ್ರದೇಶವನ್ನು ತೆಗೆದುಕೊಂಡರೆ ಅಲ್ಲಿ ಸ್ವಾತಂತ್ರ್ಯ ಬರುವುದಕ್ಕಿಂತ ಮುಂಚೆ ೭ ಪರ್ಸೆಂಟ್‌ನಷ್ಟು ಇದ್ದ ನೀರಾವರಿ ಈಗ ಸಾಕಷ್ಟು ಅಭಿವೃದ್ಧಿಯನ್ನು ಮಾಡಿದ್ದಾರೆ. ಅಲ್ಲಿ ವ್ಯವಸಾಯವನ್ನು ಲಾಭದಾಯಕವಾದ ಕಸಬನ್ನಾಗಿ ಮಾಡಿದ್ದಾರೆ. ನಾವು ದಿಲ್ಲಿಗೆ ಹೋಗತಕ್ಕಂಥ ಸಮಯದಲ್ಲಿ ರೈಲಿನಲ್ಲಿ ಕುಳಿತುಕೊಂಡು ನೋಡಿದರೆ ಗೊತ್ತಾಗುತ್ತದೆ, ಅಲ್ಲಿ ದಿನ್ನೆಗಳಲ್ಲಿ ದೊಡ್ಡದೊಡ್ಡ ಕಲ್ಲು ಗುಟ್ಟಗಳಲ್ಲಿರತಕ್ಕಂಥ ಹಳ್ಳಿಗಳಲ್ಲಿ ನೀರು ತುಂಬಿದ್ದು ಅಲ್ಲಿ ಇರತಕ್ಕಂಥ ಅಲ್ಪಸ್ವಲ್ಪ ಅಭಿವೃದ್ಧಿ ಜಾಗಗಳಲ್ಲಿಯೂ ಭತ್ತವನ್ನು ಬೆಳೆದಿರುವುದು ಕಣ್ಣಿಗೆ ಎದ್ದು ಕಾಣುತ್ತದೆ. ಆದರೆ ನಾವು ಇಲ್ಲಿ ಶೇಕಡ ಹದಿನೇಳುವರೆ ಪರ್ಸೆಂಟ್‌ನಷ್ಟು ನೀರಾವರಿಯನ್ನು ಮಾತ್ರ ಇಟ್ಟುಕೊಂಡಿದ್ದೇವೆ. ರಾಜ್ಯದಲ್ಲಿ ನೀರು ಸಿಕ್ಕುತ್ತಿದ್ದರೂ ಆ ನೀರನ್ನು ರೈತರ ಭೂಮಿಗಳಿಗೆ ಒದಗಿಸತಕ್ಕ ಶಾಶ್ವತವಾದ ರಚನಾತ್ಮಕವಾದ ಕಾರ್ಯಕ್ರಮಗಳು ಸಾಕಷ್ಟು ಆಗಿಲ್ಲದೇ ಇರುವುದರಿಂದ ಅದರ ಬಗ್ಗೆ ಈ ಸದನ ಯೋಚನೆ ಮಾಡಬೇಕಾಗಿದೆ. ಅಕಾಲಕ್ಕೆ ಬರತಕ್ಕಂಥ ಮಳೆ ಮತ್ತು ಕಾಲಕ್ಕೆ ಸರಿಯಾಗಿ ಬರದೇ ಇರತಕ್ಕಂಥ ಮುಂಗಾರು ಮಳೆಯಿಂದ ರೈತರು ಬಹಳ ಕಷ್ಟಪಡುತ್ತಿದ್ದಾರೆ. ಈ ಕಷ್ಟದಿಂದ ರೈತರುಗಳನ್ನು ಕಾಪಾಡಬೇಕಾದರೆ, ಅವರ ಗೋಳನ್ನು ಪರಿಹರಿಸಬೇಕಾದರೆ ಮೊದಲು ರೈತರ ಭೂಮಿಗೆ ನೀರು ಒದಗಿಸುವುದು ಬಹಳ ಮುಖ್ಯ. ಇದರ ಜೊತೆಗೆ ಮಾನ್ಯ ಅಧ್ಯಕ್ಷರೇ, ಭೂಸಾರ ಸಂರಕ್ಷಣೆ ಎನ್ನುವ ಒಂದು ಕಾರ್ಯಕ್ರಮವನ್ನು ಕೃಷಿ ಇಲಾಖೆ ಅಡಿಯಲ್ಲಿ ಮಾಡಲಾಗುತ್ತಿದೆ. ಭೂಮಿಗೆ ನೀರನ್ನು ಕೊಟ್ಟರೆ ಸಾಲದು. ಅಷ್ಟೇ ವ್ಯಾಪಕವಾಗಿ ಭೂಮಿಯಲ್ಲಿರುವ ಫಲವತ್ತತೆಯನ್ನು ಕಾಪಾಡಿಕೊಂಡು ಬರಬೇಕು. ಭೂಮಿಯನ್ನು ಫಲವತ್ತಾಗಿ ಮಾಡುವ ಕಾರ್ಯಕ್ರಮ ಏನು ಇದೆ ಅದು ರಚನಾತ್ಮಕವಾಗಿ ನಡೆಯಬೇಕಾಗಿದೆ. ಆದರೆ, ಈ ಕಾರ್ಯಕ್ರಮ ಏನಾಗಿವೆ ಎಂದರೆ, ರೈತರಿಗೆ ಉಪಯೋಗ ಇಲ್ಲದ ಕಾರ್ಯಕ್ರಮದಂತೆ ಪರಿಣಮಿಸಿದೆ. ಅಧ್ಯಕ್ಷರೇ, ಭೂ ಸಾರ ಸಂರಕ್ಷಣೆ ಕಾರ್ಯಕ್ರಮ ಎಂದರೆ ರೈತರ ಜಮೀನುಗಳಿಗೆ ಒಡ್ಡುಗಳನ್ನು ನಿರ್ಮಿಸುವುದು, ಇಳಿಜಾರು ಇರುವ ಕಡೆ ಎತ್ತರದ ಬದುಗಳನ್ನು ಹಾಕುವುದು, ಹಳೆ ಬದುಗಳನ್ನು ದುರಸ್ತಿ ಮಾಡುವುದು, ಕೊರಕಲು ಇದ್ದ ಕಡೆ ಆ ಜಾಗಗಳಲ್ಲಿ ಅಡ್ಡ ಅಣೆಗಳನ್ನು ಹಾಕುವುದು, ಹಳ್ಳಗಳಿಗೆ ತಡೆಗಳನ್ನು ಕಟ್ಟತಕ್ಕ ಕೆಲಸ ಈ ಕಾರ್ಯಕ್ರಮಗಳನ್ನು ಭೂಸಾರ ಸಂರಕ್ಷಣೆ ರೂಪದಲ್ಲಿ ಕೈಗೊಂಡಿದ್ದಾರೆ. ಆದರೆ ಇವರು ಬದುಗಳನ್ನು ಬೇಸಿಗೆ ಕಾಲದಲ್ಲಿ ಹಾಕದೆ ಮಳೆಗಾಲದಲ್ಲಿ ಹಳ್ಳಿಗಳ ಕಡೆ ಹೋಗಿ ಬದುಗಳನ್ನು ಹಾಕುವುದಕ್ಕೆ ಪ್ರಯತ್ನ ಮಾಡುತ್ತಾರೆ. ಮಳೆಗಾಲದಲ್ಲಿ ಎಲ್ಲಾ ರೈತರುಗಳು ತಮ್ಮ ತಮ್ಮ ಭೂಮಿಯಲ್ಲಿ ಬಿತ್ತನೆ ಮಾಡಿಕೊಂಡು ಬೆಳೆ ಬೆಳೆಯುವುದಕ್ಕೆ ಪ್ರಾರಂಭಿಸುತ್ತಾರೆ. ಅಂಥ ಸಮಯದಲ್ಲಿ ಈ ಭೂಸಾರ ಸಂರಕ್ಷಣೆ ಮಾಡುವ ಅಧಿಕಾರಿಗಳು ಹೋಗಿ ಬೆಳೆದಿರತಕ್ಕ ಪೈರುಗಳನ್ನು ನಾಶ ಮಾಡಿ ಬದುಗಳನ್ನು ಹಾಕುವುದಕ್ಕೆ ಪ್ರಾರಂಭಿಸುತ್ತಾರೆ, ಇದರಿಂದ ರೈತರುಗಳಿಗೆ ಬಹಳ ನಷ್ಟವಾಗುವುದಕ್ಕೆ ಕಾರಣವಾಗುತ್ತಿದೆ. ಬೇಸಿಗೆ ಕಾಲದಲ್ಲಿ ಭೂಸಂರಕ್ಷಣಾ ಇಲಾಖೆಯವರು ಎಲ್ಲಾ ಹಳ್ಳಿಗಳಿಗೂ ಹೋಗಿ ಬದುಗಳನ್ನು ಹಾಕುವಂಥ ವ್ಯವಸ್ಥೆ ಮಾಡಬೇಕು. ನಮ್ಮ ಕ್ಷೇತ್ರದಲ್ಲಿ ಈ ತರಹದ ಒಂದು ಕೆಲಸ ಆಗಿತ್ತು. ಬಿತ್ತನೆ ಮಾಡಿ ಪೈರುಗಳು ಚೆನ್ನಾಗಿ ಬಂದಿದ್ದ ಸಮಯದಲ್ಲಿ ಭೂಸಾರ ಸಂರಕ್ಷಣೆಯವರು ಬಂದು ಬದುಗಳನ್ನು ಹಾಕುವುದಕ್ಕೆ ಪ್ರಾರಂಭ ಮಾಡಿದ್ದರು. ಈ ಸಮಯದಲ್ಲಿ ಬದುಗಳನ್ನು ಹಾಕಬೇಡಿ ಎಂದು ಹೇಳುವುದಕ್ಕೆ ರಾಜಕಾರಣಿಗಳ ಇನ್‌ಫ್ಲೂಯೆನ್ಸ್‌ನ್ನು ರೈತರುಗಳು ಮಾಡಬೇಕಾಗಿ ಬಂತು. ಅಪರೂಪವಾಗಿ ಬರುವ ಮಳೆಯನ್ನು ಆಶ್ರಯಿಸಿ ರೈತರುಗಳು ಬೆಳೆಯನ್ನು ಬೆಳೆದಿರುವ ಸಂದರ್ಭದಲ್ಲಿ ಭೂಸಾರ ಸಂರಕ್ಷಣೆಯವರು ಬಂದು ಬದುಗಳನ್ನು ಹಾಕಿ ರೈತರುಗಳಿಗೆ ಕೈಗೆ ಬಂದ ಬೆಳೆ ಸಿಕ್ಕದ ಹಾಗೆ ಮಾಡುತ್ತಿದ್ದಾರೆ ಮಳೆಗಾಲದಲ್ಲಿ ಬದುಗಳನ್ನು ಹಾಕಿದರೆ ಏನಾಗುತ್ತದೆ ಎಂದರೆ, ಕೈಗೆ ಬಂದಂತಹ ಮಗು ಹತ ಆದರೆ ಎಷ್ಟು ದುಃಖ ಆಗುತ್ತದೋ ಅಷ್ಟೇ ದುಃಖ ರೈತರುಗಳಿಗೆ ಆಗುತ್ತದೆ. ರೈತನು ಕಷ್ಟಪಟ್ಟು ಬೆಳೆಸಿದ ಪೈರುಗಳನ್ನು ನಾಶ ಮಾಡಿ ಬದುಗಳನ್ನು ಹಾಕುವುದು ಸರಿಯಲ್ಲ. ಅದೂ ಅಲ್ಲದೆ, ಮಾನ್ಯ ಅಧ್ಯಕ್ಷರೇ, ಬದುಗಳನ್ನು ಹಾಕುವುದಕ್ಕೆ ಸುಮಾರು ಐದು ನೂರು ಅಥವಾ ಒಂದು ಸಾವಿರ ಎಕರೆಗೆ ನಕ್ಷೆಯನ್ನು ತಯಾರು ಮಾಡಿಕೊಂಡಿರುತ್ತಾರೆ. ಮಳೆಗಾಲದಲ್ಲಿ ಇವರು ಬದುಗಳನ್ನು ಹಾಕುವುದಕ್ಕೆ ಹೋಗುವುದರಿಂದ ನಕ್ಷೆ ಮಾಡಿಕೊಂಡಷ್ಟು ಭೂಮಿಗೆ ಬದುಗಳನ್ನು ಹಾಕುವುದಕ್ಕೆ ಆಗದೇ ಕೇವಲ ನೂರೋ ಅಥವಾ ನೂರೈವತ್ತೋ ಎಕರೆಗೆ ಮಾತ್ರ ಬದುಗಳನ್ನು ಹಾಕಿಕೊಂಡು ಬರುತ್ತಾರೆ. ಮೊನ್ನೆ ನಮ್ಮ ತಾಲ್ಲೂಕಿನಲ್ಲಿ ಇದರ ಬಗ್ಗೆ ಚಳುವಳಿಯೂ ಸಹ ರೈತರುಗಳು ಮಾಡಿದ್ದರು. ಭೂಸಾರ ಸಂರಕ್ಷಣೆ ಇಲಾಖೆಯ

ಮುಖಾಂತರ ಕೈಗೊಂಡ ಕಾಮಗಾರಿಗಳಿಗೆ ತಗುಲಿಪ ವೆಚ್ಚವನ್ನು ರೈತರುಗಳಿಂದಲೇ ವಸೂಲು ಮಾಡ ತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಐದು ನೂರು ಎಕರೆ ಅಥವಾ ಒಂದು ಸಾವಿರ ಎಕರೆ ಭೂಮಿಗೆ ಬದುಗಳನ್ನು ನಿರ್ಮಾಣ ಮಾಡುವ ಕಡೆ ಮುನ್ನೂರು ಎಕರೆ ಎಂಟು ನೂರು ಎಕರೆಗಳಲ್ಲಿ ಮಾತ್ರ ಬದುಗಳನ್ನು ನಿರ್ಮಾಣ ಮಾಡಿ ಪೂರ್ಣ ಪ್ರಮಾಣದಲ್ಲಿ ಹಣವನ್ನು ಪಡೆದುಕೊಂಡಿರುವುದನ್ನು ನಾವು ನೋಡಿದ್ದೇವೆ. ಆಮೇಲೆ ಬದುಗಳ ಮಧ್ಯೆ ನೀರು ಹರಿದು ಹೋಗುವುದಕ್ಕೆ ನಿರ್ಮಾಣ ಮಾಡಿದ ಸಣ್ಣ ಸಣ್ಣ ಕೋಡಿಗಳಿಗೆ ಕಲ್ಲುಗಳನ್ನೇ ಹಾಕಿರುವುದಿಲ್ಲ, ಕಲ್ಲುಗಳನ್ನು ಹಾಕದೇ ಇದ್ದರೂ ಸಹ ಡಿಮ್ಯಾಂಡ್‌ನಲ್ಲಿ ಮಾತ್ರ ಕಲ್ಲುಗಳ ಬಾಬ್ತು ಹಣವನ್ನು ಪಡೆದುಕೊಂಡಿರುವುದನ್ನು ಸಹ ನಾವು ಕಾಣಬಹುದು.

ಇಂತಹ ಪರಿಸ್ಥಿತಿಯಲ್ಲಿ ಅವನು ಏನು ಮಾಡಬೇಕೆಂದರೆ ತನಗಿರತಕ್ಕಂಥ ಒಂದು ಎಕರೆಯೋ, ಎರಡು ಎಕರೆಯೊ, ಜಮೀನನ್ನು ಮಾರಿ ಕೊಡಬೇಕಾದಂಥ ಹಣವನ್ನು ಏರ್ಪಾಡು ಮಾಡಿಕೊಳ್ಳ ತಕ್ಕಂಥ ಪರಿಸ್ಥಿತಿಯು ಇದೆ. ಈ ರೀತಿಯಲ್ಲಿ ಹೀಗೆ ಒಂದು ಕಾರ್ಯಕ್ರಮ ನಡೆದರೆ ಹೇಗೆ? ಬಹುಶಃ ಇವರಿಗೆ ಅದರ ಅರಿವು ಇಲ್ಲ ಎಂದು ಹೇಳಬೇಕಾಗುತ್ತದೆ. ಸಂಬಂಧಪಟ್ಟವರು ರೈತರಿಗೆ ಈ ವಿಷಯ ದಲ್ಲಿ ಸರಿಯಾಗಿ ಹೇಳುವುದಿಲ್ಲ. ನಾಲೆಂಡ್ ಮತ್ತಿತರ ವಿಚಾರಗಳಲ್ಲಿ ಸಂಬಂಧಪಟ್ಟ ರೈತರ ಅಭಿಪ್ರಾಯವನ್ನು ಅಧಿಕಾರಿಗಳು ಪಡೆಯುವುದಕ್ಕೆ ಹೋಗುವುದಿಲ್ಲ. ಈ ವಿಚಾರಗಳಲ್ಲಿ ರೈತರ ಅಭಿಪ್ರಾಯಗಳನ್ನು ಪಡೆಯಬೇಕು. ಅವರಿಂದ ಸಹಿಯನ್ನು ಪಡೆಯಬೇಕು. ಆದರೆ ಈ ಯಾವ ಕ್ರಮವನ್ನು ಕೂಡ ಮಾಡುತ್ತಿಲ್ಲ. ಈ ವಿಚಾರದಲ್ಲಿ ರೈತರ ಯಾವ ಸಲಹೆಯನ್ನೂ ಕೂಡ ಪಡೆಯದೆ ಏಕಾಏಕಿಯಾಗಿ ಕೆಲಸವನ್ನು ಪ್ರಾರಂಭ ಮಾಡಿ ಮುಗಿಸುತ್ತಾರೆ, ಹೀಗೆ ಬೇಕಾದ ನಾಲ್ಕು ಕಡೆಗಳಲ್ಲಿ ಕೆಲಸ ಮಾಡುವುದನ್ನು ಬಿಟ್ಟು ಒಂದು ಕಡೆಯಲ್ಲಿ ಮಾತ್ರ ಮಾಡಿ ಮುಗಿಸಿ ರೈತರಿಂದ ಹಣವನ್ನು ವಸೂಲು ಮಾಡತಕ್ಕಂಥ ಕೆಲಸವನ್ನು ಮಾಡುತ್ತಿದ್ದಾರೆ.

ಇನ್ನು ಭೂಸಾರ ಸಂರಕ್ಷಣಾ ಇಲಾಖೆಯಲ್ಲಿ ಕೆಲಸ ಮಾಡತಕ್ಕಂಥ ಯಾರು ಕೃಷಿ ಸಹಾಯಕ ರಾಗಿ ಹೋಗಿರುತ್ತಾರೆ ಅಂಥಹವರಿಗೆ ಬೇರೆ ಇಲಾಖೆಗೆ ಹೋಗಿ ಎಂದರೆ, ಅವರು ಹೋಗುವುದಿಲ್ಲ. ಏತಕ್ಕೆಂದರೆ, ಬಹುಶಃ ೬೦ ಪರ್ಸೆಂಟ್‌ನಷ್ಟು ಏನು ಹಣವನ್ನು ಖರ್ಚು ಈ ಉದ್ದೇಶಕ್ಕಾಗಿ ಮಾಡುತ್ತಾರೆ ಅದು ಈ ಸಿಬ್ಬಂದಿ ವರ್ಗಕ್ಕೆ ಲಾಭದಾಯಕವಾಗಿರತಕ್ಕಂಥ ಒಂದು ಸ್ಥಿತಿ ಇದೆ. ಇದರಿಂದಾಗಿ ಯಾವ ಒಂದು ಮೊತ್ತದ ಹಣವನ್ನು ರೈತರ ಹಿತಕ್ಕಾಗಿ ಸರ್ಕಾರದವರು ಖರ್ಚು ಮಾಡುತ್ತಿದ್ದಾರೋ ಆ ಹಣವನ್ನು ಇಲಾಖೆಯಲ್ಲಿ ಕೆಲಸ ಮಾಡತಕ್ಕಂಥ ಒಂದು ವರ್ಗದ ಜನರಿಗೆ, ನೌಕರರಿಗೆ ಮಾತ್ರ ಲಾಭ ದಾಯಕವಾಗಿ ಪರಿಣಮಿಸಿದೆ, ಭೂಸಾರ ಸಂರಕ್ಷಣಾ ಇಲಾಖೆಯಲ್ಲಿ ಕೆಲಸ ಮಾಡತಕ್ಕಂಥ ಸಿಬ್ಬಂದಿ ವರ್ಗದವರಿಗೆ ಬೆಂಗಳೂರಿನಲ್ಲಿ, ತುಮಕೂರಿನಲ್ಲಿ ಸ್ವಂತ ಮನೆಗಳು ಇವೆ, ವಾಹನಗಳು ಇವೆ, ಇದೆಲ್ಲವನ್ನೂ ನೋಡಿದರೆ ಅವರಿಗೆ ಒಂದೆರಡು ಲಕ್ಷ ರೂಪಾಯಿಗಳ ಆದಾಯ ಬರುತ್ತದೋ ಏನೋ ಎನ್ನುವ ಮಟ್ಟದಲ್ಲಿ ಇದ್ದಾರೆ. ಈ ರೀತಿಯಾಗಿ ಆ ಭೂಸಾರ ಸಂರಕ್ಷಣಾ ಇಲಾಖೆಯಲ್ಲಿ ನಡೆಯುತ್ತಾ ಇದೆ. ಈ ಕಾರ್ಯಕ್ರಮವು ಬಹಳ ಒಳ್ಳೆಯ ರೀತಿಯಲ್ಲಿ ವ್ಯಾಪಕವಾಗಿ ಆಗಬೇಕಾಗಿದೆ. ನೀರಿನ ಬಗ್ಗೆ ನಾವು ಏನು ಕಳಕಳಿಯನ್ನು ಹೊಂದಿದ್ದೇವೆ, ಅಷ್ಟೇ ಭೂಸಾರ ಸಂರಕ್ಷಣೆಯನ್ನು ಮಾಡತಕ್ಕಂಥಾದ್ದರ ಬಗ್ಗೆಯೂ ಕಾಳಜಿಯನ್ನು ವಹಿಸಬೇಕಾಗಿದೆ. ವ್ಯವಸಾಯದ ಅಭಿವೃದ್ಧಿಗೆ, ರೈತರ ಹಿತರಕ್ಷಣೆಗಾಗಿ ಈ ಕಾರ್ಯವನ್ನು ನಾವು ಮಾಡಬೇಕು. ಸರಕಾರವು ರೈತರ ಬಗ್ಗೆ ಖರ್ಚು ಮಾಡತಕ್ಕಂಥ ಹಣವು ಸೂಕ್ತ ರೀತಿಯಲ್ಲಿ ಅವರಿಗೆ ತಲುಪಬೇಕು. ಅವರಿಗಾಗಿಯೇ ಆ ನಿಗದಿತ ಹಣವು ವಿನಿಯೋಗವಾಗುವಂತೆ ನೋಡಿಕೊಳ್ಳಬೇಕು. ಭೂಸಾರ ಸಂರಕ್ಷಣೆಯ ವಿಭಾಗವು ವ್ಯವಸಾಯ ಇಲಾಖೆಗೆ ಸಂಬಂಧಪಟ್ಟ ವಿಭಾಗವಾಗಿದೆ. ಇದರ ಕಾರ್ಯವ್ಯಾಪ್ತಿ, ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ನೋಡಿದರೆ ಇದಕ್ಕಾಗಿಯೇ ಪ್ರತ್ಯೇಕವಾದ ಒಂದು ಬೋರ್ಡನ್ನು ರಚಿನೆ ಮಾಡಬೇಕಾಗುತ್ತದೆ ಎಂದು ಹೇಳ ಬಯಸುತ್ತೇನೆ. ಈ ಒಂದು ವಿಭಾಗವನ್ನು ಬೋರ್ಡ್ ಆಗಿ ಪರಿವರ್ತನೆ ಮಾಡಿ, ಸೂಕ್ತ ಕಾರ್ಯ ಕ್ರಮಗಳನ್ನು ಹಾಕಿಕೊಂಡರೆ ಈಗ ಇದರಲ್ಲಿ ನಡೆಯತಕ್ಕಂಥ ಲೋಪದೋಷಗಳನ್ನು ತಿದ್ದಿಕೊಂಡು ಉತ್ತಮ ಕಾರ್ಯನಿರ್ವಹಣೆ ಮಾಡುವುದಕ್ಕೆ ಸಹಾಯ ಆಗಬಹುದು ಎಂದು ಅಭಿಪ್ರಾಯ ಪಡುತ್ತೇನೆ, ಮದ್ರಾಸ್ ರಾಜ್ಯದಲ್ಲಿ ಇಂಥ ಒಂದು ಬೋರ್ಡ್ ಭೂಸಾರ ಸಂರಕ್ಷಣಾ ಕಾರ್ಯಕ್ರಮವನ್ನು ಹಾಕಿ ಕೊಂಡು ಕಾರ್ಯಪ್ರವೃತ್ತವಾಗಿರುವುದನ್ನು ಕೇಳಿ ತಿಳಿದುಕೊಂಡಿದ್ದೇವೆ. ಆದ್ದರಿಂದ ರೈತರ ಹಿತ ದೃಷ್ಟಿಯಿಂದ ಭೂಸಾರ ಸಂರಕ್ಷಣೆಯನ್ನು ಉತ್ತಮ ರೀತಿಯಲ್ಲಿ ಮಾಡುವ ಕುರಿತು ಒಳ್ಳೆಯ ಕಾರ್ಯ

ಕ್ರಮವನ್ನು ಹಾಕಿಕೊಂಡು ರೈತರಿಗೆ ಉಪಯುಕ್ತವಾಗುವಂತೆ ಮಾಡುವಲ್ಲಿ ಮಾನ್ಯ ಸಚಿವರು ಶ್ರದ್ಧೆ ವಹಿಸಿ, ಆ ದಿಸೆಯಲ್ಲಿ ಕಾರ್ಯವನ್ನು ಕೈಗೊಳ್ಳಬೇಕೆಂದೂ, ಭೂಸಾರ ಸಂರಕ್ಷಣಾ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಬೇಕೆಂದೂ ಕೇಳಿಕೊಳ್ಳುತ್ತೇನೆ.

ನಾವು ಭೂಮಿಗೆ ನೀರನ್ನು ಎಷ್ಟೇ ಒದಗಿಸುತ್ತಿದ್ದರೂ ಕೂಡ ಭೂಮಿಯ ಫಲವತ್ತು ಏನಿದೆ, ಅದು ಒಂದೇ ಸಮನಾಗಿ ಉಳಿಯುವುದಿಲ್ಲ. ಬೆಳೆಗೆ ಅಗತ್ಯವಾಗಿ ಬೇಕಾದಂಥ ಕಡಿಮೆಯಾಗುತ್ತಾ ಹೋಗುತ್ತದೆ. ಹೀಗೆ ಬೆಳೆ ಆದ ನಂತರ ಮುಂದಿನ ಬೆಳೆಗೆ ಸೂಕ್ತ ಸಾರವನ್ನು ಭೂಮಿಗೆ ಒದಗಿಸದಿದ್ದಲ್ಲಿ ಮುಂದಿನ ಬೆಳೆಯನ್ನು ಯೋಗ್ಯ ಪ್ರಮಾಣದಲ್ಲಿ ನಾವು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಆ ದೃಷ್ಟಿಯಿಂದ ಈಗ ನಾವು ಹೈವೆರೈಟಿ ಬಿತ್ತನೆ ಬೀಜವನ್ನು ಒದಗಿಸಿ ಬೆಳೆಗಳನ್ನು ಮಾಡುವ ಪದ್ಧತಿಯನ್ನು ಕೂಡ ಅನುಷ್ಠಾನಕ್ಕೆ ತರುತ್ತಾ ಇದ್ದೇವೆ. ಹೆಚ್ಚು ಹೆಚ್ಚು ಬೆಳೆಯುವಂಥ ಹೈಬ್ರಿಡ್ ಬೀಜವನ್ನು ಕಂಡುಹಿಡಿದು ಆ ಮೂಲಕ ಹೆಚ್ಚು ಬೆಳೆಯನ್ನು ಮಾಡುವುದಕ್ಕೆ ಪ್ರಯತ್ನವನ್ನು ಮಾಡುತ್ತಾ ಇದ್ದಾರೆ. ಈ ಎಲ್ಲಾ ಕಾರ್ಯಗಳಿಗೆ ಫಲವತ್ತಾದ ಭೂಮಿ ಮತ್ತು ಗೊಬ್ಬರದ ಅವಶ್ಯಕತೆ ಬಹಳ ಇದೆ ಎಂದು ಹೇಳಬಯಸುತ್ತೇನೆ.

೧-೩೦ ಪಿ.ಎಂ.

ಈ ಗೊಬ್ಬರದ ಬಗ್ಗೆ ನಾವು ಹೇಳುವುದಾದರೆ ಹಿಂದಿನ ಕಾಲದಲ್ಲಿ ಗೊಬ್ಬರಕ್ಕಾಗಿ ಕಷ್ಟ ಪಡುವ ಅವಶ್ಯಕತೆ ಇರಲಿಲ್ಲ. ಹಳ್ಳಿಗಾಡುಗಳ ಕಡೆ ಕಾಡು ಇತ್ತು, ಹುಲ್ಲುಗಾವಲು, ಗೋಮಾಳಗಳು ಇದ್ದುವು. ಹಿಂದ ಅಂದರೆ ೨೦-೨೫ ವರ್ಷಗಳ ಹಿಂದೆ ಗೋಮಾಳಗಳಿಲ್ಲದ ಗ್ರಾಮಗಳೇ ಇರಲಿಲ್ಲ. ಈಗೆಲ್ಲಾ ಗೋಮಾಳಗಳು ಅನಾಥರೈಸ್ಡ್ ಉಳುಮೆಗೊಳಗಾಗಿವೆ. ಈಗ ಸೋಷಿಯಲ್ ಫಾರೆಸ್ಟ್ರಿ ಎಂದು ಬಂದಿದೆ. ನೋಡಿ, ನಮ್ಮ ತತ್ತ್ವವೇ ತದ್ವಿರುದ್ಧವಾಗಿವೆ. ನಾವು ಕೃಷಿಯಲ್ಲಿ ಅಭಿವೃದ್ಧಿ ಆಗಬೇಕು, ಗ್ರೀನ್ ರೆವಲ್ಯೂಷನ್ ಮಾಡಬೇಕೆನ್ನುತ್ತೇವೆ. ಆದರೆ ಅದಕ್ಕೆ ರೈತನಿಗೆ ಸಹಾಯವಾಗುವ ಕಾರ್ಯಕ್ರಮಗಳೇ ಇಲ್ಲ. ಈಗ ರಸ ಗೊಬ್ಬರ ಇದೆ. ಅದನ್ನೇ ಎಷ್ಟು ಹಾಕುತ್ತೀರಿ, ಸ್ವಾಮಿ. ಅದನ್ನೇ ಹಾಕುತ್ತಾ ಹೋದರೆ ಭೂಮಿ ಬೇಗಗೋಳಗಾಗುತ್ತದೆ. ಈ ರಸಗೊಬ್ಬರಕ್ಕೆ ಭೂಮಿಗೆ ಹಾಕಿದ ನೀರನ್ನು ಹಿಡಿದಿಟ್ಟುಕೊಂಡು ಪೈರಿಗೆ ಕೊಡುವ ಶಕ್ತಿ ಇಲ್ಲ. ಇದು ಏನಿದ್ದರೂ ರೋಗಿಗೆ ಟಾನಿಕ್ ಕೊಟ್ಟ ಹಾಗೆ ಅಷ್ಟೇ. ವಾಸ್ತವಿಕವಾಗಿ ಫಲ ಸಿಕ್ಕಬೇಕಾದರೆ ಕೊಟ್ಟಿಗೆ ಗೊಬ್ಬರವನ್ನು ಕಡ್ಡಾಯವಾಗಿ ಕೊಡಲೇಬೇಕು. ಈಗ ರೈತರ ಪರಿಸ್ಥಿತಿ ಏನಾಗಿದೆ ಅಂದರೆ ಎರಡು ಮೂರು ಎಕರೆ ಭೂಮಿ ಇಟ್ಟುಕೊಂಡಿರುವವರು ಒಂದು ಜೊತೆ ಎತ್ತುಗಳನ್ನು ಇಟ್ಟುಕೊಳ್ಳುವುದಕ್ಕೇ ಕಷ್ಟವಾಗುತ್ತದೆ. ಅಂಥವರು ಗೊಬ್ಬರಕ್ಕಾಗಿ ಆ ಎತ್ತುಗಳನ್ನೇ ಅವಲಂಬಿಸಬೇಕಾಗುತ್ತದೆ. ಆ ಎತ್ತುಗಳಿಗೆ ಮೇಯುವುದಕ್ಕೆ ಜಾಗ ಇಲ್ಲ, ಬರುವ ಗೊಬ್ಬರ ಎರಡು ಎಕರೆಗೆ ಸಾಕಾಗುವುದಿಲ್ಲ. ಅದರ ಬದಲಿಗೆ ಕುರಿಗಳು ಮೇಕೆಗಳು ಸಾಕುವ ಅವಕಾಶ ಕಡಿಮೆಯಾಗಿದೆ. ಆದ್ದರಿಂದ ಹಾಲಿ ಸೋಷಿಯಲ್ ಫಾರೆಸ್ಟ್ರಿ ಏನಿವೆ ಅಲ್ಲಿ ವನ ಬೆಳೆಯುತ್ತವೆ ಹೊರತು ಹುಲ್ಲು ಬೆಳೆಯುವುದಿಲ್ಲ ದನಗಳಿಗೆ ಮೇವು ಸಿಗುವುದಿಲ್ಲ, ಆದ್ದರಿಂದ ಗೋಮಾಳಗಳನ್ನು ದನಗಳಿಗೆ ಕುರಿಗಳಿಗೆ ರಿಸರ್ವ್ ಮಾಡಿದರೆ ಅದಕ್ಕೆ ಮೇವು ಚೆನ್ನಾಗಿ ಸಿಕ್ಕಿ ನಮಗೆ ಗೊಬ್ಬರ ಸಿಗುತ್ತದೆ, ರಸ ಗೊಬ್ಬರದ ಜೊತೆಗೆ ಕೊಟ್ಟಿಗೆ ಗೊಬ್ಬರವನ್ನು ಹಾಕಲೇಬೇಕು. ಇಲ್ಲದಿದ್ದರೆ ಉಪಯೋಗವಿಲ್ಲ. ಈ ಗೊಬ್ಬರದಲ್ಲಿ ಮೂರು ವಿಧ ಇದೆ. ಒಂದು ಕೊಟ್ಟಿಗೆ ಗೊಬ್ಬರ, ಇನ್ನೊಂದು ಮರಗಳಲ್ಲಿ ಬೆಳೆಯುವ ಕೆಲವು ಎಲೆಗಳನ್ನು ಕಟ್ ಮಾಡಿ ಕಂಪೋಸ್ಟ್ ತಯಾರು ಮಾಡಿ ಗೊಬ್ಬರ ಉಂಟು ಮಾಡುವುದು ಹಿಂದೆ ಗೊಬ್ಬರ ತಯಾರು ಮಾಡುವ ಬಗ್ಗೆಯೇ ಅನೇಕ ಕಾರ್ಯಕ್ರಮಗಳನ್ನು ತಂದರು. ಆದರೆ ಏನಾಗುತ್ತದೆ ಎಂದರೆ ಯಾರೋ ಒಬ್ಬರು ಬಂದು ಒಂದು ಶುರು ಮಾಡುತ್ತಾರೆ, ಅವರು ಹೋದಾಗ ಅವರ ಜೊತೆಯಲ್ಲಿಯೇ ಅದೂ ಹೊರಟು ಹೋಗುತ್ತದೆ. ಹತ್ತುಹನ್ನೆರಡು ವರ್ಷಗಳ ಹಿಂದೆ ಕರೆದ ಹಳ್ಳಿಗಳಿಗೆಲ್ಲಾ ಮಂತ್ರಿಗಳು ಕಾಂಪೋಸ್ಟ್ ಪಿಟ್‌ಗಳನ್ನು ಓಪನ್ ಮಾಡುವುದಕ್ಕೆ ಹೋಗುತ್ತಿದ್ದರು. ಅಂಥಾ ಉದಾಹರಣೆಗಳು ಈಗಲೂ ಇವೆ. ರೈತರ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಅವಮಾನ ಏನೂ ಅಲ್ಲ. ಎಲ್ಲಾ ಕಡೆ ನಡೆಯುತ್ತಿತ್ತು.

ಶ್ರೀ ಆರ್. ದೇಶಪಾಂಡೆ.—ನನಗೂ ಬೇಜಾರು ಇಲ್ಲ, ಕರೆಯಿರಿ ಬರುತ್ತೇನೆ.

ಶ್ರೀ ಬಿ, ಲಕ್ಕಪ್ಪ.—ಆ ಕಾರ್ಯಕ್ರಮವನ್ನೇ ನಿಲ್ಲಿಸಿಬಿಟ್ಟಿದ್ದೀರಲ್ಲಾ. ಕಾಂಪೋಸ್ಟ್ ಗೊಬ್ಬರದ ಕಾರ್ಯಕ್ರಮವನ್ನು ನೀವು ಸ್ಕೀಮ್‌ನಲ್ಲಿ ಸೇರಿಸೇ ಇಲ್ಲ. ಇದನ್ನು ನೀವು ಮಾಡಬೇಕೆಂದಿದ್ದರೆ ಅದನ್ನು

ಅಭ್ಯಾಸ ಮಾಡಿ ಎಲ್ಲೆಲ್ಲಿ ಮಾಡಬಹುದೆಂದು ಕಾರ್ಯಕ್ರಮ ತಯಾರಿಸಿ. ಕಾಂಪೋಸ್ಟ್ ಗೊಬ್ಬರ ತಯಾರಂ ಮಾಡುತ್ತಿದ್ದ ಕಡೆಗಳಲ್ಲಿ ಇವತ್ತು ಮನೆಗಳನ್ನು ಕಟ್ಟುವಂತಹ ಪರಿಸ್ಥಿತಿ ಇದೆ. ಅದರಿಂದಾಗಿ ಕಾಂಪೋಸ್ಟ್ ಗೊಬ್ಬರವನ್ನು ಮಾಡುವುದಕ್ಕೆ ಇವತ್ತು ಜಮೀನು ಸಿಕ್ಕುತ್ತಿಲ್ಲ. ಈ ಹಸುರೆಲೆಗೆ ಬೇಕಾದಂತಹ ಸಸಿಗಳನ್ನು ಬೆಳೆದು ಅದರಲ್ಲಿ ಬರತಕ್ಕಂತಹ ಎಲೆಗಳಿಂದ ಗೊಬ್ಬರವನ್ನು ತಯಾರು ಮಾಡತಕ್ಕಂತಹ ಕಾರ್ಯಕ್ರಮವನ್ನು ಎಲ್ಲಾ ಕಡೆಗಳಲ್ಲೂ ಮಾಡತಕ್ಕಂತಹ ಕೆಲಸವನ್ನು ಮಾಡಬೇಕು ಎಂದು ಈ ಮೂಲಕ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ. ಇನ್ನು ರೈತನ ಜೀವನದ ಬಗ್ಗೆ ಹೇಳುವುದಾದರೆ ಅರ್ಥ ಶಾಸ್ತ್ರದಲ್ಲಿ ವ್ಯವಸಾಯದ ಕೆಲಸ ಮಾಡುವವನ ಬಗ್ಗೆ ಒಂದು ಉಕ್ತಿ ಇದೆ. ಅದರ ಪ್ರಕಾರ ರೈತರ ಜೀವನ ಹೇಗೆ ಇದೆ ಎಂದರೆ ರೈತನು ಹುಟ್ಟಬೇಕಾದರೂ ಸಾಲದಲ್ಲೇ ಹುಟ್ಟುತ್ತಾನೆ, ಬದುಕಬೇಕಾದರೂ ಸಾಲದಲ್ಲೇ ಬದುಕುತ್ತಾನೆ ಕೊನೆಗೆ ಸಾಯಬೇಕಾದರೂ ಕೂಡ ಸಾಲದಲ್ಲೇ ಸಾಯುತ್ತಾನೆ, ಎಂದು ಇದೆ. ಇದು ಯಾವ ದೈವವಾಣಿಯೋ ನನಗೆ ಅರ್ಥವಾಗುತ್ತಿಲ್ಲ. ಇಂತಹ ಒಂದು ಅಭಿಪ್ರಾಯ ನಮ್ಮಲ್ಲಿ ಇದೆ. ಈ ಅಭಿಪ್ರಾಯವನ್ನು ಬದಲಾವಣೆ ಮಾಡಿಕೊಳ್ಳಲು ನಮಗೆ ಆಗದೇ ಎಂಬುದನ್ನು ನಾವು ಯೋಚನೆ ಮಾಡಬೇಕು. ಅವನು ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿ, ಸಾಲದ ಹೊರೆಯನ್ನು ಹೊತ್ತುಕೊಂಡೇ ಏಕೆ ಸಾಯುತ್ತಾನೆಂಬುದನ್ನು ನಾವೆಲ್ಲರೂ ಕೂಡ ಯೋಚನೆ ಮಾಡಬೇಕು. ನಮ್ಮ ರಾಷ್ಟ್ರದಲ್ಲಿ ಶೇಕಡಾ ೭೦ ರಷ್ಟು ರೈತರಿದ್ದಾರೆ ರಾಷ್ಟ್ರದಲ್ಲಿ ಏನು ನಡೆದರೂ ಕೂಡ ಇವರ ಹಿತಕ್ಕೇ ಆಗಬೇಕು ಈ ರಾಷ್ಟ್ರದಲ್ಲಿ ಯಾರು ಸುಖವಾಗಿರಬೇಕು ಎಂದು ಹೇಳಿದರೆ ಯಾರು ಸರ್ವ ಸಂಪತ್ತಿಗೆ ಸರ್ವ ಬೆಳವಣಿಗೆಗೆ ಸಹಾಯಕರಾಗಿದ್ದಾರೆ ಅವರು ಸುಖವಾಗಿರಬೇಕು ಅಂದರೆ ರೈತರು ಮತ್ತು ಕಾರ್ಮಿಕರು ಇವರಿಬ್ಬರನ್ನು ಬಿಟ್ಟರೆ ಬೇರೆಯವರು ಯಾವುದೇ ಸುಖವನ್ನು ಉಣ್ಣುವುದಕ್ಕೆ ಅಧಿಕಾರವಿಲ್ಲ. ಯಾವ ಮನುಷ್ಯನು ಕಷ್ಟಪಟ್ಟು ದುಡಿಯುತ್ತಾನೆ ಅವನಿಗೇ ಸುಖ ವಿಲ್ಲದಿದ್ದರೆ ಇಷ್ಟೆಲ್ಲಾ ವ್ಯವಸ್ಥೆ, ಸರಕಾರ ಏಕೆ ಬೇಕು. ಇಷ್ಟು ಭಾರವಾದ ಪ್ರಜಾಪ್ರಭುತ್ವವನ್ನು ಏಕೆ ಹೊರಬೇಕು? ಎಲ್ಲದರ ಪೂರ್ಣ ಹೊಣೆ ಹೊರುವುದಕ್ಕೆ ಅನುಭವಿಸುವುದಕ್ಕೆ ಬೇರೆಯವರು ಈ ರೀತಿ ಯಾದರೆ ರೈತರ ಹಿತವನ್ನು ಕಾಪಾಡಿದಂತಾಗುವುದಿಲ್ಲ. ರೈತನು ಸಾಲದಲ್ಲಿ ಹುಟ್ಟಿ ಸಾಲದಲ್ಲಿ ಬದುಕಿ ಸಾಲದಲ್ಲೇ ಸಾಯುತ್ತಾನೆಂದು ಏಕೆ ಹೇಳುತ್ತಾರೆಂದರೆ ತನ್ನ ವ್ಯವಸಾಯಕ್ಕೆ ಬೇಕಾದಂತಹ ಯಾವ ಕೈಗಾರಿಕಾ ವಸ್ತುಗಳನ್ನೇ ಆಗಲೀ ಉಪಕರಣಗಳನ್ನೇ ಆಗಲೀ ಇಲ್ಲವೇ ಆತನು ದಿನನಿತ್ಯ ಬಳಸುವ ವಸ್ತುಗಳೇ ಆಗಲೀ ಒಂದು ಬೆಂಕಿ ಪೆಟ್ಟಿಗೆಯಿಂದ ಹಿಡಿದು ಕೈಗಾರಿಕಾ ವಸ್ತುಗಳನ್ನು ಆತನು ಕೊಳ್ಳುವುದಕ್ಕೆ ಹೋದಾಗ ಸಾಲವನ್ನು ಆತ ಮಾಡಲೇ ಬೇಕಾಗುತ್ತದೆ. ರೈತ ವ್ಯವಸಾಯದಲ್ಲಿ ಉತ್ಪನ್ನ ಮಾಡಿ ಮಾರಾಟ ಮಾಡತಕ್ಕಂತಹ ಬೆಲೆಗಿಂತಲೂ ಅವುಗಳ ಬೆಲೆ ಹೆಚ್ಚಾಗಿರುತ್ತದೆ. ಆ ಬೆಲೆಗೆ ಯಾವ ಕೈಗಾರಿಕಾ ವಸ್ತುಗಳೂ ಕೂಡ ಸಿಗುವುದಿಲ್ಲ. ಇಂತಹ ಆರ್ಥಿಕ ನೀತಿಯನ್ನು ನಾವು ಅನುಸರಿಸುತ್ತಿದ್ದೇವೆ. ಉದಾಹರಣೆಗೆ ಹೇಳುವುದಾದರೆ ೧೫ ರೂಪಾಯಿ ಒಂದು ಕುಳ ಇದೆ. ಸಾಮಾನ್ಯ ಮರದ ತುಂಡು ತರಬೇಕೆಂದರೆ ಮರದ ನೇಗಿಲನ್ನು ರೈತ ಮಾಡಿಕೊಳ್ಳಬೇಕೆಂದರೆ ೭೫ ರೂಪಾಯಿಯಾಗುತ್ತದೆ. ಕಬ್ಬಿಣದ್ದು ಏನಾದರೂ ಮಾಡಿಕೊಳ್ಳಬೇಕೆಂದರೆ ೧೫೦ ರೂಪಾಯಿಯಾಗುತ್ತದೆ. ಇಷ್ಟು ಕಷ್ಟದಲ್ಲಿರತಕ್ಕಂತಹವನು ಒಂದು ಕುಳಕ್ಕೆ ೧೫ ರೂಪಾಯಿ ಕೊಡಬೇಕೆಂದರೆ ಕಷ್ಟವಾಗುತ್ತದೆ. ಆದರೆ ರೈತ ಬೆಳೆಯತಕ್ಕಂತಹ ತೆಂಗಿನ ಕಾಯಿಯೇನಿದೆ ಅವನು ಅದನ್ನು ಮಾರುವುದಕ್ಕೆ ಹೋದಾಗ ಅವನಿಗೆ ಎರಡು ಅಥವಾ ಎರಡೂವರೆ ರೂಪಾಯಿ ಮಾತ್ರ ಸಿಗುತ್ತದೆ. ಒಂದು ಚೀಲ ರಾಗಿಯನ್ನು ಮಾರಬೇಕಾದರೆ ೧೫೦ ರಿಂದ ೧೬೦ ರೂಪಾಯಿ ಬೆಲೆ ಸಿಗುತ್ತದೆ. ಬಾಟಾ ಷೂ ಕಂಪನಿಗೆ ಹೋದರೆ ಅಲ್ಲಿ ಚಪ್ಪಲಿ ಬೆಲೆ ೨೫೦ ರೂಪಾಯಿಯಾಗುತ್ತದೆ. ಇದನ್ನು ಯಾರು ಹಾಕುತ್ತಾರೆಂಬುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ನೂರಕ್ಕೆ ೭೦ ರಷ್ಟು ರೈತರು ನಮ್ಮಲ್ಲಿದ್ದು ಅವರು ಬೆಳೆದಂತಹ ಬೆಳೆಗಳಿಗೆ ಈ ಬೆಲೆಯಿರುವಾಗ ನಾವು ಇಂಥಾದ್ದನ್ನೆಲ್ಲಾ ಮಾಡುವುದು ಯಾರಿಗಾಗಿ ? ಕೈಗಾರಿಕೆಯಲ್ಲಿ ತಯಾರಾದಂತಹ ಅಗತ್ಯ ವಸ್ತುಗಳನ್ನು ಬಳಸತಕ್ಕಂತಹವರು ನಮ್ಮ ರಾಷ್ಟ್ರದಲ್ಲಿ ೭೦ ರಷ್ಟು ಇದ್ದಾರೆ. ಇದನ್ನು ನಾವು ಉತ್ಪಾದನೆ ಮಾಡಬೇಕಾದರೆ ಅವರ ಹಿತಕ್ಕೋಸ್ಕರವೇ ಮಾಡಬೇಕೇ ವಿನಃ ಇದನ್ನು ಲಾಭದ ಕೈಗಾರಿಕೆಯಾಗಿ ಏಕೆ ಮಾಡಬೇಕು ಇದು ನಮಗೆ ಏಕೆ ಬೇಕು ? ರೈತನನ್ನು ಸಾಲದಲ್ಲಿ ಮುಳುಗಿಸತಕ್ಕಂತಹ ಕೈಗಾರಿಕೆ ಆತನನ್ನು ಲೂಟಿ ಹೊಡೆಯುತಕ್ಕಂತಹ ಬೆಲೆಗಳ ವ್ಯತ್ಯಾಸ ಏನು ಇದೆ ಇದನ್ನು ತಡೆಗಟ್ಟದೇ ಹೋದರೆ ರೈತನಿಗೆ ಇರತಕ್ಕಂತಹ ಕಷ್ಟವನ್ನು ಪರಿಹಾರ ಮಾಡಲಿಕ್ಕೆ ಮತ್ತು ಆತನಿಗೆ ಏನೂ ಸಹಾಯ ಮಾಡಿಲ್ಲವೆಂಬುದು ನನ್ನ ಭಾವನೆಯಾಗಿದೆ. ಅವನು ಮಾರಾಟ ಮಾಡತಕ್ಕಂತಹ ಉತ್ಪನ್ನಗಳು ಏನು ಇದೆ ಅದರಿಂದ

ಆತನು ದಿನನಿತ್ಯವಸ್ತುಗಳನ್ನು ಅಂದರೆ ಕೈಗಾರಿಕಾ ವಸ್ತುಗಳನ್ನು ಕೊಳ್ಳುವ ಶಕ್ತಿ ಬರಬೇಕು. ೨-೩ ರೂಪಾಯಿಗೆ ಒಂದು ತೆಂಗಿನ ಕಾಯಿಯನ್ನು ಮಾರಿದರೆ ಒಂದು ಕುಳ ಕೂಡ ಮೂರು ರೂಪಾಯಿಗೆ ಸಿಗುವ ಹಾಗೆ ಇರಬೇಕು. ಎಲ್ಲಿಯವರೆಗೆ ರೈತನ ಉತ್ಪನ್ನಗಳಿಗೆ ಒಂದು ನಿರ್ದಿಷ್ಟವಾದಂತಹ ಬೆಲೆ ಮತ್ತು ಅದರಿಂದ ಆತನು ತನ್ನ ದಿನನಿತ್ಯ ಜೀವನವನ್ನು ನಡೆಸುವುದಕ್ಕೆ ಮತ್ತು ವ್ಯವಸಾಯದ ಉಪಕರಣಗಳನ್ನು ಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲವೋ ಅಲ್ಲಿಯವರೆಗೆ ರೈತನ ಉದ್ಧಾರವಾಗುವುದಿಲ್ಲ. ಈ ಎರಡೂ ಬೆಲೆಗಳನ್ನು ಸರಿ ಸಮವಾಗಿ ಬರುವಂತಹ ಆರ್ಥಿಕ ನೀತಿಯನ್ನು ನಾವು ಇಂದು ಜಾರಿಗೆ ತರದೇ ಹೋದರೆ ಬಹುಶಃ ರೈತನಿಗೆ ವಂಚನೆ ಮಾಡಿದ ಹಾಗಾಗುತ್ತದೆಂದು ಹೇಳಬಯಸುತ್ತೇನೆ.

ಇದಕ್ಕಿಂತ ದೊಡ್ಡ ಅಪವಾದ ಮತ್ತು ಮೋಸವನ್ನು ಮಾಡಿದಲ್ಲಿ ಅವನು ಬದುಕುವುದಕ್ಕೆ ಸಾಧ್ಯವಾಗುವುದಿಲ್ಲ. ಇವತ್ತು ಶೇಕಡ ೭೦ರಷ್ಟು ಜನ ರೈತರು ವ್ಯವಸಾಯವನ್ನೇ ನಂಬಿಕೊಂಡಿದ್ದಾರೆ. ನಾವು ಕೂಡಾ ಅವನನ್ನೇ ಅವಲಂಬಿಸಿ ಬದುಕಿರತಕ್ಕಂಥ ಪರಿಸ್ಥಿತಿಯಲ್ಲಿ ಅವನ ಕಸುಬಿನ ಬಗ್ಗೆ ನೋಡಬೇಕಾಗಿದೆ. ಇವತ್ತು ಅಂಕಿಅಂಶಗಳ ಬಗ್ಗೆ ಹೇಳುವುದಾದರೆ ನಮ್ಮ ಕಡೆಯಲ್ಲೆಲ್ಲಾ ಸಾಮಾನ್ಯವಾಗಿ ರಾಗಿಯನ್ನೇ ಬೆಳೆಯುತ್ತಾರೆ. ಒಂದು ಎಕರೆ ಭೂಮಿಯಲ್ಲಿ ಬಹುಶಃ ನಾಲ್ಕು ಕ್ವಿಂಟಾಲ್ ರಾಗಿಯನ್ನು ಬೆಳೆಯಬಹುದು. ಎರಡು ಎಕರೆ ಖುಷ್ಕಿ ಭೂಮಿಯನ್ನು ಇಟ್ಟುಕೊಂಡಿರತಕ್ಕಂಥ ರೈತರು ನಮ್ಮಲ್ಲಿ ಬಹಳ ಮಂದಿ ಇದ್ದಾರೆ. ಯಾರು ಎರಡು-ಮೂರು-ನಾಲ್ಕು ಎಕರೆ ಖುಷ್ಕಿ ಭೂಮಿಯನ್ನು ಇಟ್ಟುಕೊಂಡಿದ್ದಾರೆ ಅವನೇ ಒಬ್ಬ ರೈತ. ಅವನಿಗೆ ಹೆಂಡತಿ ಇರುತ್ತಾಳೆ, ನಾಲ್ಕು ಜನ ಮಕ್ಕಳು, ಮತ್ತೆ ಆ ಮಕ್ಕಳಿಗೆ ವಿದ್ಯಾಭ್ಯಾಸ ನಡೆಸಬೇಕು, ಬರುವ ನೆಂಟರಿಷ್ಟರಿರುತ್ತಾರೆ, ಇಷ್ಟೆಲ್ಲಾ ಆಗುಹೋಗುಗಳು ಇದ್ದರೂ ಕೂಡಾ ಕೇವಲ ನಾಲ್ಕು ಎಕರೆ ಖುಷ್ಕಿ ಭೂಮಿಯನ್ನು ಅವಲಂಬಿಸಿ ಇವತ್ತು ಆ ರೈತನು ಬದುಕಬೇಕಾಗಿದೆ. ಆದರೆ ಖುಷ್ಕಿ ಭೂಮಿಯಲ್ಲಿ ಬರುವ ಉತ್ಪನ್ನವನ್ನು ಲೆಕ್ಕ ಹಾಕಿ ನೋಡಿದರೆ ಆ ರೀತಿಯಲ್ಲಿ ಒಳ್ಳೆಯ ಬೆಳೆಯನ್ನು ಆ ರೈತ ನಿರೀಕ್ಷಣೆ ಮಾಡಬೇಕಾದರೆ ಆಧುನಿಕವಾಗಿ ಬೇಸಾಯವನ್ನು ಮಾಡಬೇಕಾಗುತ್ತದೆ, ಒಳ್ಳೆಯ ಗೊಬ್ಬರವನ್ನು ಹಾಕಬೇಕಾಗುತ್ತದೆ. ಒಳ್ಳೆಯ ಉಪಕರಣಗಳನ್ನು ಉಪಯೋಗಿಸಬೇಕಾಗುತ್ತದೆ. ಹೆಚ್ಚು ಬೆಳೆಯನ್ನು ಬೆಳೆದರೆ ಅದರಿಂದ ಲಾಭ ಬಂದಿದೆ ಎಂದು ಹೇಳುತ್ತಾರೆ. ಆದರೆ ಇಲ್ಲಿ ಒಟ್ಟು ಲೆಕ್ಕ ಹಾಕಿ ನೋಡಿದರೆ ಒಂದು ಎಕರೆ ಸಾಗು ಮಾಡಲಿಕ್ಕೆ ನಾಲ್ಕು ಸಾರಿ ಬೇಸಾಯ ಮಾಡಬೇಕು. ಒಂದು ಜೊತೆ ಎತ್ತನ್ನು ಹೂಡಿ ಹುಕ್ಕೆಯನ್ನು ಹಾಕಬೇಕು. ಆಗ ಭೂಮಿ ಸ್ವಲ್ಪ ಫಲವತ್ತಾಗುತ್ತದೆ. ಆ ರೀತಿ ಮಾಡಿದಲ್ಲಿ ಮಾತ್ರ ಭೂಮಿ ಫಲವತ್ತಾಗುವುದು. ಸರಿಯಾಗಿ ಉಳುಮೆಯನ್ನು ಮಾಡಿ ನಾಟಿ ಮಾಡಬೇಕಾಗುತ್ತದೆ. ಇಷ್ಟು ನಾಲ್ಕು ಸಾರಿ ಬೇಸಾಯ ಮಾಡುವ ಹೊತ್ತಿಗೆ ನೇಗಿಲು ಕೂಡ ಸವೆದು ಹೋಗಿರುತ್ತದೆ. ಒಂದು ಬೇಸಾಯ ಮಾಡಬೇಕು ಎಂದರೆ ೨೫ ರೂಪಾಯಿ ಖರ್ಚಾಗುತ್ತದೆ. ೨೦ ಗುಂಟೆಯನ್ನು ಒಂದು ದಿನಕ್ಕೆ ಉಳುಮೆ ಮಾಡುವುದಕ್ಕೆ ಸಾಧ್ಯ. ಎರಡು ದಿವಸ ಒಂದು ಜೊತೆ ಎತ್ತನ್ನು ಕೂಡಿಸಿದರೆ ೫೦ ರೂಪಾಯಿ ಆಗುತ್ತದೆ. ನಾಲ್ಕು ಸಾರಿ ಹುಕ್ಕೆ ಮಾಡಿದರೆ ೬೦೦ ರೂಪಾಯಿ ಖರ್ಚು ಆಗುತ್ತದೆ. ಅಷ್ಟು ಮಾಡುವುದಕ್ಕೆ ಎರಡು ಮೂಟೆ ರಸಗೊಬ್ಬರವನ್ನು ಹಾಕಬೇಕು. ೧೭ : ೧೭ ಗೊಬ್ಬರವನ್ನು ಎರಡು ಸಾರಿ ಹಾಕಬೇಕಾಗುತ್ತದೆ. ಇದರ ಒಟ್ಟು ಬೆಲೆ ಏನು ಇದೆ ಎಂದರೆ ಎರಡು ಮೂಟೆಯಿಂದ ಒಟ್ಟು ೩೬೦ ರೂಪಾಯಿ ಆಗುತ್ತದೆ. ೫೦ ಕೆಜಿ ಒಂದು ಮೂಟೆಯಲ್ಲಿ ಇರುತ್ತದೆ. ಇನ್ನು ಬಿತ್ತನೆಯನ್ನು ಕೂಡಾ ಮಾಡಬೇಕಾಗಿರುತ್ತದೆ. ನಮ್ಮಲ್ಲಿ ಕೂಲಿ ಆಳುಗಳು ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಕೂಲಿಗೆ ಹೋಗಿರುತ್ತಾರೆ ಅವರು ವರ್ಷದ ಎಲ್ಲಾ ಕಾಲದಲ್ಲೂ ಸಿಗುವುದಿಲ್ಲ. ಈ ಬಿತ್ತನೆ ಮಾಡುವ ಕಾಲದಲ್ಲಿ ಕಟಾವು ಮಾಡುವ ಕಾಲದಲ್ಲಿ ಅವರು ಸಿಗುತ್ತಾರೆ. ಅವರು ಸಾಮಾನ್ಯವಾಗಿ ಅವರು ಹಳ್ಳಿಗಾಡುಗಳಲ್ಲಿ ಇರುತ್ತಾರೆ. ಅಪರೂಪದ ಮಳೆ ಏನಾದರೂ ಬಂದರೆ ೧೦ ರೂಪಾಯಿ ಕೂಲಿ ಕೊಡುವ ಬದಲು ೧೫ ರೂಪಾಯಿ ಕೂಲಿಯನ್ನು ಕೊಡಬೇಕಾಗುತ್ತದೆ. ಇಷ್ಟೆಲ್ಲಾ ಖರ್ಚನ್ನು ರೈತನು ಭರಿಸಿಕೊಳ್ಳಬೇಕು. ೧೫೩೨ ರೂಪಾಯಿ ಖರ್ಚು ಒಂದು ಎಕರೆ ಖುಷ್ಕಿ ಭೂಮಿಯನ್ನು ಸಾಗುವಳಿ ಮಾಡಬೇಕಾದರೆ ಬರುತ್ತದೆ. ಆಗ ಮಾತ್ರ ಒಬ್ಬ ರೈತ ನಾಲ್ಕು ಕ್ವಿಂಟಾಲ್ ರಾಗಿಯನ್ನು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಅದರಲ್ಲೂ ಹೈಯಸ್ಟ್ ರೇಟ್ ಎಂದರೆ ೧೬೦ ರೂಪಾಯಿ. ರಾಗಿ ರೇಟ್ ಜಾಸ್ತಿ ಇಲ್ಲ, ಹೈಯಸ್ಟ್ ಎಂದರೆ ೧೬೦ ರೂಪಾಯಿ. ಆದರಲ್ಲೂ ಅವನು ೧೮೦ ರೂಪಾಯಿಯ ರೀತಿಯಲ್ಲಿ ಮಾರಾಟ ಮಾಡಿದರೆ ೭೨೦ ರೂಪಾಯಿ ಬರುತ್ತದೆ. ಬಹಳ ಹೈಯಸ್ಟ್ ರೇಟ್ ರಾಗಿ ಮಾರಾಟ ಮಾಡಿದರೆ ೭೨೦ ರೂಪಾಯಿ ಬರುತ್ತದೆ. ೭೨೦ ರೂಪಾಯಿಯಲ್ಲಿ ಅವನ ಖರ್ಚನ್ನು ಕಳೆದರೆ ೮೧೨ ರೂಪಾಯಿ ಅವನ ತಲೆಯ ಮೇಲೆ ಬೀಳುತ್ತದೆ. ಹೀಗೆ ನಮ್ಮ ರೈತ ವ್ಯವಸಾಯ ಮಾಡತಕ್ಕಂಥದ್ದು !

ಈ ರೀತಿ ಅವನ ತಲೆಯ ಮೇಲೆ ಬಿದ್ದರೆ ಎರಡು ವರ್ಷ ವ್ಯವಸಾಯ ಮಾಡುವುದರ ಒಳಗೆ ಯಾವ ಭೂಮಿಯನ್ನು ಆ ಬಡ ರೈತ ಹೊಂದಿರುತ್ತಾನೋ, ಯಾವ ಒಂದು ಬಡ ಕುಟುಂಬದ ಜನರಿಗೆ ಗಂಜಿಗೆ ಮಾರ್ಗವಾಗಿತ್ತೋ ಅಂಥ ಭೂಮಿಯನ್ನು ಕಳೆದುಕೊಳ್ಳುತ್ತಾನೆ. ಆ ಭೂಮಿಯನ್ನು ಮಾರಾಟ ಮಾಡಿ ಅವನು ಮಾಡಿದ ಸಾಲವನ್ನು ತೀರಿಸಬೇಕಾದಂಥ ಪರಿಸ್ಥಿತಿ ಇದೆ. ಹೀಗೆ ಇರತಕ್ಕಂಥ ಪರಿಸ್ಥಿತಿಯಲ್ಲಿ ನಾವು ಅವರುಗಳ ಬೆಲೆಯನ್ನು ನಿಯಂತ್ರಣ ಮಾಡದೇ ಹೋದರೆ ಬಹಳ ಕಷ್ಟವಾಗುತ್ತದೆ. ರಾಗಿಯ ಬೆಲೆಯನ್ನು ೫೦೦ ರೂಪಾಯಿ ಎಂದು ಏತಕ್ಕೆ ಮಾಡಬಾರದು ? ಒಂದು ಜೊತೆಗೆ ಹೂಗೆ ೨೮೦–೩೦೦ ರೂಪಾಯಿವರೆಗೆ ಕೊಟ್ಟು ಕೊಂಡುಕೊಳ್ಳುತ್ತಾರೆ. ಆದ್ದರಿಂದ ಈ ಬಡ ರೈತನು ಬೆಳೆದಂಥ ರಾಗಿಗೆ ಕೊನೆಯ ಪಕ್ಷ ೩೦೦ ರೂಪಾಯಿ ಎಂದಾದರೂ ಮಾಡಿ. ರಾಗಿಗೆ ಒಳ್ಳೆಯ ಬೆಲೆ ಕೊಡಬೇಕು. ಬಾಟ ಷೂ ಕಂಪನಿ ಮುಚ್ಚಿದರೆ ಯಾರೂ ಸಾಯುವುದಿಲ್ಲ, ಆದರೆ ರೈತ ಇವೊತ್ತು ನೇಗಿಲು ಬಿಟ್ಟು, ಈ ವೃತ್ತಿ ಸರಿಯಿಲ್ಲ ಎಂದು ಬಿಟ್ಟು ಬಿಟ್ಟರೆ ನಾವಾಗಲೀ ಅಥವಾ ನೀವಾಗಲೀ ಬದುಕುವುದಕ್ಕೆ ಸಾಧ್ಯವಾಗುವುದಿಲ್ಲ. ಇಷ್ಟು ಪ್ರಮುಖವಾಗಿರತಕ್ಕ ಒಂದು ಬೇಡಿಕೆ, ಈ ಇಲಾಖೆಯಲ್ಲಿ ಏನು ಇದೆ, ಅದರಲ್ಲಿ ಇರತಕ್ಕ ರೈತರುಗಳು, ಇವರ ಹಿತದ ಬಗ್ಗೆ ಚಿಂತನೆಯನ್ನು ಮಾಡದೇ ಹೋದರೆ ನಾವುಗಳೇ ನಮ್ಮ ಆತ್ಮಕ್ಕೆ ದ್ರೋಹವನ್ನು ಮಾಡಿಕೊಂಡಂತಾಗುತ್ತದೆ. ಬೆಲೆಗಳ ನಿಯಂತ್ರಣ ಅತ್ಯಗತ್ಯವಾಗಿ ಆಗತಕ್ಕದ್ದು. ಕೈಗಾರಿಕೋದ್ಯಮಿಗಳಿಗೆ ಹಣ ಬರತಕ್ಕದ್ದು ಎಲ್ಲಿಂದ ? ಅದು ಬರತಕ್ಕದ್ದು ಸಾರ್ವಜನಿಕರಿಂದ, ಕಚ್ಚಾ ವಸ್ತುಗಳಿಗೆ ಹಣ ಬರತಕ್ಕದ್ದು ನಮ್ಮ ನಿಮ್ಮಗಳ ಸ್ವತ್ತಿನಿಂದ. ಈ ಕೈಗಾರಿಕಾ ವಸ್ತುವಿನಲ್ಲಿ ದುಡಿಯತಕ್ಕವರು ಕೂಲಿಗಾರರು ಸಾರ್ವಭೌಮರು, ದೊರೆಗಳು ಆಗಿರತಕ್ಕ ದುಡಿಯುವ ಜನ ಹೊಟ್ಟೆಗೆ ಅನ್ನವಿಲ್ಲದೆ ದುಡಿದು ಗುಲಾಮರಾಗಿ ಬಾಳುತ್ತಿದ್ದಾರೆ. ಸ್ವಾತಂತ್ರ್ಯ ಬಂದು ೪೦ ವರ್ಷಗಳಿಂದ ಪ್ರಜಾಪ್ರಭುತ್ವವನ್ನು ನಡೆಸಿಕೊಂಡು ಬಂದಿದ್ದೇವೆ. ಆದರೆ ಬಂಡವಾಳ ಶಾಹಿಗಳ ಕೈಯಲ್ಲಿ ದುಡಿಯತಕ್ಕ ಜನ ಇನ್ನೂ ಗುಲಾಮರಾಗಿದ್ದಾರೆ. ಪ್ರಜಾಪ್ರಭುತ್ವದ ಹೆಸರನ್ನು ಹೊತ್ತು ಕೆಳಕ್ಕೆ ತುಳಿಯಲ್ಪಟ್ಟಿರತಕ್ಕ ಜನ, ಕೂಲಿಗಾರರು, ಗುಲಾಮರು ಇವರು ಉತ್ಪನ್ನ ಮಾಡತಕ್ಕ ವಸ್ತುಗಳನ್ನು ಅವರು ಸಾಲ ಮಾಡಿಯೇ ಅವರು ಪಡೆದುಕೊಂಡು ಅನುಭವಿಸುವುದಕ್ಕೂ ಆಗುವುದಿಲ್ಲ, ಬೆಲೆಗಳನ್ನು ಯಾವ ರೀತಿ ಮೇಂಟೈನ್ ಮಾಡುತ್ತಿದ್ದೀರಿ ಎಂದು ನೋಡಿದರೆ ಅದರಿಂದ ನಿಜವಾಗಿಯೂ ವ್ಯಥೆಯನ್ನು ಉಂಟು ಮಾಡುವಂತಹ ಪರಿಸ್ಥಿತಿಯಲ್ಲಿದೆ. ಆದ್ದರಿಂದ ವ್ಯವಸಾಯ ಉತ್ಪನ್ನಗಳ ಬೆಲೆಯನ್ನು ಸರಿದೂಗಿಸದೇ ಹೋದರೆ ಬಹುಶಃ ಶೇಕಡ ೭೦ ಪರ್ಸೆಂಟ್ ರೈತರು ಯಾವ ರೀತಿ ಕೈಗಾರಿಕಾ ವಸ್ತುವನ್ನಾಗಲೀ ಅಥವಾ ಆಧುನಿಕ ಪ್ರಪಂಚದ ಸೌಲಭ್ಯಗಳನ್ನು ಹೊಂದಲಿಕ್ಕೆ ಆಗಲಿ ಕಷ್ಟವಾಗುತ್ತದೆ. ಕೊನೆಯ ಪಕ್ಷ ಅವನಿಗೆ ಗಂಜಿ ಕುಡಿಯಲಿಕ್ಕೆ ಸಹ ಅವಕಾಶ ಆಗದೇ ಹೋಗಬಹುದು. ಪ್ರಜಾಪ್ರಭುತ್ವ ಬಂದು ಇಷ್ಟು ವರ್ಷಗಳಾದರೂ ಸಹ ಅವನಿಗೆ ಹಾಕಿಕೊಳ್ಳಲು ಚಡ್ಡಿ ಇಲ್ಲ, ಶರಟು ಇಲ್ಲ, ಈಗಿರತಕ್ಕ ಪರಿಸ್ಥಿತಿಯಲ್ಲಿ ನೀವು ಪ್ರಜಾಪ್ರಭುತ್ವ ಇದೆ ಎಂದು ಪುಸ್ತಕದಲ್ಲಿ ಓದಿಕೊಂಡು ಪ್ರಜಾಪ್ರಭುತ್ವದಲ್ಲಿ ಬಂಡವಾಳ ಶಾಹಿಗಳ ಕೈಯಲ್ಲಿ ಕೈಗಾರಿಕೆಗಳನ್ನು ಮಾಡಿಕೊಳ್ಳಲು ಅವಕಾಶ ಕೊಟ್ಟರೆ, ನಾವು ಈ ಶಾಸನ ಸಭೆಯಲ್ಲಿ ಕುಳಿತುಕೊಂಡು ವ್ಯರ್ಥವಾಗಿ ಕಾಲ ಕಳೆಯಬೇಕಾದ ಪರಿಸ್ಥಿತಿ ಉಂಟಾಗುತ್ತದೆ. ಬರೇ ಕಾಲವಲ್ಲ, ಜೀವನವೇ ಹೋಗುತ್ತಿದೆ. ೫೦ ಅಥವಾ ೬೦ ವರ್ಷ ಒಬ್ಬ ಮನುಷ್ಯನ ಜೀವನ ಇರುತ್ತದೆ. ಇಲ್ಲಿ ಕುಳಿತು ಕೆಲಸ ಮಾಡಿ ಎಂದು ಮಾತನಾಡಿ ಸಾಮಾನ್ಯ ಜನರಿಗೆ ಸಿಗಬೇಕಾದ ನ್ಯಾಯಕ್ಕಾಗಿ ರಕ್ಷಣೆಗಾಗಿ ಏನನ್ನಾದರೂ ನೀವು ಮಾಡದೇ ಹೋದರೆ ಬಹುಶಃ ನೀವು ಅವರುಗಳಿಗೆ ಅನ್ಯಾಯ ಮಾಡಿದಂತಾಗುತ್ತದೆ. ರೈತನು ಬೆಳೆಯತಕ್ಕ ವಸ್ತುವಿಗೆ ಸರಿಯಾದ ಬೆಲೆಯನ್ನು ನಿಯಂತ್ರಣ ಮಾಡಿ ಅವನಿಗೆ ಸಿಗತಕ್ಕ ಬೆಲೆಯನ್ನು ದೊರಕಿಸಬೇಕು. ಸಬ್ಸಿಡಿ ಕೊಡಲಿ ಅಥವಾ ಬೇರೆ ಯಾವುದಾದರೂ ರೀತಿ ಕೊಡಿ, ಒಟ್ಟಿನಲ್ಲಿ ಬೆಲೆಗಳ ನಿಯಂತ್ರಣ ಮಾಡಬೇಕು. ರೈತನಿಗೆ ಸಿಗತಕ್ಕ ಸಾಲಗಳು ಕೂಡ ಸಿಗುತ್ತಾ ಇಲ್ಲ. ಕೈಗಾರಿಕೋದ್ಯಮಿಗಳು ಅಥವಾ ವಾಣಿಜ್ಯ ವ್ಯಾಪಾರಿಗಳು ಬ್ಯಾಂಕಿಗೆ ಹೋದರೆ ಅವನನ್ನು ಕರೆದು ಗದ್ದುಗೆಯನ್ನು ನೀಡಿ ಕಾಫಿ, ತಿಂಡಿ ಎಲ್ಲಾ ತರಿಸಿ ಆತನಿಗೆ ಸಾಲವನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳವರು ನೀಡುತ್ತಿದ್ದಾರೆ. ರೈತ ಏನಾದರೂ ಸಾಲ ಪಡೆಯಲು ಹೋದರೆ ಜವಾನ ಬಾಗಿಲಲ್ಲಿಯೇ ತಡೆಯುತ್ತಾನೆ. ರಾಷ್ಟ್ರೀಕರಣವಾಗಿ ೨೦ ವರ್ಷ ಕಳೆದಿದ್ದರೂ ಸಹ ಸಾಮಾನ್ಯ ರೈತನಿಗೆ ಸಿಗತಕ್ಕ ಸಾಲ ಸೌಲಭ್ಯಗಳು ಸರಿಯಾಗಿ ಬ್ಯಾಂಕುಗಳಿಂದ ಲಭಿಸುತ್ತಿಲ್ಲ. ಇಂತಹ ಆರ್ಥಿಕ ವ್ಯವಸ್ಥೆ ಏನು ಇದೆ, ಇದರಿಂದಾಗಿ ಬೆಲೆಗಳ ಒಂದು ವ್ಯತ್ಯಾಸ ಇದೆ. ಇದನ್ನು ಸರಿದೂಗಿಸತಕ್ಕ ಅವಶ್ಯಕತೆ ಇದೆ. ಈ ಬಗ್ಗೆ ಮಾನ್ಯ ಸಚಿವರು ಗಮನ ಹರಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಸುಮಾರು ೬-೭ ವರ್ಷಗಳಿಂದ ಭರಣಿ ಮಳೆ ಬಂದಿರಲಿಲ್ಲ, ಈ ವರ್ಷ ಅದೃಷ್ಟವಶಾತ್ ಪ್ರಾರಂಭದಲ್ಲಿ ಭರಣಿಮಳೆ, ಮುಂಗಾರು ಮಳೆ, ಆಶಾದಾಯಕವಾದ ಮಳೆ ಬಿದ್ದಿದೆ. ನಮ್ಮ ಪ್ರಾಂತ್ಯದಲ್ಲೂ ಬಿದ್ದಿದೆ. ಆದರೆ ಬಿತ್ತನೆ ಮಾಡುವುದಕ್ಕೆ ರೈತರಿಗೆ ಯಾವುದೇ ಬೀಜ ಸಿಕ್ಕುವುದಿಲ್ಲ. ಇದು ಸುಳ್ಳು ಎಂದು ಉತ್ಪ್ರೇಕ್ಷೆಯಿಂದ ಯಾರ ಮೇಲೂ ಹೇಳುತ್ತಾ ಇಲ್ಲ. ನಾನು ಕೃಷಿ ಅಸಿಸ್ಟೆಂಟ್ ಡೈರಕ್ಟರ್ ಆಫೀಸಿಗೆ ಹೋಗಿ ವಿಚಾರಿಸಲಾಗಿ ನಮಗೆ ಯಾವುದೇ ಬೀಜ ಸರಬರಾಜಾಗಿಲ್ಲ, ಕೊಡುವುದಕ್ಕೆ ಬರುವುದಿಲ್ಲ ಎಂದು ಹೇಳಿದರು. ಬೀಜಗಳ ಪರಿಸ್ಥಿತಿ ಹೀಗಾಗಿದೆ. ಈ ವರ್ಷ ಸಕಾಲಕ್ಕೆ ಮಳೆ ಬಂತು. ಈಗ ಮಳೆ ಬಂದಂಥ ಕಾಲದಲ್ಲಿ ಬೀಜಕ್ಕೆ ಬರ. ಇದಾದನಂತರ ಔಷಧಿಗಳಿಗೆ ಬರ. ಹೀಗೆ ಎರಡಕ್ಕೊಂದು ರೈತರಿಗೆ ಕಿರುಕುಳ ಇದೆ. ಅಧ್ಯಕ್ಷರೆ ಈ ಬೀಜಗಳು ಖಾಸಗಿಯವರಿಗೂ ಸಪ್ಲೈ ಆಗುತ್ತದೆ. ಕೆಲವು ಸಮಯದಲ್ಲಿ ಈ ಬೀಜ ನಿಗಮಕ್ಕೆ ಯಾವ ಕಡೆಯಿಂದ ಸಪ್ಲೈ ಆಗುತ್ತದೋ ಗೊತ್ತಿಲ್ಲ. ಅವರಿಗೆ ಸರಬರಾಜು ಮಾಡಿದ ಒಂದು ತಿಂಗಳು, ೧೫ ದಿವಸದ ನಂತರ ಆಗ್ರೋ ಕೇಂದ್ರಗಳಲ್ಲಿ, ಅಸಿಸ್ಟೆಂಟ್ ಡೈರಕ್ಟರ್ ಆಫೀಸಿನಲ್ಲಿ ಬೀಜಗಳು ಬರತಕ್ಕಂಥಾದ್ದು. ಈಗ ಲಾಭವಾಗಿದೆಯೆಂದರೆ ಲೋಕಲ್ ಮಾರ್ಕೆಟ್‌ನಲ್ಲಿ ಉತ್ತಮ ಬೀಜ ಎಂದು ಹೇಳಿ ಕೊಟ್ಟರೂ ರೈತರು ತೆಗೆದುಕೊಂಡು ಹೋಗುತ್ತಾರೆ. ಈರೀತಿ ಆಗುತ್ತಿದೆ ಎಂದು ಅಧಿಕಾರಿಗಳಿಗೆ ಹೋಗಿ ಹೇಳಿದರೆ, ಅವರು ಯಾವ ಕ್ರಮ ಕೈಗೊಳ್ಳುವುದಿಲ್ಲ ಅವರೂ ಇದರಲ್ಲಿ ಶಾಮೀಲಾಗಿರುತ್ತಾರೆ. ೧೯೭೭-೭೮ರ ಕೃಷಿ ಇಲಾಖೆಯ ವಾರ್ಷಿಕ ವರದಿಯಲ್ಲಿ ಈ ರೀತಿ ಹೇಳಿದ್ದಾರೆ. ಬೀಜ ಪರೀಕ್ಷೆ ಮತ್ತು ಗುಣ ನಿಯಂತ್ರಣ ಬೀಜ ಅಧಿನಿಯಮ ಜಾರಿಗೊಳಿಸುವುದು. ೧೯೭೭-೭೮ನೇ ಸಾಲಿನಲ್ಲಿ ೩೨,೫೦೦ ಬೀಜ ಮಾದರಿಗಳ ಗುರಿಗೆ ಪ್ರತಿಯಾಗಿ ೭೪೩೦ ಬೀಜ ಮಾದರಿಗಳನ್ನು ಬೀಜ ಕಾಯಿದೆ ಅಡಿಯಲ್ಲಿಯೂ ೨೫೦೫೫ ಬೀಜ ಮಾದರಿಗಳನ್ನು ಬೀಜ ಸೇವಾ ಅಡಿಯಲ್ಲಿಯೂ ತೆಗೆದು ಪರೀಕ್ಷಿಸಲಾಗಿದೆ. ಇವುಗಳಲ್ಲಿ ಕ್ರಮವಾಗಿ ೧೨೦ ಮತ್ತು ೭೫೩ ಬೀಜ ಮಾದರಿಗಳನ್ನು "ಗುಣಮಟ್ಟವಿಲ್ಲದವು" ಎಂದು ಗುರುತಿಸಲಾಗಿದೆ ಎಂದು ಇದೆ. ಇಷ್ಟು ಬೀಜ ಮಾದರಿಗಳ ಗುಣಮಟ್ಟ ಸರಿಯಿಲ್ಲ ಎಂದು ಅವರೇ ಸರ್ಟಿಫೈ ಮಾಡಿದ್ದಾರೆ. ಇಷ್ಟು ಬೀಜ ಮಾದರಿ ಸರಿಯಿಲ್ಲ ಎಂದು ಅವರು ಏನು ಗುರುತಿಸಿದ್ದಾರೆ. ಇದು ಕಡಿಮೆ ಎಂದು ನನಗನಿಸುತ್ತದೆ. ಏಕೆಂದರೆ, ಕಳಪೆ ಬೀಜಗಳನ್ನು ಏನು ಮಾರ್ಕೆಟ್‌ನಲ್ಲಿ ಮಾರಾಟ ಮಾಡಿದ್ದಾರೆ ಹೊರಗಡೆ ಮಾರಾಟ ಮಾಡಿದ್ದಾರೆ ಅಷ್ಟರಲ್ಲಿ ಇದು ಸಿಕ್ಕಿಕೊಂಡಿದೆ. ಈ ರೀತಿ ಕಳಪೆ ಬೀಜಗಳನ್ನು ರೈತರಿಗೆ ಮಾರಾಟಮಾಡಿ ಬೆಳೆ ಹಾಳಾಗುವುದರ ಜೊತೆಗೆ ರೈತರನ್ನು ನಷ್ಟಕ್ಕೆ ಗುರಿಮಾಡತಕ್ಕಂಥ ವ್ಯಕ್ತಿಗಳನ್ನು ಏಕೆ ಕಠಿಣವಾಗಿ ಶಿಕ್ಷಿಸಬಾರದು ಇಂತಹ ಪ್ರಕರಣಗಳಲ್ಲಿ ಎಷ್ಟು ಜನರಿಗೆ ಯಾವ ಶಿಕ್ಷೆಯನ್ನು ಕೊಟ್ಟಿದ್ದೀರಿ ಎನ್ನುವುದನ್ನು ಮಾನ್ಯ ಸಚಿವರು ಹೇಳಬೇಕು. ಕೇವಲ ತೆಂಗಿನ ಗಿಡಗಳಲ್ಲಿ ಕಾಯಿಗಳು ಕಳುವಾಗಿದೆ ಎಂದು ಕಂಪ್ಲೈಂಟ್ ಕೊಟ್ಟರೆ ಜೈಲಿಗೆ ಹಾಕುತ್ತೀರಿ. ಅದು ದೊಡ್ಡದೇನಲ್ಲ ಹೊಟ್ಟೆಗಿಲ್ಲದೇ ತೆಗೆದುಕೊಂಡು ಹೋಗಿರುತ್ತಾರೆ. ಅವರನ್ನು ಕ್ಷಮಿಸಬಹುದು, ಅದರಿಂದ ನಷ್ಟ ಕಡಿಮೆ. ಆದರೆ ಇಂತಹ ಬೀಜಗಳನ್ನು ರೈತರು ತೆಗೆದುಕೊಂಡು ಹೋಗಿ ಸಾವಿರಾರು, ಲಕ್ಷಾಂತರ ಎಕರೆಗಳಲ್ಲಿ ಬಿತ್ತನೆಮಾಡಿ ಅಪರೂಪದ ಮಳೆ ಬಂದಾಗ ಲಾಭ ಬರುತ್ತದೆ ಎಂದು ಕಷ್ಟಪಡುತ್ತಾರೆ, ಮನೆ ಮಕ್ಕಳನ್ನೂ ದುಡಿಸಿ ಶ್ರಮಪಟ್ಟಿರುತ್ತಾರೆ. ಈ ರೀತಿ ಕಳಪೆ ಬೀಜವನ್ನು ಅವರಿಗೆ ಸಪ್ಲೈಮಾಡಿ ಈಲ್ಡ್ ಬರದೇಹೋದರೆ ಇದರಿಂದ ಅವರಿಗೆ ಆಗತಕ್ಕಂಥ ನಷ್ಟ ಇನ್ನೊಂದಿಲ್ಲ. ಈಗ ಈ ಬಗ್ಗೆ ಪ್ರೈವೇಟ್ ಲೈಸನ್ಸ್ ಹೋಲ್ಡರ್ಸ್ ಇರಲಿ, ಯಾರೇ ಇರಲಿ ಕಳಪೆ ಬೀಜಗಳನ್ನು ಸರಬರಾಜು ಮಾಡಿದಂಥ ವ್ಯಕ್ತಿಗಳ ಮೇಲೆ ಕಠಿಣ ಕ್ರಮ ತೆಗೆದುಕೊಂಡು ಶಿಕ್ಷಿಸದೇ ಹೋದರೆ ಈಗಾಗಲೇ ನಮಗೆ ಈ ಬಗ್ಗೆ ನಂಬಿಕೆ ಹೋಗಿದೆ. ಸದನದಲ್ಲಿ ಅನೇಕ ಎನ್‌ಕ್ವೈರಿಗಳಿಗೆ ಹಾಕಿದ್ದರೂ ಅದರ ಬಗ್ಗೆ ವಿಚಾರಣೆಯಾಗಿ ೨-೩ ವರ್ಷಗಳಾದರೂ ಎಷ್ಟೋ ಇಲಾಖೆಗಳಲ್ಲಿ ಆಕ್ಷನ್ ತೆಗೆದುಕೊಂಡಿಲ್ಲ ನಾನು ಒಂದು ಕೊಶ್ಚನ್ ಕೊಟ್ಟಿದ್ದೇನೆ. ವಿಜಿಲೆನ್ಸ್ ಕಮಿಷನ್ ರೈಡ್‌ಮಾಡಿ ಹಿಡಿದು ಕ್ರಮ ತೆಗೆದುಕೊಳ್ಳಿ ಎಂದು ಸರ್ಕಾರಕ್ಕೆ ಹೇಳಿದರೂ ಕ್ರಮ ತೆಗೆದುಕೊಳ್ಳದೇ ಇರತಕ್ಕಂಥ ನಿದರ್ಶನಗಳು ಬೇಕಾದಷ್ಟು ಇವೆ. ಯಾರೋ ಬಡ ರೈತನಿಗೆ ತೊಂದರೆಯಾಗಿದೆ, ಇದರ ಬಗ್ಗೆ ತಲೆ ಕೆಡಿಸಿಕೊಳ್ಳಿ ಎಂದರೆ ಅಧಿಕಾರಿಗಳು ಆಸಕ್ತಿ ವಹಿಸದೇ ಇರಬಹುದು ಆದರೆ ಮಾನ್ಯ ಸಚಿವರು ರೈತರ ಬಗ್ಗೆ ಕಳಕಳಿ ಇರತಕ್ಕವರು, ರೈತರ ಸೇವೆ ಮಾಡುವುದಕ್ಕೆ ಸಿದ್ಧ ಎಂದು ಹೇಳತಕ್ಕವರು ಈ ಕಾರ್ಯವನ್ನು ತಾವು ಮಾಡಬೇಕು ಎಂದು ಮಾನ್ಯ ಸಚಿವರನ್ನು ನಾನು ಕೇಳಿಕೊಳ್ಳುತ್ತೇನೆ. ಮತ್ತೆ ಸಣ್ಣಸಣ್ಣ ಹಿಡುವಳಿದಾರರಿಗೆ ಎತ್ತು ಮತ್ತು ಗಾಡಿಯನ್ನು ಇಟ್ಟುಕೊಳ್ಳುವುದು ಕಷ್ಟವಾಗುತ್ತದೆ. ಇಂತಹವರು ತಾವು ಬೆಳೆದ ಮಾಲನ್ನು ಸಮೀಪದ ಮಾರುಕಟ್ಟೆಗೆ ಮಾರಾಟ ಮಾಡಲು ತೆಗೆದುಕೊಂಡು ಹೋದಾಗ ಇವರಿಗೆ ವಂಚನೆ ಮಾಡುವಂತಹ ಮಧ್ಯವರ್ತಿ ಜನರು

ಅಲ್ಲಿ ಕಾದಿರುತ್ತಾರೆ. ಸುಗ್ಗಿ ಕಾಲದಲ್ಲಿ ಎಲ್ಲ ರೈತರೂ ಸಹ ಒಂದೇಸಲ ತಮ್ಮ ಮಾಲನ್ನು ಮಾರಾಟ ಮಾಡಲು ಮಾರುಕಟ್ಟೆಗೆ ತೆಗೆದುಕೊಂಡು ಹೋದಾಗ ಬೆಲೆ ಕಡಿಮೆ ಆಗುತ್ತದೆ. ವಸ್ತುಗಳು ಅಧಿಕವಾಗಿ ಬಂದಾಗ ಬೆಲೆ ಕಡಿಮೆ ಆಗುವುದು ಸ್ವಾಭಾವಿಕ. ರೈತರಿಗೆ ಸರಿಯಾದ ಬೆಲೆ ಸಿಗದಿದ್ದಾಗ ಅದನ್ನು ಪುನಃ ಮನೆಗೆ ಸಾಗಿಸಬೇಕೆಂದರೆ ಸಾಗಾಣಿಕೆಯ ಖರ್ಚು ಅವರ ಮೇಲೆ ಬೀಳುತ್ತದೆ. ಕಡಿಮೆ ಬೆಲೆಗೆ ಮಾರಾಟ ಮಾಡಿದರೆ ಅವರಿಗೆ ನಷ್ಟವಾಗುತ್ತದೆ, ಇಂತಹ ಸಂದರ್ಭದಲ್ಲಿ ಒಳ್ಳೆಯ ಬೆಲೆ ಬರುವವರೆಗೆ ಗೋಡೌನ್‌ಗಳಲ್ಲಿ ಅವರ ಮಾಲನ್ನು ಇಟ್ಟುಕೊಂಡು ಅದಕ್ಕೆ ತಕ್ಕ ರಶೀದಿಯನ್ನು ಕೊಡುವ ವ್ಯವಸ್ಥೆ ಮಾಡಬೇಕು. ಗೋಡೌನ್‌ನಲ್ಲಿಟ್ಟ ಮಾಲಿಗೆ ಅದರ ಬೆಲೆಯ ಶೇಕಡಾ ೭೫ ರಷ್ಟು ಹಣವನ್ನು ಸಾಲದ ರೂಪದಲ್ಲಿ ಕೊಟ್ಟರೆ ಅವರು ತಮ್ಮ ದಿನನಿತ್ಯದ ಕಷ್ಟವನ್ನು ಪರಿಹಾರ ಮಾಡಿಕೊಳ್ಳಲು ಅನುಕೂಲವಾಗುತ್ತದೆ. ಆದ್ದರಿಂದ ಎಲ್ಲ ಕಡೆಯೂ ಗೋಡೌನ್‌ಗಳನ್ನು ಕಟ್ಟಿಸಬೇಕು ಮತ್ತು ಅಲ್ಲಿಗೆ ಮಾಲನ್ನು ಸಾಗಿಸಲು ಉತ್ತಮ ರೀತಿಯ ರಸ್ತೆಗಳನ್ನು ನಿರ್ಮಾಣ ಮಾಡಬೇಕು. ಇದು ಅತಿ ಅವಶ್ಯಕವಾಗಿ ಆಗಬೇಕು ಮತ್ತೆ ರೈತರು ಬೆಳೆಯುವಂತಹ ಬೆಳೆಗೆ ಕಡ್ಡಾಯವಾಗಿ ವಿಮೆ ಮಾಡಿಸುವಂತಹ ವ್ಯವಸ್ಥೆ ಜಾರಿ ಆಗಬೇಕು. ಈಗ ಲಾರಿ ಇಲ್ಲದೇ ಮತ್ತೊಂದು ವಾಹನ ದಾರಿಯಲ್ಲಿ ಹೋಗುವಾಗ ಏನಾದರೂ ಅಪಘಾತಕ್ಕೆ ಈಡಾದರೆ ವಿಮಾ ಕಂಪನಿಯ ಮೂಲಕ ಪರಿಹಾರ ಸಿಗುತ್ತದೆ. ಆದರೆ ರೈತರ ಬೆಳೆ ಏನಾದರೂ ಮಳೆ ಬರದೆ ಹಾಳಾದರೆ ಇಲ್ಲವೇ ಹೆಚ್ಚು ಮಳೆ ಮತ್ತು ಅಲಿಕಲ್ಲಿನ ಮಳೆ ಬಂದು ಹಾಳಾದರೆ ಯಾವ ಪರಿಹಾರವೂ ಸಿಗುತ್ತಿಲ್ಲ. ಇದರ ಜೊತೆಗೆ ರೈತರು ಬೆಳೆಗಾಗಿ ಉಪಯೋಗಿಸಿದ ಬೀಜ ಮತ್ತು ಗೊಬ್ಬರವೂ ಹಾಳಾಗುತ್ತದೆ. ಸತತವಾಗಿ ಒಂದೆರಡು ವರ್ಷಗಳ ಕಾಲ ಪ್ರಕೃತಿ ವಿಕೋಪದಿಂದ ರೈತರ ಬೆಳೆ ಹಾಳಾದರೆ ರೈತರು ತಮ್ಮ ಭೂಮಿಯನ್ನೆ ಕಳೆದುಕೊಳ್ಳಬೇಕಾಗುತ್ತದೆ. ಇದನ್ನು ತಪ್ಪಿಸಬೇಕಾದರೆ ಬೆಳೆ ವಿಮೆಯನ್ನು ಕಡ್ಡಾಯ ಮಾಡಬೇಕು. ಈಗ ಬೆಳೆಗೆ ವಿಮೆ ಮಾಡುವ ಪದ್ಧತಿ ಜಾರಿಯಲ್ಲಿದ್ದರೂ ಸಹ ಅನೇಕ ಜನ ರೈತರಿಗೆ ಇದರ ಅರಿವು ಸಾಕಷ್ಟು ಇಲ್ಲ. ಆದ್ದರಿಂದ ಸಾಮೂಹಿಕವಾಗಿ ಬೆಳೆಗಳಿಗೆ ವಿಮೆ ಮಾಡಿಸುವ ಪದ್ಧತಿಯನ್ನು ಜಾರಿಗೆ ತರಬೇಕು. ಇದನ್ನು ಕಡ್ಡಾಯ ಮಾಡಬೇಕು. ಈ ಬೆಳೆ ವಿಮೆಗೆ ಆಗುವಂತಹ ಖರ್ಚಿನ ಶೇಕಡಾ ೨೫ರಷ್ಟನ್ನು ಸರ್ಕಾರ ಸಬ್ಸಿಡಿ ರೂಪದಲ್ಲಿ ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ ಕಡ್ಡಾಯ ಬೆಳೆ ವಿಮೆಗೆ ಸರ್ಕಾರ ಬೆಂಬಲ ಮತ್ತು ಉತ್ತೇಜನ ಕೊಟ್ಟರೆ ರೈತರಿಗೆ ಹೆಚ್ಚಿನ ರೀತಿಯಲ್ಲಿ ಸಹಾಯ ಮಾಡಿದಂತೆ ಆಗುತ್ತದೆ. ಮುಖ್ಯವಾಗಿ ರೈತರ ಜೀವನ ಹಾಳಾಗದಂಥ ವ್ಯವಸ್ಥೆಯನ್ನು ಜಾರಿಗೆ ತರಬೇಕು. ಈಗಿನ ವ್ಯವಸ್ಥೆಯಲ್ಲಿ ಏನಾದರೂ ಎರಡು ಮಳೆ ಬರದಿದ್ದರೆ ರೈತರು ಕಷ್ಟಪಟ್ಟಿದ್ದೆಲ್ಲಾ ನೀರಿನಲ್ಲಿ ಹೋಮ ಮಾಡಿದಂತೆ ಆಗುತ್ತದೆ. ಆದ್ದರಿಂದ ವಿಮಾ ಪದ್ಧತಿಯನ್ನು ಎಲ್ಲ ಕಡೆಯೂ ಕಡ್ಡಾಯವಾಗಿ ಜಾರಿಗೆ ತರಬೇಕು.

ಇನ್ನು ರೈತರಿಗೆ ಬೇಕಾದ ಉತ್ತಮ ಬೀಜಗಳನ್ನು ಒದಗಿಸುವ ಸಲುವಾಗಿ ಖಾಸಗಿ ವ್ಯಕ್ತಿಗಳಿಗೆ ಲೈಸನ್ಸ್ ಕೊಟ್ಟಿದ್ದೀರಿ ಇಂತಹ ಖಾಸಗಿ ಜನರು ಎಲ್ಲಿ ಬೀಜಗಳನ್ನು ತಯಾರು ಮಾಡುತ್ತಾರೆ ಮತ್ತು ಎಲ್ಲಿಂದ ತರುತ್ತಾರೆಂಬುದು ಗೊತ್ತಿಲ್ಲ, ಕರ್ನಾಟಕ ಬೀಜ ನಿಗಮದವರಿಂದಲೂ ಸಹ ರೈತರಿಗೆ ಈಗ ಉತ್ತಮ ರೀತಿಯ ಬೀಜಗಳು ಸಕಾಲದಲ್ಲಿ ದೊರೆಯುತ್ತಿಲ್ಲ. ನಮ್ಮ ಕರ್ನಾಟಕ ರಾಜ್ಯದಲ್ಲಿ ಭರಣಿ ಮಳೆ ಸಕಾಲದಲ್ಲಿ ಬಂದರೆ ಮುಂಗಾರು ಬೆಳೆ ಚೆನ್ನಾಗಿ ಬರುತ್ತದೆ, ಬೆಳೆ ನಷ್ಟವಾಗುವುದಿಲ್ಲವೆಂಬ ಖಾತರಿ ಇದೆ.

೨-೦೦ ಪಿ.ಎಂ.

ಮಾನ್ಯ ಅಧ್ಯಕ್ಷರೆ, ಇವತ್ತು ರೈತನ ಬಾಳು ಬಹಳ ಕಷ್ಟಕರವಾದ ಪರಿಸ್ಥಿತಿಯಲ್ಲಿದ್ದು, ಬಹಳ ತೊಂದರೆಯ ಪರಿಸ್ಥಿತಿಯಲ್ಲಿ ಬದುಕಬೇಕಾಗಿದೆ. ಹೊಟ್ಟೆಗಿಲ್ಲದಿದ್ದರೂ, ಮೈಯಲ್ಲಿ ರಕ್ತವಿಲ್ಲದಿದ್ದರೂ, ನಾವು ನೀವು ಹೇರತಕ್ಕ ತೆರಿಗೆಯ ಹೊರೆಯನ್ನು ನಾಗರೀಕ ಸಮಾಜದ ಸುಖ ಸಂತೋಷದ ಹೊರೆಯನ್ನು ಇವತ್ತು ರೈತನು ಹೊರಬೇಕಾಗಿದೆ. ಇವತ್ತು ಹಳ್ಳಿಯಲ್ಲಿ ವ್ಯಾಸಂಗ ಮಾಡಿ ನೌಕರಿಗೆ ಸೇರಿದಂತಹ ಒಬ್ಬ ವ್ಯಕ್ತಿ ಪಟ್ಟಣದ ಜೀವನಕ್ಕೆ ಮಾರು ಹೋಗಿ, ಹಳ್ಳಿಯನ್ನು ಬಿಡುವಂತಹ ಪರಿಸ್ಥಿತಿ ಇದೆ. ಇವತ್ತು ಪಟ್ಟಣದಲ್ಲಿ ನಾಗರೀಕತೆಯ ತುತ್ತತುದಿಗೆ ಹೋಗಿರುವವರು ಎಲ್ಲಾ ನಾಗರೀಕತೆಯ ಸೌಲಭ್ಯಗಳನ್ನು ಪಡೆದಿರುತ್ತಾರೆ ಗ್ರಾಮೀಣ ಪ್ರದೇಶದಲ್ಲಿ ಒಂದು ಒಳ್ಳೆಯ ವಾತಾವರಣವನ್ನು ಸೃಷ್ಟಿ ಮಾಡದೇ ಹೋದರೆ ಇವತ್ತು ಪಟ್ಟಣದ ಜೀವನಕ್ಕೆ ಮಾರು ಹೋಗುವುದನ್ನು ನಿಲ್ಲಿಸಲು ಸಾಧ್ಯವಿಲ್ಲ. ಇವತ್ತು ಹಳ್ಳಿಪ್ರದೇಶಗಳಲ್ಲಿ ಸ್ಯಾನಿಟೇಷನ್ ವ್ಯವಸ್ಥೆ ಇಲ್ಲ. ಒಂದು ಮನೆಯ ನೀರು ಇನ್ನೊಂದು ಮನೆಗೆ ಹೋಗುತ್ತದೆ. ಚರಂಡಿ ವ್ಯವಸ್ಥೆ ಇಲ್ಲ. ಪಟ್ಟಣದಲ್ಲಿ ರಸ್ತೆಗಳನ್ನು ಶೃಂಗಾರ ಮಾಡುವುದಕ್ಕೆ, ಪಟ್ಟಣ

ದಲ್ಲಿರತಕ್ಕಂತಹ ಜನರು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಕೋಟಿಗಟ್ಟಲೆ ಹಣ ಕೊಡುತ್ತಿದ್ದಾರೆ. ಸಾರ್ವಜನಿಕರ ಹಣದಿಂದ ಸಹಾಯ ಮಾಡಬೇಕೆಂಬ ಮನಸ್ಸು ಇದ್ದರೂ ಕೂಡ ಯಾವ ಜನ ನಗರ ಪ್ರದೇಶಗಳಲ್ಲಿ ಜೀವನ ಮಾಡುತ್ತಾರೆ. ಯಾವ ಜನ ನಾಗರೀಕತೆಯನ್ನು ಹೊಂದಿರುತ್ತಾರೆ, ಅವರ ಬಗ್ಗೆ ಕಳಕಳಿ ತೋರಿಸುತ್ತೇವೆಯೇ ಹೊರತು ಕಡು ಬಡತನದಲ್ಲಿ ಹಳ್ಳಿಗಳಲ್ಲಿ ವಾಸ ಮಾಡತಕ್ಕ ರೈತನಿಗೆ ರೈತನ ಮಕ್ಕಳಿಗೆ ಯಾವ ಕಳಕಳಿಯನ್ನು ತೋರಿಸುತ್ತಿಲ್ಲ, ಹಳ್ಳಿ ಪ್ರದೇಶದಿಂದ ಬಂದಂತಹ ನಾವುಗಳು ಹಳ್ಳಿಯಲ್ಲಿರತಕ್ಕಂತಹ ಸಾಮಾನ್ಯ ಜನರ ಸಮಸ್ಯೆಗಳನ್ನು ಪರಿಹಾರ ಮಾಡುವುದಲ್ಲಿ ಚಿಂತನೆ ಮಾಡುತ್ತಿಲ್ಲ. ಇವತ್ತು ಹಳ್ಳಿಗಳಲ್ಲಿ ನೈರ್ಮಲ್ಯ ಇಲ್ಲದೆ ಅನೇಕ ರೋಗ ರುಜಿನಗಳು ಬರುವುದಕ್ಕೆ ಸಾಧ್ಯವಿದೆ. ಒಬ್ಬರ ಮನೆಯಲ್ಲಿ ಸ್ನಾನ ಮಾಡಿದ ನೀರು ಮತ್ತೊಬ್ಬರ ಮನೆಯ ಮುಂದೆ ಹೋಗುತ್ತದೆ ಸರ್ಕಾರಕ್ಕೆ ತೆರಿಗೆ ಬರುವುದಲ್ಲಿ ಗ್ರಾಮೀಣ ಪ್ರದೇಶದ ಜನರ ಪಾಲು ಇದೆ. ಇವತ್ತು ಅವರ ಋಣವನ್ನು ತೀರಿಸಬೇಕು. ಗ್ರಾಮ ನೈರ್ಮಲ್ಯದ ಬಗ್ಗೆ ಸಾಕಷ್ಟು ಸೌಲಭ್ಯ ಕೊಡಬೇಕು. ಅಲ್ಲದೆ ಗ್ರಾಮೀಣ ಪ್ರದೇಶದಲ್ಲಿ ವಾಸಮಾಡುವಂತಹ ರೈತರಿಗೆ ಮನೆ ಕಟ್ಟಿಕೊಳ್ಳಲು ೧೦ ಪೈಸೆ ಕೂಡ ಯಾರು ಕೊಡುತ್ತಿಲ್ಲ. ಜನತಾ ಮನೆಗಳನ್ನು ಬಿಟ್ಟರೆ, ರೈತರು ಸುಧಾರಿಸಿದ, ವಾಸಕ್ಕೆ ಯೋಗ್ಯವಾದ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಯಾವ ರೀತಿಯ ಸಹಾಯವೂ ಇಲ್ಲ. ಗ್ರಾಮೀಣ ಗೃಹ ನಿರ್ಮಾಣ ಸಹಕಾರ ಸಂಘಗಳ ವ್ಯವಸ್ಥೆ ಇಲ್ಲ. ಇದು ಬಹಳ ದೊಡ್ಡ ಸಮಸ್ಯೆಯಾಗಿದೆ. ಇತ್ತೀಚೆಗೆ ಕೇಂದ್ರ ಸರ್ಕಾರ ಒಂದು ಯೋಜನೆಯನ್ನು ರೂಪಿಸಿದೆ. ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮೀಣ ಗೃಹ ನಿರ್ಮಾಣ ಸಹಕಾರ ಸಂಘಗಳ ಮೂಲಕ ಉತ್ತಮವಾದ, ವಾಸಕ್ಕೆ ಯೋಗ್ಯವಾದ ಮನೆಗಳನ್ನು ಕಟ್ಟಿಸಿ ಕೊಡತಕ್ಕಂತಹ ಕಾರ್ಯಗಳನ್ನು ರೂಪಿಸಿದೆ. ರಾಜ್ಯ ಸರ್ಕಾರದವರು ಕೂಡ ಈ ದಿಸೆಯಲ್ಲಿ ಸೂಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ಹೇಳುತ್ತೇನೆ.

ಮೈಸ್ ಛೇರ್ಮನ್.—ಇನ್ನು ಇಪ್ಪತ್ತು ಜನರು ಮಾತನಾಡುವವರು ಇದ್ದಾರೆ. ಉತ್ತರ ಕೂಡ ಇವತ್ತೇ ಮುಗಿಯಬೇಕಾಗಿದೆ. ನೀವು ಆದಷ್ಟು ಬೇಗ ಮುಗಿಸಿ.

ಶ್ರೀ ಬಿ. ಲಕ್ಕಪ್ಪ —ಇವತ್ತು ರಾಜ್ಯದಲ್ಲಿ ಎರಡು ವ್ಯವಸಾಯ ವಿಶ್ವವಿದ್ಯಾನಿಲಯಗಳು ಇವೆ. ಒಂದು ಬೆಂಗಳೂರಿನಲ್ಲಿ, ಮತ್ತೊಂದು ಧಾರವಾಡದಲ್ಲಿ ಇತ್ತೀಚೆಗೆ ಪ್ರಾರಂಭವಾಗಿದೆ. ಕೃಷಿ ವಿಶ್ವ ವಿದ್ಯಾನಿಲಯಗಳಲ್ಲಿ ಬೋರ್ಡ್ ಆಫ್ ರೀಜೆಂಟ್ಸ್, ಏನು ನೇಮಕ ಮಾಡುತ್ತೀರಿ, ಅದರಲ್ಲಿ ವಿಧಾನಸಭಾ ಸದಸ್ಯರಿಗೆ, ಮತ್ತು ವಿಧಾನ ಪರಿಷತ್ತಿನ ಸದಸ್ಯರುಗಳಿಗೆ ಅವಕಾಶ ಮಾಡಿಕೊಡುವುದು ಒಳ್ಳೆಯದು ಧಾರವಾಡ ವಿಶ್ವವಿದ್ಯಾನಿಲಯದ ಬಗ್ಗೆ ಬಿಲ್ ತಂದಂತಹ ಕಾಲದಲ್ಲಿ ಹಿಂದೆ ಇದ್ದಂತಹ ಸಚಿವರು ಇದರ ಬಗ್ಗೆ ಯೋಚನೆ ಮಾಡುತ್ತೇವೆಂದು ಹೇಳಿದರು. ಇವತ್ತು ಬೋರ್ಡ್ ಆಫ್ ರೀಜೆಂಟ್ಸ್‌ಗೆ ಶಾಸಕರುಗಳನ್ನು ನೇಮಕ ಮಾಡಿದರೆ ಒಳ್ಳೆಯ ಬೆಲೆ ಬರುತ್ತದೆ. ಅಲ್ಲಿ ನಡೆಯತಕ್ಕಂತಹ ಕೆಲಸ ಕಾರ್ಯಗಳ ಬಗ್ಗೆ ಹೆಚ್ಚು ಮುತುವರ್ಜಿ ವಹಿಸುವುದಕ್ಕೆ ಸಹಾಯವಾಗುತ್ತದೆ. ಮತ್ತು ಇವರು ಸರ್ಕಾರದ ನಡುವೆ ನೇರ ಸಂಪರ್ಕವನ್ನು ಇಟ್ಟುಕೊಂಡಂತಹವರಾಗಿರುತ್ತಾರೆ. ಸರ್ಕಾರಕ್ಕೆ ವಿಚಾರಗಳನ್ನು ನೇರವಾಗಿ ಮುಟ್ಟಿಸತಕ್ಕಂತಹದ್ದು ನೇರವಾಗಿ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಸಹಾಯಕವಾಗುತ್ತದೆ. ಇವರು ಅಧಿಕಾರೇತರರ ಸದಸ್ಯರಾಗುತ್ತಾರೆ. ಆದ್ದರಿಂದ ಇವರನ್ನು ನೇಮಕ ಮಾಡುವಂತಹದ್ದು ಸೂಕ್ತ. ಎರಡನೆಯದಾಗಿ ಅಲ್ಲಿ ನಿಮ್ನ ವರ್ಗದ ಪ್ರತಿನಿಧಿಗಳಿಗೆ ಅವಕಾಶವೇ ಇಲ್ಲ. ನಿಮ್ನ ವರ್ಗದ ಜನರನ್ನು ನಾಮಿನೇಷನ್ ಮಾಡತಕ್ಕ ಅವಕಾಶವೇ ಇಲ್ಲ. ಇದನ್ನು ಮಾಡಬೇಕೆಂದು ಹಿಂದೆ ಕೂಡ ಅನೇಕ ಸದಸ್ಯರು ಇಲ್ಲಿ ಒತ್ತಾಯ ಮಾಡಿದರು. ಮುಂದೆ ಮಾಡುವಂತಹ ಕಾಲದಲ್ಲಿ ಅದಕ್ಕೆ ತಿದ್ದುಪಡಿಯನ್ನು ತಂದು ನೇಮಕ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಅಪ್ಪ ಇದ್ದಂತಹ ಮಂತ್ರಿಗಳು ಹೇಳಿದ್ದರು, ಆದರೆ ಇದುವರೆಗೂ ಆಗಿಲ್ಲ. ಮತ್ತೆ ವಿಶ್ವವಿದ್ಯಾನಿಲಯಗಳಲ್ಲಿ ಅನೇಕ ಜನರನ್ನು ನೇಮಕ ಮಾಡುವಂತಹದ್ದು ನಡೆಯುತ್ತಿರುತ್ತದೆ. ಅಲ್ಲಿ ಎಷ್ಟೆಷ್ಟು ನೇಮಕಾತಿಗಳು ಆಗಿವೆ ಎಂಬುದರ ಬಗ್ಗೆ ಕೂಡ ಹೇಳುತ್ತೇನೆ. ಅಲ್ಲಿ ಬೇರೆ ಇಲಾಖೆಯಲ್ಲಿ ಅನುಸರಿಸತಕ್ಕ ರೀತಿಯಲ್ಲಿ ರೋಸ್ಟರ್ ಪದ್ಧತಿಯನ್ನು ಕಟ್ಟುನಿಟ್ಟಾಗಿ ಅನುಸರಿಸುತ್ತಿಲ್ಲ. ಇದರಿಂದ ಅಲ್ಲಿ ಏನಾಗುತ್ತಿದೆ ಎಂದರೆ, ಅಲ್ಲಿ ಎಸ್.ಸಿ.ಯವರಿಗೆ ಪ್ರಾತಿನಿಧ್ಯ ಇಲ್ಲ. ಬಿ.ಸಿ.ಯವರಿಗೆ ಪ್ರಾತಿನಿಧ್ಯ ಇಲ್ಲ. ಅದೇ ರೀತಿ ಮೈನಾರಿಟೀಸ್ ನವರಿಗೂ ಪ್ರಾತಿನಿಧ್ಯ ಇಲ್ಲ. ಅಲ್ಲಿ ಯಾರೂ ಇಲ್ಲ ಹಾಗೂ ಹೀಗೂ ಅಲ್ಲಿ ಯಾರಾದರೂ ಒಬ್ಬಿಬ್ಬ ಅಧಿಕಾರಿಗಳು ಇದ್ದರೆ ಅವರುಗಳೂ ಕೂಡ ಅಲ್ಲಿರುವುದಕ್ಕೆ ಬಿಡುವುದಿಲ್ಲ. ಮೊನ್ನೆ ಒಂದು ಘಟನೆ ನಡೆದಿದೆ. ಅದನ್ನು ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಅದಕ್ಕೆ ಬೇರೆ

ವ್ಯವಸ್ಥೆ ಮಾಡುತ್ತೇನೆಂದು ಮಂತ್ರಿಗಳು ಹೇಳಿದ್ದಾರೆ. ಹಿಂದೆ ಶ್ರೀಮಾನ್ ತಿಪ್ಪೇಸ್ವಾಮಿಯವರು ಮಾತನಾಡುತ್ತಾ ಹೇಳಿದಂತಹ ವಿಚಾರ ನೆನಪಿಗೆ ಬಂತು. ಅದೇನೆಂದರೆ, ಎಸ್.ಸಿ.ಯವರು ಲೆಕ್ಚರರ್ಸ್ ಆಗುವುದಕ್ಕೆ ಅವಕಾಶ ಇಲ್ಲ. ಅವರು ಗುಮಾಸ್ತರಾಗಿ ಕಾಸು ದುಡಿಯುವುದಕ್ಕೆ ಹೋಗುತ್ತಾರೆಂದು ಟೀಕೆ ಮಾಡಿದರು. ಆ ಬಗ್ಗೆ ಹೇಳುವುದಾದರೆ ಮೆರಿಟ್‌ನಲ್ಲಿ ಇರುವಂತಹರೊಬ್ಬರು, ಕೃಷಿ ವಿಶ್ವವಿದ್ಯಾನಿಲಯದಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿ ಕೆಲಸ ಮಾಡುತ್ತಿದ್ದಾರೆ. ಅವರು ಅಲ್ಲೇ ಇರಬೇಕೆಂಬ ಆಸಕ್ತಿಯನ್ನು ಹೊಂದಿದ್ದರೂ ಯಾರೋ ಬೇರೆಯವರಿಗೆ ಜಾಗವನ್ನು ಮಾಡಿಕೊಡುವುದಕ್ಕೆ ಪ್ರಯತ್ನ ನಡೆಯುತ್ತಿದೆ. ಸಂಬಂಧಪಟ್ಟ ಡೈರೆಕ್ಟರ್ ಇವರೇ ಬೇಕೆಂದು ರಿಕ್ವೆಸ್ಟ್ ಮಾಡಿಕೊಂಡರೂ ಅವರನ್ನು ಅಲ್ಲಿ ಇರಿಸಿಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ನೇಮಕಾತಿ ಮಾಡುವಾಗಲೂ ಕೂಡ ಸರಿಯಾದ ನೀತಿನಿಯಮಗಳನ್ನು ಅನುಸರಿಸುತ್ತಿಲ್ಲ. ಆದ್ದರಿಂದ ಅಲ್ಲಿ ಎಷ್ಟು ನೇಮಕಾತಿಯನ್ನು ಮಾಡಲಾಗಿದೆ? ಯಾವ ಆಧಾರದ ಮೇಲೆ ನೇಮಕಾತಿಯನ್ನು ಮಾಡಲಾಗಿದೆ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು. ಮತ್ತೆ ವಿಶ್ವವಿದ್ಯಾನಿಲಯದ ಬೋರ್ಡ್ ಆಫ್ ರೀಜೆಂಟ್‌ನಲ್ಲಿ ಎಂ.ಎಲ್.ಎ. ಹಾಗೂ ಎಂ.ಎಲ್.ಸಿ.ಗಳನ್ನು ನೇಮಕ ಮಾಡಬೇಕು. ಈ ರೀತಿ ಮಾಡುವಂತಹದ್ದು ಕಾನೂನು ಬಾಹಿರವಲ್ಲ. ಆದ್ದರಿಂದ ಅವರಿಗೆ ಅವಕಾಶ ಕೊಡಬೇಕು. ಅದರಲ್ಲೂ ಎಸ್.ಸಿ. ಸದಸ್ಯರೊಬ್ಬರಿಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಮತ್ತೆ ಈ ರಾಜ್ಯದಲ್ಲಿ ಷುಗರ್ ಕೇನ್ ರೀಸರ್ಚ್ ಒಂದನ್ನು ಮಾಡಬೇಕೆಂದು ಧಾರವಾಡದಲ್ಲಿರತಕ್ಕಂತಹ ವಿಶ್ವವಿದ್ಯಾಲಯದವರು ಸಕ್ಕರೆ ಕಾರ್ಖಾನೆಗೆ ಕಬ್ಬನ್ನು ತೆಗೆದುಕೊಂಡು ಹೋಗತಕ್ಕಂತಹ ರೈತರಿಂದ ಹಣವನ್ನು ವಸೂಲು ಮಾಡಿದ್ದಾರೆ. ಈ ರೀತಿ ಎಷ್ಟು ಹಣ ವಸೂಲಾಗಿದೆ ಎಂಬುದನ್ನು ತಿಳಿಸಬೇಕು. ಮತ್ತೆ ಯಾವಾಗ ಆ ಒಂದು ರೀಸರ್ಚ್ ಸೆಂಟರನ್ನು ಪ್ರಾರಂಭ ಮಾಡುತ್ತೀರಾ ಎಂಬುದನ್ನೂ ಕೂಡ ತಿಳಿಸಬೇಕು. ಅಥವಾ ಈಗಾಗಲೇ ಅದನ್ನು ಪ್ರಾರಂಭ ಮಾಡಿದ್ದೀರಾ? ಮಾಡಿದ್ದಲ್ಲಿ ಎಷ್ಟು ಜನ ರೈತರ ಮಕ್ಕಳಿಗೆ ಅಲ್ಲಿ ಅವಕಾಶ ಮಾಡಿಕೊಟ್ಟಿದ್ದೀರಿ? ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು. ರೈತರ ಬಗ್ಗೆ ಹೇಳುವುದಾದರೆ ಈ ರೀತಿಯ ಮಳೆಯಾಗುತ್ತಿರುವ ದಿವಸಗಳಲ್ಲಿ ಕೊಳವೆ ಭಾವಿ ಇಲ್ಲವೇ ತೆರೆದ ಬಾವಿಗಳನ್ನಾದರೂ ತೆಗೆದು ಭೂಮಿಯೊಳಗೆ ಇರತಕ್ಕಂತಹ ನೀರನ್ನು ಉಪಯೋಗ ಮಾಡಿಕೊಳ್ಳಲೇಬೇಕಾಗುತ್ತದೆ. ಇದೇ ರೀತಿ ಶೇಕಡ ೧೮ ಪರ್ಸೆಂಟ್‌ನಲ್ಲೂ ಸಾಕಷ್ಟು ಕೆಲಸ ಮಾಡಿದ್ದಾರೆ. ಅವರೂ ಕೂಡ ಇದರ ಲಾಭವನ್ನು ಪಡೆಯುತ್ತಿದ್ದಾರೆ. ಪಂಪ್‌ಸೆಟ್‌ಗಳಿಗೆ ಕೊಡುವಂತಹ ಎಲೆಕ್ಟ್ರಿಸಿಟಿ ಚಾರ್ಜಸ್ ಬಗ್ಗೆ ಹಿಂದೆ ಇದ್ದಂತಹ ಸರ್ಕಾರ ಅದರ ಮೇಲೆ ಹಾಕಿರುವಂತಹ ಚಾರ್ಜಸನ್ನು ಕಡಿಮೆ ಮಾಡಿ ರೈತರಿಗೆ ಸಹಾಯ ಮಾಡಿತ್ತು. ಆದರೆ ಈ ಸರ್ಕಾರ ಆ ಚಾರ್ಜಸನ್ನು ಮತ್ತೆ ಹೆಚ್ಚಿಸತಕ್ಕ ಕೆಲಸ ಮಾಡಿದೆ. ದಯಮಾಡಿ ಇದನ್ನು ಕಡಿಮೆ ಮಾಡಬೇಕೆಂದು ಮಾನ್ಯ ಮಂತ್ರಿಗಳನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಮತ್ತೆ ವಿಮಾ ಯೋಜನೆಯ ಬಗ್ಗೆ ಹೇಳಿದ್ದೇನೆ. ವಿಮಾ ಯೋಜನೆಯ ಬಗ್ಗೆ ಸರ್ಕಾರ ಸಾಕಷ್ಟು ನಿಗಾ ವಹಿಸಬೇಕಾಗಿದೆ. ಇದು ಬಹಳ ಪ್ರಮುಖವಾದ ಯೋಜನೆ. ನಾನು ಈ ಇಲಾಖೆಯ ಬೇಡಿಕೆಯನ್ನು ವಿರೋಧ ಮಾಡುತ್ತೇನೆ. ಏಕೆಂದರೆ ಈ ರಾಜ್ಯದ ರೈತರ ಹಿತವನ್ನು ರಕ್ಷಣೆ ಮಾಡುವುದಕ್ಕೆ ಅಗತ್ಯ ಇರುವ ಪ್ರಾವಿಷನ್ ಈ ಬೇಡಿಕೆಗಳಲ್ಲಿ ಇಲ್ಲದೇ ಇರುವುದರಿಂದ ಈ ಬೇಡಿಕೆಯನ್ನು ವಿರೋಧ ಮಾಡುತ್ತೇನೆ. ಇಷ್ಟೊಂದು ಹಣವನ್ನು ಮಂಜೂರು ಮಾಡಿಕೊಟ್ಟರೆ ಅದನ್ನು ಸರಿಯಾದ ರೀತಿಯಲ್ಲಿ ಖರ್ಚು ಮಾಡಿ ರೈತರಿಗೆ ಅನುಕೂಲ ಮಾಡಿಕೊಡುತ್ತಾರೆಂಬ ನಂಬಿಕೆ ಇಲ್ಲದೇ ಇರುವುದರಿಂದ ಇದನ್ನು ವಿರೋಧ ಮಾಡುತ್ತಾ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಅಧ್ಯಕ್ಷರೇ ಕೃಷಿ ಇಲಾಖೆಗೆ ಸಂಬಂಧಪಟ್ಟ ಹಾಗೆ ಇಟ್ಟ ಒಂದು ಪ್ರಮುಖವಾದ ಬೇಡಿಕೆಯ ಬಗ್ಗೆ ಈಗಾಗಲೇ ಒಬ್ಬರು ಮಾನ್ಯ ವಿರೋಧ ಪಕ್ಷದ ಶಾಸಕರು ಬೆಳಕನ್ನು ಚೆಲ್ಲುವಂಥ ಪ್ರಯತ್ನ ಮಾಡಿದ್ದಾರೆ. ನಾನು ಈ ಇಲಾಖೆಯ ಬೇಡಿಕೆಯ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಒಂದು ಮಾತನ್ನು ಸ್ಪಷ್ಟವಾಗಿ ಹೇಳಲು ಇಚ್ಛೆ ಪಡುತ್ತೇನೆ. ಕಳೆದ ನಾಲ್ಕು ವರ್ಷಗಳಿಂದ ರಾಜ್ಯವು ಭೀಕರ ಬರಗಾಲಕ್ಕೆ ತುತ್ತಾಗಿದ್ದರಿಂದ ರೈತರು ಬದುಕುವುದಕ್ಕಾಗಿ ಮತ್ತು ಅವನ ಉಳಿವಿಗೋಸ್ಕರವಾಗಿ ಯಾವುದೇ ಒಂದು ಹೊಸ ಕಾರ್ಯಕ್ರಮವನ್ನು ಹಾಕಿಕೊಂಡದ್ದು ಕಾಣಲಿಲ್ಲ. ಆತನ ಬದುಕಿಗೋಸ್ಕರವಾಗಿ ಯಾವ ಒಂದು ಪರಿಹಾರ ಕಾರ್ಯಕ್ರಮವನ್ನು ಹಾಕಿಕೊಂಡಿರುವುದು ಇಲ್ಲಿ ಕಾಣದಿರುವುದು ಬಹಳ ದುರಾದೃಷ್ಟಕರವಾದ ಸಂಗತಿ.

ರೈತರು ಬೆಳೆಯುತಕ್ಕಂಥ ಹೊಲವೂ ಸಹ ಒಂದು ಕಾರ್ಖಾನೆ ಇದ್ದ ಹಾಗೆ. ರಾಜ್ಯದಲ್ಲಿ ಬೇರೆ ಬೇರೆ ಇಂಡಸ್ಟ್ರೀಸ್‌ಗಳಿಗೆ ಯಾವ ರೀತಿ ಅನುಕೂಲತೆಗಳನ್ನು ಮಾಡಿಕೊಡಬೇಕು ಎನ್ನುವ ಭಾವನೆಯನ್ನು ಇಟ್ಟುಕೊಂಡಿರುತ್ತೀರಿ. ಅದೇ ರೀತಿಯಲ್ಲಿ ರೈತರಿಗೂ ಅವರಿಗೆ ಬೇಕಾದ ಅನುಕೂಲತೆಗಳನ್ನು ಮಾಡಿ ಕೊಡಬೇಕು, ಆ ಒಂದು ಮನೋಭಾವನೆ ಎಲ್ಲಿಯುವರೆಗೆ ಬರುವುದಿಲ್ಲವೋ ಅಲ್ಲಿಯವರೆಗೆ ರೈತರು ನೆಮ್ಮದಿಯಿಂದ ಜೀವನ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆನ್ನುವ ಮಾತನ್ನು ಸ್ಪಷ್ಟವಾಗಿ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ರೈತನು ಉಳಿದರೆ ಹಳ್ಳಿ ಉಳಿಯುತ್ತದೆ, ಹಳ್ಳಿ ಉಳಿದರೆ ರಾಜ್ಯ ಉಳಿಯುತ್ತದೆ, ಹೀಗಿರುವಾಗ ರೈತನು ಹೊಲಕ್ಕೆ ಹೋಗಿ ಉತ್ತು ಬಿತ್ತಿ ಬೆಳೆಯನ್ನು ಬೆಳೆಯುವುದಗಳಲ್ಲಿ ಆತನಿಗೆ ಉಂಟಾಗುವ ಸಮಸ್ಯೆಗಳ ಬಗ್ಗೆ ಅನೇಕ ಜನ ಕೃಷಿ ತಜ್ಞರು....ಏನು ಪರಿಹಾರ ಸೂಚನೆಯನ್ನು ಕಂಡುಹಿಡಿದಿದ್ದಾರೆ ಅದು ಎಷ್ಟರ ಮಟ್ಟಿಗೆ ಈ ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅವರ ಸಮಸ್ಯೆಗಳನ್ನು ಬಗೆಹರಿಸಲು ಯಶಸ್ವಿಯಾಗಿದೆ ಎನ್ನುವುದು ಮಾತ್ರ ಪ್ರಮುಖವಾದ ಪ್ರಶ್ನೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ತಮ್ಮ ವಾರ್ಷಿಕ ಬೇಡಿಕೆಯ ವರದಿಯಲ್ಲಿ ೧೯೮೭-೮೮ಕ್ಕೆ ಒಂದು ಅಂಕಿ-ಅಂಶವನ್ನು ಕೊಟ್ಟಿದ್ದೀರಿ. ಪೇಜ್ ನಂಬರ್ ನಾಲ್ಕರಲ್ಲಿ ೧೯೮೩-೮೪ನೇ ಸಾಲಿಗೆ ಭತ್ತ ೨೨ ಲಕ್ಷ ೯೦ ಸಾವಿರ ಟನ್ ಉತ್ಪಾದನೆಯನ್ನು ಮಾಡಿದ್ದರೆ, ೧೯೮೭-೮೮ನೇ ಸಾಲಿನಲ್ಲಿ ತಾವು ೧೭ಲಕ್ಷ ೮೭ ಸಾವಿರ ಟನ್ ಉತ್ಪಾದನೆ ಮಾಡಿರುವುದನ್ನು ಹೇಳಿರುತ್ತೀರಿ, ರಾಗಿ ೧೪ ಲಕ್ಷ ೭೪ ಸಾವಿರ ಟನ್ ೧೯೮೩-೮೪ನೇ ಸಾಲಿಗೆ ೧೧.೪೪ ಲಕ್ಷ ಟನ್ ೧೯೮೭-೮೮ನೇ ಸಾಲಿಗೆ ಉತ್ಪಾದನೆಯನ್ನು ತೋರಿಸಿರುತ್ತೀರಿ. ಪ್ರಮುಖವಾಗಿ ಬೆಳೆಯುತಕ್ಕಂಥ ರಾಗಿ ಜೋಳವನ್ನು ಉದಾಹರಣೆಯನ್ನಾಗಿ ಕೊಟ್ಟ ಉದ್ದೇಶವೇನೆಂದರೆ ಈ ರಾಜ್ಯದಲ್ಲಿ ರೈತರು ಕೃಷಿ ಮಾಡುವುದರಲ್ಲಿ ನಂಬಿಕೆಯನ್ನೇ ಕಳೆದುಕೊಂಡಿರುತ್ತಾರೆ. ಇವತ್ತಿನ ದಿವಸ ಯಾವ ರೈತ ಹೊಲದಲ್ಲಿ ದುಡಿಮೆ ಮಾಡುತ್ತಾನೆ, ಯಾವ ರೈತ ೭-೮ ಎಕರೆ ಜಮೀನು ಇಟ್ಟುಕೊಂಡು, ಎತ್ತು ಗಾಡಿಯನ್ನು ಇಟ್ಟುಕೊಂಡು ವ್ಯವಸಾಯ ಮಾಡುತ್ತಾನೆ....ಆತನ ಉಳಿವಿಗೋಸ್ಕರವಾಗಿ ಯಾವ ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿರುತ್ತೀರಿ, ಎನ್ನುವ ಪ್ರಶ್ನೆಯನ್ನು ಹಾಕಬೇಕಾಗುತ್ತದೆ. ನಿಜ ಹಣಕಾಸಿನ ಮುಗ್ಗಟ್ಟಿನಿಂದಾಗಿ ಇವತ್ತಿನವರೆಗೂ ರಾಜ್ಯದ ರೈತರಿಗೆ ಅಪೇಕ್ಷಿತ ವೆಚ್ಚವನ್ನು ಮಾಡಲು ಸಾಧ್ಯವಾಗಲಿಲ್ಲವೆಂದು ಹೇಳಬಹುದು. ಆದರೆ ಯಾವ ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿರುತ್ತೀರಿ ಎನ್ನುವ ಪ್ರಶ್ನೆಯನ್ನು ಮಾಡಿದಾಗ ಯಾವುದೇ ಕಾರ್ಯಕ್ರಮ ನಮ್ಮ ಕಣ್ಣ ಮುಂದೆ ಇಲ್ಲ. ಯಾವುದೇ ಒಂದು ಪರಿಹಾರ ಕಾರ್ಯಕ್ರಮ ಕಾಣುತ್ತಿಲ್ಲ. ಬಹುಶಃ ರಾಜ್ಯದಲ್ಲಿ ರೈತರು ಬಿತ್ತನೆ ಮಾಡುವುದಕ್ಕೆ ಹೋದಂಥ ಸಂದರ್ಭದಲ್ಲಿ, ಆತನು ಬಿತ್ತನೆ ಮಾಡುವುದಕ್ಕೆ ಮುಂಚೆ ಯಾವ ಬೆಳೆಯನ್ನು ಬೆಳೆಯುತ್ತಾರೆ ಆ ಬೆಳೆಗೆ ತಕ್ಕ ಬೆಲೆ ದೊರೆಯುತಕ್ಕಂಥ ಪ್ರಯತ್ನ ಮಾಡಿದರೆ ನಿಜವಾಗಿಯೂ ರೈತ ಇನ್ನೂ ಹೆಚ್ಚು ಬೆಳೆಯನ್ನು ಬೆಳೆಯಲು ನಿಶ್ಚಯ ಮಾಡುತ್ತಾನೆ. ನೀವು ಉತ್ತರವನ್ನು ಕೊಡುತ್ತಾ ರೈತರಿಗೆ ಬಿತ್ತನೆ ಬೀಜವನ್ನು ಒದಗಿಸಿ ಅನುಕೂಲ--ಮಾಡಿಕೊಡುವ ಸಲುವಾಗಿ ಬೀಜವನ್ನು ಸಂಗ್ರಹಣೆ ಮಾಡುವಂಥ ಪ್ರಯತ್ನ ಮಾಡಿದೆವು, ಆದರೆ ಬಿತ್ತನೆ ಬೀಜವನ್ನು ರೈತರು ಕೊಳ್ಳದೆ ಇದ್ದುದರಿಂದ ಲಾಸ್ ಆಗಿದೆ ಎಂದು ಹೇಳಿದ್ದೀರಿ. ನಿಮ್ಮ ಕೃಷಿ ಇಲಾಖೆಗೆ ಕೋಟ್ಯಂತರ ರೂಪಾಯಿಗಳನ್ನು ಖರ್ಚು ಮಾಡತಕ್ಕಂಥ ಸಂದರ್ಭದಲ್ಲಿ ರೈತನಿಗೆ ಯಾವ ಬಿತ್ತನೆ ಬೀಜ ಬೇಕಾಗುತ್ತದೆ, ಎಷ್ಟು ಬಿತ್ತನೆ ಬೀಜವನ್ನು ಇಟ್ಟುಕೊಳ್ಳಬೇಕು ಎನ್ನುವ ಸಲಹೆಯನ್ನು ಕೊಡುವುದಕ್ಕೆ ಆಗದಿರುವ ಉನ್ನತ ಅಧಿಕಾರಿಗಳನ್ನು ನೆಪ ಮಾತ್ರಕ್ಕೆ ಇಟ್ಟುಕೊಂಡು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ ಎಂದು ಹೇಳಿದರೆ ತಪ್ಪಾಗಲಾರದು, ರಾಜ್ಯವು ಬರಗಾಲಕ್ಕೆ ತುತ್ತಾದ ಸಂದರ್ಭದಲ್ಲಿ, ಬೆಳೆಗೆ ಇಲ್ಲದಸಲ್ಲದ ಕೀಟಗಳ ಹಾವಳಿಯಿಂದ ರೋಗ ಉಂಟಾದ ಸಂದರ್ಭದಲ್ಲಿ, ಯಾವ ಉನ್ನತ ಅಧಿಕಾರಿಗಳು ಪ್ರವಾಸ ಮಾಡುವಂಥ ಪ್ರಯತ್ನ ಮಾಡಿದರು? ಅದಕ್ಕೆ ಸಿಂಪಡಿಸಲು ಬೇಕಾದ ಕ್ರಿಮಿನಾಶಕವನ್ನು ಸಬ್ಸಿಡಿ ರೂಪದಲ್ಲಿ ಕೊಟ್ಟು ಬೆಳೆ ಉಳಿಸುವ ಪ್ರಯತ್ನ ಮಾಡಿದರು ಎಂದು ಪ್ರಶ್ನೆ ಮಾಡಿದಾಗ ಕಳೆದ ೩-೪ ವರ್ಷಗಳಿಗಿಂತ ಈ ವರ್ಷ ಕೊಟ್ಟಿರುವುದು ಅತ್ಯಂತ ಕಡಿಮೆ. ಸಬ್ಸಿಡಿ ಹಣವನ್ನು ಬಿಡುಗಡೆ ಮಾಡಲಿಲ್ಲ. ರೈತ ಉಳಿಯಬೇಕೆಂದರೆ ಅವನು ಬೆಳೆಯುವಂಥ ಭತ್ತ, ರಾಗಿ, ಜೋಳ ಇತ್ಯಾದಿಗಳು ಸರಿಯಾದ ಪ್ರಮಾಣದಲ್ಲಿ ಉತ್ಪತ್ತಿ ಆಗಬೇಕು. ಅದು ಆಗುತ್ತಿಲ್ಲವೆಂದು ಕಂಡು ಬಂದ ಸಂದರ್ಭದಲ್ಲಿ ಅವನು ನಗರಕ್ಕೆ ವಲಸೆ ಹೋಗುವ ಪ್ರಯತ್ನ ಮಾಡುತ್ತಾನೆ. ಅಂಥ ಸಂದರ್ಭದಲ್ಲಿ ಅವನ ಉಳಿವಿಗೆ ಏನಾದರೂ ಕಾರ್ಯಕ್ರಮ ಇದೆಯೋ? ಉದಾಹರಣೆಗೆ ಬಿತ್ತನೆ ಬೀಜವನ್ನು ತೆಗೆದುಕೊಂಡರೆ, ರೈತ ಒಳ್ಳೆಯ ಬೆಳೆ ಬೆಳೆಯಬೇಕೆಂದು ೩-೪ ಕೇಜಿ ಬೀಜವನ್ನು ಶೇಖರಣೆ ಮಾಡಿಟ್ಟುಕೊಂಡು ಬಿತ್ತನೆ

ಮಾಡುವ ಶಕ್ತಿ ಇಲ್ಲ. ಅದನ್ನು ಬೇರೆ ಕಡೆ ಇಟ್ಟಿದ್ದರೂ ಬಡತನದ ಬೇಗೆಯಿಂದ ಬಿತ್ತನೆ ಬೀಜವನ್ನು ಮಾರಿಕೊಂಡು ಜೀವನ ಮಾಡುವ ಪರಿಸ್ಥಿತಿಗೆ ಬಂದಿದ್ದಾರೆ. ಆದ್ದರಿಂದ ಸರ್ಕಾರಕ್ಕೆ ನಷ್ಟವಾದರೂ ಚಿಂತೆಯಿಲ್ಲ ಸಾಕಷ್ಟು ಬೀಜವನ್ನು ಸಂಗ್ರಹಿಸಿ ಸಬ್ಸಿಡಿ ರೂಪದಲ್ಲಿ ರೈತರಿಗೆ ಕೊಡತಕ್ಕ ವ್ಯವಸ್ಥೆ ಮಾಡಬೇಕು. ದೊಡ್ಡ ದೊಡ್ಡ ರೈತರಿಗೆ ಬೇಡ, ಸ್ಮಾಲ್ ಹೋಲ್ಡರ್ಸ್ ಯಾರಿದ್ದಾರೆ ಅವರಿಗೆ ಭತ್ತ, ರಾಗಿ, ಜೋಳ, ಹತ್ತಿ, ಸೂರ್ಯಕಾಂತಿ ಇತ್ಯಾದಿಗಳನ್ನು ಅವರ ಮನೆ ಬಾಗಿಲಿಗೆ ತಲುಪಿಸುವ ವ್ಯವಸ್ಥೆ ಮಾಡಬೇಕು. ಬೆಳೆ ನಾಶವಾಗದಂತೆ ನೋಡಿಕೊಳ್ಳುತ್ತೇವೆಂದು ಮಾಡುವುದಕ್ಕೆ ಸಾಧ್ಯವಿದೆಯೇ? ಹೊನ್ನಾಳಿ ತಾಲ್ಲೂಕಿನಲ್ಲಿ ಜೋಳ ಮತ್ತಿತರ ಬೀಜಗಳನ್ನು ವಿತರಣೆ ಮಾಡಿದರು. ಅದು ಹುಟ್ಟದೆ ಆ ಭಾಗದಲ್ಲಿದ್ದ ಎಲ್ಲಾ ಎಂಪ್ಟಿ ಬೆಳೆ ಹಾಳಾಯಿತು. ಈ ರೀತಿ ವರದಿಗಳು ನಿಮಗೆ ಅನೇಕ ಕಡೆಗಳಿಂದ ಬಂದಿರಬಹುದು. ನಾನು ಬೆಳಿಗ್ಗೆ ಒಂದು ವಿಚಾರವನ್ನು ಹೇಳಿದ್ದೆ. ೨೪-೪-೮೮ರಂದು ನಾನು ಅರಸೀಕೆರೆಗೆ ಪ್ರವಾಸ ಹೋಗುತ್ತಿದ್ದೆ. ಯಾವುದೇ ಅಧಿಕಾರಿ ಮೇಲೆ ಆರೋಪ ಮಾಡುವುದಕ್ಕೆ ಹೇಳುತ್ತಿಲ್ಲ, ಅಲ್ಲಿ ೮-೧೦ ಜನ ರೈತರು ಮುತ್ತಿಕೊಂಡರು. ಅಲ್ಲಿರತಕ್ಕ ಅಧಿಕಾರಿ ಏನು ಮಾಡಿದ್ದ ಅಂದರೆ ಸೂರ್ಯಕಾಂತಿ ಬೀಜವನ್ನು ಬಹಿರಂಗ ಮಾರುಕಟ್ಟೆಯಲ್ಲಿ ಕ್ವಿಂಟಾಲಿಗೆ ೬೫೦ ರೂಪಾಯಿಗಳಂತೆ ಕೊಂಡುಕೊಂಡು ಕೃಷಿ ಇಲಾಖೆಯ ಕಛೇರಿಯಲ್ಲಿ ಕೆ.ಜಿ.ಗೆ ೧೧ರೂಪಾಯಿನಂತೆ ಮಾರಾಟ ಮಾಡುತ್ತಿದ್ದ. ರಶೀತಿ ಕೊಡುತ್ತಿರಲಿಲ್ಲ. ರೈತರು ಗಲಾಟೆ ಮಾಡಿದಾಗ ಬಿಳಿ ಕಾಗದದ ಮೇಲೆ ಸೀಲು ಹಾಕಿಕೊಟ್ಟ. ಕೊನೆಗೆ ಅವನು ಕೈಕಾಲು ಕಟ್ಟಿಕೊಳ್ಳುವ ಪರಿಸ್ಥಿತಿ ಬಂತು. ಇಲಾಖೆಯಲ್ಲಿ ಬೀಜ ಇಲ್ಲವೆಂದು ಆ ರೀತಿ ವಿತರಣೆ ಮಾಡುತ್ತಿದ್ದ. ಸರ್ಟಿಫೈಡ್ ಸೀಡ್ಸ್ ಇಲ್ಲದಿರುವ ಸಂದರ್ಭದಲ್ಲಿ ಮಾರುಕಟ್ಟೆಯಲ್ಲಿ ಮಾರುವ ಬೀಜವನ್ನು ಇಟ್ಟುಕೊಂಡು ವ್ಯಾಪಾರ ಮಾಡುವ ದುಸ್ಥಿತಿ ಬಂದಿದೆ. ಇವರ ಆಡಳಿತ ವೈಖರಿಯಲ್ಲಿ, ಈ ಸಂದರ್ಭದಲ್ಲಿ ಸರ್ಕಾರಕ್ಕೆ ಹೇಳುವವರು ಕೇಳುವವರು ಯಾರೂ ಇಲ್ಲವೆಂಬುದಕ್ಕೆ ಈ ಇಲಾಖೆಗೆ ಸಂಬಂಧಪಡದ ಒಂದು ವಿಚಾರ ನೆನಪಿಗೆ ಬರುತ್ತದೆ. ನಾನು ರಾತ್ರಿ ರಾಜಭವನದ ರಸ್ತೆಯಲ್ಲಿ ಮನೆ ಕಡೆ ಹೋಗುತ್ತಿದ್ದೆ. ಅಲ್ಲಿ ಒಂದು ನಾಯಿ ಸತ್ತು ಬಿದ್ದಿತ್ತು. ಅದು ಸತ್ತದ್ದು ೬-೩೦ಕ್ಕೆ ಆದರೆ ೯-೩೦ ಆದರೂ ಅಲ್ಲೇ ಬಿದ್ದಿತ್ತು. ರಾತ್ರಿ ಪೋಲೀಸ್ ಇರಲಿಲ್ಲವೆ? ಕಾರ್ಪೋರೇಷನ್ನಿಗೆ ಫೋನ್ ಮಾಡಿ ಸತ್ತ ನಾಯಿಯನ್ನು ತೆಗೆಸುವುದಕ್ಕೆ ಆಗಲಿಲ್ಲವೆ? ಯಾವ ರೀತಿ ನಿಮ್ಮ ಅಧಿಕಾರಿಗಳು ತಮಗೆ ಯಾವುದೂ ಸಂಬಂಧ ಇಲ್ಲದ ರೀತಿಯಲ್ಲಿ ಆನಂದವಾಗಿ ಜೀವನ ಮಾಡುತ್ತಿದ್ದಾರೆಂಬುದಕ್ಕೆ ಈ ಮಾತನ್ನು ಹೇಳಿದೆ,

ಶ್ರೀ ಆರ್. ವಿ. ದೇಶಪಾಂಡೆ.— ೨೪-೪-೮೮ರಂದು ಅರಸೀಕೆರೆಯಲ್ಲಿ ಕೃಷಿ ಇಲಾಖೆಯ ಅಧಿಕಾರಿ ೬೫೦ ರೂಪಾಯಿಗಳಿಗೆ ಬೀಜವನ್ನು ಖರೀದಿ ಮಾಡಿ ಕೆ.ಜಿ.ಗೆ ೧೧ ರೂಪಾಯಿನಂತೆ ಮಾರುತ್ತಿದ್ದ ಎಂದು ಹೇಳಿದ್ದೀರಿ. ಶಾಸಕರಾದ ನಿಮ್ಮಲ್ಲಿ ನಾವು ವಿಶ್ವಾಸ ಇಡುತ್ತೇವೆ. ತಾವು ಇವತ್ತಿನವರೆಗೆ ಆ ವಿಚಾರವನ್ನು ನಮಗೆ ತಿಳಿಸಲಿಲ್ಲ? ಪತ್ರ ಕೊಡುತ್ತೀರಿ, ಫೋನ್ ಮಾಡುತ್ತೀರಿ, ಆದರೆ ಒಂದು ಮಾತನ್ನು ಏಕೆ ಆ ಬಗ್ಗೆ ನಮ್ಮ ಗಮನಕ್ಕೆ ತರಬಾರದಾಗಿತ್ತು? ಕೂಡಲೇ ಆ ಅಧಿಕಾರಿಯನ್ನು ಸಸ್ಪೆಂಡ್ ಮಾಡುತ್ತಿದ್ದೆ. ಸರ್ಕಾರದ ಯಾವುದೇ ಇಲಾಖೆ ಇರಲಿ ಅದು ಸರಿಯಾಗಿ ನಡೆಯುತ್ತದೆಂದು ಹೇಳುವುದಿಲ್ಲ. ನಮ್ಮ ಗಮನಕ್ಕೆ ಇಂಥ ವಿಚಾರಗಳನ್ನು ತರತಕ್ಕದ್ದು ತಮ್ಮ ಜವಾಬ್ದಾರಿಯಾಗಿದೆ. ಇಲಾಖೆಯಲ್ಲಿ ಸಾವಿರಾರು ಜನರು ಕೆಲಸ ಮಾಡುತ್ತಿರುವಾಗ ಪ್ರತಿಯೊಬ್ಬರನ್ನೂ ವಾಚ್ ಮಾಡುವುದಕ್ಕೆ ನಮಗೆ ಸಾಧ್ಯವಿಲ್ಲ. ಅಂಥ ವಿಚಾರಗಳನ್ನು ಸರ್ಕಾರದ ಗಮನಕ್ಕೆ ತಂದರೆ ಸರ್ಕಾರದ ವತಿಯಿಂದ ಕ್ರಮ ಕೈಗೊಳ್ಳುವುದಕ್ಕೆ ಸಾಧ್ಯ. ಇನ್ನು ಮೇಲಾದರೂ ಅಂಥ ವಿಚಾರಗಳಿದ್ದರೆ ಸರ್ಕಾರದ ಗಮನಕ್ಕೆ ತನ್ನಿ ಎಂದು ವಿನಂತಿ ಮಾಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ನಾನು ಏನು ಆರೋಪ ಮಾಡಿದೆ ಆ ಬಗ್ಗೆ ನಾನು ಶಾಸಕನಾಗಿ ನನ್ನ ಕರ್ತವ್ಯವನ್ನು ಮಾಡಿದ್ದೇನೆ. ರೈತರನ್ನು ಕರೆಸಿ ಗಲಾಟೆ ಮಾಡಿಸಿ ರಶೀತಿ ಕೊಡದಿದ್ದರೆ ಬಿಡಬೇಡಿ ಎಂದು ಹೇಳಿದೆ. ಆಮೇಲೆ ಸೀಲ್ ಹಾಕಿ ರಶೀತಿ ಕೊಟ್ಟಿದ್ದಾನೆ. ಆ ಪಟ್ಟಿಯನ್ನು ತಮಗೆ ಕಳುಹಿಸಿಕೊಡುತ್ತೇನೆ. ನಾನು ನಿನ್ನೆ ತಾನೇ ಪ್ರವಾಸ ಮುಗಿಸಿಕೊಂಡು ವಾಪಸ್ಸು ಬಂದಿದ್ದೇನೆ.

ಇಡೀ ರಾಜ್ಯದಲ್ಲಿ ಬರಗಾಲಕ್ಕೆ ತುತ್ತಾಗಿರುವಾಗ, ಜನತಾ ಪಾರ್ಟಿ ಸರ್ಕಾರ ಸಂಪೂರ್ಣ ವೈಫಲ್ಯ ಹೊಂದಿರುವ ಈ ಸಂದರ್ಭದಲ್ಲಿ, ಪರಸ್ಪರ ಬಡಿದಾಡುತ್ತಿರುವ ಈ ಸಂದರ್ಭದಲ್ಲಿ ರೈತ ಕಣ್ಣೀರು ಹಾಕುತ್ತಿರತಕ್ಕ ಸಂದರ್ಭದಲ್ಲಿ ಜನಜಾಗೃತಿ ಉಂಟು ಮಾಡುವ ದೃಷ್ಟಿಯಿಂದ ನನ್ನ ಕರ್ತವ್ಯದ ದೃಷ್ಟಿಯಿಂದ ರಾಜ್ಯದಲ್ಲಿ ನಾನು ಪ್ರವಾಸ ಮಾಡುತ್ತಿದ್ದೆ. ನೀವು ಹೇಳಿದಂತೆ ನನಗೆ ಜವಾಬ್ದಾರಿ ಇದೆ.

ನನ್ನ ಹತ್ತಿರ ದಾಖಲೆಗಳುಂಟು. ಕೊಡುತ್ತೇನೆ. ಆದರೆ ಈ ಒಂದು ದಾಖಲೆ ಕೊಡುವುದರಿಂದ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಇದು ಕೇವಲ ಉದಾಹರಣೆ ಕೊಡುತ್ತಿರುವುದು. ಯಾವುದೇ ಇಲಾಖೆಯಲ್ಲಿ ತೆಗೆದುಕೊಂಡರೂ ನಿಮ್ಮ ಅಧಿಕಾರಿಗಳು ಹದ್ದು ಮೀರಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಜವಾಬ್ದಾರಿ ಇಲ್ಲ. ನಾನು ಕೇಳುತ್ತೇನೆ, ಹಿಂದೆ ಅನೇಕ ಹಿರಿಯ ಸಚಿವರು ಇದ್ದಂಥ ಕಾಲದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ತಾಲ್ಲೂಕು ಕೇಂದ್ರಗಳಲ್ಲಿ ಸರ್‌ಪ್ರೈಸ್ ವಿಸಿಟ್ ಮಾಡುತ್ತಿದ್ದರು. ಈಗ ಯಾರು ಮಾಡುತ್ತಿದ್ದಾರೆ? ಯಾವ ಅಧಿಕಾರಿ ಮಾಡುತ್ತಿದ್ದಾನೆ ಈಗ? ನಾನು ಬಹಳ ನೊಂದು ಹೇಳುತ್ತಿದ್ದೇನೆ. ಆರೋಪ ಮಾಡುವುದಕ್ಕೆ ಹೇಳುತ್ತಿಲ್ಲ. ವ್ಯವಸ್ಥೆ ಕುಲಗೆಟ್ಟು ಹೋಗಿದೆ. ಸರಿ ಮಾಡುವುದಕ್ಕೆ ಸಾಧ್ಯ ಇದೆಯೇ ಎಂಬ ಬಗ್ಗೆ ನಾನು ಹೇಳುತ್ತಾ ಇದ್ದೇನೆ, ನಿಮ್ಮ ಇಲಾಖೆಯಲ್ಲಿ ರೈತನ ಹೊಲ ನೋಡಿಕೊಳ್ಳಬೇಕಾದ ಎಗ್ಸಿಕ್ಯೂಟೀವ್ ಆಫೀಸರ್ ಯಾರಿದ್ದಾರೆ ಅವರು ಹೊಲಕ್ಕೆ ಹೋಗಿದ್ದಾರಾ? ನೋಡಿಕೊಂಡು ಬನ್ನಿ. ಡೈರಿ ಮೈಂಟೇನ್ ಮಾಡುತ್ತಿರುತ್ತಾರೆ. ಯಾವುದೋ ಹಳ್ಳಿಗೆ ಹೋಗಿದ್ದೆ ಎಂದು ಬರೆದಿರುತ್ತಾರೆ. ಆದರೆ ಆ ಅಧಿಕಾರಿ ಹೋಗಿದ್ದಾನೋ ಇಲ್ಲವೋ ಎಂದು ನಿಮ್ಮ ಉನ್ನತ ಅಧಿಕಾರಿ ಚೆಕ್ ಮಾಡುತ್ತಾನಾ? ಉನ್ನತ ಅಧಿಕಾರಿ ಆ ನಗರದಲ್ಲಿದ್ದಾನಾ? ಇಲ್ಲ ಅವನ ಹೆಂಡತಿ ಮಕ್ಕಳೆಲ್ಲಾ ಬೆಂಗಳೂರು ಮೈಸೂರಿನಲ್ಲಿ ವಿದ್ಯಾಭ್ಯಾಸ ಮುಂದುವರೆಸುತ್ತಿದ್ದಾರೆ. ಶುಕ್ರವಾರ ಮಧ್ಯಾಹ್ನ ಹೊರಟವನು ಮತ್ತೆ ಸೋಮವಾರ ಮಧ್ಯಾಹ್ನ ಆಫೀಸಿಗೆ ಹೋಗುತ್ತಾನೆ. ನಾನು ಹೇಳುವಂಥದ್ದು ಇಡೀ ವ್ಯವಸ್ಥೆಯೇ ಕುಲಗೆಟ್ಟು ಹೋಗಿದೆ ಎಂದು. ಕೊನೇಪಕ್ಷ ಕೃಷಿ ಇಲಾಖೆಯಲ್ಲಿ ಕೆಲಸ ಮಾಡುವ ಅಧಿಕಾರಿಗಳಿಗೆ ಹೇಳಿ ಇದನ್ನು ಸರಿಪಡಿಸತಕ್ಕ ಪ್ರಯತ್ನ ಮಾಡಿ. ಬೀಜದ ಬಗ್ಗೆ ಹೇಳಿದೆ ತಮಗೆ ಗೊತ್ತಿರಲಿಲ್ಲವೆ? ಕೃಷಿ ಇಲಾಖೆ ಅಧಿಕಾರಿಗಳಿಗೆ ಗೊತ್ತಿರಲಿಲ್ಲವೆ? ಹೋದಸಾರಿ ರೈತ ಒಂದಿಷ್ಟು ಹತ್ತಿ ಬೆಳೆದ. ದುಡ್ಡು ಒಂದಿಷ್ಟು ಸಿಕ್ಕಿತು. ಅವನು ಬದುಕಿದ. ಇಲ್ಲದಿದ್ದರೆ ಸತ್ತು ಹೋಗುತ್ತಿದ್ದ. ಬೆಳೆದಂಥ ಬೆಳೆಯಲ್ಲಿ ಒಂದೆರಡು ಕ್ವಿಂಟಾಲ್ ಒಳ್ಳೆಬೆಳೆ ಬಂತು. ಅವನು ಬದುಕಿದ. ಹತ್ತಿ ಬೀಜ ಈಗ ಬೇಕು ಅಂದರೆ ಇಲ್ಲ, ಹತ್ತಿ ಬೀಜ ಬೆಳೆಯುವುದಕ್ಕೆ ನಿಮಗೆ ಸಾಧ್ಯವಾಗುತ್ತಾ ಇರಲಿಲ್ಲವೆ? ಒಂದು ಕೆ.ಜಿ. ಕೊಡುವ ಕಡೆ ೫ ಕೆ.ಜಿ. ಕೊಡುವುದಕ್ಕೆ ಸಾಧ್ಯ ಆಗುತ್ತಿರಲಿಲ್ಲವೆ? ನೀವು ಕೊಡುತ್ತಾ ಇರುವುದು ಭಿಕ್ಷೆ ಶಿಕಾರಿಪುರ ತಾಲ್ಲೂಕಿನಲ್ಲಿ ರಾತ್ರಿ ಎಲ್ಲಾ ಭಿಕ್ಷೆಗೆ ಸಾಲಾಗಿ ನಿಂತಿದ್ದರು. ನೀವು ಕೊಟ್ಟಿದ್ದೆಷ್ಟು? ೨೦೦ ಗ್ರಾಮದ ಒಂದು ಪಾಕೆಟ್. ಐದು ಎಕರೆ ಹೊಲ ಇದ್ದರೆ ಐದು ಪಾಕೆಟ್ ಬೇಕು. ಅದು ಸಿಗಲಿಲ್ಲ ಎಂದು ಯಾವೋನೋ ಡೂಪ್ಲಿಕೇಟ್ ಮಾರುವವರು ಹತ್ತಿರ ಹೋಗುತ್ತಾರೆ ಶಾಸಕನಾಗಿ ನಾನು ಆರೋಪ ಮಾಡಿದೆ. ಏನದು? ದಾವಣಗೆರೆ ಸುತ್ತಮುತ್ತ ಬೀಜ ನಿಗಮದಿಂದಲೋ ಅಥವಾ ಇಲಾಖೆಯಿಂದಲೋ ರೈತರಿಂದ ಹತ್ತಿ ಬೀಜ ಬೆಳೆಸುವ ಪ್ರಯತ್ನ ಮಾಡಿದಿರಿ. ಅವನು ಒಳ್ಳೆ ಬೀಜ ಬೆಳೆದ ರೈತ ಮತ್ತು ನಿಮ್ಮ ಅಧಿಕಾರಿ ಶಾಮೀಲಾದರು. ಒಂದು ಕೆ.ಜಿ. ಗೆ ೨೦೦ ರೂಪಾಯಿಯಂತೆ ಮಾರಿದರೂ ತೆಗೆದುಕೊಳ್ಳುವುದಕ್ಕೆ ಸಿದ್ಧನಾಗಿದ್ದಾನೆ ರೈತ. ಅವನಿಗೆ ಗೊತ್ತಿದೆ, ಅದನ್ನು ರಿಜೆಕ್ಟ್ ಮಾಡಿಸಿದರು. ಅದನ್ನು ರಿಜೆಕ್ಟ್ ಮಾಡಿಸಿ ಬ್ಲಾಕ್‌ನಲ್ಲಿ ಮಾಡುತ್ತಿದ್ದಾರೆ. ಬನ್ನಿ ನಾನು ನಿಮಗೆ ಹಿಡಿದುಕೊಡುತ್ತೇನೆ. ಏಕೆಂದರೆ ನಿಮ್ಮ ಬಗ್ಗೆ ನನಗೆ ಗೌರವ ಉಂಟು. ಒಳ್ಳೆ ಕೆಲಸ ಮಾಡುವ ತಳಮಳ ನಿಮ್ಮಲ್ಲಿರಬಹುದೇನೋ ಎಂದು ಕೆಲವು ಸಂಗತಿಗಳನ್ನು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಬಿತ್ತನೆ ಸಮಯದಲ್ಲಿ ಬೀಜ ಕೊಡಿ. ಬಿತ್ತನೆಗೆ ಮುಂಚೆ ಯಾವ ಬೆಲೆಗೆ ಕೊಡುತ್ತೀರೋ ನಿಗದಿ ಮಾಡಿ. ಕೇಂದ್ರ ಸರ್ಕಾರದ ಕಡೆ ತೋರಿಸುತ್ತಾ ಕುಳಿತುಕೊಳ್ಳಬೇಡಿ. ಕೇಂದ್ರ ಸರ್ಕಾರಕ್ಕೂ ಈ ದೇಶದ ರೈತರ ಬಗ್ಗೆ ಆಸಕ್ತಿ ಇಲ್ಲ. ರಾಜ್ಯ ಸರ್ಕಾರಕ್ಕೂ ಇಲ್ಲ. ಸ್ವಾತಂತ್ರ್ಯ ಬಂದ ಮೇಲೆ ೪೪ ಸಾವಿರ ಕೋಟಿ ರೂಪಾಯಿಗಳನ್ನು ಹಾಳಾದಂಥ ಕೈಗಾರಿಕೆಗಳಿಗೆ ಪರಿಹಾರ ರೂಪದಲ್ಲಿ ಕೇಂದ್ರ ಸರ್ಕಾರ ಕೊಟ್ಟಿದೆ. ಇಡೀ ದೇಶದಲ್ಲಿರುವ ರೈತರ ಸಾಲ ೧೨-೧೨½ ಸಾವಿರ ಕೋಟಿ ರೂಪಾಯಿ ಇಲ್ಲ. ರೈತರ ಸಾಲ ಮನ್ನಾ ಮಾಡಬೇಕು ಎಂದು ಪಾರ್ಲಿಮೆಂಟಿನಲ್ಲಿ ಹೇಳಿದಾಗ ಕೇಂದ್ರ ಸರ್ಕಾರ ಯಾವ ರೀತಿ ಉತ್ತರ ಕೊಟ್ಟಿತು ಎಂಬುದನ್ನು ನಾವು ನೀವು ಗಮನಿಸಿದ್ದೇವೆ. ಇದನ್ನು ಪ್ರಸ್ತಾಪ ಮಾಡುವುದಕ್ಕೆ ನಾನು ಇಚ್ಛೆ ಪಡುವುದಿಲ್ಲ. ಇವತ್ತಿನ ಪರಿಸ್ಥಿತಿಯಲ್ಲಿ ಸರಿ ಮಾಡುವುದಕ್ಕೆ ಏನು ಮಾಡಬಹುದು ಎಂಬುದನ್ನು ನಾನು ಹೇಳುತ್ತಿದ್ದೇನೆ ರಸಗೊಬ್ಬರದ ಬಗ್ಗೆ ಹೇಳುತ್ತೇನೆ. ನಮ್ಮ ರೈತ ಏನೋ ಸಗಣಿ ಗೊಬ್ಬರ ಹಾಕಿಕೊಂಡು ಬದುಕುತ್ತಿದ್ದ. ಅವನನ್ನು ಹಾಳುಮಾಡಿದವರು ನಿಮ್ಮ ಇಲಾಖೆಯವರು. ಯಾವ ರೈತ ಈ ರಸಗೊಬ್ಬರವನ್ನು ಉಪಯೋಗ ಮಾಡುತ್ತಿದ್ದಾನೆ ಅವರ ಗುಣಮಟ್ಟವನ್ನು ತಾವು ಚೆಕ್ ಮಾಡುತ್ತಾ ಇರಬಹುದು. ಹೋದವರ್ಷ ಕಂಪ್ಲೇಂಟ್

ಬರಲಿಲ್ಲವಾ? ಆ ರಸಗೊಬ್ಬರ ಉಪಯೋಗ ಮಾಡಿದ ಮೇಲೆ ರೈತನ ಬೆಳೆ ನಾಶ ಆಯಿತು. ರೈತನಿಗೆ ಒಳ್ಳೆ ಬೀಜ ಸಿಗಲಿಲ್ಲ, ಅವನಿಗೆ ಕೊಟ್ಟಿರುವ ರಸಗೊಬ್ಬರ ಸರಿಯಾಗಿರಲಿಲ್ಲ. ನಾನು ಒಬ್ಬ ರೈತ. ಕೃಷಿ ಇಲಾಖೆ ಅಧಿಕಾರಿಗಳನ್ನು ನಾನು ಹತ್ತಾರು ಬಾರಿ ನಮ್ಮ ಹೊಲಕ್ಕೆ ಕರೆದುಕೊಂಡು ಹೋಗಿದ್ದೇನೆ. ಒಬ್ಬೊಬ್ಬ ಅಧಿಕಾರಿ ಒಂದೇ ರೋಗಕ್ಕೆ ಬೇರೆ ಬೇರೆ ಔಷಧಿಗಳನ್ನು ಬರೆದುಕೊಟ್ಟಿದ್ದಾನೆ. ಇಂಥ ಸಂದರ್ಭದಲ್ಲಿ ಕ್ರಿಮಿನಾಶಕ ಔಷಧಿಗಳನ್ನು ಕೊಂಡುಕೊಂಡು ಬೆಳೆ ಉಳಿಸಿಕೊಳ್ಳುವುದಕ್ಕೆ ಸಾಧ್ಯ ಇದೆಯೆ? ನಿಮ್ಮ ಸರ್ಕಾರ ಬದುಕಬೇಕು ಎನ್ನುವುದಾದರೆ ಈ ರಾಜ್ಯದ ರೈತ ಬದುಕಬೇಕು ಎನ್ನುವುದಾದರೆ ಕಡಿಮೆ ಬೆಲೆಯಲ್ಲಿ ಅವನಿಗೆ ರಸಗೊಬ್ಬರ ವಿತರಣೆ ಮಾಡಿ. ಸಬ್ಸಿಡಿ ಕೊಡಿ ಮ್ಯಾಗ್ಸಿಮಂ. ಏತಕ್ಕೆ ಕೊಡುವುದಕ್ಕಾಗುವುದಿಲ್ಲ? ಇದರ ಬಗ್ಗೆ ಕಳಕಳಿ ಇದೆಯೋ ಎಂಬುದು ಪ್ರಶ್ನೆ. ಇದರ ಬಗ್ಗೆ ವಿವರವಾಗಿ ಚರ್ಚೆ ಮಾಡುವ ಅಗತ್ಯ ಇಲ್ಲ. ನಮ್ಮ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಇದೆ. ಅಲ್ಲಿ ಮಾವಿನ ಹಣ್ಣಿನ ರಸ ಮಾಡುವುದಕ್ಕೆ ಐ.ಎ.ಎಸ್. ಐ.ಪಿ.ಎಸ್. ಅಧಿಕಾರಿಗಳು ಬೇಕಾ? ಯಾವೋನು ಹೇಳಿದ ಅದನ್ನು ಮಾಡುವುದಕ್ಕೆ ಯಾವೋನೋ ಮುಳುಗಿಸುವಂಥವನ್ನು ಉಳಿದುಕೊಳ್ಳುವುದಕ್ಕೋಸ್ಕರ ಮಾವಿನ ಹಣ್ಣಿನ ರಸ ಮಾಡುವುದಕ್ಕೆ ಹೇಳಿದ ನಿಮ್ಮ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮೂಲಕ ಒಂದೊಂದು ಹೋಬಳಿಯಲ್ಲಿ ಆಫೀಸ್ ತೆರೆಯಿರಿ ಎಂದು ನಾನು ಹೇಳಿದ್ದೆ. ಅಲ್ಲಿ ಐದಾರು ಟ್ರ್ಯಾಕ್ಟರ್ಸ್ ಇಟ್ಟುಕೊಳ್ಳಿ. ಐದು ಎಕರೆ ಒಳಗಡೆ ಇರುವ ರೈತರಿಗೆ ಉಳುಮೆ ಮಾಡುವುದಕ್ಕೆ ಸಹಾಯ ಮಾಡಿ. ಅವನು ಕೊಂಡುಕೊಳ್ಳುವುದಕ್ಕೆ ಸಾಧ್ಯ ಇಲ್ಲ. ನೀವು ಟ್ರ್ಯಾಕ್ಟರ್‌ನಿಂದ ೧೫ ರೂಪಾಯಿ ೨೦ ರೂಪಾಯಿ ಎಂದು ಮಿನಿಮಂ ಚಾರ್ಜ್ ಮಾಡಿ ಹೊಲ ಉಳುವ ಕೆಲಸ ಮಾಡಿಕೊಡಿ, ಸಮಯದಲ್ಲಿ ಅವನು ಬಿತ್ತನೆ ಮಾಡಿಕೊಳ್ಳುತ್ತಾನೆ. ೨೧ನೇ ಶತಮಾನಕ್ಕೆ ಹೋಗಬೇಕೆಂದು ಪ್ರಧಾನಿ ಹೇಳಿದ್ದಾರೆ. ನಾವಿನ್ನೂ ೧೫-೧೬ನೇ ಶತಮಾನದಲ್ಲಿದ್ದೇವೆ, ರೈತನ ಹೊಲಕ್ಕೆ ಹೋಗುವುದಕ್ಕೆ ದಾರಿ ಇಲ್ಲ. ಆ ವಿಷಯ ಬೇರೆ ಇರಬಹುದು. ೧೦೦ ಬಾವಿಗಳ ಯೋಜನೆಯಡಿಯಲ್ಲಿ ನಮ್ಮ ರೈತ ಬೋರ್‌ವೆಲ್ ಹಾಕಿಕೊಂಡ. ಆದರೆ ಆ ಬೋರ್‌ವೆಲ್‌ಗೆ ವಿದ್ಯುತ್ ಇದೆಯೆ?

ಹೇಳಿ, ನಿಮ್ಮ ಮಂತ್ರಿಮಂಡಲಕ್ಕೆ ಹೇಳಿ, ನಿಮ್ಮ ಮಾನ್ಯ ರಾಮಕೃಷ್ಣ ಹೆಗಡೆಯವರಿಗೆ ಹೇಳಿ, ನಿಮ್ಮ ಮಂತ್ರಿಮಂಡಲದಲ್ಲಿ ನಾವು ಇರುವುದಿಲ್ಲವೆಂದು ಹೇಳಿ. ಜನತಾ ಸರ್ಕಾರ ಮತ್ತೆ ಬರಬೇಕು ಎಂದಿದ್ದರೆ ನಾವು ಶಾಸಕರು ಗೌರವದಿಂದ ಓಡಾಡಬೇಕೆಂದಿದ್ದರೆ ರೈತರಿಗೆ ಸವಲತ್ತುಗಳನ್ನು ಒದಗಿಸಿಕೊಡಿ. ನೀರಾವರಿ ಯೋಜನೆಗಳಿಗೆ ದುಡ್ಡು ಕೊಡಿ. ಪಂಪುಸೆಟ್ಟುಗಳನ್ನು ತಯಾರು ಮಾಡುವವರಿಗೆ ಹೇಳಿ. ಅವರಿಗೆ ಕೊಡತಕ್ಕ ಸಾಮಾನುಗಳನ್ನು ಸಣ್ಣ ಸಣ್ಣ ರೈತರಿಗೆ ಸಬ್ಸಿಡಿ ರೂಪದಲ್ಲಿ ಕೊಡುವಂತೆ ವ್ಯವಸ್ಥೆ ಮಾಡಿ. ನೂರು ಮೋಟಾರುಗಳನ್ನು ತಯಾರು ಮಾಡಿದರೆ ಅದರಲ್ಲಿ ೨೫ ಭಾಗ ಕಡಿಮೆ ಬೆಲೆಗೆ ಸಣ್ಣ ರೈತರಿಗೆ ವಿತರಣೆ ಮಾಡುವಂತೆ ವ್ಯವಸ್ಥೆ ಮಾಡಿ. ನಿಮ್ಮಲ್ಲಿ ಯಾವುದೇ ಹತೋಟಿಯೂ ಇಲ್ಲದೆ ಇರುವುದರಿಂದ ಇವತ್ತು ರೈತರು ಉಳಿಯುವುದಕ್ಕಾಗುತ್ತಿಲ್ಲ. ನೀವು ಏನಾದರೂ ಒಂದು ದೊಡ್ಡ ಹೆಜ್ಜೆಯನ್ನು ಇಟ್ಟು ರೈತರು ಉಳಿಯುವಂತೆ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡಿದರೆ ಮಾತ್ರ ನಾವು ಉಳಿಯುವುದಕ್ಕೆ ಸಾಧ್ಯವಿದೆ. ಕಳೆದವರ್ಷ ನಾನು ಹಾಸನ ಜಿಲ್ಲೆಗೆ ಹೋಗಿದ್ದೆ. ಅಲ್ಲಿ ಆಲೂಗಡ್ಡೆಯನ್ನು ಬೆಳೆದಿದ್ದಾರೆ. ಬೆಳೆ ಸಂಪೂರ್ಣವಾಗಿ ನಾಶವಾಯಿತು. ಅವರೆಲ್ಲಾ ಬೀದಿ ಪಾಲಾದರು. ಇನ್ನು ಮೈಸೂರು ಜಿಲ್ಲೆಯಲ್ಲಿ ತಂಬಾಕನ್ನು ಬೆಳೆದರು. ನೀವೇ ಹೇಳಿದಿರಿ. ನಿಮ್ಮ ಮಾತಿನ ಪ್ರಕಾರ ಅವರು ತಂಬಾಕನ್ನು ಬೆಳೆದರು. ಅದಕ್ಕೆ ಬೆಲೆ ಸಿಕ್ಕಲಿಲ್ಲ. ಅವರು ಸತ್ತರು. ಶಿವಮೊಗ್ಗದಲ್ಲಿ ಭತ್ತವನ್ನು ಬೆಳೆದರು. ಅವರೂ ಸರ್ವನಾಶವಾದರು ಭತ್ತದ ಬೆಳೆ ನಾಶವಾಯಿತು, ಬೀಜದ ಭತ್ತ ಇಲ್ಲದೆ ಅವರು ಭಿಕ್ಷೆ ಬೇಡುವಂಥ ಪರಿಸ್ಥಿತಿ ಬಂದಿದೆ. ನಾನು ಹೇಳುತ್ತಿರುವುದು ರಾಜ್ಯಪಾಲರ ಭಾಷಣಕ್ಕೆ ಸಂಬಂಧಪಟ್ಟ ವಿಷಯ ಅಲ್ಲ ಈ ರಾಜ್ಯದ ಲಕ್ಷಾಂತರ ಜನರು ಇವರನ್ನು ಆರಿಸಿ ಮುಖ್ಯಮಂತ್ರಿಗಳನ್ನಾಗಿ ಮಾಡಿದರೋ ಆ ಮುಖ್ಯಮಂತ್ರಿಗಳು ಈ ರೀತಿ ಹೇಳುತ್ತಿದ್ದಾರೆ. ಈ ಸದನದಲ್ಲಿ ಈ ರೀತಿ ಹೇಳುವುದಕ್ಕೆ ಎಷ್ಟು ಧೈರ್ಯ ಇವರಿಗೆ ? ಯಾರು ೩೦-೩-೮೮ರೊಳಗೆ ಸಹಕಾರಿ ಸಾಲವನ್ನು ವಾಪಸ್ಸು ಕಟ್ಟುತ್ತಾರೋ ಅವರ ಬಡ್ಡಿ ಮತ್ತು ಸುಸ್ತಿ ಬಡ್ಡಿ ಮನ್ನಾ ಮಾಡುತ್ತೇವೆಂದು ಲಿಖಿತ ಮೂಲಕ ರಾಜ್ಯಪಾಲರ ಭಾಷಣದಲ್ಲಿ ಹೇಳಿಸಿದಂಥ ಮುಖ್ಯ ಮಂತ್ರಿಗಳನ್ನು ಕೇವಲ ಯಡಿಯೂರಪ್ಪನವರು ನೋಡುತ್ತಿಲ್ಲ ಇಡೀ ರಾಜ್ಯದ ರೈತರು ನೋಡುತ್ತಿದ್ದಾರೆ. ಇವರು ಏನು ಉತ್ತರವನ್ನು ಕೊಟ್ಟರು ಎಂದರೆ ಅದು ಕೈ ತಪ್ಪಿತಂತೆ. ಬರವಣಿಗೆಯ ತಪ್ಪು ಆಯಿತಂತೆ. ಇದು

ಮುಖ್ಯ ಮಂತ್ರಿಗಳಾದವರು ಕೊಡತಕ್ಕ ಉತ್ತರವೇ ? ಮುಖ್ಯ ಮಂತ್ರಿಗಳು ಹೇಳಬಹುದಿತ್ತು, ಯಡಿಯೂರಪ್ಪನವರೇ ೩೦-೩-೮೮ ಎಂದು ನಾನು ಹೇಳುತ್ತಿದ್ದೇನೆ. ಕಾರಣ ಸ್ವಲ್ಪ ದುಡ್ಡು ಬರಲಿ ಅಂತ. ಸ್ವಲ್ಪ ಕಾಲ ತಾಳಿ ಇದನ್ನು ಏಪ್ರಿಲ್‌ವರೆಗೆ ವಿಸ್ತರಣೆ ಮಾಡುತ್ತೇನೆ, ನಂತರ ಜೂನ್ ತಿಂಗಳವರೆಗೆ ವಿಸ್ತರಣೆ ಮಾಡುತ್ತೇನೆ, ರೈತರು ಬದುಕುವಂತೆ ನಾನು ನೋಡಿಕೊಳ್ಳುತ್ತೇನೆ ಎಂದು ಅವರು ಹೇಳಬಹುದಿತ್ತು. ಈ ರಾಜ್ಯದ ರೈತರ ಬಗ್ಗೆ ಚುನಾಯಿತ ಪ್ರತಿನಿಧಿಗಳಾದ ನಮಗೆ ಸಮಯ ಕೊಟ್ಟು ಕೆಲಸಮಾಡುವುದಕ್ಕಾಗುತ್ತಿಲ್ಲ, ಹೋರಾಟ ಮಾಡುವುದಕ್ಕಾಗುತ್ತಿಲ್ಲ. ಅನೇಕ ಸಮಸ್ಯೆಗಳಿಗೇ ನನ್ನ ಸಮಯ ಕಳೆಯುತ್ತಿದೆ ಎನ್ನತಕ್ಕ ಒಂದೇ ಒಂದು ಕಾರಣಕ್ಕೋಸ್ಕರ ಎಲ್ಲರನ್ನೂ ಮುಗಿಸಿದಂಥ ಮುಖ್ಯ ಮಂತ್ರಿಗಳು ಇವತ್ತು ರೈತರನ್ನೂ ಮುಗಿಸುವುದಕ್ಕೆ ಹೊರಟಿದ್ದಾರೆ. ಸ್ವಾಮಿ, ನಾನು ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಈ ರೀತಿ ರಾಜ್ಯದ ರೈತರಿಗೆ ಮೋಸ ಮಾಡುವುದಕ್ಕೆ ಸಾಧ್ಯವಿಲ್ಲ. ನೀವು ಬೇರೆ ಯಾರಿಗೆ ಬೇಕಾದರೂ ಮೋಸಮಾಡಿ ಯಶಸ್ವಿಯಾಗಬಹುದು. ಆದರೆ ಈ ರಾಜ್ಯದ ರೈತರಿಗೆ ಮೋಸಮಾಡಿದರೆ ನಿಮಗೆ ಕೇಡುಗಾಲ ಹತ್ತಿರ ಬರುತ್ತಿದೆಯೆಂದು ನಾನು ನಿಮಗೆ ಎಚ್ಚರಿಕೆಯನ್ನು ಕೊಡಬಯಸುತ್ತೇನೆ. ಇವತ್ತು ನಾವು ಹಳ್ಳಿಗಳಿಗೆ ಹೋಗುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ರೈತರು ಸಾಯುತ್ತಿದ್ದಾರೆ ನಿಮ್ಮ ಅಧಿಕಾರಿಗಳೂ ಕೂಡ ಹಳ್ಳಿಗಳಿಗೆ ಹೋಗುತ್ತಿಲ್ಲ. ಅವರಿಗೆ ಸರಿಯಾದ ಮಾಹಿತಿ ಸಿಕ್ಕುತ್ತಿಲ್ಲ. ಇಂಥ ಒಂದು ವಿಚಿತ್ರ ಸನ್ನಿವೇಶ ಇದೆ. ನಾನು ಹೆಚ್ಚಿನ ವಿವರಕ್ಕೆ ಹೋಗುವುದಿಲ್ಲ ನಿಮ್ಮ ಈ ಪುಸ್ತಕವನ್ನು ತೆಗೆದುಕೊಂಡು ಬಿಸಾಕಿ. ಈ ಅಂಕಿಅಂಶಗಳನ್ನು ತೆಗೆದುಕೊಂಡು ಏನು ಮಾಡೋಣ ? ಈ ಅಂಕಿಅಂಶಗಳಿಂದ ಏನು ಉಪಯೋಗ ಆಗುತ್ತದೆ ? ರೈತರು ಉಳಿಯುತ್ತಾರೆಯೋ ಇದರಿಂದ ಅವರು ನೆಮ್ಮದಿಯಿಂದ ಜೀವನ ಮಾಡುತ್ತಿದ್ದಾರೆಯೋ ? ಅವರಿಗೆ ಬೇಕಾದ ಸವಲತ್ತುಗಳು ಸಿಕ್ಕುತ್ತಿವೆಯೋ ? ಇದರ ಬಗ್ಗೆ ನಿಮ್ಮ ಅಧಿಕಾರಿಗಳು ಯೋಚನೆ ಮಾಡಿದ್ದಾರೆಯೋ ? ಹಾಗೆ ಮಾಡಿದ್ದರೆ, ನಾವು ಇದನ್ನು ಇಲ್ಲಿ ಚರ್ಚೆ ಮಾಡೋಣ. ಚರ್ಚೆಮಾಡಿ ರೈತರಿಗೆ ಪರಿಹಾರ ಕೊಡತಕ್ಕ ವ್ಯವಸ್ಥೆ ಮಾಡಿ. ರೈತರ ಪ್ರಶ್ನೆ ಬಂದ ತಕ್ಷಣ ಅದರ ಬಗ್ಗೆ ನೀವು ಗಮನವನ್ನು ಕೊಡುವುದನ್ನು ನಾವು ಕಾಣುತ್ತಿಲ್ಲ, ಇಂಥ ಸಂದರ್ಭದಲ್ಲಿ ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ವೈಜ್ಞಾನಿಕವಾಗಿ ನಾವು ಅನೇಕ ಪ್ರಯೋಗಗಳನ್ನು ಮಾಡಿ ಯಶಸ್ವಿಯಾಗುತ್ತಿದ್ದೇವೆ. ಆದರೆ ಅದು ರೈತನಿಗೆ ಮುಟ್ಟುತ್ತಿದೆಯೆ ? ಈ ಎಲ್ಲಾ ಹೊಸ ಪ್ರಯೋಗಗಳನ್ನು ತಾಲ್ಲೂಕು ಮಟ್ಟದಲ್ಲಿ ನೂರಾರು ಜನರನ್ನು ಒಟ್ಟಿಗೇ ಸೇರಿಸಿ ಅವರಿಗೆ ತಿಳುವಳಿಕೆ ಕೊಟ್ಟು ಇವತ್ತಿನ ಪರಿಸ್ಥಿತಿಗೆ ತಕ್ಕಂತೆ ಒಳ್ಳೆಯ ಬೆಳೆಯನ್ನು ಬೆಳೆದು ಅವನು ನೆಮ್ಮದಿಯಿಂದ ಜೀವನ ಮಾಡುವುದಕ್ಕೆ ಬೇಕಾದ ಅನುಕೂಲವನ್ನು ನೀವು ಕಲ್ಪಿಸಿ ಕೊಡುತ್ತಿಲ್ಲ. ಅಥವಾ ನೀವು ನಿಮ್ಮ ಅಧಿಕಾರಿಗಳಿಗೆ ಏನಾದರೂ ಟ್ರೈನಿಂಗ್ ಕೊಡುತ್ತಿದ್ದೀರಾ ? ನಿಮ್ಮ ಅಧಿಕಾರಿಗಳ ತಲೆಯಲ್ಲಿ ಏನು ಇದೆ ಗೊತ್ತೇ ? ಒಂದೇ ರೋಗಕ್ಕೆ ೧೦ ಜನ ಅಧಿಕಾರಿಗಳೂ ೧೦ ರೀತಿಯ ಔಷಧಿಗಳನ್ನು ಬರೆದು ಕೊಡುತ್ತಾರೆ. ಅಂದಮೇಲೆ ಅಂಥ ಅಧಿಕಾರಿಗಳನ್ನು ನೀವು ಏತಕ್ಕೆ ಇಟ್ಟುಕೊಂಡಿದ್ದೀರಿ? ದಯವಿಟ್ಟು ಇದರ ಬಗ್ಗೆ ಯೋಚನೆ ಮಾಡಿ. ಇವತ್ತು ರಾಜ್ಯದ ರೈತರ ಬಗ್ಗೆ ಹೇಳುವುದಾದರೆ, ಅವರು ಭಿಕ್ಷೆ ಬೇಡತಕ್ಕ ಪರಿಸ್ಥಿತಿಗೆ ಬಂದಿದ್ದಾರೆ. ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಕೇವಲ ಅಂಕಿ ಅಂಶಗಳನ್ನು ನಮ್ಮ ಮುಂದುದಿಡುವುದರಿಂದ ಪ್ರಯೋಜನವಾಗುವುದಿಲ್ಲ ಈ ರಾಜ್ಯದಲ್ಲಿ ಎಷ್ಟು ಜನ ರೈತರಿದ್ದಾರೆ, ಎಷ್ಟು ಭೂಮಿಯಲ್ಲಿ ಫಸಲು ಬೆಳೆಯುತ್ತಿದ್ದಾರೆ, ಎಷ್ಟು ಜಮೀನು ಖಾಲಿ ಇದೆ ಎಂಬುದಕ್ಕೆ ಬದಲಾಗಿ ಆ ರೈತ ನೆಮ್ಮದಿಯಿಂದ ಹಳ್ಳಿಯಲ್ಲಿ ನೆಲೆಸುವಂಥ ಸ್ಥಿತಿಗೆ ತಂದಿದ್ದೇವೆಯೆ ? ನೆಮ್ಮದಿಯಿಂದ ಜೀವನ ಮಾಡಬೇಕಾದರೆ ಅವನಿಗೆ ಕನಿಷ್ಟ ಅನುಕೂಲಗಳನ್ನಾದರೂ ಮಾಡಿಕೊಡುವುದಕ್ಕೆ ನಿಮಗೆ ಸಾಧ್ಯವಿದೆಯೋ ? ಹಾಗೆ ಮಾಡಿಕೊಳ್ಳುವುದಕ್ಕೆ ಸಾಧ್ಯವಿದ್ದರೆ ಬೇರೆ ಎಲ್ಲಾ ಕೆಲಸಗಳನ್ನು ಸ್ಥಗಿತ ಮಾಡಿ ಈ ರೈತರ ಉಳಿವಿಗಾಗಿ ಹೆಚ್ಚಿನ ಹಣವನ್ನು ನೀವು ನಿಮ್ಮ ಇಲಾಖೆಯಲ್ಲಿ ಖರ್ಚು ಮಾಡಿ. ಈ ರೀತಿ ಮಾಡಿದರೆ ಮಾತ್ರ ನಾವು ಉಳಿಯುವುದಕ್ಕೆ ಸಾಧ್ಯ. ಕಳೆದ ವರ್ಷ ನಮ್ಮ ಜಾನುವಾರುಗಳಿಗೆ ಕಾಲುಬಾಯಿ ರೋಗ ಬಂತು. ಅದಕ್ಕೆ ಬೇಕಾದ ಔಷಧಿಗಳನ್ನು ಹುಡುಕಿದರೂ ಸಿಕ್ಕಲಿಲ್ಲ. ಅದನ್ನು ಸ್ಟಾಕ್ ಮಾಡಿ ಎಂದು ಅನೇಕಸಾರಿ ಪ್ರಾರ್ಥಿಸಿಕೊಂಡರೂ ಸಹ ಆ ಕೆಲಸವನ್ನು ನೀವು ಮಾಡಲಿಲ್ಲ. ಸಾಯುತ್ತಿರುವ ಜಾನುವಾರುಗಳನ್ನು ಆಸ್ಪತ್ರೆಗೆ ತೆಗೆದುಕೊಂಡುಹೋದರೆ ಅಲ್ಲಿ ಸರಿಯಾದ ಔಷಧಿಗಳು ಸಿಕ್ಕುವುದಿಲ್ಲ. ಕನಿಷ್ಟ ೮-೧೦ ಹಳ್ಳಿಗಳನ್ನಾದರೂ ಒಟ್ಟುಗೂಡಿಸಿ ಒಂದು ಉತ್ತಮ ಜಾನುವಾರು ಆಸ್ಪತ್ರೆಯನ್ನು ಮಾಡಿ ಎಂದು ಕೇಳಿದರೆ ನಿಮ್ಮ ಅಧಿಕಾರಿಗಳು ಹೇಳುತ್ತಾರೆ, ಅಷ್ಟೇ ಅಲ್ಲ ಮಂತ್ರಿಗಳೂ ಹೇಳುತ್ತಾರೆ.

ದುಡ್ಡಿಲ್ಲ ಎಂದು. ದುಡ್ಡು ಇದೆ, ಆದರೆ ಡಾಕ್ಟರ್‌ಗಳು ಇಲ್ಲ, ಡಾಕ್ಟರ್‌ಗಳು ಇದ್ದಾರೆ ಆದರೆ ಇನ್ನೂ ಏನೇನೋ ಇಲ್ಲ ಎಂದು ಈ ರೀತಿ ನೆಪವನ್ನು ಹೇಳುತ್ತಿದ್ದಾರೆ. ಮಾನ್ಯ ಅಧ್ಯಕ್ಷರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದಾದರೂ ಇಷ್ಟೆ. ಇವತ್ತು ನಮ್ಮ ರಾಜ್ಯದ ರೈತರ ಪರಿಸ್ಥಿತಿ ಸರಿಯಾಗಿಲ್ಲ. ಒಂದು ಸಾರಿ ಆ ರೈತರು ಈ ಸರ್ಕಾರದ ವಿರುದ್ಧವಾಗಿ ಅಥವಾ ನಮ್ಮ ವಿರುದ್ಧವಾಗಿ ಸಿಟ್ಟಿಗೆದ್ದರೆ ನಾವು ಯಾರೂ ಉಳಿಯುವುದಿಲ್ಲ. ಆದ್ದರಿಂದ ಅಧಿಕಾರದ ಪಿತ್ತ ನೆತ್ತಿಗೇರಿ ಈ ರಾಜ್ಯದ ರೈತರನ್ನು ಮರೆಯುತಕ್ಕ ಪ್ರಯತ್ನವನ್ನು ನೀವು ಮಾಡುವುದು ಬೇಡ. ಈಗಲಾದರೂ ನೀವೂ ಮತ್ತು ನಿಮ್ಮ ಸರ್ಕಾರ ಉಳಿಯಬೇಕಾದರೆ ಈ ಬಗ್ಗೆ ಸರಿಯಾದ ಯೋಚನೆ ಮಾಡಿ ಅವನಿಗೆ ಬೇಕಾದ ಎಲ್ಲಾ ಸವಲತ್ತುಗಳನ್ನೂ ಇಲಾಖೆಯ ಮುಖಾಂತರ ನೀವು ಕೊಡಿಸುವುದರಲ್ಲಿ ಯಶಸ್ವಿಯಾಗತಕ್ಕ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕೆಂದು ಮಾತ್ರ ಈ ಸಂದರ್ಭದಲ್ಲಿ ತಮ್ಮಲ್ಲಿ ವಿನಂತಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ

೨-೩೦ ಪಿ. ಎಂ.

† ಶ್ರೀ ಬಿ ಎನ್. ಬಚ್ಚೇಗೌಡ.– (ಹೊಸಕೋಟೆ) ಸನ್ಮಾನ್ಯ ಅಧ್ಯಕ್ಷರೇ ಭೂಸಾರ ಜಲರಕ್ಷಣೆ ಮತ್ತು ವ್ಯವಸಾಯ ಹಾಗೂ ತೋಟಗಾರಿಕೆ ಇಲಾಖೆಗಳ ೧೯೮೮-೮೯ನೇ ಸಾಲಿನ ಅನುದಾನವನ್ನು ಸ್ವಾಗತ ಮಾಡಿ ಕೆಲವಾರು ಮಾತುಗಳನ್ನು ಆಡುವುದಕ್ಕೆ ಇಷ್ಟಪಡುತ್ತೇನೆ, ಈ ರಾಷ್ಟ್ರ ಕೃಷಿ ಪ್ರಧಾನವಾದ ರಾಷ್ಟ್ರ. ರಾಷ್ಟ್ರದ ಸರ್ವತೋಮುಖ ಪ್ರಗತಿ ಕೃಷಿ ಇಲಾಖೆ ಮೇಲೆ ಅವಲಂಬಿಸಿದೆ, ಇದರಲ್ಲಿ ರಾಷ್ಟ್ರದ ಅರ್ಥ ವ್ಯವಸ್ಥೆ ಕೂಡಾ ಮಹತ್ತರ ಪಾತ್ರವನ್ನು ವಹಿಸುತ್ತದೆ. ಇವತ್ತು ಈ ಕೃಷಿ ಇಲಾಖೆಯಲ್ಲಿ ಕೃಷಿ ಸಂಶೋಧಕರು, ಅಧಿಕಾರಿಗಳು, ಕೃಷಿ ವಿಸ್ತರಣಾಧಿಕಾರಿಗಳು ಮತ್ತು ಆ ತಂತ್ರಜ್ಞರ ಪಾತ್ರ ಬಹಳ ಮಹತ್ತರವಾದುದಾಗಿದೆ. ಇವತ್ತಿನ ಭೌಗೋಳಿಕ ವ್ಯವಸ್ಥೆಯಲ್ಲಿ ರೈತರ ದುಡಿಮೆ ಹಾಗೂ ಕೃಷಿ ತಜ್ಞರ ಸಹಾಯದಿಂದ ಸುಮಾರು ಶೇಕಡಾ ೭೦ ಭಾಗದಷ್ಟು ರೈತರು ಸಾಧನೆಗೈದಿದ್ದಾರೆಂದು ತಿಳಿಸಬೇಕಾಗಿದೆ ಕಳೆದ ೪-೫ ವರ್ಷಗಳಲ್ಲಿ ಪ್ರತಿಕೂಲ ಹವಾಮಾನದಿಂದ ಮತ್ತು ಬರಗಾಲದ ದವಡೆ ಯಿಂದ ಮಳೆಯನ್ನೇ ಆಶ್ರಯಿಸಿರತಕ್ಕ ರೈತರು ಸಾಕಷ್ಟು ತತ್ತರಿಸಿ. ತಮ್ಮ ಜೀವನವನ್ನು ನಡೆಸು ವುದಕ್ಕೇ ಕಷ್ಟವಾಗಿದೆ, ಆದರೂ ಕೂಡಾ ಕೃಷಿ ಇಲಾಖೆಯ ಅಧಿಕಾರಿಗಳು ಇವತ್ತು ಪರ್ಯಾಯ ವ್ಯವಸ್ಥೆಯನ್ನು, ರೈತರಿಗೆ ಸಮಯಕ್ಕೆ ಸರಿಯಾಗಿ ಬೇಕಾದ ಬೀಜವನ್ನು ಒದಗಿಸುವುದರಲ್ಲಿ ಮತ್ತು ಉತ್ಪಾದನೆ ದೃಷ್ಟಿಯಲ್ಲಿ ಸಾಕಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡು ಕೆಲಸ ಮಾಡಿದ್ದಾರೆ. ೧೯೮೭-೮೮ರಲ್ಲಿ ಏಕದಳ ಹಾಗೂ ದ್ವಿದಳ ಧಾನ್ಯಗಳ ಉತ್ಪಾದನೆಯ ಗುರಿಯನ್ನು ಹಾಕಿಕೊಳ್ಳ ಲಾಗಿತ್ತೋ ಆ ಸಾಧನೆಯನ್ನು ವ್ಯವಸಾಯ ಇಲಾಖೆಯ ಸಹಾಯದಿಂದ ನಮ್ಮ ರೈತರು ಸಾಧಿಸಿದ್ದಾರೆ. ಈ ಬಗ್ಗೆ ೭೨.೫೯ ಲಕ್ಷ ಟನ್ ಉತ್ಪಾದನೆ ಮಾಡಲಾಗಿದೆ. ವ್ಯವಸಾಯ ಇಲಾಖೆ ಸಹಯೋಗದೊಡನೆ ೧೯೮೭-೮೮ನೇ ಸಾಲಿನಲ್ಲಿ ೬ ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ೫೮.೭೬ ಲಕ್ಷ ಟನ್ ಏಕದಳ ಉತ್ಪಾದನೆ ಮಾಡಲಾಗಿದೆ. ಇದೇ ರೀತಿ ಪಲ್ಸಸ್‌ನಲ್ಲೂ ಕೂಡಾ ೬೫ ೭೨ ಲಕ್ಷ ಟನ್ ಗುರಿಯನ್ನು ಈ ರಾಜ್ಯದಲ್ಲಿ ಸಾಧಿಸಲಾಗಿದೆ. ಇದೇ ರೀತಿ ಎಣ್ಣೆ ಕಾಳು ಉತ್ಪಾದನೆಯಲ್ಲಿ ನಮ್ಮ ರಾಜ್ಯ ಮಾದರಿಯಾಗಿದೆ. ಈ ಎಣ್ಣೆ ಉತ್ಪಾದನೆಯಲ್ಲಿ ಕರ್ನಾಟಕ ರಾಜ್ಯ ರಾಷ್ಟ್ರದಲ್ಲಿಯೇ ಮಾದರಿಯಾಗಿದೆ. ಈ ಬಗ್ಗೆ ಕೇಂದ್ರದಿಂದಲೂ ಪ್ರಶಂಸೆ ಗಳಿಸಿದೆ. ಎಣ್ಣೆ ಉತ್ಪಾದನೆಯಲ್ಲಿ ಗ್ರೌಂಡ್‌ನಟ್ ಬಗ್ಗೆ ಹೇಳುವುದಾದರೆ ಸುಮಾರು ೧೦ ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ೯.೧೯ ಲ್ಯಾಕ್ಸ್ ಟನ್ ಉತ್ಪಾದನೆ ಮಾಡಲಾಗಿದೆ. ೧೧.೩೯ ಲಕ್ಷ ಹೆಕ್ಟೇರ್ ಜಾಗದಲ್ಲಿ ೪.೩೯ ಲಕ್ಷ ಟನ್ ಸೂರ್ಯಕಾಂತಿ ಬೀಜವನ್ನು ಬೆಳೆಯಲಾಗಿದೆ. ಒಟ್ಟು ೨೮.೪ ಲಕ್ಷ ಹೆಕ್ಟೇರ್‌ನಲ್ಲಿ ೧೬.೩೦ ಲಕ್ಷ ಟನ್ ಎಣ್ಣೆ ಕಾಳು ಉತ್ಪಾದನೆ ಆಗಿದೆ. ಇಡೀ ರಾಷ್ಟ್ರದಲ್ಲಿ ಹೆಚ್ಚು ಉತ್ಪಾದನೆಯನ್ನು ನಮ್ಮ ರಾಜ್ಯ ಮಾಡಿದೆ. ಈ ಬಗ್ಗೆ ಕೇಂದ್ರ ಸಚಿವರು ಪ್ರಶಂಸೆ ಮಾಡಿದ್ದಾರೆಂದು ತಿಳಿದುಬಂದಿದೆ. ರಾಜ್ಯದಲ್ಲಿ ಎಣ್ಣೆಕಾಳು ಬೆಳೆಯತಕ್ಕ ಪ್ರದೇಶವನ್ನು ಗುರ್ತಿಸಿ ಅತಿ ಹೆಚ್ಚಿನ ಪ್ರದೇಶದಲ್ಲಿ ಇದನ್ನು ಬೆಳೆಯಲಾಗಿದೆ. ಮಾನ್ಯ ಲಕ್ಕಪ್ಪನವರು ಹಾಗೂ ಮಾನ್ಯ ಯಡಿಯೂರಪ್ಪನವರು ಮಾತ ನಾಡುತ್ತಾ ಒಂದು ವಿಷಯವನ್ನು ತಿಳಿಸಿದರು, ಎಣ್ಣೆಕಾಳು ಬೀಜಗಳನ್ನು ಕೊಡುವಾಗ ಸರಿಯಾದ ಬೀಜಗಳನ್ನು ಕೊಡದಿರುವುದನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ. ೧೯೮೭-೮೮ನೇ ಸಾಲಿನಲ್ಲಿ ಸೂರ್ಯಕಾಂತಿಯ ಬೀಜವನ್ನು ಕೊಡುವಾಗ ಗುಣಮಟ್ಟವಿರುವ ಬೀಜವನ್ನು ವಿತರಣೆ ಮಾಡದೇ ಇರುವುದರಿಂದ ಸೂರ್ಯಕಾಂತಿ ಬೆಳೆಯಲ್ಲಿ ಉತ್ಪಾದನೆ ಸಾಕಷ್ಟು ಕಡಿಮೆಯಾಯಿತು. ದೋಷಪೂರಿತ

ಬೀಜಗಳನ್ನು ರೈತರಿಗೆ ಸರಬರಾಜು ಮಾಡಿರುವುದರಿಂದ ಉತ್ಪಾದನೆ ಕಡಿಮೆಯಾಯಿತು ಎನ್ನುವ ವಿಚಾರವನ್ನು ಸಚಿವರ ಗಮನಕ್ಕೆ ತರಬಯಸುತ್ತೇನೆ. ಅನೇಕ ಕಡೆ ಸೂರ್ಯಕಾಂತಿಯನ್ನು ಒಂದು ಎಕರೆಯಲ್ಲಿ ಒಂದು ಕ್ವಿಂಟಾಲ್ ಸಹ ಬೆಳೆಯದಿರುವುದನ್ನು ಗುರುತಿಸಿರುವುದು ಉಂಟು. ಎಣ್ಣೆಕಾಳು ಬೀಜಗಳನ್ನು ಹೆಚ್ಚು ಬೆಳೆದಿದ್ದರೂ ಸಹ ದೋಷಪೂರಿತ ಬೀಜಗಳನ್ನು ಹಂಚಿಗುವುದನ್ನು ನಾವು ಕಾಣುತ್ತಿದ್ದೇವೆ. ೧೯೮೭–೮೮ನೇ ಸಾಲಿನಲ್ಲಿ ಇಂಡಾಫ್ ರಾಗಿಯನ್ನು ಬಯಲುಸೀಮೆಗಳಲ್ಲಿ ಹಂಚಿರ ತಕ್ಕದ್ದು ಸರಿಯಾಗಿಲ್ಲ, ಕಾರಣ ಇಷ್ಟೆ, ಅನೇಕ ರೈತರು ಬೆಳೆದಂತಹ ರಾಗಿಯನ್ನು ತೆಗೆದುಕೊಂಡು ಅದಕ್ಕೆ ಇಂಡಾಫ್ ೫, ೬, ೭, ೮. ಈ ತರಹ ನಂಬರ್ ಹಾಕಿ ಹೆಚ್ಚು ಹಣಕ್ಕೆ ವಿತರಣೆ ಮಾಡಿದ್ದಾರೆ ಎನ್ನುವ ಆಪಾದನೆ ಕರ್ನಾಟಕ ಬೀಜ ನಿಗಮದ ಮೇಲೆ ಇದೆ. ಇದನ್ನು ಮಾನ್ಯ ಸಚಿವರು ಗಮನಿಸ ಬೇಕು. ಕಳೆದ ವರ್ಷ ಕಳಪೆದರ್ಜೆಯ ಇಂಡಾಫ್ ರಾಗಿಯನ್ನು ಹಂಚಿದ್ದರಿಂದ ಅದರ ಕೆಟ್ಟ ಪರಿಣಾಮ ರೈತರಿಗೆ ಆಗಿದೆ. ಈ ಸಲ ಮುಂಗಾರಿ ಸಾಲಿನಲ್ಲಿ ಉತ್ತಮ ಇಂಡಾಫ್ ರಾಗಿಯನ್ನು ಕೊಡುವ ಕಾರ್ಯವನ್ನು ಇಲಾಖೆಯ ಮುಖಾಂತರ ಮಾಡಿಸಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಸೂರ್ಯಕಾಂತಿಯ ಬೀಜವನ್ನು ರಷ್ಯಾದಿಂದ ತರಿಸಿದ್ದಾರೆ. ಉದಾಹರಣೆಗೆ ನನ್ನದೇ ಹೇಳುವುದಾದರೆ ೬ ಎಕರೆ ಪ್ರದೇಶದಲ್ಲಿ ರಷ್ಯಾ ಸೀಡ್ಸ್ ಬಿತ್ತನೆ ಮಾಡಿದಾಗ ೬ ಎಕರೆಗೆ ೬ ಕ್ವಿಂಟಾಲ್ ಸಹ ಆಗಲಿಲ್ಲ. ಬೀಜವನ್ನು ಕೊಡುವಾಗ ಒಂದು ಎಕರೆಗೆ ೫ ಕ್ವಿಂಟಾಲ್ ಆಗುತ್ತದೆಂದು ಹೇಳಿದರು. ೬ ಎಕರೆಗೆ ೬ ಕ್ವಿಂಟಾಲ್ ಸಹ ಆಗಲಿಲ್ಲ. ಕಾರಣ ನನಗೆ ಗೊತ್ತಿಲ್ಲ, ಇದರಬಗ್ಗೆ ತಂತ್ರಜ್ಞರು ಹೇಳಬೇಕು. ರಷ್ಯಾ ದೇಶದ ಹವಾಗುಣಕ್ಕೂ ನಮ್ಮದೇಶದ ಹವಾಗುಣಕ್ಕೂ ಹೊಂದಿಕೆಯಾಗಲಿಲ್ಲವೊ ಏನೋ ಗೊತ್ತಿಲ್ಲ, ಅವರು ಹೇಳಿದ ರೀತಿಯಲ್ಲಿ ಬಯಲು ಸೀಮೆಗಳಲ್ಲಿ ಸರಿಯಾದ ಇಳುವರಿ ಬರಲಿಲ್ಲ. ಮಾನ್ಯ ಲಕ್ಕಪ್ಪನವರು ಮತ್ತು ಮಾನ್ಯ ಯಡಿಯೂರಪ್ಪನವರು ಬೀಜಗಳ ಗಣಮಟ್ಟದ ಬಗ್ಗೆ ಸಚಿವರಿಗೆ ತಿಳಿಸಿದ್ದಾರೆ. ಅದೇರೀತಿ ನಾನು ಸಹ ತಿಳಿಸುತ್ತೇನೆ. ಸರಿಯಾದ ಬೀಜವನ್ನು ಸರಿಯಾದ ಸಮಯಕ್ಕೆ ರೈತರಿಗೆ ಕೊಡುವಂತಹ ವ್ಯವಸ್ಥೆಯನ್ನು ಬೀಜ ನಿಗಮದ ಮೂಲಕ ಮಾಡಿಸಬೇಕು. ಈ ಕೆಲಸವನ್ನು ತಾವು ಮಾಡಬೇಕೆಂದು ಮತ್ತೊಮ್ಮೆ ತಿಳಿಸುತ್ತಿದ್ದೇನೆ.

೧೯೮೭–೮೮ನೇ ಸಾಲಿನಲ್ಲಿ ಉತ್ಪಾದನೆಯ ದೃಷ್ಟಿಯಿಂದ ಸುಮಾರು ೮೮ ಲಕ್ಷ ಟನ್ ಆಹಾರ ಧಾನ್ಯಗಳ ಉತ್ಪಾದನೆಯ ಗುರಿಯನ್ನು ಮಾನ್ಯ ಸಚಿವರು ಇಟ್ಟುಕೊಂಡಿದ್ದಾರೆ. ಅದರಲ್ಲಿ ೬೫ ಲಕ್ಷ ಟನ್ ಆಹಾರಧಾನ್ಯಗಳ ಗುರಿಸಾಧನೆಯನ್ನು ಮಾಡಲಾಗಿದೆ. ಮಿಕ್ಕ ಗುರಿ ಸಾಧನೆಯನ್ನು ಏತಕ್ಕೆ ಮಾಡಲಿಲ್ಲವೆನ್ನುವುದಕ್ಕೆ ಪ್ರತಿಕೂಲ ಹವಾಮಾನ ಇರಬಹುದು, ಮಳೆ ಬಾರದೆ ಇರಬಹುದು. ನಮ್ಮರಾಜ್ಯದಲ್ಲಿ ಕಳೆದ ನಾಲ್ಕು ವರ್ಷಗಳಿಂದ ಬರಗಾಲ ಇದೆ. ಆದರೂ ಗುರಿಯನ್ನು ಸಾಧಿಸಲಿಕ್ಕೆ ಪ್ರಯತ್ನ ನಡೆದಿದೆ. ಏನು ಗುರಿಯನ್ನು ಇಟ್ಟುಕೊಂಡಿರುತ್ತೇವೆ, ಆ ಗುರಿ ಸಾಧನೆ ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ೧೯೮೬-೮೭ನೇ ಸಾಲಿನಲ್ಲಿ ಒಟ್ಟು ೯೮೪೭ ಕ್ವಿಂಟಾಲ್ ವಿವಿಧ ಬೀಜಗಳನ್ನು ಉತ್ಪಾದಿಸಿದ್ದು, ಈ ಪ್ರಮಾಣದಲ್ಲಿ ಮೂಲ ಬೀಜಗಳು ೮೭೭೦ ಕ್ವಿಂಟಾಲು, ಉತ್ಪಾದನೆ ಮಾಡಿದ ಬೀಜಗಳನ್ನು ಕರ್ನಾಟಕ ರಾಜ್ಯ ಬೀಜ ನಿಗಮಕ್ಕೆ ಸಂಸ್ಕರಣೆಗಾಗಿ ಹಸ್ತಾಂತರಿಸಲಾಗಿರುತ್ತದೆಂದು ಹೇಳಿದ್ದಾರೆ. ರೈತರಿಗೆ ಹಂಚಿರತಕ್ಕ ಮಿನಿ ಕಿಟ್ಸ್‌ಗಳು, ಸ್ಕೇರ್‌ಸಿಟಿ ಕಿಟ್ಸ್‌ಗಳನ್ನು ಕೊಟ್ಟಿರತಕ್ಕದ್ದು ಇಂತಹ ಅನೇಕ ಕಾರ್ಯಗಳನ್ನು ಇಲಾಖೆಯವರು ಹಮ್ಮಿಕೊಂಡು ಕೆಲಸ ಮಾಡುತ್ತಿದ್ದಾರೆ. ೧,೯೭,೧೦೪ ಸ್ಕೇರ್‌ಸಿಟಿ ಕಿಟ್ಸ್‌ಗಳಿಗಾಗಿ ಸುಮಾರು ೨೦೮ ಲಕ್ಷ ರೂಪಾಯಿಗಳ ಕಿಟ್ಸ್‌ಗಳನ್ನು ರಾಜ್ಯದಲ್ಲಿ ವ್ಯವಸಾಯ ಇಲಾಖೆಯ ಮುಖಾಂತರ ಹಂಚಿದ್ದಾರೆ. ಇನ್‌ಪುಟ್ಸ್ ಕಿಟ್ಸ್‌ಗಳನ್ನು ಸಹ ಕೊಟ್ಟಿದ್ದಾರೆ. ೧,೩೩,೧೫೬ ಕಿಟ್ಸ್‌ಗಳಿಗೆ ೮೭.೫೦ ಲಕ್ಷ ರೂಪಾಯಿಗಳನ್ನು ಮಿನಿ ಕಿಟ್ಸ್‌ಗಳಿಗಾಗಿ ಕೊಟ್ಟಿದ್ದಾರೆ. ಈ ರೀತಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ.

ಈ ಅಗ್ರಿಕಲ್ಚರಲ್ ಸ್ಕೂಲ್ಸ್ ಬಗ್ಗೆ ಹೇಳಬೇಕಾದರೆ ಸುಮಾರು ೨೧ ಸ್ಕೂಲ್‌ಗಳು ನಮ್ಮಲ್ಲಿ ಇದ್ದು ೧೦೫೦ ಮಂದಿ ವಿದ್ಯಾರ್ಥಿಗಳಿಗೆ ತಾವು ವಿದ್ಯಾಭ್ಯಾಸ ಮಾಡುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದೀರಿ. ಆದರೆ ಇಲ್ಲಿ ಆಗಿರತಕ್ಕಂಥಾದ್ದು ಎಂದರೆ ೭೭೭ ವಿದ್ಯಾರ್ಥಿಗಳಿಗೆ ಮಾತ್ರ ಟ್ರೈನಿಂಗ್ ಕೊಟ್ಟಿದ್ದಾರೆ. ಉಳಿದ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿದ್ದೀರೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಅದೇ ರೀತಿ ಡ್ಯಾನಿಡಾ ಪ್ರೋಗ್ರಾಮ್‌ನಲ್ಲಿ ೪೦೧೬ ಮಂದಿ ಯುವಕರು ಮತ್ತು ಮಹಿಳೆಯರಿಗೆ ಟ್ರೈನಿಂಗ್ ಕೊಟ್ಟು ಒಳ್ಳೆಯ ಕೆಲಸವನ್ನು ಇಲಾಖೆಯ ಮೂಲಕ ತಾವು ಮಾಡಿದ್ದೀರಿ

ರೈತರ ಬಗ್ಗೆ ಮಾನ್ಯ ವಿರೋಧಪಕ್ಷದ ಸದಸ್ಯರಾದ ಶ್ರೀ ಲಕ್ಕಪ್ಪನವರು ಹೇಳಿದರು. ನಾನು ಹೇಳುತ್ತೇನೆ, ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ, ೧೯೮೩ ರಿಂದ ಈಚೆಗೆ ರೈತರಿಗೆ ಅನೇಕ ರಿಯಾಯಿತಿಗಳನ್ನು ಘೋಷಣೆ ಮಾಡಿ ಸುಮಾರು ಒಂದು ಕೋಟಿ ರೂಪಾಯಿಗೂ ಹೆಚ್ಚು ಅನುಕೂಲ ವನ್ನು ಅವರಿಗೆ ಮಾಡಿಕೊಟ್ಟಿದೆ. ತೆರೆದ ಬಾವಿ, ಮುಖ್ಯವಾಗಿ ನೀರು ಬೀಳದೇ ಇರತಕ್ಕಂಥ ಬಾವಿ ಗಳಿಗೆ ಸಾಲ ಮನ್ನಾ ಮಾಡಿರತಕ್ಕದ್ದು. ಅವರು ತೆಗೆದಂಥ ಬೆಳೆಸಾಲಗಳಿಗೆ ಚಕ್ರ ಬಡ್ಡಿ, ಸುಸ್ತಿಬಡ್ಡಿ ಯನ್ನು ಮಜಾ ಮಾಡಿರತಕ್ಕಂಥಾದ್ದು. ಇದನ್ನು ಮಾನ್ಯ ಮುಖ್ಯ ಮಂತ್ರಿಗಳು ಘೋಷಣೆ ಮಾಡಿ ೧೩–೧೪ ಕೋಟಿ ರೂಪಾಯಿಗಳಷ್ಟು ಚಕ್ರ ಬಡ್ಡಿ, ಸುಸ್ತಿ ಬಡ್ಡಿಯನ್ನು ಮಾಡಿದೆ. ಮಜಾ ಮಾಡಿದಂಥ ನಿದರ್ಶನವನ್ನು ಇವತ್ತು ನಮ್ಮ ಸರ್ಕಾರ ಸುಮಾರಾಗಿ ಸ್ವಾತಂತ್ರ್ಯ ಬಂದಾಗಿನಿಂದ ೧೯೮೩ರವರೆಗೆ ಅಧಿಕಾರದಲ್ಲಿದ್ದಂಥ ಕಾಂಗ್ರೆಸ್ ಸರ್ಕಾರ ಮಾಡದೇ ಇರುವಂಥ ಕೆಲಸವನ್ನು ೧೯೮೩ರ ಈಚೆಗೆ ಅಧಿಕಾರಕ್ಕೆ ಬಂದ ಜನತಾ ಸರ್ಕಾರ ರೈತರ ಬಗ್ಗೆ ಕಾಳಜಿ ವಹಿಸಿ ರೈತರ ಕಷ್ಟಗಳನ್ನು ತಿಳಿದುಕೊಂಡು ರೈತರಿಗೆ ನೂರು ಕೋಟಿ ರೂಪಾಯಿ ರಿಯಾಯ್ತಿಯನ್ನು ಕೊಟ್ಟಂಥ ಸರ್ಕಾರ ಎಂದರೆ ಇಡೀ ಭಾರತದಲ್ಲಿ ಜನತಾ ಸರ್ಕಾರ ಒಂದೇ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇದೇ ಸಂದರ್ಭದಲ್ಲಿ ಇನ್ನೊಂದು ವಿರೋಧಪಕ್ಷದ ಬಗ್ಗೆ ಹೇಳ ಬೇಕಾಗಿದೆ. ಶ್ರೀ ದೇವಿಲಾಲರ ನೇತೃತ್ವದ ಹರಿಯಾಣದಲ್ಲಿ ಲೋಕದಳ ಸರ್ಕಾರ ಅಧಿಕಾರಕ್ಕೆ ಬಂದ ನಂತರ ರೈತರಿಗೆ ಇನ್ನೂರು ಕೋಟಿಗಿಂತ ಮೀರಿ ಸೌಲಭ್ಯ ನೀಡಿ ಒಳ್ಳೆಯ ಅನುಕೂಲವನ್ನು ಅಲ್ಲಿ ಮಾಡಿ ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ನೀರಿನ ರಿಯಾಯ್ತಿ ಸಹ ಮುಖ್ಯ. ಇವತ್ತು ರೈತನಿಗೆ ಹೆಚ್ಚಿನ ರಿಯಾಯ್ತಿ ಕೊಡಬೇಕಾದರೆ ನೀರಿನ ದರವನ್ನು ಹಾಕತಕ್ಕಂಥ ಕಾರ್ಯ ಏನು ಮಾಡುತ್ತಿದ್ದಾರೆ, ಅದು ಜಿಲ್ಲಾಧಿಕಾರಿಗಳು ಆಗಬಹುದು, ಅಥವಾ ವಿಭಾಗಾಧಿಕಾರಿಗಳು ಆಗಬಹುದು. ಯಾರೇ ಆಗಲಿ ನೀರನ್ನು ಯಾರು ಉಪಯೋಗಿಸುತ್ತಿದ್ದಾರೆ. ಅವರಿಗೆ ನೀರಿನ ದರ ಹಾಕತಕ್ಕಂಥ ಕಾರ್ಯ ಮಾಡ ಬೇಕೇ ವಿನಹ ನೀರನ್ನು ಕೊಡದೇ ಇರತಕ್ಕಂಥವರಿಗೆ ನೀರಿನ ದರವನ್ನು ಹಾಕತಕ್ಕಂಥ ಕಾರ್ಯ ಏನು ನಡೆದಿದೆ ಅದು ನಿಲ್ಲಬೇಕು. ಇದರ ಬಗ್ಗೆ ಹೇಳಬೇಕೆಂದರೆ ಬೆಳಗಾವಿಯಲ್ಲಿ ಕೊಡತಕ್ಕಂಥ ನೀರು ಏನಿದೆ, ಅಲ್ಲಿ ಕೆಲವರಿಗೆ ೬೦ ಲಕ್ಷ ರೂಪಾಯಿಗಳನ್ನು ವಸೂಲು ಮಾಡಬೇಕೆಂದು ನೀರಿನ ದರವನ್ನು ಕೆಲವು ಕಡೆ ಕೇಳಿದ್ದಾರೆ. ಆದರೆ ಅಲ್ಲಿದ್ದಂಥ ಅಧಿಕಾರಿ ಸುಮಾರು ೧೫ ಲಕ್ಷ ಮಾತ್ರ ಬರಬೇಕಾಗಿದೆ ಎಂದು ಹೇಳಿದ್ದಾರೆ ನೀರನ್ನು ಉಪಯೋಗಿಸಿಕೊಂಡವರು ಮಾತ್ರ ನೀರಿನ ದರವನ್ನು ಕೊಡಬೇಕು. ಆದ್ದರಿಂದ ಮಾನ್ಯ ನೀರಾವರಿ ಸಚಿವರ ಜೊತೆಯಲ್ಲಿ ತಾವು ಮಾತನಾಡಿ ಯಾರು ರೈತರು ನೀರನ್ನು ಉಪಯೋಗಿಸಿಕೊಂಡಿದ್ದಾರೆ ಅವರ ಹತ್ತಿರ ಮಾತ್ರ ನೀರಿನ ದರವನ್ನು ತೆಗೆದುಕೊಳ್ಳಬೇಕೇ ವಿನಹ ಉಪಯೋಗಿಸದೇ ಇರತಕ್ಕಂಥ ರೈತರಿಗೆ, ನೀರನ್ನು ಕೊಡದೇ ಇರತಕ್ಕಂಥ ರೈತರಿಗೆ ನೀರಿನ ದರವನ್ನು ವಿಧಿಸತಕ್ಕಂಥ ಕಾರ್ಯವನ್ನು ಮಾಡಬಾರದು ಎಂದು ಇವತ್ತು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ. ಮತ್ತು ಆದ್ಯತೆ ಕೊಡುವಾಗ ಕಡಿಮೆ ಖರ್ಚಿನಲ್ಲಿ ಹೆಚ್ಚು ನೀರಾವರಿಯನ್ನು ಕೊಡಬೇಕು. ಇವತ್ತು ನೀರಾವರಿ ಮೂಲಕ ಹೆಚ್ಚು ಪ್ರದೇಶವನ್ನು ವ್ಯವಸಾಯಕ್ಕೆ ಒಳಪಡಿಸಬೇಕೆಂಬುದು ನಮ್ಮೆಲ್ಲರ ಅನಿಸಿಕೆ. ಮತ್ತು ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ನೀರಾವರಿಗೆ ಹೆಚ್ಚಿನ ಆದ್ಯತೆ ಕೊಟ್ಟು ಯಾವುದು ಕಡಿಮೆ ಖರ್ಚಿನಲ್ಲಿ ನೀರಾವರಿ ಸೌಕರ್ಯವನ್ನು ಕೊಡಬಹುದು, ಅಂತಹ ಯೋಜನೆಗಳಿಗೆ ಮಹತ್ವ ನೀಡಿ ಅವುಗಳನ್ನು ಕಾರ್ಯಗತ ಮಾಡುವಲ್ಲಿ ಮಾನ್ಯ ವ್ಯವಸಾಯ ಸಚಿವರು ನೀರಾವರಿ ಸಚಿವರ ಜೊತೆಯಲ್ಲಿ ಮಾತನಾಡಿ ಇಂತಹ ಕಾರ್ಯವನ್ನು ಮಾಡಬೇಕೆಂದು ಹೇಳುತ್ತೇನೆ

ಈ ಸಂದರ್ಭದಲ್ಲಿ ಒಂದು ಉದಾಹರಣೆಯನ್ನು ಮಾನ್ಯ ಸಚಿವರ ಗಮನಕ್ಕೆ ತರಲು ಬಯಸುತ್ತೇನೆ ಕೆ. ಆರ್. ಪೇಟೆ ತಾಲ್ಲೂಕಿನಲ್ಲಿ ಜಕ್ಕನಕೆರೆ ಟನಲ್ ಅಂತ ಹೇಳಿ ಅಲ್ಲಿ ಒಂದು ಕೋಟಿ ರೂಪಾಯಿ ಖರ್ಚು ಮಾಡಿದರೆ ಸುಮಾರು ೩೦ ಸಾವಿರ ಎಕರೆ ನೀರಾವರಿಗೆ ಯೋಗ್ಯವಾಗುತ್ತದೆಯೆನ್ನುವುದನ್ನು ಮಾನ್ಯ ಸಚಿವರಿಗೆ ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಇದರಲ್ಲಿ ಒಂದು ಕೋಟಿ ರೂಪಾಯಿ ಖರ್ಚು ಮಾಡಿದರೆ ೩೦ ಸಾವಿರ ಎಕರೆಗೆ ನೀರಾವರಿ ಆಗುತ್ತದೆ. ಇಂಥಾದ್ದಕ್ಕೆ ವ್ಯವಸಾಯ ಇಲಾಖೆಯ ಸಚಿವರು ನೀರಾವರಿ ಇಲಾಖೆಯ ಸಚಿವರ ಜೊತೆಯಲ್ಲಿ ಮಾತನಾಡಿ ಈ ಕಾರ್ಯವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ತಮಗೆ ನಾನು ತಿಳಿಸುತ್ತೇನೆ.

ಇದೇ ಸಂದರ್ಭದಲ್ಲಿ ಮಾನ್ಯ ಸಚಿವರಿಗೆ ಕೆಲವಾರು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ ಇದರಲ್ಲಿ ಪ್ರಥಮವಾಗಿ ಇವತ್ತು ರಾಷ್ಟ್ರೀಯ ಎಣ್ಣೆಕಾಳು ಮತ್ತು ಬೇಳೆಕಾಳುಗಳ ಯೋಜನೆ ಕೇವಲ

೧೧ ಜಿಲ್ಲೆಗಳಲ್ಲಿ ಮಾತ್ರ ಇದೆ. ಈ ಯೋಜನೆಯನ್ನು ಸಮಗ್ರವಾಗಿ ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಕೊಡುವಂಥ ಕಾರ್ಯವನ್ನು ಮಾಡಬೇಕು. ಎಣ್ಣೆಕಾಳು ಬೆಳೆಯತಕ್ಕಂಥವರು ಉತ್ತರ ಕನ್ನಡದ ಕೆಲವು ಭಾಗಗಳಲ್ಲಿ, ಧಾರವಾಡ, ರಾಯಚೂರು ಜಿಲ್ಲೆಗಳಲ್ಲಿ ಮಾತ್ರ ಇದ್ದಾರೆ ಹಳೆಯ ಮೈಸೂರು ಜಿಲ್ಲೆಯಲ್ಲಿ ಈ ಕಾರ್ಯವನ್ನು ಜಾರಿಗೆ ತಂದಿಲ್ಲ. ಈ ಕಾರ್ಯವನ್ನು ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಿ, ರೈತರಿಗೆ ಉಪಕಾರ ಮಾಡಬೇಕು. ಎಣ್ಣೆಕಾಳು ಬೆಳೆಯುವಂಥ ಅವಕಾಶ ಮಾಡಿಕೊಟ್ಟು, ಸಹಕಾರ ಸಂಘಗಳನ್ನು ತೆರೆದು, ರೈತರನ್ನು ಗುರುತಿಸಿ. ಈ ಕಾರ್ಯವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಬಹಳ ಮುಖ್ಯವಾದ ಕಾರ್ಯವನ್ನು ಜನತಾ ಸರ್ಕಾರ ಅಧಿಕಾರಕ್ಕೆ ಬಂದನಂತರ ಮಾಡಿರ ತಕ್ಕಂಥಾದ್ದು, ಖುಷ್ಕಿ ಭೂಮಿಯನ್ನು ಅಭಿವೃದ್ಧಿ ಪಡಿಸುವಂಥ ಕಾರ್ಯ. ೪ ವಿಭಾಗಗಳಿಗೂ ಖುಷ್ಕಿ ಅಭಿವೃದ್ಧಿ ಮಂಡಳಿಯನ್ನು ನೇಮಕ ಮಾಡಿ, ಎಲ್ಲಿ ಮಳೆ ಬಿದ್ದು ನೀರು ಹರಿದುಹೋಗುತ್ತದೆ ಅದನ್ನು ತಡೆಹಿಡಿದು. ಅಲ್ಲಿ ಖುಷ್ಕಿ ಬೆಳೆಗೆ ಸಾಕಷ್ಟು ಅನುಕೂಲವಾಗಲಿ ಎಂದು ಈ ಕಾರ್ಯವನ್ನು ಮಾಡುವಂಥಾದ್ದು ಇಡೀ ರಾಷ್ಟ್ರದಲ್ಲೇ ಉತ್ತಮವಾದ ಕೆಲಸವನ್ನು ಮಾಡಿದ್ದಾರೆ. ಇನ್ನು ನಮ್ಮ ತಾಲ್ಲೂಕುಗಳಲ್ಲಿ ಜಲಾನಯನ ಪ್ರದೇಶಗಳು ಇರಹುದು, ಕರ್ನಾಟಕದಲ್ಲಿ ಇತರೇ ಕಡೆ ಜಲಾನಯನ ಪ್ರದೇಶಗಳು ಇರಬಹುದು, ಈ ಪ್ರದೇಶಗಳಲ್ಲಿ ಸಾವಿರಾರು ಹೆಕ್ಟೇರ್ ಪ್ರದೇಶಗಳಲ್ಲಿ ಇಲಾಖೆಯವರು ಉತ್ತಮ ಕಾರ್ಯಕ್ರಮಗಳನ್ನು ಹಾಕಿಕೊಂಡು ರೈತರಿಗೆ ನೆರವಾಗಿದ್ದಾರೆ. ಮಾನ್ಯ ಲಕ್ಕಪ್ಪನವರು ಮಾತನಾಡುವಾಗ ಭೂಸಾರ ಜಲ ರಕ್ಷಣೆ ಇಲಾಖೆ ಏನು ಇದೆ, ಇದನ್ನು ಯಾವುದಾದರೂ ಮಂಡಲಿಗೆ ಸೇರಿಸಿ ಎಂದು ತಿಳಿಸಿದ್ದಾರೆ. ಇದನ್ನು ತಮ್ಮ ಅಗ್ರಿಕಲ್ಚರಲ್ ಇಲಾಖೆಯಲ್ಲಿ ತಾಲ್ಲೂಕು ಮಟ್ಟದಲ್ಲಿ ಇರತಕ್ಕಂಥ ಉಪನಿರ್ದೇಶಕರು ಯಾರಿದ್ದಾರೆ ಅವರ ಜೊತೆಗೆ ಸೇರಿಸುವಂಥಾದ್ದು ಅಥವಾ ಖುಷ್ಕಿ ಅಭಿವೃದ್ಧಿ ಮಂಡಲಿ ಇದೆ, ಇದರ ಜೊತೆಗಾದರೂ ಸೇರಿಸುವ ಕೆಲಸ ಮಾಡಬೇಕು. ಭೂಸಾರ ರಕ್ಷಣಾ ಇಲಾಖೆಯ ಅಧಿಕಾರಿಗಳು ಯಾರಿಗೂ ಸಿಗುವುದಿಲ್ಲ. ಇವರು ಯಾವುದೇ ಸಭೆಗೆ ಬರುತ್ತಾರೆ ಎನ್ನುವುದೂ ಗೊತ್ತಾಗುವುದಿಲ್ಲ. ಇವರು ಎಲ್ಲಿದ್ದಾರೆ, ಯಾರನ್ನು ಕೇಳಬೇಕು ಎಂಬುದೂ ತಿಳಿಯುತ್ತಿಲ್ಲ. ಆದ್ದರಿಂದ ಇವರನ್ನು ಅಗ್ರಿಕಲ್ಚರಲ್ ಇಲಾಖೆ ಜೊತೆಯಲ್ಲಿ ಸೇರಿಸಿ, ಇವರ ಕೆಲಸವನ್ನು ಮಾಡುವಂಥ ಕಾರ್ಯ ಆಗಬೇಕು. ಇಲ್ಲದೇ ಹೋದರೆ ಇವತ್ತು ಖುಷ್ಕಿ ಅಭಿವೃದ್ಧಿ ಮಂಡಲಿ ಏನಿದೆ ಅಲ್ಲಿಗಾದರೂ ಅಟ್ಯಾಚ್ ಮಾಡಿ ಆ ಮೂಲಕ ಕೆಲಸ ಆಗುವಂಥ ಕಾರ್ಯ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಜಲಾನಯನ ಅಭಿವೃದ್ಧಿ ಕಾರ್ಯಗಳು ನನಗೆ ತಿಳಿದಮಟ್ಟಿಗೆ ರಾಜ್ಯದಲ್ಲಿ ಒಂದು ಜಿಲ್ಲೆಗೆ ಎರಡು ತಾಲ್ಲೂಕುಗಳಂತೆ, ಒಟ್ಟು ೪೦ ತಾಲ್ಲೂಕುಗಳನ್ನು ಆಯ್ಕೆ ಮಾಡಿದ್ದಾರೆಂದು ತಿಳಿದುಕೊಂಡಿದ್ದೇನೆ. ಕೇಂದ್ರ ಸರ್ಕಾರ ಹಣ ಕೊಡುವುದರಿಂದ ಇನ್ನೂ ಹೆಚ್ಚಿನ ತಾಲ್ಲೂಕುಗಳನ್ನು ಆರಿಸಿಕೊಳ್ಳಬಹುದು. ಒಂದೊಂದು ಜಿಲ್ಲೆಯಲ್ಲಿ ೫ ತಾಲ್ಲೂಕುಗಳನ್ನು ಆಯ್ಕೆ ಮಾಡಿಕೊಂಡು, ಒಟ್ಟು ಈ ಯೋಜನೆಯನ್ನು ೧೦೦ ತಾಲ್ಲೂಕುಗಳಿಗೆ ವಿಸ್ತರಿಸುವಂಥ ಕಾರ್ಯ ಮಾಡಬೇಕು. ವ್ಯವಸಾಯ ಇಲಾಖೆಯವರು ಇದಕ್ಕಾಗಿ ಯೋಜನೆಯನ್ನು ರೂಪಿಸಿಕೊಂಡು, ಕೇಂದ್ರಕ್ಕೆ ಕಳುಹಿಸಿ, ಕೇಂದ್ರದ ಮಂಜೂರಾತಿ ಪಡೆದು, ಶೀಘ್ರದಲ್ಲಿಯೇ ಮಾಡಬೇಕು. ಇದರಿಂದ ರೈತರಿಗೆ ಅನುಕೂಲವಾಗುತ್ತದೆ. ರಾಜ್ಯದ ಕೊಡುಗೆ, ಕೇಂದ್ರದ ಕೊಡುಗೆ ಎರಡೂ ಸೇರಿದರೆ ಇದರಿಂದ ಉತ್ತಮ ಕಾರ್ಯ ಆಗುತ್ತದೆಂದು ತಿಳಿಸುತ್ತೇನೆ. ಇನ್ನು ಬಹಳ ಮುಖ್ಯವಾದ ಕೃಷಿ ಸಹಾಯಕರ ಖಾಲಿ ಇರುವ ಸ್ಥಾನಗಳು, ಇದು ಬಹಳ ಅನ್ಯಾಯ ಮಾನ್ಯ ನಜೀರ್‌ಸಾಬ್‌ರವರು ಇಲ್ಲಿಯೇ ಇದ್ದಾರೆ. ಕೃಷಿ ಸಹಾಯಕರನ್ನು ಇವರು ಮಂಡಲ್ ಪಂಚಾಯಿತಿಗಳಿಗೆ ತೆಗೆದುಕೊಂಡರು. ರೆವಿನ್ಯೂ ಇಲಾಖೆಯವರು ಯಾರೂ ಬರಲಿಲ್ಲವೆಂದು ವ್ಯವಸಾಯ ಇಲಾಖೆಯಲ್ಲಿ ಎಲ್ಲರನ್ನೂ ಮಂಡಲ್ ಪಂಚಾಯಿತಿಗಳಿಗೆ ಕಳುಹಿಸಿದರು. ನನ್ನ ತಾಲ್ಲೂಕಿನಲ್ಲಿ ಒಟ್ಟು ೨೮ ಕೃಷಿ ಸಹಾಯಕರು ಇದ್ದಾರೆ. ಆದರೆ ಇವರಲ್ಲಿ ಈಗ ೨೦ ಕೃಷಿ ಸಹಾಯಕರು ಇಲ್ಲ. ಖಾಲಿ ಇವೆ ಮಂಡಲ್ ಪಂಚಾಯಿತಿಗಳಿಗೆ ನೇಮಕವಾಗಿದ್ದಾರೆ. ಈ ಕೃಷಿ ಸಹಾಯಕರ ನೇಮಕಾತಿ ಇಲ್ಲದೇ ಹೋದರೆ, ನಾವೇನು ತಂತ್ರಜ್ಞಾನ ಎಂದು ಹೇಳುತ್ತೇವೆ, ಅಂದರೆ ಟ್ರೈನಿಂಗ್ ಅಂಡ್ ವಿಸಿಟ್ ಎರಡೂ ಮಾಡುವುದಕ್ಕಾಗುವುದಿಲ್ಲ ಆದ್ದರಿಂದ ಈ ಬಗ್ಗೆ ಯೋಚನೆ ಮಾಡಬೇಕು ಕೃಷಿ ಸಹಾಯಕರು ಇಲ್ಲದೆ ಸಾಕಷ್ಟು [illegible] ಹೊಸ ವಿಧಾನಗಳನ್ನು ತಿಳಿಸಬೇಕು. ರಸಗೊಬ್ಬರಗಳ ಬಗ್ಗೆ ಬೇರೆ ಬೇರೆ ಸುಧಾರಿತ ಬೀಜಗಳನ್ನು ಹಾಕುವುದರ ಬಗ್ಗೆ ರೈತರಿಗೆ ಮನವರಿಕೆ ಮಾಡಬೇಕು. ಈ ಕಾರ್ಯ ಆಗುತ್ತಾ ಇಲ್ಲ ಇದರ ಜೊತೆಗೆ ಸಾವಿರಾರು ಹುದ್ದೆಗಳು ಈ ರಾಜ್ಯದಲ್ಲಿ ಖಾಲಿ ಇವೆ. ಒಟ್ಟಾರೆ ಕೃಷಿ ಸಹಾಯಕರ ಖಾಲಿ ಸ್ಥಾನ

ಗಳನ್ನು ಕೂಡಲೇ ಭರ್ತಿ ಮಾಡಬೇಕೆಂದು, ನನ್ನ ತಾಲ್ಲೂಕಿನ ಉದಾಹರಣೆಯನ್ನು ಮಾನ್ಯ ಸಚಿವರಿಗೆ ಕೊಟ್ಟಿದ್ದೇನೆ. ಇವತ್ತು ತಾವು ಈ ಕಾರ್ಯವನ್ನು ಮಾಡಬೇಕು.

ಇವತ್ತು ಈ ಕಾರ್ಯವನ್ನು ಮಾಡಬೇಕಾಗಿದೆ. ಇವತ್ತು ಸಕಾಲದಲ್ಲಿ ಕೃಷಿ ಸಾಮಗ್ರಿಗಳು ರೈತರಿಗೆ ಸಿಗುತ್ತಿಲ್ಲ. ಇವತ್ತು ಅವರಿಗೆ ಬೇಕಾದ ಬೀಜ ಮತ್ತು ರಸಗೊಬ್ಬರಗಳು ಸಕಾಲದಲ್ಲಿ ಸಿಗುತ್ತಿಲ್ಲ. ಈಗ ಮುಂಗಾರು ಪ್ರಾರಂಭವಾಗಿದೆ. ಆದರೂ ಇವುಗಳು ಅವರಿಗೆ ಸಿಗುತ್ತಿಲ್ಲ. ಈ ಕಾಲದಲ್ಲಿ ತಮ್ಮ ಇಲಾಖೆಯಲ್ಲಿ ಬೇಕಾದಷ್ಟು ವರ್ಗಾವಣೆಗಳನ್ನು ಮಾಡುತ್ತೀರಿ. ಈ ವರ್ಗಾವಣೆಯನ್ನು ತಾವು ಮುಂಗಾರಿನ ಕಾಲದಲ್ಲಿ ಅಂದರೆ ಜೂನ್ ಜುಲೈ ತಿಂಗಳಲ್ಲಿ ಮಾಡುತ್ತೀರಿ. ಮುಂಗಾರಿನ ಕಾಲದಲ್ಲಿ ಕೃಷಿ ಸಹಾಯಕರು, ಅಧಿಕಾರಿಗಳು ಏನು ಒಂದು ಕಡೆ ಇದ್ದುಕೊಂಡು ಕೆಲಸ ಮಾಡಬೇಕು ಆ ಸಮಯದಲ್ಲಿ ತಾವು ಅವರ ವರ್ಗಾವಣೆಯನ್ನು ಮಾಡುತ್ತೀರಿ. ಅವರನ್ನು ವರ್ಗಾವಣೆ ಮಾಡಿ ಬೇರೆ ಬೇರೆ ಕಡೆಗೆ ಹಾಕುವಂತಹ ಕಾರ್ಯ ಆಗುತ್ತದೆ. ಹೊಸದಾಗಿ ವರ್ಗಾವಣೆಯಾಗಿ ಬಂದಂಥವರಿಗೆ ಕೆಲಸ ಮಾಡುವುದು ಕಷ್ಟವಾಗುತ್ತದೆ. ನಾನು ಅನೇಕ ಜನ ಅಧಿಕಾರಿಗಳನ್ನು ಕೇಳಿ ತಿಳಿದುಕೊಂಡಿದ್ದೇನೆ, ಈ ವರ್ಗಾವಣೆಗಳನ್ನು ಏಪ್ರಿಲ್-ಮೇ ತಿಂಗಳಿನಲ್ಲಿ ಮಾಡಿದರೆ ಮುಂಗಾರಿಗೆ ಸರಿಯಾಗಿ ಅವರು ತಾವು ವರ್ಗಾವಣೆಯಾದ ಸ್ಥಳಕ್ಕೆ ಹೋಗಿ ಅಲ್ಲಿ ಕೆಲಸ ಮಾಡಲು ಅನುಕೂಲವಾಗುತ್ತದೆ. ಅವರು ಸೇರಿಕೊಂಡ ಜಾಗದಲ್ಲಿ ಉತ್ತಮ ಕೆಲಸ ನಿರ್ವಹಿಸಬಹುದು. ಈ ದಿಸೆಯಲ್ಲಿ ಇವತ್ತು ತಾವು ವರ್ಗಾವಣೆಯನ್ನು ಮಾಡಬೇಕು. ಏಪ್ರಿಲ್-ಮೇ ತಿಂಗಳಲ್ಲಿ ತಾವು ವರ್ಗಾವಣೆಯನ್ನು ಮಾಡಿದರೆ ಅವರು ಬೇರೆ ಜಾಗಕ್ಕೆ ಹೋಗಿ ಹೊಂದಿಕೊಳ್ಳುವುದಕ್ಕೆ ಸರಿ ಹೋಗುತ್ತದೆ. ಈ ಕಾರ್ಯವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ತಿಳಿಸುತ್ತೇನೆ.

ಇನ್ನು ಕೃಷಿ ಸಾಮಗ್ರಿಗಳ ವಿತರಣೆ ಮಾಡುವ ಜವಾಬ್ದಾರಿಯನ್ನು ಮಂಡಲ ಪಂಚಾಯತಿಗಳಿಗೆ ಕೊಡಬೇಕು. ಇವುಗಳನ್ನು ಮಂಡಲ ಪಂಚಾಯತಿ ಕಚೇರಿಯಲ್ಲಿ ಸಂಗ್ರಹಣೆ ಮಾಡಿ, ರೈತರಿಗೆ ವಿತರಣೆ ಮಾಡಿದರೆ ಉತ್ತಮವಾಗುತ್ತದೆ. ಮಂಡಲ ಪಂಚಾಯತಿ ಕೇಂದ್ರ ಸ್ಥಾನಗಳ ಮೂಲಕ ಬೀಜ, ರಸಗೊಬ್ಬರ, ಪೆಸ್ಟಿಸೈಡ್ಸ್ ಮತ್ತು ಇತರ ಕೃಷಿ ಸಾಮಗ್ರಿಗಳನ್ನು ವಿತರಣೆ ಮಾಡುವಂತಹ ಕಾರ್ಯವನ್ನು ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ರೈತರು ಬೆಳೆದಂಥ ಬೆಳೆಗಳಿಗೆ ಉತ್ತಮವಾದ ಬೆಲೆ ಸಿಗಬೇಕು. ರೈತರು ಬೆಳೆದಂಥ ರಾಗಿ ಭತ್ತ, ಗೋಧಿ, ಜೋಳ ಅಥವಾ ಯಾವುದೇ ಬೆಳೆಯಾಗಲಿ ಅದಕ್ಕೆ ಉತ್ತಮವಾದ ಬೆಂಬಲ ಬೆಲೆಯನ್ನು ಕೊಡಬೇಕು. ಇವತ್ತು ಉದಾಹರಣೆಗೆ ರಾಗಿಯನ್ನು ತೆಗೆದುಕೊಂಡರೆ ಒಂದು ಕ್ವಿಂಟಾಲ್‌ಗೆ ೧೫೦-೧೭೦ ರೂಪಾಯಿ ಇದೆ. ಕಳೆದ ಹತ್ತು ವರ್ಷಗಳಿಂದ ಒಂದೇ ಧಾರಣೆ ರಾಗಿಗೆ ಇದೆ. ಇದರಿಂದ ರೈತರು ರಾಗಿ ಬೆಳೆಯುವಂತಹ ಪ್ರದೇಶಗಳನ್ನು ಕಡಿಮೆ ಮಾಡಿ ಅಲ್ಲಿ ನೀಲಗಿರಿ ಮರಗಳನ್ನು ಹೆಚ್ಚಾಗಿ ಬೆಳೆಯುವಂತಹ ಆಸೆಗೆ ಒಳಗಾಗುತ್ತಾರೆ. ರಾಗಿ ಬೆಳೆದರೆ ಹೆಚ್ಚು ಹಣ ಸಿಗುವುದಿಲ್ಲ, ಒಂದು ಚೀಲಕ್ಕೆ ೧೭೦ ರೂಪಾಯಿ ಸಿಗುತ್ತದೆ, ಇದನ್ನು ಬೆಳೆಯಲು ಬಹಳಷ್ಟು ಹಣ ಖರ್ಚಾಗುತ್ತದೆ. ಆದುದರಿಂದ ರೈತರು ರಾಗಿ ಬೆಳೆಯುವಂತಹ ಉತ್ತಮ ಜಮೀನುಗಳನ್ನು ನೀಲಗಿರಿ ಬೆಳೆಯಲು ಉಪಯೋಗಿಸುತ್ತಾರೆ. ಈ ಬೆಲೆಗಳನ್ನು ನಿಗದಿ ಮಾಡುವಂತಹದು ಕೇಂದ್ರ ಸರಕಾರ. ಇವತ್ತು ಈ ಬೆಳೆಗಳಿಗೆ ಇನ್ನಷ್ಟು ಬೆಂಬಲ ಬೆಲೆಯನ್ನು ಕೊಡುವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು. ಇವತ್ತು ಬಜಾರಿನಲ್ಲಿ ನಾವು ಒಂದಕ್ಕೆ ನಾಲ್ಕು ಪಟ್ಟು ಹಣ ಕೊಟ್ಟು ಸಾಮಾನುಗಳನ್ನು ಖರೀದಿ ಮಾಡುತ್ತೇವೆ. ಅದೇ ರೀತಿ ರೈತರು ಬೆಳೆದ ಬೆಳೆಗಳಿಗೆ ಹೆಚ್ಚು ಬೆಲೆ ಕೊಡುವ ವ್ಯವಸ್ಥೆ ಆಗಬೇಕೆಂದು ನಮ್ಮೆಲ್ಲರ ಬಯಕೆ. ಎಲ್ಲರೂ ಸಹ ಇದಕ್ಕೆ ಒತ್ತಾಯ ತರಬೇಕು. ಕೇಂದ್ರ ಸರಕಾರದ ಮೇಲೆ ಒತ್ತಡವನ್ನು ತರಬೇಕು. ಕಬ್ಬಿನ ಬೆಲೆ ಕ್ವಿಂಟಾಲ್‌ಗೆ ೨೭೨ ರೂಪಾಯಿ ಇದೆ. ಇದಕ್ಕೆ ಇನ್ನೊಂದು ಇಪ್ಪತ್ತೈದು ರೂಪಾಯಿಗಳನ್ನು ಜಾಸ್ತಿ ಮಾಡಿ ಕ್ವಿಂಟಾಲ್‌ಗೆ ೩೦೦ ರೂಪಾಯಿಗಳನ್ನು ಕೊಡಬೇಕು. ಈ ರೀತಿ ಕೊಟ್ಟರೆ ರೈತರು ಕಬ್ಬನ್ನು ಖಂಡಸಾರಿ ಸಕ್ಕರೆ ಕಾರ್ಖಾನೆಗಳಿಗೆ ಅಥವಾ ಬೇರೆ ಕಡೆಗೆ ಮಾರುವಂತಹ ಕೆಲಸ ನಿಲ್ಲಿಸಿ ನೇರವಾಗಿ ಕಬ್ಬನ್ನು ಎಲ್ಲಿ ಬೆಳೆಯುತ್ತಾರೋ ಆ ಪ್ರದೇಶದಲ್ಲಿರುವ ಸಕ್ಕರೆ ಕಾರ್ಖಾನೆಗಳಿಗೆ ಕೊಡುತ್ತಾರೆ. ಆದುದರಿಂದ ಕಬ್ಬನ್ನು ಬೆಳೆಯುವಂತಹ ರೈತನಿಗೆ ಇನ್ನೂ ೨೫ ರೂಪಾಯಿಗಳನ್ನು ಹೆಚ್ಚು ಕೊಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ

ಇವತ್ತು ನಮ್ಮ ಮಾನ್ಯ ಕೃಷಿ ಸಚಿವರು ಯೋಚನೆ ಮಾಡಬೇಕು. ತಾವೇನೋ ಬೆಳೆ ವಿಮಾ ಯೋಜನೆಯನ್ನು ಜಾರಿಗೊಳಿಸಿದ್ದೀರಿ. ಈ ಯೋಜನೆಯಿಂದ ಯಾರಿಗೆ ಲಾಭ ಸಿಗುತ್ತಿದೆ ಎಂದರೆ

ಜನರಲ್ ಇನ್‌ಶೂರೆನ್ಸ್ ಕಂಪನಿ ಯಾವುದೋ ಇರಬಹುದು ಅದಕ್ಕೆ ಲಾಭ ಸಿಗುತ್ತಿರಬಹುದೇ ವಿನಹಃ ರೈತರಿಗೆ ಇದರಿಂದ ಲಾಭವೇನೂ ಆಗಿಲ್ಲ. ಇದಕ್ಕೆ ಕಾರಣ ಇಷ್ಟೇ. ತಾವು ಇದರಲ್ಲಿ ಕೆಲವು ನಿಯಮ ಗಳನ್ನು ಹಾಕಿದ್ದೀರಿ. ಈ ನಿಯಮಗಳು ರೈತರಿಗೆ ಮಾರಕವಾಗಿವೆ ಎಂದು ನಾನು ಈ ಸಂದರ್ಭದಲ್ಲಿ ತಿಳಿಯಬಯಸುತ್ತೇನೆ. ರೈತರು ಆಯಾಯಾ ಜಿಲ್ಲೆಗಳಲ್ಲಿ ಸಾಲ ಪಡೆಯುತ್ತಾರೆ. ಬೆಳೆದಂತಹ ಬೆಳೆ ಸಾಲದಲ್ಲಿ ಕಡ್ಡಾಯವಾಗಿ ಅವರು ಪ್ರೀಮಿಯಂ ಅನ್ನು ಮುರಿದುಕೊಳ್ಳುತ್ತಾರೆ. ಒಂದು ತಾಲ್ಲೂಕಿನಲ್ಲಿ ಎರಡು ಕ್ವಿಂಟಾಲ್ ಬೆಳೆಯುವವರನ್ನು ಮಾತ್ರ ತಾವು ಆಯ್ಕೆ ಮಾಡಿಕೊಳ್ಳುತ್ತೀರಿ. ಇವತ್ತು ಎರಡು ಕ್ವಿಂಟಾಲ್‌ಗಿಂತ ಕಡಿಮೆ ಯಾರು ಬೆಳೆಯುತ್ತಾರೆ ? ಅವರನ್ನು ತಾವು ಆಯ್ಕೆ ಮಾಡುವುದಿಲ್ಲ. ತಾವು ಇದೊಂದು ಅಳತೆ ಮಾಪನವನ್ನು ಇಟ್ಟಿದ್ದೀರಿ. ಹಲವಾರು ಕಡೆಗಳಲ್ಲಿ ಅವರ ಆದಾಯದ ಮೇಲೆ ಪ್ರೀಮಿಯಂ ಅನ್ನು ನಿಗಧಿ ಮಾಡಿ ಇನ್‌ಶೂರ್ ಮಾಡುತ್ತೀರಿ. ಈ ರೀತಿ ಮಾಡಿದ ಇನ್‌ಶೂರ್‌ನಿಂದ ಯಾರಿಗೂ ಅನುಕೂಲವಾಗಿಲ್ಲ. ಇದರಿಂದ ಆ ಕಂಪನಿಯವರಿಗೆ ಮಾತ್ರ ಅನುಕೂಲವಾಗಿದೆ. ರೈತರಿಗೆ ಯಾರಿಗೂ ಕ್ರಾಪ್ ಇನ್‌ಶೂರೆನ್ಸ್ ಸಿಕ್ಕಿಲ್ಲ. ಯಾವುದೋ ಬೊಂಬಾಯಿಯಲ್ಲಿರತಕ್ಕಂಥ ಒಂದು ಇನ್‌ಶೂರೆನ್ಸ್ ಕಂಪನಿಗೆ ಲಾಭ ಆಗಿದೆ. ಆದ್ದರಿಂದ ದಯಮಾಡಿ ಈಗ ಇರತಕ್ಕಂಥ ನಿಯಮಗಳನ್ನು ಸ್ವಲ್ಪ ಮಾರ್ಪಾಡು ಮಾಡಬೇಕೆಂದು ನಾನು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ. ಬೇಕಾದರೆ ತಾವು ಮಾನ್ಯ ಕಂದಾಯ ಸಚಿವರ ಜೊತೆಯಲ್ಲಿಯೂ ಮಾತನಾಡಿ ಮಾರ್ಪಾಡು ಮಾಡಿ ಎಂದು ಹೇಳು ತ್ತೇನೆ. ಕ್ರಾಪ್ ಇನ್‌ಷೂರೆನ್ಸ್ ಅಂಕಿಅಂಶಗಳ ಪ್ರಕಾರ ಇವತ್ತು ಸುಮಾರು ೨ ೭೨, ೮೪೪ ಜನ ರೈತರಿಗೆ ಅನುಕೂಲವಾಗಿದೆ ಎಂದು ತಿಳಿಸಿದ್ದೀರಿ. ಇದರಲ್ಲಿ ಏರಿಯಾ ಕವರ್ ಆಗಿರುವುದು ೪ ಲಕ್ಷ ೮೭ ಸಾವಿರ ಹೆಕ್ಟೇರ್ಸ್ ಇನ್‌ಶೂರ್ ಆಗಿದೆ. ಆದರೆ ಈ ವಿಮಾ ಯೋಜನೆಯ ಮೂಲಕ ನಿಜವಾಗಿ ಎಷ್ಟು ಜನರಿಗೆ ಅನುಕೂಲವಾಗಿವೆ ಎನ್ನುವುದನ್ನು ಮಾನ್ಯ ಮಂತ್ರಿಗಳು ಉತ್ತರ ಹೇಳುವಾಗ ತಿಳಿಸ ಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ರೈತರ ಬಗ್ಗೆ ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅನೇಕ ಕಾರ್ಯಕ್ರಮಗಳನ್ನು ರೈತರ ಸಲುವಾಗಿ ಹಾಕಿಕೊಂಡು ಕಾರ್ಯಗತ ಮಾಡಿದೆ. ರೈತರು ತೆಗೆದುಕೊಂಡು ಸಾಲ ಸೋಲಗಳಿಗೆ ವಿಧಿಸಿದ್ದ ಚಕ್ರ ಬಡ್ಡಿ ಸಂಸ್ತಿ ಬಡ್ಡಿ. ನೂರಾರು ಕೋಟಿ ರೂಪಾಯಿ ಗಳನ್ನು ಮನ್ನಾ ಮಾಡಿ ಉತ್ತಮ ಕೆಲಸವನ್ನು ಮಾಡಿದ್ದಾರೆ. ಇವತ್ತು ರಾಜ್ಯದಲ್ಲಿ ಕಳೆದ ನಾಲ್ಕು ವರ್ಷಗಳಿಂದಲೂ ಭೀಕರ ಬರಗಾಲವಿದ್ದರೂ ಸರ್ಕಾರದವರು ಹಾಕಿಕೊಂಡಂತಹ ಕಾರ್ಯಕ್ರಮಗಳನ್ನು ಯಶಸ್ವಿ ಮಾಡಿ, ಸರ್ಕಾರದ ಗುರಿ ಸಾಧನೆ ಮಾಡಿದ್ದಾರೆ. ರೈತರ ಬೇಡಿಕೆಗಳನ್ನು ಈಡೇರಿಸಿದ್ದಾರೆ. ಇನ್ನು ಅನೇಕ ಯೋಜನೆಗಳನ್ನು ಸರ್ಕಾರದವರು ಹಾಕಿಕೊಂಡು ರೈತರಿಗೆ ಅನುಕೂಲ ಮಾಡಿ ಕೊಡ ಬೇಕಾಗುತ್ತದೆ. ಸಣ್ಣ ರೈತರೇ ಇರಬಹುದು, ಅತಿ ಸಣ್ಣ ರೈತರೇ ಇರಬಹುದು, ಮಧ್ಯಮವರ್ಗದ ರೈತರೇ ಇರಬಹುದು ಎಲ್ಲಾ ವರ್ಗದ ರೈತರಿಗೂ ಅನುಕೂಲ ಮಾಡಿಕೊಟ್ಟು, ಇನ್ನು ಹೆಚ್ಚಿನ ರೀತಿಯಲ್ಲಿ ರಿಯಾಯಿತಿಯನ್ನು ಕೊಡಬೇಕು. ಕೈಗಾರಿಕೋದ್ಯಮಿಗಳಿಗೆ ನೂರಾರು ಕೋಟಿ ರೂಪಾಯಿಗಳನ್ನು ವಜಾ ಮಾಡಿರುವುದು ನಾವು ಕೇಳಿದ್ದೇವೆ. ಆದ್ದರಿಂದ ರೈತರಿಗೆ ಇನ್ನು ಹೆಚ್ಚಿನ ರೀತಿಯಲ್ಲಿ ಅನುಕೂಲ ಮಾಡಿ ಕೊಡಬೇಕು. ರೈತ ಈ ದೇಶದ ಬೆನ್ನು ಮೂಳೆ ಎಂದು ನಾವು ಹೇಳುತ್ತೇವೆ. ಈ ದೇಶದ ಜನತೆಗೆ ರೈತನೇ ಅನ್ನದಾತನೆಂದು ನಾವು ಹೇಳುತ್ತೇವೆ. ಆದ್ದರಿಂದ ರೈತರಿಗೆ ಅನುಕೂಲ ಮಾಡಿಕೊಡ ಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತಾ ಇನ್ನು ತೋಟಗಾರಿಕೆ ಬಗ್ಗೆ ಕೆಲವು ಮಾತುಗಳನ್ನು ಹೇಳಲು ಇಷ್ಟಪಡುತ್ತೇನೆ. ತೋಟಗಾರಿಕಾ ಇಲಾಖೆಯಲ್ಲಿ ಸುಮಾರು ೧೦–೧೨ ಎಕರೆಯಷ್ಟು ಜಮೀನಿನಲ್ಲಿ ತೋಟಗಾರಿಕಾ ಬೆಳೆಗಳಾದ ಹಣ್ಣು, ತರಕಾರಿ ಮತ್ತು ಹೂವ ಗಿಡಗಳನ್ನು ಬೆಳೆಸುತ್ತಿ ದ್ದೇವೆ. ಸೊಸೈಟಿಗಳ ಮುಖಾಂತರ ರೈತರು ಬೆಳೆದಂತಹ ಹಣ್ಣು, ತರಕಾರಿ ಇತ್ಯಾದಿಗಳನ್ನು ತೋಟ ಗಾರಿಕಾ ಇಲಾಖೆಯವರು ಬೆಂಗಳೂರಿನ ಲಾಲ್‌ಬಾಗ್‌ನ ತೋಟಗಾರಿಕಾ ಸೊಸೈಟಿಯ ಮುಖಾಂತರ ರೈತರು ತಂದ ಮಾಲನ್ನು ಖರೀದಿಸುತ್ತಾರೆ. ನಗರದ ಸುತ್ತಮುತ್ತ ತಾಲ್ಲೂಕುಗಳಿಂದ ಬೆಳೆದಂತಹ ಹಣ್ಣು, ತರಕಾರಿಗಳನ್ನು ನೇರವಾಗಿ ಖರೀದಿಸಿ, ದಳ್ಳಾಳಿಗಳ ಕಾಟವನ್ನು ತಪ್ಪಿಸುವಂತಹ ಕೆಲಸವನ್ನು ಮಾಡಿದ್ದಾರೆ,

೩–೦೦ ಪಿ. ಎಂ.

ಅದೇ ರೀತಿ ತೋಟಗಾರಿಕೆ ಇಲಾಖೆ ಮೂಲಕ ಅಥವಾ ಹಣ್ಣು ತರಕಾರಿ ಸಹಕಾರ ಸಂಘದ ಮೂಲಕ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಅಂಗಡಿಗಳನ್ನು ತೆರೆದು ಮಾರಾಟ ಮಾಡುವ ವ್ಯವಸ್ಥೆಯನ್ನು ಮಾಡಬೇಕು. ದ್ರಾಕ್ಷಿ ಇರಬಹುದು, ಬೇರೆ ಬೇರೆ ಹಣ್ಣು ಇರಬಹುದು, ತರಕಾರಿಗಳು ಇರಬಹುದು,

ಇವೆಲ್ಲವನ್ನೂ ಸಹಕಾರ ಸಂಘಗಳ ಮೂಲಕ ಮಾರಾಟ ಮಾಡತಕ್ಕ ವ್ಯವಸ್ಥೆಯನ್ನು ಮಾಡಬೇಕು. ಇದರ ಜೊತೆಗೆ ಸಹಕಾರ ಸಂಘಗಳು ವ್ಯಾನ್‌ಗಳನ್ನು ಮತ್ತು ಲಾರಿಗಳನ್ನು ಇಟ್ಟುಕೊಂಡು ಹಣ್ಣು ತರಕಾರಿ ಬೆಳೆಯುವ ರೈತರುಗಳಿಂದ ಕಡಿಮೆ ಹಣವನ್ನು ತೆಗೆದುಕೊಂಡು ಸಾಗಾಣಿಕೆ ಮಾಡಿ ರೈತರುಗಳಿಗೆ ಹಣವನ್ನು ಉಳಿಸಬೇಕು. ಆಮೇಲೆ, ತಾಲ್ಲೂಕು ಕೇಂದ್ರಗಳಲ್ಲಿ ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಹಾರ್ಟಿಕಲ್ಚರ್‌ರವರು ಇದ್ದಾರೆ. ಇವರು ಆಯಾ ತಾಲ್ಲೂಕಿನಲ್ಲಿ ತೋಟಗಾರಿಕೆ ಇಲಾಖೆಯ ಕೆಲಸ ಕಾರ್ಯಗಳನ್ನು ನೋಡಿಕೊಳ್ಳುತ್ತಿದ್ದಾರೆ. ಸರ್ಕಾರದವರು ರೈತರುಗಳಿಗೆ ಕೊಡುವ ಅನುಕೂಲಗಳನ್ನು ಈ ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಹಾರ್ಟಿಕಲ್ಚರ್‌ರವರು ಸರಬರಾಜು ಮಾಡಬೇಕಾಗುತ್ತದೆ. ಇವರು ತಾಲ್ಲೂಕಿನ ಎಲ್ಲಾ ಹಳ್ಳಿಗಳಿಗೂ ಪದೇಪದೇ ಭೇಟಿ ಕೊಡುವ ಕಾರ್ಯಕ್ರಮವಿರುತ್ತದೆ. ಸರ್ಕಾರವು ಇವರಿಗೆ ವಾಹನವನ್ನು ಕೊಡದೇ ಇರುವುದರಿಂದ ಇವರು ಸಕಾಲದಲ್ಲಿ ರೈತರುಗಳನ್ನು ಭೇಟಿ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ನಾನು ಮಾನ್ಯ ತೋಟಗಾರಿಕಾ ಇಲಾಖೆಯ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ಈ ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಹಾರ್ಟಿಕಲ್ಚರ್‌ರವರಿಗೆ ವಾಹನವನ್ನು ಕೊಡಬೇಕು. ವಾಹನ ಕೊಡದೇ ಇದ್ದರೆ ಉತ್ತಮ ರೀತಿಯಲ್ಲಿ ಅವರು ಕೆಲಸ ಮಾಡುವುದಕ್ಕಾಗುವುದಿಲ್ಲ. ನಮ್ಮ ಕರ್ನಾಟಕದ ೧೭೫ ತಾಲ್ಲೂಕುಗಳಲ್ಲಿರುವ ಎಲ್ಲಾ ಅಸಿಸ್ಟೆಂಟ್ ಡೈರೆಕ್ಟರುಗಳಿಗೂ ವಾಹನಗಳನ್ನು ಕೊಟ್ಟರೆ ತೋಟಗಾರಿಕೆ ಇಲಾಖೆಯಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಬಹುದು. ಬರೀ ಲಾಲ್‌ಬಾಗ್ ಕಬ್ಬನ್‌ಪಾರ್ಕ್‌ನಲ್ಲಿರತಕ್ಕ ತೋಟಗಾರಿಕೆ ಇಲಾಖೆಗಳಿಗೆ ಮಾತ್ರ ಅನುಕೂಲಗಳನ್ನು ಕಲ್ಪಿಸಿದರೆ ಸಾಲದು ಇಡೀ ರಾಜ್ಯದಲ್ಲಿ ತೋಟಗಾರಿಕೆ ಬಗ್ಗೆ ಸರ್ಕಾರ ತುಂಬಾ ಗಮನ ಹರಿಸಬೇಕು. ರೈತರುಗಳಿಗೆ ಕಮರ್ಷಿಯಲ್ ಕ್ರಾಪ್‌ನಿಂದ ಈಗ ಬರುತ್ತಿರುವ ಹಣಕ್ಕಿಂತ ಹೆಚ್ಚು ಹಣ ಬರುವಂಥ ವ್ಯವಸ್ಥೆಯನ್ನು ತೋಟಗಾರಿಕಾ ಇಲಾಖೆಯವರು ಮಾಡಬೇಕು. ನಮ್ಮ ರಾಜ್ಯದಲ್ಲಿ ತೋಟಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿ ಸಾವಿರಾರು ಎಕರೆಯಷ್ಟು ಜಮೀನು ಇದೆ. ಈ ತೋಟಗಾರಿಕೆ ಬೆಳೆಗಳಿಂದ ಬರುವ ಹಣವನ್ನು ಅಧಿಕಾರಿಗಳು ತಿಂದುಹಾಕುತ್ತಿದ್ದಾರೋ, ಅಥವಾ ತೋಟವನ್ನು ನೋಡಿಕೊಳ್ಳುವವರು ತಿಂದುಹಾಕುತ್ತಿದ್ದಾರೋ; ಅಥವಾ ಈ ತೋಟಗಳಿಂದ ಉತ್ಪಾದನೆ ಕಡಿಮೆ ಬರುತ್ತಿದೆಯೋ, ಅಥವಾ ಸಿಬ್ಬಂದಿ ವೆಚ್ಚಕ್ಕೇ ಎಲ್ಲಾ ಖರ್ಚಾಗಿ ಹೋಗುತ್ತಿದೆಯೋ ಗೊತ್ತಾಗುತ್ತಿಲ್ಲ. ನಮ್ಮ ಹೊಸಕೋಟೆ ತಾಲ್ಲೂಕಿನಲ್ಲಿ ಸುಮಾರು ೧೫೦ ಎಕರೆಯಷ್ಟು ತೋಟಗಾರಿಕೆ ಇಲಾಖೆಯ ಫಾರಂ ಇದೆ. ಈ ಫಾರಂನಲ್ಲಿ ತೆಂಗಿನ ಮರಗಳು ಇವೆ. ಆದರೆ, ಈ ತೆಂಗಿನ ಮರಗಳಿಗೆ ಸರಿಯಾಗಿ ನೀರಿನ ಸರಬರಾಜು ಇಲ್ಲವಾಗಿದೆ. ಇರುವ ಬೋರ್‌ವೆಲ್‌ನಲ್ಲಿ ಸರಿಯಾಗಿ ನೀರು ಬರುತ್ತಿಲ್ಲ ಈ ತೆಂಗಿನ ಸಸಿಗಳಿಗೆ ೧೫ ವರ್ಷಗಳಾಗಿದ್ದರೂ ಇನ್ನೂ ಆದರಿಂದ ಉತ್ಪತ್ತಿ ಸರಿಯಾಗಿ ಆಗುತ್ತಿಲ್ಲ. ಇದೇ ರೀತಿ ರಾಜ್ಯದ ಇತರೆ ಕಡೆ ಇರುವ ತೋಟಗಾರಿಕೆಯ ಇಲಾಖೆಗೆ ಸೇರಿದ ಮಾವಿನ ತೋಟದ ಫಾರಂ ಇರಬಹುದು, ಸಪೋಟ ಫಾರಂ ಆಗಿರಬಹುದು, ಸೀಬೆ ಫಾರಂ ಆಗಿರಬಹುದು ಯಾವುದೇ ಫಾರಂ ಆಗಿರಬಹುದು. ಇವುಗಳಲ್ಲಿ ಸರಿಯಾದ ಉತ್ಪತ್ತಿ ಆಗುತ್ತಿಲ್ಲವೆಂದು ಕಾಣುತ್ತದೆ. ನಮ್ಮ ರಾಜ್ಯದಲ್ಲಿ ತೋಟಗಾರಿಕೆ ಇಲಾಖೆಗೆ ಸೇರಿದ ನರ್ಸರಿಗಳು ಮತ್ತು ಫಾರಂಗಳು ಒಟ್ಟು ೩೮೦ ಇವೆಯೆಂದು ತಿಳಿದು ಬಂದಿದೆ. ಈ ಫಾರಂಗಳಲ್ಲಿ ಎಷ್ಟು ಉತ್ಪಾದನೆಯಾಗುತ್ತಿದೆ ಮತ್ತು ಖರ್ಚು ಎಷ್ಟಾಗುತ್ತಿದೆ ಎಂಬ ಬಗ್ಗೆ ದಯಮಾಡಿ ತೋಟಗಾರಿಕಾ ಸಚಿವರು ತಿಳಿಸಬೇಕು. ನಾನು ಕೊನೆಯದಾಗಿ ಹೇಳುವುದಾದರೆ, ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ರೈತರುಗಳಿಗೆ ಅನೇಕ ರೀತಿಯಲ್ಲಿ ರಿಯಾಯಿತಿಗಳನ್ನು ಕೊಟ್ಟು ರೈತರ ಅಭ್ಯುದಯಕ್ಕಾಗಿ ಉತ್ತಮ ಕೆಲಸಗಳನ್ನು ಮಾಡಿದೆ ಎಂದು ಈ ಸಂದರ್ಭದಲ್ಲಿ ತಿಳಿಸಿ ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಸಭಾಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಅಧ್ಯಕ್ಷರು.—ಈಗ ಮಾನ್ಯ ಭೂಪತಿಯವರು ತಮ್ಮ ಭಾಷಣವನ್ನು ಪ್ರಾರಂಭ ಮಾಡಿ.

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೇ, ದಯವಿಟ್ಟು ಈಗ ನನಗೆ ಮಾತನಾಡಲು ಅವಕಾಶವನ್ನು ಕೊಡಿ, ನಾನು ಯಾವುದೋ ತುರ್ತು ಕಾರ್ಯದ ಮೇಲೆ ಹೋಗಬೇಕಾಗಿದೆ. ದಯಮಾಡಿ ನನಗೆ ಈಗ ಅವಕಾಶವನ್ನು ಕೊಟ್ಟರೆ ಸ್ವಲ್ಪ ಸಮಯದಲ್ಲಿ ಮುಗಿಸುತ್ತೇನೆ. ಮಾನ್ಯ ಭೂಪತಿಯವರು ಅನಂತರ ತಮ್ಮ ಭಾಷಣವನ್ನು ಮಾಡುತ್ತಾರೆ,

ಅಧ್ಯಕ್ಷರು.—ನೀವು ಇಬ್ಬರೂ ಹೊಂದಾಣಿಕೆ ಮಾಡಿಕೊಳ್ಳುವುದಾದಲ್ಲಿ ನನ್ನ ಅಭ್ಯಂತರ ಇಲ್ಲ.

† ಶ್ರೀ ಆರ್, ವೆಂಕಟರಾಮಯ್ಯ (ಮಾಗಡಿ/ಬಾಗಲೂರು) — ಮಾನ್ಯ ಅಧ್ಯಕ್ಷರೆ, ನಮ್ಮ ರೈತ ವರ್ಗದವರ ಬಗ್ಗೆ ಈ ನಮ್ಮ ರಾಷ್ಟ್ರದಲ್ಲಾಗಲಿ ರಾಜ್ಯದಲ್ಲಾಗಲಿ ಅಷ್ಟು ಆಸಕ್ತಿಯು ಕಂಡು ಬರುತ್ತಿಲ್ಲ. ನಮ್ಮ ದೇಶದಲ್ಲಿ ವ್ಯವಸಾಯದ ಅಭಿವೃದ್ಧಿಯಾಗದೆ ದೇಶದ ಅಭಿವೃದ್ಧಿಯು ಆಗುವುದಿಲ್ಲ. ಈ ನಮ್ಮ ರೈತರ ಬವಣೆಯುಂ ಸುಧಾರಿಸದ ಹೊರತು ನಮ್ಮ ರಾಷ್ಟ್ರದ ಅಭಿವೃದ್ಧಿಯಾಗುತ್ತದೆ ಎನ್ನುವುದು ಒಂದು ಕನಸು ಎಂದು ಹೇಳಬೇಕಾಗುತ್ತದೆ. ದುರಾದೃಷ್ಟವಶಾತ್ ಈ ಬಗ್ಗೆ ಸರಕಾರದವರು ಕಾಳಜಿ ವಹಿಸಿದ್ದಾರೆಯೋ ಅಂದರೆ, ನಮ್ಮ ಕರ್ನಾಟಕ ಸರಕಾರದವರೂ ಕೂಡ ಆ ಬಗ್ಗೆ ಯಾವುದೇ ಸೂಕ್ತ ಆದ್ಯತೆಯನ್ನು ಕೊಟ್ಟಿಲ್ಲ ಎಂದು ಹೇಳಬೇಕಾಗುತ್ತದೆ. ಈ ಬಗ್ಗೆ ಒಟ್ಟು ನಾವು ಖರ್ಚು ಮಾಡುವುದಕ್ಕೆ ಕೊಟ್ಟಿರುವುದು ೧೯೮೫ ೮೬ರಲ್ಲಿ ೩.೭ ಕೋಟಿ ರೂಪಾಯಿಗಳು ಈಗ ೬.೧೭ ಕೋಟಿಗಳನ್ನು ಕೊಟ್ಟಿದ್ದಾರೆ ಅದು ಬಹಳ ಕಡಿಮೆಯಾಗುತ್ತದೆ ಇದು ೭೫ ಪರ್ಸೆಂಟ್‌ನಷ್ಟು ಇರುವ ಜನತೆಗೆ ಸೂಕ್ತ ಪ್ರಮಾಣದಲ್ಲಿ ಇಲ್ಲ ಎಂದು ಹೇಳುತ್ತೇನೆ. ಆದುದರಿಂದ ಇದನ್ನು ಇನ್ನೂ ಜಾಸ್ತಿ ಮಾಡಬೇಕು. ಇದನ್ನು ನೋಡಿದರೆ ಇವರಿಗೆ ವ್ಯವಸಾಯದ ಬಗ್ಗೆ ಕಾಳಜಿ ಇಲ್ಲ ಎಂದು ಹೇಳಬಹುದು. ಜೊತೆಗೆ ನಾವೆಲ್ಲರೂ ಈ ಬಗ್ಗೆ ನಡೆದ ಅಚೀವ್‌ಮೆಂಟ್ ನೋಡಿದರೆ ವಾಸ್ತವ ಅಂಶ ಅರ್ಥವಾಗುತ್ತದೆ. ಅದು ಪೇಜ್ ೭ರಲ್ಲಿ ಇದೆ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

It could be seen that the targets under the distribution of pesticides and seeds have been fulfilled. The achievement in respect of chemical fartelizers and higt yielding varieties fall short of the target. Consequently it can also be seen that the crop production has also been less than the targets,

ಇದನ್ನು ನಾವು ಇನ್ನೂ ಸ್ವಲ್ಪ ಪರಿಶೀಲಿಸಿದರೆ ಟೇಬಲ್ ೮ರ ಪ್ರಕಾರ ಐಆರ್‌ಡಿಪಿ ೧೯೮೫–೮೬ರಲ್ಲಿ ೧.೪೯ ಇತ್ತು. ಅಚೀವ್‌ಮೆಂಟ್ ೧.೩೩ ಇತ್ತು. ಅಂತೆಯೇ ಅಂತ್ಯೋದಯದಲ್ಲಿ ಫಲಾನುಭವಿಗಳು ೧೯೮೫–೮೬ರಲ್ಲಿ ೨೨ ೩೨ ಇದ್ದುದು, ಈಗ ೧೦.೪೯ ಇದೆ. ಅದೇ ರೀತಿಯಲ್ಲಿ ನೇಗಿಲು ಭಾಗ್ಯದ ವಿಚಾರದಲ್ಲಿ ೫.೫೮ ಲಕ್ಷ ಇತ್ತು, ಈಗ ೪.೬೭ ಲಕ್ಷ ಇದೆ. ಇದರ ಅರ್ಥವು ನಮಗೆ ಆಗುತ್ತಾ ಇಲ್ಲ. ಬಡತನ ಜಾಸ್ತಿಯಾಗಿದೆ ಎನ್ನುವ ಉದ್ದೇಶದಿಂದ ಎಲ್ಲಾದರಲ್ಲಿಯೂ ಹಣವನ್ನು ಕಡಿಮೆ ಮಾಡುತ್ತಾ ಇದ್ದಾರೆ ಎಂದು ಕಾಣುತ್ತದೆ. ಐ.ಆರ್.ಡಿ.ಪಿ ಗೆ ಹಿಂದೆ ೩೦ ಲಕ್ಷ ರೂಪಾಯಿಗಳು ಇದ್ದುದು ಈಗ ೧೦ ಲಕ್ಷ ರೂಪಾಯಿಗಳಿಗೆ ಇಳಿದಿದೆ. ಇದಕ್ಕೆಲ್ಲಾ ಕೇಂದ್ರ ಸರಕಾರದ ರಿಸ್ಟ್ರಿಕ್ಷನ್ ಇದೆ ಎಂದು ಹೇಳಿದ್ದಾರೆ. ಇದನ್ನು ರಾಜ್ಯ ಸರಕಾರದವರು ಪರಿಶೀಲಿಸಿ. ಶ್ರದ್ಧೆ ವಹಿಸಿ ಸೂಕ್ತ ರೀತಿಯಲ್ಲಿ ಮಾಡಬೇಕು. ಈ ಐ,ಆರ್.ಡಿ.ಪಿ ಗೂ ನಮ್ಮ ವ್ಯವಸಾಯಕ್ಕೂ ಸಂಬಂಧ ಇರುವುದರಿಂದ ಆ ಬಗ್ಗೆ ಗಮನ ಕೊಡಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈಗ ವ್ಯವಸಾಯ ಯಾವ ದಿಕ್ಕಿಗೆ ಹೋಗುತ್ತಾ ಇದೆ ಎಂದು ಪರಿಶೀಲಿಸಿ ನೋಡಬೇಕು, ವ್ಯವಸಾಯಕ್ಕೆ ಸಾಕಷ್ಟು ಉತ್ತೇಜನ ಕೊಡುತ್ತಿದ್ದೇವೆ ಎಂದು ಹೇಳಿದರೂ ಕೂಡ, ಸಾಕಷ್ಟು ಖರ್ಚು ಮಾಡುತ್ತಿದ್ದೇವೆ ಎಂದು ಹೇಳಿದರೂ ಕೂಡ ಅದು ನಿಜವಾಗಿ ಯಾರಿಗೆ ತಲುಪ ಬೇಕಾಗಿತ್ತೋ ಅವರಿಗೆ ತಲುಪುತ್ತಿಲ್ಲ. ನಿಜವಾಗಿಯೂ ಬಡವರಾಗಿರುವವರ ಪೈಕಿ ೮೦ ಪರ್ಸೆಂಟ್‌ನಷ್ಟು ಜನರಿಗೆ ಕೂಡ ಯೋಜನೆಯ ಸೌಲಭ್ಯಗಳು ಸರಿಯಾಗಿ ತಲುಪಿಲ್ಲ. ಇಂತಹ ಸೌಲಭ್ಯಗಳನ್ನು ಪಟ್ಟಭದ್ರ ಹಿತಾಸಕ್ತಿಗಳು ಉಪಯೋಗಿಸಿಕೊಳ್ಳುತ್ತಾ ಇದ್ದಾರೆ. ಬಡವರಿಗೆ ಇದರಿಂದ ಪ್ರಯೋಜನವಾಗಿಲ್ಲ. ಆದುದರಿಂದ ಈ ಬಗ್ಗೆ ಒಂದು ಸೂಕ್ತ ಯೋಜನೆಯನ್ನು ಹಾಕಿಕೊಳ್ಳಬೇಕು, ಯೋಜನೆ ಎಂಬ ಪುಸ್ತಕದಲ್ಲಿ ಬಡತನದ ಸ್ವರೂಪ ಎಂಬ ಬಗ್ಗೆ ಹೇಳಿದ್ದಾರೆ. ''ಎಲ್ಲಾ ಕುಟುಂಬಗಳಿಗೂ ಸಮಾನವಾಗಿ ಹಂಚಿದರೆ ಯಾವುದೂ ಕೂಡ ಒಂಟಿಯಾಗಿ ಸ್ವಯಂಪೂರ್ಣವಾಗಿ ಇರುವುದು ಸಾಧ್ಯವಿಲ್ಲ. ಉತ್ಪಾದನ ಸಾಮರ್ಥ್ಯವು ಹೇಗಿದ್ದರೂ ಹೆಚ್ಚಳದ ಸರಾಸರಿ ಗಾತ್ರವು ವಾಸ್ತವವಾಗಿ ತಗ್ಗಿದೆ. ಸಣ್ಣ ರೈತರು ಅತಿ ಸಣ್ಣ ರೈತರಾಗಿ ಹೋಗುತ್ತಿದ್ದಾರೆ. ಕೃಷಿ ಕಾರ್ಮಿಕರ ದಾರಿದ್ರ್ಯ ಹೆಚ್ಚುತ್ತಿದೆ. ಹಸಿರು ಕ್ರಾಂತಿಗೆ ಮುನ್ನ ಜಮೀನು ಕ್ರೋಡೀಕರಣವಾದ ಪ್ರದೇಶಗಳಿಗೆ ಹೋಲಿಸಿದಂತೆ ವಿಶೇಷವಾಗಿ ಪೂರ್ವ ವಲಯದ ಶಾಶ್ವತ ನಿಲಯ ಪ್ರದೇಶದಲ್ಲಿ ಈ ಪರಿಸ್ಥಿತಿಯು ಉಂಟಾಗಿದೆ. ಕನಿಷ್ಟವೇತನವು ಎಲ್ಲಾ

ಪ್ರದೇಶಗಳಿಗೆ ಮತ್ತು ಉದ್ಯೋಗಗಳಿಗೆ ವ್ಯಾಪಿಸಿಲ್ಲ. ಅಲ್ಲದೆ ಇರುವಷ್ಟು ಕೂಡ ಆಚರಣೆಯಲ್ಲಿರಲು ಸಾಧ್ಯವಾಗುವುದಿಲ್ಲ, ಏಕೆಂದರೆ ಕೃಷಿ ಕಾರ್ಮಿಕ ವರ್ಗದವರು ಅಸಂಘಟಿತರಾಗಿದ್ದಾರೆ. ಅದೇ ರೀತಿಯಲ್ಲಿ ನೀರು, ವಿದ್ಯುಚ್ಛಕ್ತಿ, ಹಂಚಿಕೆಯೂ ಸಹ ರಾಜ್ಯಗಳ ಮಟ್ಟದಲ್ಲಿಯೂ ಅಲ್ಲದೆ ವೈಯಕ್ತಿಕ ರೈತರ ಮಟ್ಟದಲ್ಲಿಯೂ ವಿವಾದಾಸ್ಪದ ವಿಷಯವಾಗಿದೆ. ಈ ವಿವಾದಗಳನ್ನು ಬಗೆಹರಿಸುವಂತೆ ನಮ್ಮ ಸಾಮಾಜಿಕ, ಆರ್ಥಿಕ ವ್ಯವಸ್ಥೆಗಳಿಗೆ ಬಿಟ್ಟುಕೊಡ ಬೇಕಾಗುತ್ತದೆ. ಪದೇ ಪದೇ ಮಾರು ಚುನಾವಣೆಗಳಿಗೆ ಮೊರೆ ಹೋಗ ಬೇಕಾಗಿರುವುದರಿಂದ ಸರಕಾರಗಳು ಇಂಥ ಅಪಾಯಗಳನ್ನು ಎದುರಿಸುತ್ತಿರುವುದು ಮತ್ತು ಹಾಗೆ ಭಾವಿಸುವುದು ಅವಾಸ್ತವಿಕವಾಗಿದೆ......''

ಇದೇ ರೀತಿ ನಾವು ನೋಡಿದರೆ ನಮ್ಮಲ್ಲಿ ಎಷ್ಟು ದರಿದ್ರರು, ದಟ್ಟದರಿದ್ರರು ಇದ್ದಾರೆಂದರೆ ಅಂಥವರ ಬಗ್ಗೆ ಇದರಲ್ಲಿ ಸವಿಸ್ತಾರ ಅಭಿಪ್ರಾಯ ಕೊಟ್ಟಿದ್ದಾರೆ. ಉದಾಹರಣೆಗೆ ನಮ್ಮ ಹಳ್ಳಿಗಳಲ್ಲಿ ಒಂದು ಕುಟುಂಬದಲ್ಲಿ ೫ ಜನರಿದ್ದಾರೆಂದು ಇಟ್ಟುಕೊಂಡರೆ ಅವರಿಗೆ ತಿಂಗಳಿಗೆ ೨೦೦ ರೂ.ನಂತೆ ಒಂದು ಕುಟುಂಬದ ಆದಾಯ ೨೪೦೦ ರೂ. ಆಗುತ್ತದೆ. ಅವರ ವರಮಾನವು ದಾರಿದ್ರ್ಯ ರೇಖೆಗಿಂತ ೪೦೦೦ ರೂ.ಗಳಷ್ಟು ಕೆಳಗಿರುತ್ತದೆ. ಈ ರೀತಿ ಬಡತನ ಈ ವ್ಯವಸ್ಥೆಯಲ್ಲಿ ಯಾವ ರೀತಿ ಜಾಸ್ತಿಯಾಗುತ್ತದೆಂದರೆ ನಮ್ಮ ಆಸ್ತಿಯ ಮಾಲಿಕತ್ವ ಕೆಲವೇ ಜನರಲ್ಲಿ ಕೇಂದ್ರೀಕೃತವಾಗಿರುವುದರಿಂದ ಹಾಗೂ ಈ ಆಸ್ತಿಯ ಮೇಲಿನ ವರಮಾನ ನಮ್ಮ ರಾಷ್ಟ್ರೀಯ ವರಮಾನದಲ್ಲಿ ಉದ್ಯೋಗ ಮಾಡಿ ಗಳಿಸುವ ವರಮಾನಕ್ಕೆ ಸಮನಾಗಿರುವುದರಿಂದ ಹಾಗೂ ಬಹು ಸಂಖ್ಯಾತರು ಯಾವುದೇ ಆಸ್ತಿಯಿಂದ ವರಮಾನಗಳು ಹೊಂದಿಲ್ಲವಾದ್ದರಿಂದ ದಾರಿದ್ರ್ಯ ಉಂಟಾಗಿದೆ. ಈ ರೀತಿ ನಾವು ದಿನೇ ದಿನೇ ನೋಡುತ್ತಾ ಇದ್ದರೂ ಕೂಡ ನಮ್ಮ ಕೃಷಿ ರಂಗದಲ್ಲಿ ಅಭಿವೃದ್ಧಿಯಾಗುತ್ತಿದ್ದೇವೆಂದು ಹೇಳಿಕೊಂಡರೂ ಅಂಥಾ ಪರಿಸ್ಥಿತಿಯನ್ನು ನಾವು ಕಾಣುತ್ತಿಲ್ಲ. ಕೃಷಿ ರಂಗದಲ್ಲಿ ದಿನೇ ದಿನೇ ಹಿಂದಕ್ಕೆ ಹೋಗುತ್ತಿದ್ದರೆ ಕಾರಣ ಸರ್ಕಾರ ಕೂಡ, ಹೇಗೆಂದರೆ ಬಜೆಟ್ ಅಲಾಟ್‌ಮೆಂಟ್‌ನಲ್ಲಿ ಸರ್ಕಾರ ಕೊಟ್ಟಿರುವುದೇ ತುಂಬಾ ಕಡಿಮೆ. ರೈತರ ಬಗ್ಗೆ ಈ ಸರ್ಕಾರವಾದರೂ ಶ್ರದ್ಧೆ ವಹಿಸುತ್ತದೆಂದು ಅಂದುಕೊಂಡಿದ್ದೆ. ದುರದೃಷ್ಟವಶಾತ್ ಜನತಾ ಸರ್ಕಾರ ಅಧಿಕಾರಕ್ಕೆ ಬಂದದ್ದೇ ದೊಡ್ಡ ರೈತ ಚಳುವಳಿಗಳ ಮೂಲಕ ಕಾಂಗ್ರೆಸ್ ಸರ್ಕಾರ ಹೋದರೆ, ಗುಂಡೂರಾಯರ ಸರ್ಕಾರ ಇಳಿದರೆ, ರೈತರಿಗೆ ಅನುಕೂಲವಾಗುತ್ತದೆಂದು ನವಲಗುಂದ, ನರಗುಂದಗಳಿಂದೆಲ್ಲಾ ನಡೆದುಬಂದರು. ಈಗ ರೈತರೆಲ್ಲಾ ನಿರಾಶೆ ಭಾವನೆ ಹೊಂದಿ ಕನ್ನಡ ದೇಶ ಪಕ್ಷ. ಇನ್ನೊಂದು ಪಕ್ಷ ಎಂದು ಕಟ್ಟಿಕೊಂಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅವರಿಗೆ ನೀವು ಸಹಾಯಕ್ಕೆ ನಿಂತ ಮೇಲೆ ನಿಮ್ಮ ಗತಿ ಏನಾಯ್ತು ಹೇಳಿ ?

ಶ್ರೀ ಆರ್. ವೆಂಕಟರಾಮಯ್ಯ.— ನಿಮಗಿಂತ ಅವರು ನೂರು ಪಾಲು ಮೇಲು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಾನು ಇದ್ದಾಗ ಪಂಪ್‌ಸೆಟ್‌ಗಳಿಗೆಲ್ಲಾ ಪವರ್ ರೇಟ್ ಕಡಿಮೆ ಇಟ್ಟಿದ್ದೆ. ಈಗ ಅದೆಲ್ಲಾ ಜಾಸ್ತಿ ಮಾಡಿಟ್ಟಿದ್ದೀರಿ.

ಶ್ರೀ ಲಕ್ಷ್ಮೀನರಸಿಂಹಯ್ಯ.— ಏನು ಅಂಥಾದ್ದು ನಾವು ಜಾಸ್ತಿ ಮಾಡಿರೋದು ? ಒಂದು ಹೆಚ್‌ಪಿಗೆ ೧೫ ರೂ. ಜಾಸ್ತಿ ಮಾಡಿದ್ದೇವೆ, ಅಷ್ಟೆ.

ಶ್ರೀ ಆರ್. ವೆಂಕಟರಾಮಯ್ಯ.— ಮಾನ್ಯ ಖರ್ಗೆಯವರು ಎರಡು ವಿಷಯಗಳ ಬಗ್ಗೆ ಹೇಳಿದ್ದಾರೆ, ಬಡವರನ್ನು ನಾಲ್ಕು ವಿಧವಾಗಿ ವಿಂಗಡಿಸಿದ್ದಾರೆ. ಬಡವರು, ಅತಿ ಬಡವರು, ದಟ್ಟ ದರಿದ್ರರು ಮತ್ತು ನಿರ್ಗತಿಕರು ಎಂದು. ಹಾಗೆಯೇ ಬಜೆಟ್‌ನಲ್ಲಿ ಹಣವನ್ನೂ ಸರಿಯಾಗಿ ಇಟ್ಟಿಲ್ಲ ಎಂದಿದ್ದಾರೆ. ಒಂದು ಹೇಳಿದರು, ರೈತರ ಬಗ್ಗೆ ಕಾಳಜಿ ವಹಿಸಿಲ್ಲ, ಆದ್ದರಿಂದ ರೈತರೆಲ್ಲ ಸೇರಿಕೊಂಡು ಕನ್ನಡ ಪಕ್ಷವನ್ನು ಮಾಡಿಕೊಂಡಿದ್ದಾರೆ ಆದ್ದರಿಂದ ಇವರು ರೈತರ ಸೇವೆ ಮಾಡುತ್ತಿಲ್ಲ ಎಂದು ಖಚಿತವಾಗಿ ಹೇಳಿದ್ದಾರೆ. ಪುನಃ ಇನ್ನೊಂದು ಸಲ ಕಾಂಗ್ರೆಸ್‌ಗಿಂತ ಜನತಾದವರು ನೂರು ಪಾಲು ಜಾಸ್ತಿ ಕೆಲಸ ಮಾಡಿದ್ದಾರೆ ಎಂದು ಹೇಳಿದ್ದಾರೆ. ಇವೆಲ್ಲವನ್ನೂ ಸಾಧನೆ ಮಾಡಿ ಹೇಳಲಿ.

ಶ್ರೀ ಆರ್. ವೆಂಕಟರಾಮಯ್ಯ.— ನಾಲ್ಕು ವಿಭಾಗಗಳನ್ನು ಮಾಡಿದ್ದಾರೆ. ವಾರ್ಷಿಕ ವರಮಾನ ೨೨೬೫ ರೂಪಾಯಿಗಳವರೆಗಿನ ವಾರ್ಷಿಕ ವರಮಾನವುಳ್ಳವರು ನಿರ್ಗತಿಕರು, ೨೨೬೬ರಿಂದ

೩೫೦೦ ರೂಪಾಯಿಗಳವರೆಗಿನ ವಾರ್ಷಿಕ ವರಮಾನವುಳ್ಳವರು ಕಡು ದರಿದ್ರರು ೩೫೦೧ರಿಂದ ೪೮೦೦ ವರೆಗಿನ ವಾರ್ಷಿಕ ವರಮಾನ ಹೊಂದಿರುವವರು ಬಹಳ ಬಡವರು ಹಾಗೂ ೪೮೦೧ರಿಂದ ೭೪೦೦ ರೂಪಾಯಿಗಳವರೆಗಿನ ವಾರ್ಷಿಕಾದಾಯವುಳ್ಳವರು ಬಡವರ ಪೈಕಿ ಅತ್ಯಂತ ಶ್ರೀಮಂತರು ಎಂದು ಮಾಡಿದ್ದಾರೆ. ನಮ್ಮಲ್ಲಿ ಜಾಸ್ತಿಯಿರುವುದು ಇವರೇ. ಇದರ ಬಗ್ಗೆ ಸರಕಾರವೇ ಅಂಕಿ ಅಂಶವನ್ನು ಕೊಟ್ಟಿದೆ. ಜನತಾ ಸರಕಾರದ ಪ್ರಭುತ್ವವು ಕಾಂಗ್ರೆಸ್ ಸರಕಾರದ ಪ್ರಭುತ್ವಕ್ಕಿಂತ ಮೇಲು. ಕಾಂಗ್ರೆಸ್ ಪದ್ಧತಿಯನ್ನು ನಾವು ೩೦ ವರ್ಷದಿಂದ ನೋಡುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಅಂತಹವರೇ, ಅವರ ಏಜೆಂಟ್ ಆಗಿದ್ದೀರಿ ನೀವು ಹೇಳದೆ ಬೇರೆ ಯಾರು ಹೇಳಬೇಕು ?

ಶ್ರೀ ಆರ್. ವೆಂಕಟರಾಮಯ್ಯ.— ನಮ್ಮದು ರಾಷ್ಟ್ರೀಯ ಪಕ್ಷ. ಅವರಿಗಿಂತ ದೊಡ್ಡ ಪಕ್ಷ. ನಾವು ಯಾರಿಗೂ ಏಜೆಂಟ್ ಆಗಬೇಕಾಗಿಲ್ಲ. ನಾವು ಏಜೆಂಟ್ ಆಗುವುದಕ್ಕೆ ಸಾಧ್ಯವಿಲ್ಲ. ೧೯೭೭-೭೮ರ ಕರ್ನಾಟಕ ಎಕಾನಮಿ ಫಿಗರ್ಸ್‌ನಲ್ಲಿ ಕೊಟ್ಟಿದ್ದಾರೆ. ಪೇಜ್ ೧೫ ಇಲ್ಲವೇ ೧೬ ಅನ್ನು ನೋಡಿದರೆ ಗೊತ್ತಾಗುತ್ತದೆ. ನಮ್ಮಲ್ಲಿರುವ ೩೦ ಪರ್ಸೆಂಟ್ ಜಮೀನಿನಲ್ಲಿ ೫ ಪರ್ಸೆಂಟ್ ನಮ್ಮ ಕೈಯಲ್ಲಿ ಇದೆ, ಈ ರೀತಿಯಾದರೆ ವ್ಯವಸಾಯ ರಂಗದಲ್ಲಿ ಅಭಿವೃದ್ಧಿಯನ್ನು ಮಾಡುವುದು ಹೇಗೆ ? ನಾವು ಏನು ೬.೧೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ ಅದು ಪೂರ್ತಿಯಾಗಿ ರೈತರಿಗಂತೂ ಮುಟ್ಟುವುದಿಲ್ಲ ಬೇರೆಯವರಿಗೆ ಹೋಗುತ್ತದೆ. ವ್ಯವಸಾಯದ ಬಗ್ಗೆ ಮತ್ತು ರೈತರ ಬಗ್ಗೆ ಹಾಗೂ ಹಳ್ಳಿಗಾಡಿನಲ್ಲಿರುವ ಜನಗಳ ಬಗ್ಗೆ ಸರಕಾರಕ್ಕೇನಾದರೂ ಕಾಳಜಿ ಇದೆಯೇ ಎಂದು ಯಾರಾದರೂ ಪ್ರಶ್ನೆ ಹಾಕಿದರೆ ಇಲ್ಲ ಎಂದು ಹೇಳಬೇಕಾಗುತ್ತದೆ. ಮಾನ್ಯ ಮಂತ್ರಿಗಳಿಗೆ ಎಷ್ಟು ಶಕ್ತಿಯಿಂದೆಯೋ ನನಗಂತೂ ಗೊತ್ತಿಲ್ಲ. ಯಾರು ಬಡವರಲ್ಲಿ ಬಡವರಿದ್ದು ಅವರಿಗೆ ಜಮೀನಿಲ್ಲದೆ ಸರಕಾರೀ ಜಮೀನನ್ನು ಒತ್ತುವರಿ ಮಾಡಿದ್ದಾರೆ ಅವರಿಗೆ ಅದನ್ನು ಖಾಯಂ ಮಾಡಿಸಿಕೊಡಿ ಆಗಲಾದರೂ ಅವರು ಆ ಜಮೀನಿನ ಬಗ್ಗೆ ಹೆಚ್ಚು ಕಾಳಜಿ ವಹಿಸಿ ಉತ್ತು ಬಿತ್ತು ಬೆಳೆ ತೆಗೆಯುತ್ತಾರೆ. ೧೪ ಲಕ್ಷ ಪಂಪ್‌ಸೆಟ್‌ಗಳಿಗೆ ಎನರ್ಜಿ ಕೊಟ್ಟಿದ್ದೇವೆಂದು ಹೇಳುತ್ತಾರೆ, ನಾಚಿಕೆಗೇಡು. ಮಾನ್ಯ ಗುಂಡೂರಾಯರ ಕಾಲದಲ್ಲಿ ಇದಕ್ಕೋಸ್ಕರ ೧೨೦ ಜನ ಪ್ರಾಣವನ್ನು ತೆತ್ತರು ಹಾಗೂ ದೊಡ್ಡ ಹೋರಾಟ ಮಾಡಿದರು, ಈ ಮಹಾನುಭಾವರು ಒಂದು ೧೫ ರೂಪಾಯಿ ಜಾಸ್ತಿ ಮಾಡಿದ್ದಾರೆ. ಇವರು ಕಡಿಮೆ ಮಾಡಿದ್ದರೆ ನಾವು ಅವರಿಗೆ ನಮಸ್ಕಾರ ಮಾಡುತ್ತಿದ್ದೆವು. ಇವರು ನಮಗೆ ರೈತರ ಬಗ್ಗೆ ಕಾಳಜಿಯಿದೆಯೆಂದು ಹೇಳಿಕೊಳ್ಳುತ್ತಾರೆ.

ಶ್ರೀ ಲಕ್ಷ್ಮೀನರಸಿಂಹಯ್ಯ.— ಆಗ ಜಲ ವಿದ್ಯುತ್ ಯೋಜನೆಗಳಿಂದ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುತ್ತಿದ್ದೆವು. ಅದರ ಬೆಲೆ ೧೦-೧೨ ಪೈಸೆ ಬೀಳುತ್ತಿತ್ತು, ಆದರೆ ಈಗ ಒಂದು ರೂಪಾಯಿ ಬೀಳುತ್ತದೆ. ಆದರೆ ರೈತರಿಗೆ ಕೇವಲ ೧೨ ಪೈಸೆಗೆ ಒಂದು ಯೂನಿಟ್‌ನಂತೆ ವಿದ್ಯುಚ್ಛಕ್ತಿಯನ್ನು ಒದಗಿಸುತ್ತಿದ್ದೇವೆ, ಪರಿಸ್ಥಿತಿ ಬದಲಾವಣೆಯಾದರೂ ಬೇರೆಯವರಿಗೆ ಹೆಚ್ಚು ಮಾಡಿದರೂ ಕೂಡ ರೈತರಿಗೆ ಯಾವುದೇ ರೀತಿಯ ಧಕ್ಕೆಯಾಗಿಲ್ಲ ! ಒಂದು ಹೆಚ್.ಪಿ.ಗೆ ೧೫ ರೂಪಾಯಿ ಒಂದು ವರ್ಷಕ್ಕೆ ಹೆಚ್ಚು ಮಾಡಿದ್ದೇವೆ. ೩ ಹೆಚ್.ಪಿ.ಗೆ ಒಂದು ವರ್ಷಕ್ಕೆ ೪೫ ರೂಪಾಯಿ ಹೆಚ್ಚಿಗೆ ಯಾಗುತ್ತದೆ. ಇದೇನೂ ಬಹಳ ಹೆಚ್ಚಲ್ಲ.

ಮೂರು ವರ್ಷದಲ್ಲಿ ಎರಡು ಲಕ್ಷ ಪಂಪ್‌ಗಳಿಗೆ ಹೆಚ್ಚಿಗೆ ಸರ್ವೀಸ್ ಕೊಟ್ಟಿದ್ದೇವೆ.

ಶ್ರೀ ಆರ್ ವೆಂಕಟರಾಮಯ್ಯ.—ಮಾನ್ಯ ಜೆ. ಹೆಚ್. ಪಟೇಲರು ಆರೇಳು ಕೋಟಿ ರೂಪಾಯಿ ಬಂದಿದೆ ಎಂದು ಒಂದು ಫಿಗರನ್ನು ಕೊಟ್ಟರು. ಅಷ್ಟನ್ನು ರೈತರಿಗೆ ಕೊಟ್ಟಿದ್ದರೆ ನಿಜವಾಗಿಯೂ ನಿಮ್ಮನ್ನು ಅಪ್ರಿಷಿಯೇಟ್ ಮಾಡುತ್ತಿದ್ದೆವು. ನೀವು ಕೂಡಾ ಕಾಂಗ್ರೆಸ್ ದಾರಿಯಲ್ಲಿ ಹೋದರೆ ಏನು ಹೇಳುವುದು? ನಿಮಗೂ ನಮಗೂ ತೊಂದರೆ ಇಲ್ಲ, ಅದನ್ನು ಕೊಡುವ ರೈತರಿಗೆ ತೊಂದರೆಯಾಗುತ್ತದೆ. ಇದರ ಬಗ್ಗೆ ಗಮನ ಹರಿಸಬೇಕೆಂದು ಹೇಳುತ್ತೇನೆ. ನಮ್ಮ ಮಾನ್ಯ ಜಿಗಜಿಣಗಿಯವರದು ಸಾರಾಯಿ ಹೋಗಿ ಕಲ್ಲು ಆಗಿದೆ. ಅವರ ಹೃದಯ ಸ್ವಲ್ಪ ಕಲ್ಲಾಗಿದೆ, ನಮ್ಮ ರೈತರ ಬದುಕು ಅವರಿಗೆ ಅರ್ಥವಾಗುವುದಿಲ್ಲ. ಈಗಲಾದರೂ ಕೂಡಾ ನಮ್ಮ ಮಾನ್ಯ ಕೃಷಿ ಮಂತ್ರಿಗಳು ಹದಿನೈದು ದಿವಸ ಅಥವಾ ಒಂದು ತಿಂಗಳೋ ಅಥವಾ ಎರಡು ತಿಂಗಳಾದರೂ ತೆಗೆದುಕೊಂಡು ರೈತರುಗಳಿಗೆ ಪಂಪ್‌ಸೆಟ್‌ಗೆ ಪವರ್ ಕೊಡಿಸಿ ಎಂದು ಹೇಳುತ್ತೇನೆ. ಇದರ ಬಗ್ಗೆ ಸ್ವಲ್ಪ ಗಮನವನ್ನು ಕೊಡಬೇಕು ಎಂದು ತಮ್ಮಲ್ಲಿ

ಪ್ರಾರ್ಥನೆ, ನಮ್ಮ ಸ್ನೇಹಿತರು ಹೇಳಿದ ಹಾಗೆ ಸ್ವಾತಂತ್ರ್ಯ ಬಂದು ೪೦ ವರ್ಷಗಳಾದರೂ ಕೂಡಾ ರೈತರಿಗೆ ನ್ಯಾಯವಾದ ಬೆಲೆ ಸಿಗುತ್ತಿಲ್ಲ. ನಾಲ್ಕಾರು ಕಮಿಟಿ ಎಂದು ಮಾಡಿದರು. ಬಂಗಾರಪ್ಪ ಕಮಿಟಿ, ಇನ್ನೊಬ್ಬರ ಕಮಿಟಿ ಈ ರೀತಿ ನಾಲ್ಕಾರು ಕಮಿಟಿಗಳನ್ನು ಮಾಡಿದರು. ಆ ಕಮಿಟಿಗಳ ಗತಿಯೇನಾಯಿತು ? ಇನ್ನೊಂದು ಶಂಕರಿಕೊಪ್ಪ ಕಮಿಟಿ ಎಂದು ಮಾಡಿದರು. ಅದರ ಗತಿ ಏನಾಯಿತು? ಈಗಲಾದರೂ ಕೂಡಾ ಒಂದು ನ್ಯಾಯವಾದ ಬೆಲೆ ''ಸಪೋರ್ಟ್ ಪ್ರೈಸ್'' ಆ ರೈತರಿಗೆ ಕೊಟ್ಟರೆ ನಿಜವಾಗಿಯೂ ನಿಮಗೆ ಥ್ಯಾಂಕ್ಸ್ ಹೇಳಬಹುದು. ರೈತರಿಗೆ ಸರಿಯಾದ ಬೆಲೆ ಕೊಡುತ್ತಿಲ್ಲ ಎಂದು ಹೇಳುತ್ತೇನೆ ರೈತರ ಸಾಲಗಳನ್ನು ರದ್ದು ಮಾಡುತ್ತೀರಿ ಎಂದು ಅಂದುಕೊಂಡಿದ್ದೆ, ಅದನ್ನು ರದ್ದು ಮಾಡಲಿಲ್ಲ. ಎರಡು ಸಾರಿ ಬಡ್ಡಿಯನ್ನೇನೋ ರದ್ದು ಮಾಡಿದರು. ಅದಕ್ಕಾಗಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳಿಗೆ ಥ್ಯಾಂಕ್ಸ್ ಹೇಳಬಹುದು. ಜೂನ್ ೩೦ರ ತನಕ ಟೈಮ್ ಕೊಡುತ್ತೇವೆ ಎಂದು ನೀವೇ ಹೇಳಿದ್ದಿರಿ, ಪ್ರಿಂಟಿಂಗ್ ಮಿಸ್ಟೇಕೋ ಇಲ್ಲದೇ ಬೇಕಾಗಿ ಉಪಾಯ ಮಾಡಿ ತಪ್ಪಿಸಿ ಕೊಳ್ಳುವುದಕೋ ಹೇಳಿದಿರೋ ಏನೋ ಗೊತ್ತಿಲ್ಲ. ಈಗಲೂ ಕೂಡಾ ನಾನು ಕೇಳಿಕೊಳ್ಳುವುದು ಏನೆಂದರೆ ಹಣವನ್ನು ಕಟ್ಟುವುದಕ್ಕೆ ಜೂನ್ ೩೦ರ ತನಕ ಟೈಮ್ ಕೊಡಿ ಎಂದು ಹೇಳುತ್ತೇನೆ. ಈಗಾಗಲೇ ಮುಕ್ಕಾಲು ಜನ ಕಟ್ಟಿದ್ದಾರೆ, ಇನ್ನು ೨೫ ಪರ್ಸೆಂಟ್ ಬಡವರು ಸಾಲ ಕೊಡಲಿಕ್ಕೆ ಸಾಧ್ಯವಾಗದೇ ನರಳುತ್ತಿದ್ದಾರೆ. ಈಗಲೂ ಯೋಚನೆ ಮಾಡಿ ಜೂನ್ ೩೦ ರವರೆಗಾದರೂ ಅದನ್ನು ಎಕ್ಸ್‌ಟೆಂಡ್ ಮಾಡಿ ಎಂದು ಕಳಕಳಿಯಿಂದ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ತಮಗೆ ಗೊತ್ತಿರುವ ಹಾಗೆ ೩–೪ ವರ್ಷದಿಂದ ಕ್ಷಾಮದ ಪರಿಸ್ಥಿತಿ ಇದೆ. ಆದ್ದರಿಂದ ಈಗಲೂ ಇದರ ಬಗ್ಗೆ ಹೆಚ್ಚಿಗೆ ಗಮನವನ್ನು ಕೊಡಬೇಕು ಎಂದು ನಾನು ಕೇಳಿಕೊಳುತ್ತೇನೆ. ಇನ್ನು ಬೆಳೆಗಳ ಬಗ್ಗೆ ತೆಗೆದುಕೊಂಡರೆ ಸರಿಯಾದ ಬೆಲೆ ಯನ್ನು ಕೊಡುತ್ತಿಲ್ಲ ಎಂದು ನನ್ನ ಸ್ಪಷ್ಟ ಆರೋಪ. ನೆಲಗಡಲೆಕಾಯಿಗೆ ಒಂದು ರೋಗ ಬಂದಿದೆ. ಇದರ ಬಗ್ಗೆ ಸಿಂಪಡಿಸುವುದಕ್ಕೆ ಔಷಧಿಯನ್ನು ಕೊಡಿ ಎಂದು ಹೇಳಿದ್ದೆ, ಈ ವರ್ಷ ಕೂಡಾ ಅದನ್ನು ಕೊಟ್ಟಿಲ್ಲ. ಯಥಾ ಪ್ರಕಾರ ಮಾನ್ಯ ದೇಶಪಾಂಡೆಯವರು ಸಂತೋಷವಾಗಿ ಇಲ್ಲಿ ಹೇಳಿ ಹೋಗುತ್ತಾರೆ. ಆ ರೀತಿ ಹೇಳುತ್ತಾ ಹೋಗುವಾಗ ಮರೆತು ಹೋಗುತ್ತಾರೆ, ಇನ್ನು ಅಧಿಕಾರಿಗಳಂತೂ ಇದರ ಬಗ್ಗೆ ನೋಡುವುದೇ ಇಲ್ಲ. ಅವರ ಡೈರೆಕ್ಟರ್ ಇದರ ಬಗ್ಗೆ ಆರ್ಡರನ್ನು ಮಾಡಿಬಿಟ್ಟಿದ್ದೇನೆ ಎಂದು ಹೇಳಿದರು, ಅವರು ಮಾಡಿದ್ದು ಒಂದೇ ಒಂದು ಎಂದರೆ ರೈತರನ್ನು ಹಾಳು ಮಾಡಿದ್ದು. ಇವರ ಒಂದೇ ಒಂದು ಸ್ಕೀಮ್ ಎಂದರೆ ರೈತರನ್ನು ಹಾಳು ಮಾಡಿದ್ದು. ಸುಮ್ಮನೆ ಫಾಲ್ಸ್ ಸ್ಟಾಟಿಸ್ಟಿಕ್ಸ್ ಕೊಡುತ್ತಾರೆ. ಸುಮ್ಮನೆ ಇಷ್ಟು ಬೆಳೆ ಆಯಿತು, ಅಷ್ಟು ಬೆಳೆ ಆಯಿತು ಎಂದು ಹೇಳಿ ಸಂಬಳಗಳನ್ನು ತೆಗೆದುಕೊಳ್ಳುವುದರಲ್ಲಿ ಅದರಲ್ಲಿ ಮಾತ್ರ ಹಿಂದೆ ಬೀಳುವುದಿಲ್ಲ. ಆದ್ದರಿಂದ ದಯವಿಟ್ಟು ಈಗಲೂ ಕೂಡಾ ಬೆಳೆಗಳಿಗೆ ಬರುವ ರೋಗಗಳು ಏನು ಇವೆ, ಅದರ ಬಗ್ಗೆ ಶ್ರದ್ಧೆ ವಹಿಸಿ ಮಾಡಬೇಕು. ಮತ್ತು ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂದು ಒಂದು ಆಸೆ ಇರಬೇಕು ಮತ್ತು ಅದನ್ನು ಮಾಡಬೇಕು ಎಂದು ತಮ್ಮಲ್ಲಿ ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ಇನ್ನು ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಸ್ಕೀಮ್ ಎಂದು ಹೇಳಿದ್ದಾರೆ. ಇಲ್ಲಿ ''ಬದುಗಳು'' ಎಂದು ಹಾಕುತ್ತಾರೆ. ಇದೇನೂ ಅರ್ಥವೇ ಆಗುವುದಿಲ್ಲ. ಆ ಬದುಗಳು ಒಂದು ವರ್ಷ ಕೂಡಾ ಇರುವುದಿಲ್ಲ. ಇವಕ್ಕೂ ಕೂಡಾ ಕ್ವಾಲಿಟಿ ಕಂಟ್ರೋಲ್ ಬಂದಿದೆ ಎಂದು ಕಾಣುತ್ತದೆ. ದಪ್ಪ ಬದುಗಳನ್ನು ಹಾಕಬೇಡಿ ಎಂದು ಸರ್ಕಾರದವರು ಹೇಳಿಬಿಟ್ಟಿದ್ದಾರಂತೆ. ಅದರಂತೆ ಚಿಕ್ಕಬದುಗಳನ್ನು ಹಾಕಿದ್ದಾರೆ, ಒಂದು ವರ್ಷ ಕೂಡಾ ಇರುವುದಿಲ್ಲ. ನೀವು ಹಾಕಿರುವಂಥ ಬದುಗಳು ಎರಡು ವರ್ಷ ಕಾಲ ಇರುವಂಥದ್ದನ್ನು ತೋರಿಸಿದರೆ ನಿಮಗೆ ನಿಜವಾಗಿಯೂ ಥ್ಯಾಂಕ್ಸ್ ಹೇಳುತ್ತೇನೆ. ರೈತರು ಸರಿಯಾಗಿ ನಡೆದುಕೊಳ್ಳುತ್ತಾರೆ ಎಂದು ನಾನು ಹೇಳುವುದಿಲ್ಲ. ಗಲ್ಲಿ ಪ್ಲಗ್ಸ್ ಎಂದು ಹೇಳುತ್ತಾರೆ, ಅದು ಏನೂ ಇಲ್ಲ. ಅವರು ಹಾಕುವ ಪ್ಲಗ್ ಎಂದರೆ ಬಜೆಟ್ ಪ್ಲಗ್ ಇಲ್ಲಿ ಖರ್ಚಾಗಬೇಕು ಅಷ್ಟೆ. ೩–೪ ಕಲ್ಲುಗಳನ್ನು ಹಾಕಿಬಿಟ್ಟು ಇಲ್ಲಿ ಗಲ್ಲಿಗಳಲ್ಲಿ ಪ್ಲಗ್ ಹಾಕುತ್ತೇವೆ ಎಂದು ಹೇಳಿ ಎರಡು ಸಾವಿರ ಮೂರು ಸಾವಿರ ಬಿಲ್ ಮಾಡುತ್ತಾರೆ, ಇದು ದಯವಿಟ್ಟು ತಪ್ಪಬೇಕು. ರೈತರುಗಳಿಗೆ ಪರ್ಮನೆಂಟಾಗಿ ಸಿಕ್ಕುವಂತಹ ಸಲ್ಯೂಷನ್ ಸಿಕ್ಕಬೇಕು. ಡ್ರೈ ಲ್ಯಾಂಡ್ ಡೆವಲಪ್‌ಮೆಂಟ್ ಬಗ್ಗೆ ಹೇಳುವುದಾದರೆ, ಇದು ಕೋಲಾರ, ಬೆಂಗಳೂರು ಇತ್ಯಾದಿ ಜಿಲ್ಲೆಗಳಿಗೆ ಅನುಕೂಲವಾದ ಯೋಜನೆ. ನಿಜವಾಗಿಯೂ ಇದು ಉಪಯೋಗ ಆಗುತ್ತಿಲ್ಲ. ಪೇಪರ್‌ನಲ್ಲಿ ಇದೆ, ದಯವಿಟ್ಟು ಹೋಗಿ ನೋಡಿ. ಬರೇ ಸ್ಟ್ಯಾಟಿಸ್ಟಿಕ್ಸ್‌ಗಳನ್ನು ನಂಬುವುದು ಬೇಡ. ಏಕೆಂದರೆ, ಸ್ಟ್ಯಾಟಿಸ್ಟಿಕ್ಸ್ ಕೊಡುವುದರಲ್ಲಿ ಅಧಿಕಾರಿಗಳು ಬಹು ನಿಪುಣರು. ಆದುದರಿಂದ ಶ್ರದ್ಧೆ ವಹಿಸಿ ನೋಡಿ ಎಲ್ಲಾದರೂ ಲೂಪ್ ಹೋಲ್ಸ್ ಇದ್ದರೆ ಅದನ್ನು ಸರಿ ಮಾಡಿ. ಇದರಿಂದ ರೈತರಿಗೆ ನಿಜವಾಗಿಯೂ ಅನುಕೂಲವಾಗುತ್ತದೆ ಎಂದು

ಹೇಳುತ್ತೇನೆ. ಸ್ಟೈಫಂಡರಿ ಗ್ರಾಜುಯೇಟ್ಸ್‌ಗಳು ಒಂದು ಅರ್ಜಿಯನ್ನು ಕೊಟ್ಟಿದ್ದಾರೆ. ಸುಮಾರು ೧೦೫೦ ಜನಕ್ಕೆ ಅಗ್ರಿಕಲ್ಚರಲ್ ಟ್ರೈನಿಂಗ್ ಕೊಟ್ಟಿದ್ದಾರೆ. ಇವರುಗಳಿಗೆ ಮೊದಲನೆ ವರ್ಷ, ೨೫೦ ರೂಪಾಯಿ ಎರಡನೇ ವರ್ಷ ೫೦೦ ರೂಪಾಯಿ ಕೊಡುತ್ತಾರೆ. ಮೊದಲು ೫೫೦ ರೂಪಾಯಿ ಕೊಡುತ್ತಿದ್ದರು, ಈಗ ಬೇಸಿಕ್ ವೇಜ್‌ಗಿಂತ ಕಡಿಮೆ ಕೊಟ್ಟು ೫೦೦ ರೂಪಾಯಿ ಕೊಡುತ್ತಿದ್ದಾರೆ. ಸ್ಟೈಫಂಡರಿ ಪದವೀಧರರಲ್ಲಿ ಹೆಚ್ಚು ಕಡಿಮೆ ವಿವಾಹಸ್ಥರು ಬಹಳ ಜನ ಇರುತ್ತಾರೆ. ಅವರುಗಳಿಗೆ ೨೫೦ ರೂಪಾಯಿ ಕೊಟ್ಟರೆ ಜೀವನವನ್ನು ನಡೆಸಲು ಕಷ್ಟವಾಗುತ್ತದೆ. ಇದನ್ನು ಸ್ವಲ್ಪ ರಿವೈಸ್ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮಾನ್ಯ ದೇಶಪಾಂಡೆಯವರಿಗೆ ರೈತರ ಬಗ್ಗೆ ಕಾಳಜಿ ಇದೆ, ಅವರು ಶ್ರದ್ಧೆ ವಹಿಸಿ ರೈತರಿಗೆ ಸಹಾಯ ಮಾಡಬೇಕು. ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನಲ್ಲಿ ೨ ಅಥವಾ ೩ ಜೀಪ್‌ಗಳನ್ನು ಕೊಟ್ಟಿದ್ದಾರೆ, ಯಾತಕ್ಕೆ ಅಂದರೆ ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಓಡಾಡಲು ಮಾತ್ರ. ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನಲ್ಲಿ ಮೀಟಿಂಗ್‌ಗಳ ಒಂದು ದೊಡ್ಡ ರೋಗ. ೧೫ ದಿವಸಗಳಿಗೆ ಒಮ್ಮೆ ಮೀಟಿಂಗ್ ಮಾಡುತ್ತಾರೆ, ಕೆಲಸ ಕಾರ್ಯಗಳು ಇಲ್ಲದ ಸುಮ್ಮನೆ ಆ ಮೀಟಿಂಗ್, ಈ ಮೀಟಿಂಗ್ ಎಂದು ಹೇಳುತ್ತಾರೆ. ಈ ಡಿಪಾರ್ಟ್‌ಮೆಂಟ್‌ನಲ್ಲಿ ಡೈರೆಕ್ಟರ್ ಎಲ್ಲಿ ಅಸಿಸ್ಟೆಂಟ್ ಡೈರೆಕ್ಟರ್ ಎಲ್ಲಿ ಎಂದರೆ ಅವರು ಮೀಟಿಂಗ್‌ಗೆ ಹೋಗಿದ್ದಾರೆ ಎಂದು ಹೇಳುತ್ತಾರೆ. ನೀವು ಅನಾವಶ್ಯಕವಾದ ಮೀಟಿಂಗ್‌ಗಳನ್ನು ತಪ್ಪಿಸಿ. ಗಿಡಗಳ ಡೆಮಾನ್‌ಸ್ಟ್ರೇಷನ್‌ಗೆ ಒಂದು ಮೀಟಿಂಗ್ ಮಲಗಿಕೊಳ್ಳುವುದಕ್ಕೂ ಒಂದು ಮೀಟಿಂಗ್. ಇತ್ಯಾದಿ ಸುಮ್ಮನೆ ಮೀಟಿಂಗ್ ಮಾಡುವುದನ್ನು ತಪ್ಪಿಸಿ. ಅವಶ್ಯಕವಾದದ್ದಕ್ಕೆ ಮಾತ್ರ ಮೀಟಿಂಗ್ ಮಾಡಲಿ. ಅವರು ಐವರಿ ಟವರ್‌ನಲ್ಲಿ ಅಂದರೆ ಇಲ್ಲೇ ಇರುವುದನ್ನು ಬಿಟ್ಟು ಫೀಲ್ಡ್‌ನಲ್ಲಿಯೂ ಇರುವ ವ್ಯವಸ್ಥೆ ಮಾಡಿ. ಮಾನ್ಯ ಸಚಿವರು ಇದರ ಬಗ್ಗೆ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಹಾರ್ಟಿಕಲ್ಚರ್ ಬಗ್ಗೆ ಹೇಳುವುದಾದರೆ ಮಾನ್ಯ ಲಕ್ಷ್ಮೀ ನರಸಿಂಹಯ್ಯನವರು ಈಗ ಬಂದಿದ್ದಾರೆ. ನನಗೆ ಇರುವಷ್ಟು ಕಾಮನ್ ಸೆನ್ಸ್ ಅವರಿಗೂ ಇದೆ. ಅವರು ಹಾರ್ಟಿಕಲ್ಚರ್ ಬಗ್ಗೆ ಏನು ಗಮನ ಕೊಡುತ್ತಾರೋ ಗೊತ್ತಿಲ್ಲ. ಶ್ರೀ ವೈ. ಕೆ. ರಾಮಯ್ಯನವರು ಹಿಂದೆ ಸಚಿವರಾಗಿದ್ದಾಗ ಇದರ ಬಗ್ಗೆ ದೀರ್ಘವಾಗಿ ಕೆಲಸ ಮಾಡಿದ್ದರು. ಅವರು ಸ್ವಾಭಾವಿಕವಾಗಿ ಯಾವ ಡಿಪಾರ್ಟ್‌ಮೆಂಟ್‌ನಲ್ಲೇ ಇರಲಿ ಅವರು ಕೆಲಸಗಾರರನ್ನು ಹಾಗೂ ಕೆಲಸವನ್ನು ಕಂಟ್ರೋಲ್ ಮಾಡುವ ವ್ಯಕ್ತಿ. ಇವರು ಈಗ ಬಂದಿದ್ದಾರೆ, ಇವರು ಏನು ಮಾಡುತ್ತಾರೋ ಗೊತ್ತಿಲ್ಲ, ಯಾಕೆಂದರೆ ಇವರು ಇನ್ನೂ ಈ ಇಲಾಖೆಯನ್ನು ಅರ್ಥ ಮಾಡಿಕೊಂಡಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಡಿಸೆಡೆಂಟ್ಸ್ ಸಪೋರ್ಟರ್ಸ್ ಅಥವಾ ಸರ್ಕಾರದ ಸಪೋರ್ಟರ್ರೋ ?

ಶ್ರೀ ಆರ್. ವೆಂಕಟರಾಮಯ್ಯ.—ನಾವು ಯಾರ ಸಪೋರ್ಟರ್ರೂ ಅಲ್ಲ. ಶ್ರೀ ವೈ. ಕೆ. ರಾಮಯ್ಯ ಅವರ ವ್ಯಕ್ತಿತ್ವದ ಬಗ್ಗೆ, ಆಡಳಿತದ ಬಗ್ಗೆ ನಿಜವಾಗಿಯೂ ಅಪ್ರಿಷಿಯೇಟ್ ಮಾಡುತ್ತೇನೆ. ಅವರು ಎಲ್ಲೇ ಇರಲಿ, ಅಧಿಕಾರಿಗಳಿಂದ ಕೆಲಸಗಳನ್ನು ಮಾಡಿಸಿಕೊಳ್ಳುವುದರಲ್ಲಿ ನಿಪುಣರು, ಇದರ ಬಗ್ಗೆ ಸ್ಪಷ್ಟವಾಗಿ ಒಪ್ಪಿಕೊಳ್ಳುತ್ತೇನೆ. ಕೋಕನಟ್ ಸೀಡ್ ಲಿಂಗ್ಸ್ ಬಗ್ಗೆ, ಸ್ವಲ್ಪ ತಪ್ಪು ಆಯಿತು, ತಪ್ಪನ್ನು ತಪ್ಪು ಎನ್ನುವುದರಲ್ಲಿ ಮಿಸ್ಟೇಕ್ ಇಲ್ಲ ಸೀಡ್ ಲಿಂಗ್ಸ್ ಅನ್ನು ೮ ರೂಪಾಯಿಗೆ ಕೊಡುತ್ತಿದ್ದಾರೆ, ಅದನ್ನು ೫ ರೂಪಾಯಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದನ್ನು ರೈತರು ಹೆಚ್ಚಾಗಿ ಉಪಯೋಗಿಸುತ್ತಿದ್ದಾರೆ. ಮ್ಯಾಂಗೋ ಸಾಪ್ಲಿಂಗ್ಸ್ ಅನ್ನು (ಮ್ಯಾಂಗೋ ಸಾಫ್ಟ್ ಡ್ರಿಂಕ್ಸ್) ೧೨ ರೂಪಾಯಿ ಕೊಟ್ಟು ತೆಗೆದುಕೊಳ್ಳುತ್ತಾರೆ. ಲೋಕಲ್ ಮಾರ್ಕಟ್ಟೆಯಲ್ಲಿ ಇದು ೬ ರೂಪಾಯಿಗೆ ಸಿಗುತ್ತದೆ. ಇದರಲ್ಲಿ ಲಕ್ಷಾಂತರ ರೂಪಾಯಿ ತೆಗೆದುಕೊಳ್ಳುತ್ತಾರೆ, ಡೈರೆಕ್ಟರ್ ೧೦ ಲಕ್ಷ ರೂಪಾಯಿ ಲಂಚ ತೆಗೆದುಕೊಂಡು ಪ್ರೈವೇಟ್ ಫರ್ಮ್‌ನವರಿಗೆ ಆರ್ಡರ್ ಕೊಟ್ಟಿದಾರೆ. ಮ್ಯಾಂಗೋ ಸಾಫ್ಟ್ ಡ್ರಿಂಕ್ಸ್‌ನಲ್ಲಿ ಹೋದ ವರ್ಷದ್ದು ಈ ವರ್ಷ ಕಂಟಿನ್ಯೂ ಆಗುತ್ತಿದೆ. ಇವೊತ್ತು ೧೮೦ ಫಾರ್ಮ್ಸ್‌ಗಳು ಇದೆ, ಇದರಲ್ಲಿ ಏನು ಮಾಡುತ್ತಾರೋ ಗೊತ್ತಿಲ್ಲ. ಸುಮ್ಮನೆ ನೀವು ಫಾರಮ್ಸ್‌ಗಳನ್ನು ಕೊಟ್ಟರೆ, ಗೊಬ್ಬರ ಇತ್ಯಾದಿಗಳನ್ನು ಕೊಟ್ಟು ಮ್ಯಾಂಗೋ ಸ್ಯಾಪ್ಲಿಂಗ್ಸ್ ಅನ್ನು ಬೆಳೆಸುವುದಕ್ಕೆ ಏನು ಖಾಯಿಲೆ ?

೩—೩೦ ಪಿ. ಎಂ.

ಸ್ಥಳೀಯ ಮಾರುಕಟ್ಟೆಯಲ್ಲಿ ಮ್ಯಾಂಗೋ ಸ್ಯಾಪ್ಲಿಂಗ್ಸ್ ಬೆಲೆ ೬ ರೂಪಾಯಿಗಳಿದ್ದರೂ ಸಹ ೧೨ ರೂಪಾಯಿಗಳ ಪ್ರಕಾರ ಕೊಳ್ಳಲು ಈ ಇಲಾಖೆಯ ಅಧಿಕಾರಿಯೊಬ್ಬರು ಹೊರಟಿದ್ದಾರೆ. ಇದು ಇನ್ನೂ ಬೆಳೆಯುತ್ತಿರುವ ಚಿಕ್ಕ ಇಲಾಖೆಯಾಗಿದೆ. ಅಂಥಾದ್ದರಲ್ಲಿ ಹೆಚ್ಚಿನ ಬೆಲೆ ಕೊಟ್ಟು ಸುಮಾರು ಹತ್ತು ಲಕ್ಷ ರೂಪಾಯಿಗಳಷ್ಟು ಹಣದಲ್ಲಿ ಮ್ಯಾಂಗೋ ಸ್ಯಾಪ್ಲಿಂಗ್ಸ್ ಕೊಳ್ಳಲು ಆರ್ಡರ್ ಕೊಟ್ಟಿದ್ದಾರೆ. ಇಂತಹ ಅನ್ಯಾಯ ಈ ಇಲಾಖೆಯಲ್ಲಿ ಆಗದಂತೆ ನೋಡಿಕೊಳ್ಳಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಹಣ್ಣು ಮತ್ತು ತರಕಾರಿಯನ್ನು ರೈತರಿಂದ ಕೊಂಡು ಮಾರಾಟ ಮಾಡುವಂತಹ ಒಂದು ಸಹಕಾರ ಸಂಘ ಇದೆ. ಈ ಸಂಘದವರು ಮೊದಲು ಒಳ್ಳೆಯ ಕೆಲಸ ಮಾಡುತ್ತಿದ್ದರು. ಆದರೆ ಈಗ ಅವರಿಗೆ ಗರ್ವ ಬಂದಿದೆ. ಈ ಸೊಸೈಟಿಯನ್ನು ಹತ್ತು ಗಂಟೆಗೆ ಮುಚ್ಚುತ್ತಾರೆ. ಇದು ಮಾನ್ಯ ಬಚ್ಚೇಗೌಡರಿಗೂ ಗೊತ್ತು. ಆಗ ಅಲ್ಲಿರುವಂತಹ ರೈತರನ್ನು ಹೊರಗಡೆಗೆ ಕಳಿಸುತ್ತಾರೆ. ರೈತರು ತಾವು ತಂದಂತಹ ಹಣ್ಣು ಮತ್ತು ತರಕಾರಿ ಹತ್ತಿರ ಮಲಗಲು ಸಹ ಅವಕಾಶ ಕೊಡುವುದಿಲ್ಲ. ಅಲ್ಲಿರುವಂತಹ ಯಾರ್ಡಿನಲ್ಲಿ ರೈತರಿಗೆ ಯಾವ ಒಂದು ಸಾಮಾನ್ಯ ಅನುಕೂಲವನ್ನೂ ಕಲ್ಪಿಸಿಕೊಟ್ಟಿಲ್ಲ. ಇದರಿಂದ ಎಂಟು ಗಂಟೆಗಳ ಕಾಲ ಅವರು ಬಿಸಿಲಿನಲ್ಲಿಯೇ ಇರಬೇಕಾದ ಪರಿಸ್ಥಿತಿ ಬಂದಿದೆ. ಈ ನಮ್ಮ ರೈತರಿಂದ ಆ ಸೊಸೈಟಿಗೆ ಒಳ್ಳೆಯ ಲಾಭವಿದ್ದರೂ ಸಹ ರೈತರಿಗೆ ಯಾವ ಅನುಕೂಲವನ್ನು ಕಲ್ಪಿಸಿಕೊಡದೆ ಬಹಳ ಕೀಳು ಮನೋಭಾವದಿಂದ ನೋಡುತ್ತಾರೆ. ಇದು ತಪ್ಪಬೇಕು. ಅವರನ್ನು ಒಳ್ಳೆಯ ರೀತಿಯಿಂದ ನೋಡಿಕೊಳ್ಳಬೇಕು ಮತ್ತು ಎಲ್ಲ ಅನುಕೂಲಗಳನ್ನು ಒದಗಿಸಿಕೊಡಬೇಕಲ್ಲದೆ ಈ ಸೊಸೈಟಿಯ ವ್ಯಾಪ್ತಿಯನ್ನು ಬೇರೆ ಕಡೆಗೂ ವಿಸ್ತರಣೆ ಮಾಡಬೇಕು. ನಮ್ಮ ಕೋಲಾರದಲ್ಲಿ ಕೋಲ್ಡ್ ಸ್ಟೋರೇಜ್ ಕಟ್ಟುವ ಕೆಲಸ ೧೯೭೭ರಲ್ಲಿ ಪ್ರಾರಂಭವಾಯಿತು. ಆದರೆ ಆ ಕೆಲಸ ಇನ್ನೂ ಮುಗಿಯಲಿಲ್ಲ. ಕಟ್ಟಡವನ್ನು ಅರಮನೆಯ ತರಹ ಕಟ್ಟಿದ್ದೇ ಕಟ್ಟಿದ್ದು. ಆದರೆ ಆ ಕಟ್ಟಡಕ್ಕೆ ಇನ್ನೂ ಕೋಲ್ಡ್ ಬರಲಿಲ್ಲ? ಇಲ್ಲಿಯವರೆಗೆ ಆ ಕಟ್ಟಡಕ್ಕೆ ೨೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆದರೆ ಕೆಲಸ ಮಾತ್ರ ಮುಗಿಯಲಿಲ್ಲ. ಶ್ರೀ ಸೋಮಶೇಖರ್ ಅವರ ಕಾಲದಲ್ಲಿಯೂ ಇದು ಮುಗಿಯಲಿಲ್ಲ. ಶ್ರೀ ವೈ. ಕೆ. ರಾಮಯ್ಯನವರ ಕಾಲದಲ್ಲಿಯೂ ಸಹ ಇದು ಮುಗಿಯಲಿಲ್ಲ. ಈಗ ಮಾನ್ಯ ಲಕ್ಷ್ಮೀನರಸಿಂಹಯ್ಯನವರು ಈ ಖಾತೆಯನ್ನು ವಹಿಸಿಕೊಂಡಿದ್ದಾರೆ. ಇದರ ವಿಚಾರ ಅವರಿಗೆ ಗೊತ್ತಿದೆಯೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ಇದರ ಕೆಲಸ ಮುಗಿದಿದ್ದರೆ ರೈತರು ತಾವು ಬೆಳೆದ ಆಲೂಗೆಡ್ಡೆ ಮತ್ತು ಟೊಮೆಟೋ ಹಣ್ಣುಗಳನ್ನು ಇಲ್ಲಿಟ್ಟು ಒಳ್ಳೆಯ ಬೆಲೆ ಬಂದಾಗ ತೆಗೆದುಕೊಂಡು ಹೋಗಿ ಮಾರಾಟ ಮಾಡುತ್ತಿದ್ದರು. ಆದರೆ ಕೆಲಸ ಮಾತ್ರ ಮುಗಿದಿಲ್ಲ. ಮಾನ್ಯ ಲಕ್ಷ್ಮೀನರಸಿಂಹಯ್ಯನವರ ಕಾಲದಲ್ಲಿಯಾದರೂ ಇದು ಪ್ರಾರಂಭವಾದರೆ ಅವರಿಗೆ ಹೂವಿನ ಹಾರ ಹಾಕಬಹುದು. ಇಲ್ಲದಿದ್ದರೆ ಇಲ್ಲಿಯವರೆಗೆ ಖರ್ಚು ಮಾಡಿರುವ ೨೦ ಲಕ್ಷ ರೂಪಾಯಿಗಳ ನಷ್ಟಕ್ಕೆ ಯಾರು ಹೊಣೆ ಎಂದು ಕೇಳಬೇಕಾಗುತ್ತದೆ? ಇದು ಯಾರಪ್ಪನ ಮನೆ ದುಡ್ಡು? ರೈತರಿಗೆ ಅನುಕೂಲವಾಗುವ ಇದರ ಕೆಲಸವನ್ನು ಮೊದಲು ಮೊದಲು ಕೆ.ಎಂ.ಎಫ್.ನವರಿಗೆ ವಹಿಸಿದರು. ಆದರ ಅಧಿಕಾರಿ ಒಬ್ಬರು ನಾಲ್ಕೈದು ಲಕ್ಷ ರೂಪಾಯಿಗಳನ್ನು ತಿಂದುಹಾಕಿದರು, ಈಗ ಅವರು ನಿವೃತ್ತರಾಗಿರುವುದರಿಂದ ಈ ಬಗ್ಗೆ ಏನೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಅವರು ನಿವೃತ್ತರಾಗಿದ್ದರೂ ಸಹ ಹಣ ತಿಂದು ಹಾಕಿದ್ದರೆ ವಸೂಲಿ ಮಾಡಬಹುದು.

ಶ್ರೀ ಆರ್. ವೆಂಕಟರಾಮಯ್ಯ.—ವಸೂಲಿ ಮಾಡಿ ಕಟ್ಟಡದ ಕೆಲಸವನ್ನು ಜಾಗ್ರತೆ ಮುಗಿಸಿ. ಆದರೆ ತಾವು ಕೇವಲ ಭರವಸೆ ಕೊಡುವುದು ಬೇಡ. ಈ ಇಲಾಖೆಗೆ ೩ ಜನ ಮಂತ್ರಿಗಳು ಬಂದು ಹೋದರು. ಆದರೆ ಈ ಕೆಲಸ ಮಾತ್ರ ಮುಗಿಯಲಿಲ್ಲ. ಮಾನ್ಯ ಸೋಮಶೇಖರ್ ಅವರಿಗೆ ನಾನು ಹೇಳಿದೆ, ಏನೆಂದರೆ, ನೀವು ಇನ್ನೂ ಚಿಕ್ಕ ವಯಸ್ಸಿನವರು, ಈ ಕೆಲಸವನ್ನು ಜಾಗ್ರತೆ ಮುಗಿಸಿ ಎಂದು. ಆದರೆ ಅವರು ಈ ಇಲಾಖೆ ಬಿಟ್ಟು ಈಗ ವಿದ್ಯಾ ಇಲಾಖೆಗೆ ಹೋಗಿದ್ದಾರೆ. ಈಗ ನಮ್ಮ ಕಾಲದಲ್ಲಿಯಾದರೂ ಇದನ್ನು ಮಾಡಿಕೊಡಬೇಕು. ಈಗ ನಮ್ಮ ಜಿಲ್ಲೆಯಲ್ಲಿ ಮತ್ತು ಬೆಂಗಳೂರು ಜಿಲ್ಲೆಯಲ್ಲಿ

ಹೆಚ್ಚು ತರಕಾರಿ ಮತ್ತು ಆಲೂಗೆಡ್ಡೆಯನ್ನು ರೈತರು ಬೆಳೆಯುತ್ತಿದ್ದಾರೆ. ಆದ್ದರಿಂದ ಇದನ್ನೆಲ್ಲಾ ಕೊಳ್ಳಲು ಲಾಲ್‌ಬಾಗ್‌ನಲ್ಲಿರುವ ಸಹಕಾರ ಸಂಘದ ವ್ಯಾಪ್ತಿಯನ್ನು ವಿಸ್ತರಣೆ ಮಾಡಬೇಕು. ರೈತರು ಬೆಳೆದ ಆಲೂಗೆಡ್ಡೆಗೆ ಸರ್ಕಾರದವರು ಸಪೋರ್ಟ್ ಪ್ರೈಸ್ ಕೊಟ್ಟು ಕೊಳ್ಳುತ್ತೇವೆಂದು ಪ್ರಕಟಣೆ ಹೊರಡಿಸಿದ್ದರೆ ಮಾರುಕಟ್ಟೆಯಲ್ಲಿ ಒಳ್ಳೆಯ ಬೆಲೆ ಬರುತ್ತದೆ. ಆದರೆ ಇದರ ಬಗ್ಗೆ ಸರ್ಕಾರದವರು ಕ್ರಮ ತೆಗೆದುಕೊಳ್ಳದ ಕಾರಣ ರೈತರಿಗೆ ಸುಮಾರು ೨೫ ಕೋಟಿ ರೂಪಾಯಿಗಳಷ್ಟು ನಷ್ಟವಾಯಿತು. ನಮ್ಮಲ್ಲಿ ರೈತರು ಟಮೋಟೋವನ್ನು ಹೆಚ್ಚು ಬೆಳೆಯುತ್ತಾರೆ. ಮಾರುಕಟ್ಟೆಯಲ್ಲಿ ಕೆಲವು ಕೆ.ಜಿ.ಗೆ ೫೦ ಪೈಸೆ ಪ್ರಕಾರ ಮಾರಾಟವಾದರೆ ಮತ್ತೆ ಕೆಲವು ಸಲ ಕೆ.ಜಿ.ಗೆ ೫ ರೂಪಾಯಿಗಳ ಪ್ರಕಾರ ಮಾರಾಟ ವಾಗುತ್ತದೆ. ಆದರೂ ರೈತರಿಗೆ ನಷ್ಟವಾಗುತ್ತಿದೆ. ಈ ನಷ್ಟವನ್ನು ತಪ್ಪಿಸಲು ಲಾಲ್‌ಬಾಗ್‌ನ ಸೊಸೈಟಿಯವರು ಕೆ.ಜಿ.ಗೆ ಎರಡು ರೂಪಾಯಿಗಳ ಪ್ರಕಾರ ಕೊಂಡು ದೆಹಲಿ ಮತ್ತು ಕಲ್ಕತ್ತಾ ನಗರಗಳಿಗೆ ಕಳುಹಿಸಬಹುದು. ಅಲ್ಲಿ ಕೆ.ಜಿ.ಗೆ ಹತ್ತು ರೂಪಾಯಿಗಳವರೆಗೆ ಬೆಲೆ ಇರುವುದರಿಂದ ಒಂದು ಕೆ.ಜಿ.ಗೆ ೮ ರೂಪಾಯಿಗಳಂತೆ ಲಾಭ ಮಾಡಬಹುದು. ಸರ್ಕಾರಕ್ಕೆ ಒಂದು ಲಕ್ಷ ರೂಪಾಯಿಗಳಷ್ಟು ಹಣ ನಷ್ಟವಾದರೂ ಸರಿಯೇ, ಟಮೋಟೋವನ್ನು ಬೆಂಬಲ ಬೆಲೆಗೆ ಕೊಳ್ಳುತ್ತೇವೆಂದು ಪತ್ರಿಕೆಗಳಲ್ಲಿ ಜಾಹೀರಾತು ಕೊಟ್ಟರೆ ಮಾರುಕಟ್ಟೆಯಲ್ಲಿ ಇದಕ್ಕೆ ಒಳ್ಳೆಯ ಬೆಲೆ ಬರುತ್ತದೆ. ಆದರೆ ಮಾನ್ಯ ಮಂತ್ರಿಗಳು ಇಂತಹ ಕೆಲಸ ಮಾಡುವುದಿಲ್ಲ. ಇವರಿಗೆ ರೈತರ ಬಗ್ಗೆ ಆಸಕ್ತಿಯೇ ಇಲ್ಲ. ಕೇವಲ ಮಜಾ ಮಾಡಿಕೊಂಡಿರುತ್ತಾರೆ. ಇಲ್ಲಿ ಕೆಲಸ ಮಾಡುವ ಡೈರೆಕ್ಟರ್‌ಗಳು ಸಹ ಹೇಗೋ ತಿಂಗಳ ೩೦ ದಿವಸಗಳನ್ನು ತಳ್ಳಿ ತಮ್ಮ ಸಂಬಳವನ್ನು ತೆಗೆದುಕೊಳ್ಳುತ್ತಾರೆಯೇ ಹೊರತು ರೈತರಿಗೆ ಸಹಾಯ ಮಾಡಬೇಕೆಂಬ ಪ್ರೈಮರಿ ಡ್ಯೂಟಿಯನ್ನೇ ಅವರು ಮರೆತುಬಿಟ್ಟಿದ್ದಾರೆ. ಇವರಿಗೇನಾದರೂ ಜವಾಬ್ದಾರಿ ಎಂಬುದು ಇದೆಯೇ? ಅದಕ್ಕಾಗಿಯೇ ಮಾನ್ಯ ಮುಖ್ಯಮಂತ್ರಿಗಳು ಈ ಮಹನೀಯರುಗಳು ಯಾವಾಗಲೂ ಬ್ರಿಗೇಡ್ ರೋಡ್‌ನಲ್ಲಿಯೇ ಇರುತ್ತಾರೆ ಎಂದು ಹೇಳಿದ್ದು.

ಶ್ರೀ ಯು. ಭೂಪತಿ.—ಅವರು ಹೇಳಿದ್ದು ಮಂತ್ರಿಗಳಿಗಲ್ಲ, ಎಂ.ಎಲ್.ಎ.ಗಳಿಗೆ ಅವರು ಹೇಳಿದ್ದು.

ಶ್ರೀ ಆರ್. ವೆಂಕಟರಾಮಯ್ಯ.—ಅವರು ಯಾರಿಗೇ ಹೇಳಲಿ, ಜವಾಬ್ದಾರಿ ಸ್ಥಾನದಲ್ಲಿರುವವರಿಗೆ ರೈತರ ಬಗ್ಗೆ ಕಾಳಜಿ ಇರಬೇಕಾಗುತ್ತದೆ. ಅಲ್ಲಿ ಬೆಳೆ ಬೆಳೆಯುವುದನ್ನು ಕೊಂಡುಕೊಳ್ಳಬೇಕು, ಕೊಂಡುಕೊಂಡು ಮಾರ್ಕೆಟ್ ಸ್ಟಡಿ ಮಾಡಬೇಕು. ಮಾರ್ಕೆಟ್‌ನಲ್ಲಿ ಜಾಸ್ತಿ ಇದ್ದರೆ ಎಕ್ಸ್‌ಪೋರ್ಟ್ ಮಾಡಬೇಕು. ನಾನು ಡೈರೆಕ್ಟರ್, ನಾನು ಮಂತ್ರಿ ಅಂದರೆ ಪ್ರಯೋಜನವಿಲ್ಲ, ಸ್ವಲ್ಪ ಕಮಿಟ್‌ಮೆಂಟ್ ಇರಬೇಕು. ದಯವಿಟ್ಟು ಇದನ್ನು ಅವರು ಮಾಡಬೇಕು ಎಂದು ಪ್ರಾರ್ಥಿಸಿಕೊಳ್ಳುತ್ತೇನೆ. ಈ ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್ ಏನಿದೆ ಇದು ರೈತರಿಗೆ ಸ್ವಲ್ಪ ಸ್ಪಂದಿಸಬೇಕು, ಅವರಿಗೆ ಸಹಾಯ ಮಾಡಬೇಕು, ಬೆಳೆಗಳಿಗೆ ಸಪೋರ್ಟ್ ಪ್ರೈಸ್ ಕೊಡುತ್ತೇವೆ ಎನ್ನುವ ಧೈರ್ಯ ಬರಬೇಕು. ಹಣ್ಣು ತರಕಾರಿ ಮಾರಾಟ ಮಾಡುವ ಸೊಸೈಟಿ ಏನಿದೆ ಅದು ಲಾಭದಲ್ಲಿದೆ. ಸರ್ವೀಸ್ ಮೋಟೀವ್ ಇಟ್ಟು ಕೊಂಡು ಮಾಡಿರುವುದು. ಇದರಲ್ಲಿ ಬೇಕಾದಷ್ಟು ಲಾಭ ಇದೆ, ಇದರಿಂದ ೪—೫ ಲಕ್ಷ ಹೋದರೂ ಪರ್ವಾಗಿಲ್ಲ, ಸಪೋರ್ಟ್‌ಪ್ರೈಸ್ ಕೊಡುವುದಕ್ಕೆ ಸಿದ್ಧರಿದ್ದೇವೆ, ಇದನ್ನು ಕೊಂಡು ಬೇರೆ ಕಡೆ ಕಳಿಸುತ್ತೇವೆ ಎಂದು ಹೇಳಿದರೆ ಸಾಕು. ಇದನ್ನು ಕೊಂಡು ಕೊಳ್ಳುವುದು ಅವಶ್ಯಕತೆ ಇದೆ. ಆದುದರಿಂದ ಮಾನ್ಯ ಸಚಿವರು ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಿ ಯೋಜನೆ ಹಾಕಲಿ, ರೈತರಿಗೆ ಸಹಾಯ ಮಾಡಲಿ ಎಂದು ಹೇಳಿ ತಾವು ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಅಧ್ಯಕ್ಷರೆ, ಕೃಷಿ ಮಂತ್ರಿ ತೋಟಗಾರಿಕೆ ಇಲಾಖೆಯ ಬೇಡಿಕೆಗಳನ್ನು ನಮ್ಮ ಮುಂದೆ ಮಂಡಿಸಿದ್ದಾರೆ. ಈ ಬೇಡಿಕೆಗಳಿಗೆ ಈ ಮನೆಯ ಒಪ್ಪಿಗೆ ಯನ್ನು ಕೇಳುತ್ತಾ ಇದ್ದಾರೆ. ಕೃಷಿ ಇಲಾಖೆ ಬಗ್ಗೆ ಈಗಾಗಲೇ ಸುಮಾರು ೪ ಜನ ಭಾಷಣ ಮಾಡಿ ದ್ದಾರೆ. ಈ ಕೃಷಿ ಬಗ್ಗೆ ಭಾಷಣ ಮಾಡುತ್ತಾ ಇರುವಾಗ ಪ್ರತಿಯೊಬ್ಬರೂ ಹೇಳುವುದು ಏನೆಂದರೆ ರೈತ ಈ ದೇಶದ ಬೆನ್ನೆಲುಬು. ಶೇಕಡ ೮೦ ರಷ್ಟು ಜನ ಸಂಖ್ಯೆ ಇರುವ ರೈತರು ನರಳುತ್ತಾ ಇದ್ದಾರೆ ಎಂದು ಪ್ರತಿಯೊಬ್ಬರೂ, ಎಲ್ಲಾ ಪಾರ್ಟಿಯವರೂ ಭಾಷಣ ಮಾಡುತ್ತಾರೆ. ಬೇರೆ ಪಾರ್ಟಿಯವರೂ ಹೊರಗಡೆ ಒಳಗಡೇ ಎಷ್ಟೇ ಭಾಷಣ ಮಾಡಿದರೂ ಅಷ್ಟೆ. ಆದರೆ ನಿಜಾಂಶ ಏನು ? ರೈತ ದೇಶದ ಬೆನ್ನೆಲುಬು ಎಂದು ಹೇಳಿ ಹೇಳಿ ಈಗ ಉಳಿದಿರುವುದು ಬರೀ ಎಲುಬು ಅಷ್ಟೆ. ಬೆನ್ನೆಲುಬು ಹೋಗಿ

ಎಲುಬು ಮಾತ್ರ ಉಳಿದುಕೊಂಡಿದೆ. ಇಂತಹ ಸಂದರ್ಭದಲ್ಲಿ ನಮ್ಮ ಕೃಷಿ ಇಲಾಖೆಯ ಸಚಿವರು ರೈತರಿಗೆ ಬೇಕಾಗತಕ್ಕಂಥ ಕಾರ್ಯಕ್ರಮಗಳ, ಯೋಜನೆಗಳ ಅವಶ್ಯಕತೆಗಳಿಗೆ ಅನುಗುಣವಾಗಿ ಬೇಡಿಕೆಗಳನ್ನು ಇಟ್ಟಿದ್ದೇವೆ ಎಂದು ತಮ್ಮ ವರದಿಯಲ್ಲಿ ಹೇಳಿಕೊಂಡಿದ್ದಾರೆ. ಇದರಲ್ಲಿ ಹಲವಾರು ಅಂಕಿ ಅಂಶಗಳನ್ನೂ ಕೂಡಾ ಕೊಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೆ, ಈ ಕೃಷಿ ಇಲಾಖೆಯ ಕೆಲಸ ಪ್ರಾರಂಭವಾಗುವುದು ಬೀಜದಿಂದ. ಮೂಲ ಭೂತವಾದಂಥ ಹೆಜ್ಜೆ ಅಲ್ಲಿಂದ ಶುರುವಾಗುತ್ತದೆ. ಈ ಬೀಜದಲ್ಲಿ ಎಷ್ಟೊಂದು ಮೋಸ ನಡೆಯುತ್ತದೆ ಅಂದರೆ ಅದನ್ನು ಕಲ್ಪನೆ ಮಾಡಿಕೊಳ್ಳುವುದಕ್ಕೂ ಸಾಧ್ಯವಿಲ್ಲ, ಅಷ್ಟೊಂದು ಮೋಸ ನಡೆಯುತ್ತದೆ ರಾಜ್ಯದಲ್ಲಿ. ನಾನು ಈ ಬಗ್ಗೆ ಕಳೆದ ಬಾರಿ ಹೇಳಿದ್ದೇನೆ. ಸೂರ್ಯಕಾಂತಿ ಬಗ್ಗೆ ಅಂಕಿ ಅಂಶ ಕೊಟ್ಟು ಮಾತನಾಡಿದ್ದೇನೆ. ಬೀಜೋತ್ಪಾದನಾ ಕೇಂದ್ರಗಳಲ್ಲಿ ಹೊಸ ಹೊಸ ಸಂಶೋಧನೆಗಳನ್ನು ಮಾಡಿ ಹೊಸ ಹೊಸ ತಳಿಗಳನ್ನು ಕಂಡುಹಿಡಿಯಬೇಕು. ಸರ್ಕಾರಿ ಸಂಸ್ಥೆಗಳಲ್ಲಿ ಸಂಶೋಧನೆ ಮಾಡಿ ಕಂಡುಹಿಡಿದಿರತಕ್ಕಂಥ ಬೀಜಗಳನ್ನು ರೈತರಿಗೆ ಹಂಚಿ ತನ್ಮೂಲಕ ಹೆಚ್ಚಿನ ಇಳುವರಿ ತೆಗೆಯಬೇಕು ಎಂಬ ಉದ್ದೇಶದಿಂದ ಹೊಸ ಹೊಸ ತಳಿಗಳನ್ನು ತರುತ್ತಾ ಇದ್ದಾರೆ. ಹೀಗೆ ಹೊಸ ಹೊಸ ಬೀಜಗಳು ಬಂದಂತೆಲ್ಲಾ ಮೋಸ ಹೆಚ್ಚುತ್ತಿದೆಯೇ ಹೊರತು ಕಡಿಮೆಯಾಗುತ್ತಾ ಇಲ್ಲ. ಇದಕ್ಕೆ ಕಾರಣವೇನು ? ಇದನ್ನು ತಡೆಯುವುದಕ್ಕೆ ಸರ್ಕಾರಕ್ಕೆ ಆಗುವುದಿಲ್ಲವೇ ? ಇದನ್ನು ತಡೆಯುವುದಕ್ಕೆ ಸರ್ಕಾರದಿಂದ ಆಗುತ್ತದೆ ಎಂದು ನಾನು ಹೇಳುವುದಿಲ್ಲ. ಮಾನ್ಯ ದೇಶಪಾಂಡೆಯವರು ಆಗುತ್ತದೆ ಎಂದು ಹೇಳಿದರೂ ನಾನು ಆಗುವುದಿಲ್ಲ ಎಂದು ಹೇಳುತ್ತೇನೆ. ಏಕೆಂದರೆ, ಕಳಪೆ ಗುಣ ಮಟ್ಟದಲ್ಲಿರತಕ್ಕಂಥ ಬೀಜಗಳನ್ನು ಮಾರ್ಕೆಟ್‌ನಲ್ಲಿ ಮಾರಾಟ ಮಾಡಿ ಮೋಸ ಮಾಡತಕ್ಕಂಥ ಜನರನ್ನು ನಿಯಂತ್ರಣ ಮಾಡತಕ್ಕಂಥ ಕಾಯಿದೆಯಲ್ಲಿ ಏನೂ ದಮ್ಮು ಇಲ್ಲ, ನಾನು ಒಂದು ೫ ಲಕ್ಷ ರೂಪಾಯಿಯ ಯಾವುದೋ ಕಳಪೆ ಗುಣ ಮಟ್ಟದ ಬೀಜಗಳನ್ನು ಮಾರಾಟ ಮಾಡಿದರೆ ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್‌ನವರು ಕೇಸ್ ಹಾಕುತ್ತಾರೆ. ಕೇಸ್ ಹಾಕಿದರೆ ನಗಗೆ ಮ್ಯಾಕ್ಸಿಮಂ ಪೆನಾಲ್ಟಿ ೫೦೦ ರೂಪಾಯಿ ಹಾಕುತ್ತಾರೆ. ೫ ಲಕ್ಷ ರೂಪಾಯಿ ಬೀಜ ಮಾರಾಟ ಮಾಡತಕ್ಕಂಥ ಒಬ್ಬ ದಲ್ಲಾಳಿಗೆ ೫೦೦ ರೂಪಾಯಿ ಮ್ಯಾಕ್ಸಿಮಂ ಪೆನಾಲ್ಟಿ ಕೊಡುವುದು ದೊಡ್ಡ ಪ್ರಶ್ನೆಯಲ್ಲ. ಆದುದರಿಂದ ಈ ಕಾಯಿದೆಗೆ ಕೇಂದ್ರ ಮಟ್ಟದಲ್ಲಿ ತಿದ್ದುಪಡಿ ಬರಬೇಕಾಗಿದೆ. ಇಂತಹ ಕೆಲವು ಕಾಯಿದೆಗಳಿಗೆ ಕೆಲವು ಮಹಾಶಯರು ಸ್ಟೇ ತಂದಿದ್ದಾರೆ. ನಮ್ಮ ಜಿಲ್ಲೆಯ ಮಾನ್ಯ ಎಂ. ಪಿ. ಪ್ರಕಾಶ್‌ರವರು ಮಂತ್ರಿಗಳಾಗಿದ್ದಾಗ, ಸ್ಟೇ ವೆಕೇಟ್ ಮಾಡಿಸುವುದಕ್ಕೆ ಪ್ರಯತ್ನ ಮಾಡಿದರು. ಅಷ್ಟರಲ್ಲಿ ಅವರು ಮಂತ್ರಿಗಿರಿಯನ್ನು ಬಿಟ್ಟರು. ಈಗ ಮಾನ್ಯ ದೇಶಪಾಂಡೆಯವರು ಮಂತ್ರಿಗಳಾಗಿದ್ದಾರೆ. ಸ್ಟೇ ವೆಕೇಟ್ ಮಾಡಿಸುವುದರ ಬಗ್ಗೆ ಏನು ಪ್ರಯತ್ನ ಮಾಡಿದ್ದಾರೋ ಗೊತ್ತಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ.—ಈಗಾಗಲೇ ನಾವು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದೇವೆ. ನಾನು ದೆಹಲಿಗೆ ಹೋದಾಗ ಕೃಷಿ ಸಚಿವರನ್ನು ಕಂಡು ಮಾತನಾಡಿದ್ದೇನೆ. ಎಸೆನ್ಸಿಯಲ್ ಕಮಾಡಿಟೀಸ್ ಆಕ್ಟ್ ಪ್ರಕಾರ ಬೀಜವನ್ನು ಕೂಡ ಎಸೆನ್ಸಿಯಲ್ ಕಮಾಡಿಟೀಸ್ ಎಂದು ಮಾಡಿದ್ದಾರೆ. ಇದರ ಬಗ್ಗೆ ಹೈಕೋರ್ಟಿಗೆ ಹೋಗಿ ಸ್ಟೇ ತಂದಿದ್ದಾರೆ. ಸೀಡ್ ಆಕ್ಟ್ ಪ್ರಕಾರ ಲೈಸೆನ್ಸ್ ಕೊಡತಕ್ಕಂಥ ಅಧಿಕಾರ ಇಲ್ಲ. ಕೇಂದ್ರ ಸರ್ಕಾರದ ಕೃಷಿ ಸಚಿವರಿಗೆ ನಾವು ವಿನಂತಿ ಮಾಡಿದ್ದೇವೆ. ರಾಜ್ಯ ಸರ್ಕಾರಕ್ಕೆ ಕಾಯಿದೆ ಮಾಡಲಿಕ್ಕೆ ಅವಕಾಶ ಕೊಡಿ, ಇಲ್ಲವೇ. ಬೇಗನೆ ಸ್ಟೇ ವೆಕೇಟ್ ಮಾಡಿಸಿ ಯೆಂದು ಕೇಳಿದ್ದೇವೆ, ರಾಜ್ಯ ಸರ್ಕಾರಗಳಿಗೆ ಕಾಯಿದೆ ಮಾಡಲಿಕ್ಕೆ ಅವಕಾಶ ಕೊಟ್ಟರೆ, ಗೊಂದಲದ ಪರಿಸ್ಥಿತಿ ಉಂಟಾಗುತ್ತದೆ. ಆದಷ್ಟು ಬೇಗ ಸ್ಟೇ ವೆಕೇಟ್ ಮಾಡಿಸುವ ಭರವಸೆಯನ್ನು ನಮಗೆ ಕೊಟ್ಟಿದ್ದಾರೆ.

ಶ್ರೀ ಯಂ. ಭೂಪತಿ,—ಮಾನ್ಯ ಅಧ್ಯಕ್ಷರೆ, ನನಗೆ ಈ ವಿಷಯವನ್ನು ಪ್ರಸ್ತಾಪ ಮಾಡುವ ಉದ್ದೇಶ ಇರಲಿಲ್ಲ, ಸುಪ್ರೀಂ ಕೋರ್ಟಿನಲ್ಲಿ ಬೀಜಗಳ ವ್ಯವಹಾರಗಳ ಬಗ್ಗೆ ತಂದಿರತಕ್ಕಂತಹ ತಡೆ ಆಜ್ಞೆಯನ್ನು ಆದಷ್ಟು ಬೇಗ ತೆಗೆಸಲಾರದ ರೀತಿಯಲ್ಲಿ ನೋಡಿಕೊಳ್ಳುವಂತಹ ಶಕ್ತಿಯುತವಾದ ಪ್ರಭಾವಶಾಲಿ ವ್ಯಕ್ತಿಗಳು ಈ ವ್ಯವಹಾರದಲ್ಲಿ ನಿರತರಾಗಿದ್ದಾರೆ. ನಮಗೆ ಗೊತ್ತಿದ್ದಂತೆ ಮಹಾರಾಷ್ಟ್ರದ ಹೈಬ್ರೀಡ್ ಕಂಪನಿ ಮುಖ್ಯವಾದಂತಹದು, ಇದು ದೊಡ್ಡ ಕಂಪನಿ ಸಾಧ್ಯವಾದರೆ ನಮ್ಮ ರಾಜ್ಯ ಸರ್ಕಾರವೇ, ಒಂದು ಕಾಯಿದೆಯನ್ನು ತರುವುದಕ್ಕೆ ಪರಿಶೀಲನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಸರ್ಕಾರವನ್ನು ಕೇಳುತ್ತೇನೆ ಕೆಲವು ಅಧಿಕಾರಿಗಳು ನನಗೆ ಪರಿಚಯವಿದ್ದಾರೆ. ರಾಜ್ಯ ಸರ್ಕಾರವೂ ಈ ನಿಟ್ಟಿನಲ್ಲಿ ಕಾಯಿದೆ ತರುವುದಕ್ಕೆ ಸಾಧ್ಯವಿದೆಯೆಂದು ಕೆಲವರು ಹೇಳಿದರು.

ನಿಜವಾಗಿಯೂ ಎಷ್ಟರ ಮಟ್ಟಿಗೆ ಇದು ಸಾಧ್ಯವೋ ಗೊತ್ತಿಲ್ಲ. ಈ ಸಂದರ್ಭದಲ್ಲಿ ನಾನು ಮಾನ್ಯ ದೇಶಪಾಂಡೆಯವರು ವಿನಂತಿಮಾಡಿಕೊಳ್ಳುವುದು ಇಷ್ಟೆ. ಬೀಜ ಉತ್ಪಾದನೆ ಮಾಡಿದ ಮೇಲೆ ರೈತರಿಗೆ ಬೀಜಗಳನ್ನು ಮುಟ್ಟಿಸುವುದರಲ್ಲಿ ಮೋಸವಾಗುತ್ತಿದೆ. ದಳ್ಳಾಳಿಗಳು, ಉತ್ಪಾದಕರು, ಲೈಸನ್ಸ್ ಇರತಕ್ಕ ಜನರು ಕೋಟಿ ಗಟ್ಟಲೆ ಹಣವನ್ನು ಕೊಳ್ಳೆ ಹೊಡೆಯುತ್ತಾರೆ. ಇದರಿಂದ ರೈತರಿಗೆ ಆಗತಕ್ಕ ತೊಂದರೆಯನ್ನು ಮತ್ತು ಇದಕ್ಕೆ ಇರುವ ಕಾನೂನಿನ ತೊಡಕನ್ನು, ಸಾಧ್ಯವಾದಷ್ಟು ಬೇಗ ನಿವಾರಣೆ ಮಾಡಬೇಕು. ಬೀಜೋತ್ಪಾದನೆ ಮಾಡುವುದಕ್ಕೆ ಹಲವಾರು ಫಾರಂಗಳಲ್ಲಿ ಕಾಡ ಖುಷ್ಕಿ ಭೂಮಿಗೆ ಬೇಕಾಗಿರುವಂತಹ ನೀರಾವರಿ ಭೂಮಿಗೆ ಬೇಕಾಗಿರುವಂತಹ ಎಣ್ಣೆ ಕಾಳಿರಬಹುದು, ದ್ವಿದಳ ಧಾನ್ಯವಿರಬಹುದು, ಕಬ್ಬು ಇರಬಹುದು, ಶೇಂಗಾ ಇರಬಹುದು, ಇವುಗಳನ್ನು ಸಂಶೋಧನೆ ಮಾಡು ವುದಕ್ಕೆ ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ, ಬೀಜ ಉತ್ಪಾದನಾ ಕೇಂದ್ರಗಳಲ್ಲಿ ತಾವು ಏನು ಸೌಕರ್ಯವನ್ನು ಕೊಟ್ಟಿದ್ದೀರಿ, ಅದು ಏನೇನು ಸಾಲದು. And you cannot expect seeds production from such farms. ಈ ಫಾರಂಗಳಲ್ಲಿ ಮಿನಿಮಂ ಫೆಸಿಲಿಟೀಸ್ ಕೂಡ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಇವತ್ತು, ಕೃಷಿ ತಜ್ಞರು ಏನು ಇದ್ದಾರೆ. ಅವರು ಗುಮಾಸ್ತರುಗಳಾಗಿದ್ದಾರೆ. ಕೃಷಿಯನ್ನು ಅವಲಂಬಿಸಿರತಕ್ಕ ಈ ದೇಶದಲ್ಲಿ ಕೃಷಿ ಸಂಶೋಧಕರು ಗುಮಾಸ್ತರುಗಳ ರೀತಿಯಲ್ಲಿ ಬಳಸಿಕೊಳ್ಳುತ್ತಿದ್ದೇವೆ. ಅವರನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳುತ್ತಿಲ್ಲ. ಹೊಸ ಹೊಸ ತಳಿಯ ಹತ್ತಿಗಳು ಬಂದಿವೆ. ವರಲಕ್ಷ್ಮೀ ಹತ್ತಿ ಇದೆ. ಇತ್ತೀಚೆಗೆ ಇಂಗ್ಲೀಷ್ ಹೆಸರುಗಳನ್ನು ಇಟ್ಟಿದ್ದಾರೆ. ಡಿ. ಸಿ. ಹೆಚ್. ೨ ಎಂದು ಇಟ್ಟಿದ್ದಾರೆ. ಬಿಳಿ ಜೋಳ, ಕೆಂಪು ಜೋಳ, ಎನ್ನುವುದು ರೂಢಿಯಲ್ಲಿರತಕ್ಕ ಪದಗಳು. ಸಿ. ಹೆಚ್. ಎಸ್. ೫ ಎಂದು ಇಟ್ಟಿದ್ದಾರೆ. ರೈತರು ಈ ಪದಗಳನ್ನು ಯಾವ ರೀತಿ ಬಳಸಬೇಕು. ಇಂತಹ ಹೆಸರುಗಳಿಗೆ ಬದಲಾಗಿ, ಸರಳವಾದ ರೈತರು ಸುಲಭವಾಗಿ ಬಳಸಬಹುದಾದ ಹೆಸರುಗಳನ್ನು ಇಡಬೇಕು, ಇತಿಹಾಸಕಾರರ, ರಾಷ್ಟ್ರನಾಯಕರ ದೇವರ ಹೆಸರುಗಳನ್ನು ಇಡಿ, ಇಂಗ್ಲೀಷ್ ಪದಗಳು ವಿದ್ಯಾವಂತ ರೈತರ ಮಧ್ಯದಲ್ಲಿಯೇ, ಬಳಕೆಯಾಗುತ್ತಿದೆ. ಅವಿದ್ಯಾವಂತ ರೈತರು ಬೀಜವನ್ನು ಕೊಳ್ಳುವುದಕ್ಕೆ ಹೋದರೆ ನಾಲ್ಕಾರು ಜನರನ್ನು ಕೇಳಬೇಕಾಗುತ್ತದೆ. ಇದನ್ನು ಸರಳೀಕರಣಗೊಳಿಸುವ ಕಡೆ ಸರ್ಕಾರದವರು ಗಮನ ಕೊಡಬೇಕೆಂದು ಹೇಳುತ್ತೇನೆ.

ಕರ್ನಾಟಕ ರಾಜ್ಯದಲ್ಲಿ ಬೀಜ ನಿಗಮ ಕಾರ್ಪೋರೇಷನ್ ಕೆಲಸ ಮಾಡುತ್ತಿದೆ. ನಿಜವಾಗಿ ಹೇಳುವು ದಾದರೆ. ಅದು ಪ್ರತ್ಯೇಕ ಅಸ್ತಿತ್ವವನ್ನು ಹೊಂದಿದ್ದು, ಹಣಕಾಸಿನ ವ್ಯವಸ್ಥೆ ಇದೆ. ಬಳ್ಳಾರಿ ಜಿಲ್ಲೆಯಲ್ಲಿ ನಾನು ಕಂಡಂತ ವಿಚಾರವನ್ನು ಕೃಷಿಗೆ ಸಂಬಂಧಪಟ್ಟ ಹಲವಾರು ಯೋಜನೆಗಳನ್ನು ಜಿಲ್ಲಾಪಂಚಾಯತಿಗೆ ವರ್ಗಾವಣೆ ಮಾಡಿದ್ದಾರೆ. ಕರ್ನಾಟಕ ಬೀಜ ಅಭಿವೃದ್ಧಿ ನಿಗಮದವರು, ಅಲ್ಲಿ ಮೀಟಿಂಗ್‌ಗೆ ಬರುವು ದಿಲ್ಲ. ಮೊನ್ನೆ ತಾನೆ ಒಂದು ಮೀಟಿಂಗ್‌ಗೆ ಬಂದಿದ್ದಾರೆ. ಅದು ಕೂಡ ಡಿಸ್ಟ್ರಿಕ್ ಆಫೀಸರ್ಸ್ ಬಂದಿರ ಲಿಲ್ಲ. ಬಂದಿದ್ದ ಅಧಿಕಾರಿಗಳನ್ನು ಕ್ಲಾರಿಫಿಕೇಷನ್ ಕೇಳಿದರೆ ಯಾವುದಕ್ಕೂ ಗೊತ್ತಿಲ್ಲವೆಂದು ಹೇಳು ತ್ತಾರೆ. ಕರ್ನಾಟಕ ಬೀಜ ನಿಗಮದಲ್ಲಿ ನಡೆಯುವಂತಹ ಹಣಕಾಸಿನ ಭ್ರಷ್ಟಾಚಾರ, ಎಲ್ಲೂ ನಡೆಯುವು ದಕ್ಕೆ ಸಾಧ್ಯವಿಲ್ಲ. ಬೀಜ ಉತ್ಪಾದಕರು, ಬೀಜ ಮಾರಾಟಗಾರರು, ಮುಂಚಿತವಾಗಿ ಬೀಜಗಳನ್ನು ತೆಗೆದುಕೊಂಡು ಅಧಿಕಾರಿಗಳ ಶಾಮಿಲಿನಿಂದ ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರಾಟ ಮಾಡುತ್ತಾರೆ ಇದರ ಬಗ್ಗೆ ವಿಚಾರಣೆ ಮಾಡಬೇಕು. ಇದರ ಬಗ್ಗೆ ಕಟ್ಟುನಿಟ್ಟಿನ ವಿಚಾರಣೆ ಮಾಡದೆ ಹೋದರೆ ರೈತರಿಗೆ ಅನುಕೂಲವಾಗುವುದಿಲ್ಲ. ಈ ವಿಚಾರದಲ್ಲಿ ಮಂತ್ರಿಗಳು, ಸೂಕ್ತ ಗಮನ ಹರಿಸಬೇಕೆಂದು ಹೇಳುತ್ತೇನೆ. ಹೈಬ್ರಿಡ್ ಬೆಳೆಗಳು ಬಂದಮೇಲೆ ಕೀಟ ನಾಶಕಗಳ ಮತ್ತು ಕ್ರಿಮಿ ನಾಶಕಗಳ ಔಷಧಿಗಳ ಬಳಕೆ ಜಾಸ್ತಿ ಯಾಗಿದೆ. ಹೊಸ ಹತ್ತಿ ಬೆಳೆಗೆ ರೋಗ ಬಿದ್ದಾಗ, ಸಂಬಂಧಪಟ್ಟ ವ್ಯವಸಾಯ ಸಹಾಯಕ ಅಧಿಕಾರಿ ಗಳನ್ನು ಹೋಗಿ ಹೇಳಿದಾಗ ಪ್ರಿಸ್‌ಕ್ರಿಪ್‌ಷನ್ ಕೊಡುವುದಿಲ್ಲ, ಆ ಅಧಿಕಾರಿಯು ನೆನಪಿನಲ್ಲಿರತಕ್ಕ ಯಾವುದೋ ಒಂದು ಔಷಧಿಯನ್ನು ಬರೆದುಕೊಡುತ್ತಾರೆ. ಅಥವಾ ನಮ್ಮ ಹೊಲದ ಪಕ್ಕದಲ್ಲಿರುವ ತೋಟದಲ್ಲಿರುವವರೂ, ಇಂತಹ ಔಷಧಿಯನ್ನು ಬಳಸಬೇಕೆಂದು ಹೇಳಿದರೆ ಅಂತಹ ಔಷಧಿಯನ್ನು ತಂದು ಬಳಸಬೇಕಾಗುತ್ತದೆ. ಇವತ್ತು ಬೆಳೆಗೆ ಬೀಳತಕ್ಕ ಕ್ರಿಮಿ ಕೀಟಗಳಿಗೆ ಯಾವ ಮಟ್ಟದಲ್ಲಿ ರೆಸಿಸ್ಟೆನ್ಸ್ ಪವರ್ ಇದೆಯೆಂದರೆ. ಯಾವ ರೂಪದ ಔಷಧಿಯನ್ನು ಹೊಡೆದರೂ ಅವುಗಳು ಸಾಯುವು ದಿಲ್ಲ. ಅಂತಹ ಒಂದು ಕಳಪೆ ಕ್ರಿಮಿನಾಶಕ ಔಷಧಿಗಳನ್ನು ಇವತ್ತು ಸರಬರಾಜು ಮಾಡಲಾಗುತ್ತಿವೆ, ಇದರ ಬಗ್ಗೆ ಯಾವ ರೀತಿಯ ಕ್ರಮ ತೆಗೆದುಕೊಳ್ಳುತ್ತೀರೊ ಗೊತ್ತಿಲ್ಲ. ಬೀಜ ಮಾರಾಟಗಾರರ ಮೇಲೆ. ಉತ್ಪಾದಕರ ಮೇಲೆ. ತೆಗೆದುಕೊಳ್ಳತಕ್ಕ ಕ್ರಮವನ್ನು, ಈ ವಿಚಾರದಲ್ಲಿ ತೆಗೆದುಕೊಂಡರೆ ಏನು ಪ್ರಯೋಜನವಾಗುವುದಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ.—ಬಹಳಷ್ಟು ಜನರನ್ನು ಕೋರ್ಟಿನಲ್ಲಿ ಪ್ರಾಸಿಕ್ಯೂಟ್ ಮಾಡಿದ್ದೇವೆ. ಸೀಡ್ ಆಕ್ಟ್ ಪ್ರಕಾರ ೫೦೦ ರೂಪಾಯಿ ದಂಡ ಹಾಕಿದ್ದೇವೆ.

ಶ್ರೀ ಯು. ಭೂಪತಿ.—ಹಲ್ಲಿಲ್ಲದ ಕಾನೂನು ಆಗಬಾರದು. ಇನ್ನು ರಸಗೊಬ್ಬರಗಳ ವಿಚಾರದಲ್ಲಿ ಹೇಳುವುದಾದರೆ, ರಸಗೊಬ್ಬರಗಳ ಬಳಕೆ ಇವತ್ತು ಜಾಸ್ತಿಯಾಗಿದೆ, ಇವತ್ತು ರಸಗೊಬ್ಬರ ತಯಾರಿಕಾ ಕಂಪನಿಗಳ ಹೆಸರುಗಳು, ಸಾಮಾನ್ಯ ರೈತರಿಗೆ ಗೊತ್ತಿದೆ ಆದರೆ, ಯಾವ ಬೆಳೆಗೆ, ಯಾವ ಮಣ್ಣಿಗೆ, ಯಾವ ಪ್ರಮಾಣದಲ್ಲಿ ರಸಗೊಬ್ಬರಗಳನ್ನು ಬಳಸಬೇಕು ಎನ್ನುವ ವೈಜ್ಞಾನಿಕ ತಿಳುವಳಿಕೆ ಇಲ್ಲ, ವೈಜ್ಞಾನಿಕ ತಿಳುವಳಿಕೆ ಕೊಡುವ ಬಗ್ಗೆ ನಿಮ್ಮ ಇಲಾಖೆ ಕ್ರಮ ತೆಗೆದುಕೊಂಡಿದೆಯೆಂದು ವರದಿಯಲ್ಲಿ ಹೇಳಿದ್ದೀರಿ. ಆದರೆ ನಿಮ್ಮ ಇಲಾಖೆ ಕೊಡುತ್ತಿರುವ ತರಬೇತಿಯಲ್ಲಿ ಶೇಕಡ ೯೦ ಭಾಗ ಬೋಗಸ್ ಇದೆ. ನೀವು ಆಯ್ಕೆ ಮಾಡತಕ್ಕ ರೈತರು ಏನು ಇದ್ದಾರೆ, ಅವರಿಗೆ ಜಮೀನು ಇರುವುದಿಲ್ಲ. ಎರಡು ತಿಂಗಳು ತರಬೇತಿ ಅವಧಿಯಲ್ಲಿ ಮಜಾ ಮಾಡಿಕೊಂಡು ಬರುತ್ತಾರೆ ನಿಜವಾಗಿಯೂ ಸಣ್ಣ ರೈತರಿಗೆ, ಅತಿ ಸಣ್ಣ ರೈತರಿಗೆ, ಮಾಮೂಲಿ ವರ್ಗದ ರೈತರಿಗೆ ವೈಜ್ಞಾನಿಕ ತಿಳುವಳಿಕೆ ಕೊಡುವಂತಹ ಪ್ರಯತ್ನವನ್ನು ನಿಮ್ಮ ಇಲಾಖೆ ಮಾಡುತ್ತಿಲ್ಲ, ಆ ಕೆಲಸವನ್ನು ಮಾಡುವ ದಿಸೆಯಲ್ಲಿ ತಾವು ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಪ್ರಯೋಗ ಶಾಲೆಗಳಲ್ಲಿ ಹೊಸ ಹೊಸ ತಳಿಗಳನ್ನು ಕಂಡುಹಿಡಿಯುತ್ತಾರೆ. ಮೂಲೆಯಲ್ಲಿರತಕ್ಕ ಹಳ್ಳಿಯ ರೈತನಿಗೆ ಅದು ತಲುಪಬೇಕಾದರೆ ಹತ್ತು ವರ್ಷಗಳ ಮೇಲಾಗುತ್ತದೆ. ಇದಕ್ಕೆ ಕಾರಣ ಈ ಇಲಾಖೆ ಸಹಕಾರ ಮನೋಭಾವದಿಂದ ಹಾಗೂ ಹೊಂದಾಣಿಕೆಯಿಂದ ಕೆಲಸ ಮಾಡುತ್ತಿಲ್ಲ. ಸಹಾಯಕ ಕೃಷಿ ಅಧಿಕಾರಿಗಳ ಸಂಖ್ಯೆ ಕಡಿಮೆ ಇದೆ. ಇದನ್ನು ಸರಿದೂಗಿಸಿದರೆ ಸಾಕಷ್ಟು ಕೆಲಸ ಮಾಡಬಹುದು. ಸಹಾಯಕ ವ್ಯವಸಾಯ ಅಧಿಕಾರಿಗಳ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಸುಮಾರು ಜನರನ್ನು ನೇಮಕ ಮಾಡಿಕೊಂಡಿದ್ದೀರಿ. ಸರ್ಕಾರಿ ಸೇವೆಯಲ್ಲಿ ತರಬೇತಿಯನ್ನು ಕೂಡ ಸರ್ವೀಸ್ ಎಂದು ಪರಿಗಣಿಸಬೇಕು. ಆದರೆ ನಿಮ್ಮ ಇಲಾಖೆಯಲ್ಲಿ ಎರಡು ವರ್ಷ ತರಬೇತಿ ಆ ಅವಧಿಯಲ್ಲಿ ೨೦೦ ರೂಪಾಯಿ ಕೊಡುತ್ತಿದ್ದೀರಿ, ಒಬ್ಬ ಅಗ್ರಿಕಲ್ಚರ್ ಅಸಿಸ್ಟೆಂಟ್ ಆಗಿ ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್‌ಗೆ ಕೆಲಸಕ್ಕೆ ಸೇರಿ ಟ್ರೈನಿಂಗ್‌ಗೆ ಹೋದಾಗ ನಿರುದ್ಯೋಗಿ ಪದವೀಧರನಾಗಿದ್ದಾಗ ಇದ್ದಂತಹ ೬೪೦ ರೂಪಾಯಿಗಳಿಂದ ೨೦೦ ರೂಪಾಯಿಗಳಿಗೆ ಇಳಿಯುತ್ತದೆ. ಅಗ್ರಿಕಲ್ಚರಲ್ ಅಸಿಸ್ಟೆಂಟ್ ಹುದ್ದೆಗಳಲ್ಲಿ ಶೇಕಡ ೫೦ರಷ್ಟು ನಿರುದ್ಯೋಗ ಪದವೀಧರರೇ ಇದ್ದಾರೆ. ಈ ರೀತಿಯ ಪದ್ಧತಿಯನ್ನು ಬೇರೆ ಯಾವ ದೇಶದಲ್ಲೂ ಜಾರಿಗೆ ತಂದಿಲ್ಲ

ಶ್ರೀ ಆರ್. ವಿ. ದೇಶಪಾಂಡೆ.—೫೦ ಪರ್ಸೆಂಟ್ ನಿರುದ್ಯೋಗ ಪದವೀಧರರಿಗೆ ನೇಮಕಾತಿಯಲ್ಲಿ ಅವಕಾಶಕೊಡಬೇಕೆಂಬ ಕೂಗು ಇದೆ. ಅದಕ್ಕೆ ಸರ್ಕಾರ ಮಾನ್ಯತೆ ಕೊಟ್ಟು ಅದರಂತೆ ವ್ಯವಸ್ಥೆ ಮಾಡಿದೆ ಮತ್ತೆ ಕೃಷಿ ಸಹಾಯಕರಿಗೆ ಮೊದಲು ಎರಡು ವರ್ಷದ ತರಬೇತಿ ಇತ್ತು. ಈಗ ಅದನ್ನು ಒಂದು ವರ್ಷಕ್ಕೆ ಇಳಿಸಿದ್ದೇವೆ. ಈಗ ಏನು ೧೫೦೦ ಜನ ಕೃಷಿ ಸಹಾಯಕರನ್ನು ನೇಮಕ ಮಾಡಿ ತರಬೇತಿಗೆ ಕಳುಹಿಸಿದ್ದೇವೆ. ಅವರ ತರಬೇತಿ ಸಪ್ಟೆಂಬರ್ ತಿಂಗಳಲ್ಲಿ ಮುಗಿಯುತ್ತದೆ, ಸಪ್ಟೆಂಬರ್ ತಿಂಗಳಿಂದ ಅವರನ್ನು ಫೀಲ್ಡ್‌ಗೆ ಕಳುಹಿಸುತ್ತೇವೆ. ಆಗ ಅವರಿಗೆ ೬೪೦ ರೂಪಾಯಿಗಳ ಸಂಬಳವನ್ನು ಕೊಡುತ್ತೇವೆ ಉದ್ಯೋಗ ಇಲ್ಲದವರಿಗೆ ಉದ್ಯೋಗವನ್ನು ಕಲ್ಪಿಸುವಂತಹ ಅವಕಾಶವನ್ನು ಕೊಟ್ಟಿದ್ದೇವೆ. ಆದ್ದರಿಂದ ಅವರು ಸರ್ಕಾರದ ಜೊತೆಯಲ್ಲಿ ಸಹಕರಿಸಬೇಕು. ನೇರವಾಗಿ ನೇಮಕಾತಿ ಹೊಂದಿದವರಿಗೆ ೨೦೦ ರೂಪಾಯಿಗಳು, ನಿರುದ್ಯೋಗಪದವೀಧರರು ಯಾರು ಆಯ್ಕೆಯಾಗಿರುತ್ತಾರೆ, ಅವರಿಗೆ ೬೪೦ ರೂಪಾಯಿಗಳ ಸಂಬಳವನ್ನು ಕೊಡುವಂತಹದ್ದು ಕೂಡ ಡಿಸ್ಕ್ರಿಮಿನೇಟ್ ಮಾಡಿದ ಹಾಗೆ ಆಗುತ್ತದೆ. ಆ ದೃಷ್ಟಿಯಿಂದ ಉದ್ಯೋಗ ಇಲ್ಲದವರಿಗೆ ಉದ್ಯೋಗವಕಾಶವನ್ನು ಕೊಡಬೇಕೆಂದು ಜನ ಹೋರಾಟ ಮಾಡಿದ್ದಾರೆ ಅಂತಹವರಿಗೆ ಉದ್ಯೋಗಾವಕಾಶವನ್ನು ಮಾಡಿದ್ದೇವೆ. ಆ ಬಗ್ಗೆ ಕೈಗೊಂಡಿರತಕ್ಕ ಸರ್ಕಾರದ ನಿರ್ಣಯವನ್ನು ಸ್ವಾಗತ ಮಾಡಿ, ಸರ್ಕಾರದ ಜೊತೆ ಸಹಕರಿಸಬೇಕಾಗಿದೆ.

ಶ್ರೀ ಯು. ಭೂಪತಿ.—ಸಹಕರಿಸಬೇಕು ಅಂದರೆ ಹೇಗೆ ? ಅವನು ನಿರುದ್ಯೋಗ ಪದವೀಧರನಾಗಿದ್ದಾಗ ಭತ್ಯೆಯಾಗಿ ೬೪೦ ರೂಪಾಯಿಗಳನ್ನು ತೆಗೆದುಕೊಳ್ಳುತ್ತಿರುತ್ತಾರೆ. ಅವನು ಕೆಲಸಕ್ಕೆ ಸೇರಿದ ಮೇಲೆ ೨೦೦ ರೂಪಾಯಿಗಳಿಗೆ ಇಳಿಯುತ್ತದೆ. ಅವನು ಹೇಗೆ ಜೀವನ ಮಾಡಬೇಕು ? ಮತ್ತೆ ನೇಮಕಾತಿ ಕೂಡ ಗ್ಯಾರಂಟಿ ಆದ್ದರಿಂದ ಅವನು ತರಬೇತಿ ಅವಧಿಯಲ್ಲಿದ್ದರೂ ಸರ್ಕಾರಿ ನೌಕರರಿಗೆ ಇರುವಂತೆ ವೇತನ ಶ್ರೇಣಿಯನ್ನು ಏಕೆ ನಿಗದಿ ಮಾಡಬಾರದು ? ಕೈಗಾರಿಕೆಗಳಲ್ಲಾದರೆ ಟ್ರೈನೀಸ್ ಎಂಬುದಾಗಿ ತೆಗೆದುಕೊಳ್ಳುತ್ತಾರೆ. ಆವಾಗಲೇ employment is not guaranteed.

ಅಂತ ಮೊದಲೇ ಬರೆದು ಕೊಟ್ಟಿರುತ್ತಾರೆ. ಆದರೆ ಇಲ್ಲ ಆ ರೀತಿ ಇಲ್ಲ. In this employment is guaranteed to the people who have taken for training and their services are going to be confirmed. ಹೀಗಿರುವಾಗ ಒಂದು ತಿಂಗಳಿಗೆ ೨೦೦ ರೂಪಾಯಿಗಳ ಪ್ರಕಾರ ಏಕೆ ಕೊಡುತ್ತಿದ್ದೀರಿ ? ನೀವು ಹೇಳಿದಂತಹ ಸ್ಟ್ರಾಟಜಿ ಕೆಲವರಿಗೆ ಅನುಕೂಲವಾಗಿರಬಹುದು. ನಿರುದ್ಯೋಗ ಸಮಸ್ಯೆಯನ್ನು ನಿವಾರಣೆ ಮಾಡುವ ಸಲುವಾಗಿ ನಿರುದ್ಯೋಗಿಗಳಾಗಿರುವಂತಹವರಿಗೆ ಉದ್ಯೋಗವನ್ನು ಕೊಟ್ಟಿದ್ದೇವೆಂದು ತಾವು ಹೇಳಬಹುದು. ೮ ವರ್ಷಗಳ ಕಾಲ ಅವನು ನಿರುದ್ಯೋಗ ಪದವೀಧರನಾಗಿದ್ದಾಗ ೬೪೦ ರೂಪಾಯಿಗಳ ಸಂಬಳವನ್ನು ತೆಗೆದುಕೊಳ್ಳುತ್ತಿರುತ್ತಾರೆ. ಆದರೆ ೧೦ನೇ ವರ್ಷದಲ್ಲಿ ಅವನು ಕೆಲಸಕ್ಕೆ ಸೇರಿದಾಗ ಅವನಿಗೆ ಬರುತ್ತಿದ್ದ ಸಂಬಳ ೨೦೦ ರೂಪಾಯಿಗಳಿಗೆ ಇಳಿಯುತ್ತದೆ, ಅವನು ನಿರುದ್ಯೋಗ ಪದವೀಧರನಾಗಿದ್ದಾಗ ಮದುವೆಯಾಗಿ ಮಕ್ಕಳೂ ಕೂಡ ಆಗಿರುತ್ತವೆ, ಆಗ ಅವನು ತೆಗೆದುಕೊಳ್ಳುತ್ತಿದ್ದಂತಹ ೬೪೦ ರೂಪಾಯಿಗಳಲ್ಲಿ ಹೇಗೂ ಸಂಸಾರವನ್ನು ಸಾಗಿಸುತ್ತಿರುತ್ತಾನೆ. ಆದರೆ ೧೦ನೇ ವರ್ಷದಲ್ಲಿ ಕೆಲಸಕ್ಕೆ ಸೇರಿದಾಗ ಅವನ ಸಂಬಳ ೨೦೦ ರೂಪಾಯಿಗಳಿಗೆ ಇಳಿದರೆ ಆತ ಆ ೨೦೦ ರೂಪಾಯಿಗಳಲ್ಲಿ ಹೇಗೆ ಜೀವನ ಮಾಡಬೇಕೆಂಬುದನ್ನು ನೀವೇ ಯೋಚನೆ ಮಾಡಿ ಆದ್ದರಿಂದ ಇರತಕ್ಕಂತಹ ನಿಯಮವನ್ನು ಬದಲಾವಣೆ ಮಾಡಿ ಆಯ್ಕೆಯಾದಂತಹ ಅಭ್ಯರ್ಥಿಗಳಿಗೆ ವೇತನ ಶ್ರೇಣಿಯನ್ನು ನಿಗದಿ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ರೈತರ ಸಮಸ್ಯೆಗಳ ಬಗ್ಗೆ ಅಧ್ಯಯನ ಮಾಡುವುದಕ್ಕೆ ಪರಿಣಿತರ ಸಮಿತಿಯನ್ನು ನೇಮಕ ಮಾಡಿದ್ದೀರಿ. ಈ ಸಮಿತಿ ಕಳೆದ ೧೯೮೬–೮೭ ಹಾಗೂ ೧೯೮೭–೮೮ರಲ್ಲಿ ಅಧ್ಯಯನ ಮಾಡಿದೆ. ಆ ಸಮಿತಿಗೆ ಕೃಷಿ ಇಲಾಖೆಯ ನಿರ್ದೇಶಕರೇ ಕಾರ್ಯದರ್ಶಿಗಳು ಆ ಸಮಿತಿ ಏನಾದರೂ ವರದಿಯನ್ನು ಕೊಟ್ಟಿದೆಯೇ ? ಅವರು ಮಾಡಿರುವಂತಹ ಶಿಫಾರಸ್ಸುಗಳನ್ನು ತಾವು ಏನಾದರೂ ಇಂಪ್ಲಿಮೆಂಟ್ ಮಾಡಿದ್ದೀರಾ ಎಂಬುದನ್ನು ತಿಳಿಸಬೇಕು. ನಿಮ್ಮ ವರದಿಯಲ್ಲೇ ಕೊಟ್ಟಿರುವಂತೆ ಆ ಸಮಿತಿ ಕೆಲವಾರು ವರದಿಗಳನ್ನು ಕೊಟ್ಟಿದೆ. ಆ ವರದಿಗಳು ಯಾವುವೆಂದರೆ

೧) ಕಬ್ಬು, ಹತ್ತಿ, ಮೆಣಸಿನಕಾಯಿ, ಶೇಂಗಾ ಮತ್ತು ತೊಗರಿ ಬೆಳೆಗಳ ಅಂದಾಜು ವೆಚ್ಚದ ವರದಿ,

೨) ರೈತರಿಂದ ಸುಗ್ಗಿಯ ಕಾಲದಲ್ಲಿ ಹತಾಷೆ ಮಾರಾಟ ತಪ್ಪಿಸಲು ಮುಂಗಾರು ೧೯೮೬–೮೭ರಲ್ಲಿ ರೈತರು ಬೆಳೆದ ಬೆಳೆಗಳ ಉತ್ಪನ್ನಗಳನ್ನು ಬೆಳೆ ಕಟಾವು ಸಮಯದಲ್ಲಿ ಸರಕಾರವು ಖರೀದಿಸುವ ಬಗ್ಗೆ ವರದಿ.

೩) ಅದೇ ರೀತಿ ರಾಜ್ಯದ ಸಣ್ಣ ನೀರಾವರಿ ಯೋಜನೆಗಳ ಬಗ್ಗೆ ವರದಿ. ಈ ರೀತಿ ಕೆಲವಾರು ವರದಿಗಳನ್ನು ಆ ಸಮಿತಿ ಕೊಟ್ಟಿದೆ ರೈತರು ಉತ್ಪಾದನೆ ಮಾಡಿದಂತಹ ಬೆಳೆಗಳಿಗೆ ಅವರ ಉತ್ಪಾದನಾ ವೆಚ್ಚವಾದರೂ ಬರದಿದ್ದರೆ ಆ ರೈತರು ಬದುಕುವುದಾದರೆ ಹೇಗೆ ? ಆ ಸಮಿತಿ ಸರ್ಕಾರಕ್ಕೆ ಯಾವ್ಯಾವ ರೀತಿಯ ವರದಿಗಳನ್ನು ಕೊಟ್ಟಿದೆ ? ಆ ವರದಿಗಳಲ್ಲಿ ಏನೇನು ಶಿಫಾರಸ್ಸುಗಳನ್ನು ಮಾಡಿದೆ ? ಆ ಶಿಫಾರಸ್ಸುಗಳನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಸರ್ಕಾರ ಮನಸ್ಸು ಮಾಡಿದೆಯೇ ? ಮಾಡದಿದ್ದರೆ ಅದನ್ನು ಮಾಡುವಂತಹ ಮನಸ್ಸನ್ನಾದರೂ ಮಾಡುವುದೇ ಎಂಬುದನ್ನು ಅದನ್ನು ತಿಳಿಸಬೇಕೆಂದು ಸರ್ಕಾರವನ್ನು ಉಪಾಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ,

ಮತ್ತೆ ಎಣ್ಣೆಕಾಳುಗಳ ಬಗ್ಗೆ ಈಗಾಗಲೇ ಅನೇಕ ನನ್ನ ಮಾನ್ಯ ಸ್ನೇಹಿತರು ಮಾತನಾಡಿದ್ದಾರೆ. ಅದರ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಕಳೆದ ಸಾರಿ ಇದೇ ಅಧಿವೇಶನದಲ್ಲಿ ಎಣ್ಣೆ ಕಾಳುಗಳ ಬಗ್ಗೆ ಬಹಳ ವಿಷದವಾಗಿ ಮಾತನಾಡಿದ್ದೇನೆ.

ಇನ್ನು ದ್ವಿದಳಧಾನ್ಯಗಳ ಬಗ್ಗೆ ಮಾತನಾಡುವುದಾದರೆ ಗುಲ್ಬರ್ಗಾ, ರಾಯಚೂರು, ಬೀದರ್ ಮತ್ತು ಬಳ್ಳಾರಿ, ಹೈದರಾಬಾದ್ ಕರ್ನಾಟಕದ ಈ ನಾಲ್ಕು ಜಿಲ್ಲೆಗಳಲ್ಲಿ ವಿಶೇಷವಾಗಿ ತೊಗರಿ ಬೆಳೆಯನ್ನು ಬೆಳೆಯುತಕ್ಕಂಥ ಜಿಲ್ಲೆಗಳಾಗಿರುತ್ತವೆ, ಶೇಕಡ ೬೦ ರಷ್ಟು ಆದಾಯ ಇದರಿಂದ ಬರುತ್ತದೆ. ಇವತ್ತು ಪ್ರತಿಯೊಂದಕ್ಕೂ ಅಭಿವೃದ್ಧಿ ಮಂಡಲಿಗಳನ್ನು ಮಾಡುತ್ತೇವೆಂದು ಹೇಳಿದ್ದೀರಿ ಮತ್ತು ಮಾಡಿಯೂ ಇದ್ದೀರಿ. ಈ ನಾಲ್ಕು ಜಿಲ್ಲೆಗಳನ್ನು ಜೊತೆಗೆ ಬಿಜಾಪುರ ಜಿಲ್ಲೆಯನ್ನು ಸೇರಿಸಿಕೊಂಡು ಐದು ಜಿಲ್ಲೆಗಳಿಗೂ ಅನುಕೂಲವಾಗುವಂತೆ ಬಹಳ ಪ್ರಮುಖವಾಗಿ ಬೆಳೆಯುವ ತೊಗರಿ ಬೆಳೆಗೆ ಸಮಯಕ್ಕೆ ಸರಿಯಾಗಿ ಸಲಕರಣೆಗಳು ಬಿತ್ತನೇ ಬೀಜ, ಗೊಬ್ಬರ ಮತ್ತೊಂದು ಮಗದೊಂದು

ಒದಗಿಸಲು ಅನುಕೂಲವಾಗುವಂತೆ ತಾವು ತೊಗರಿ ಬೆಳೆ ಅಭಿವೃದ್ಧಿ ಮಂಡಲಿ ಎಂದು ಮಾಡಿದರೆ ಬಹಳ ಪ್ರಯೋಜನವಾಗುತ್ತದೆ. ಈಗ ಆ ಭಾಗದ ೫ ಜಿಲ್ಲೆಗಳ ರೈತರಿಗೆ ಅನುಕೂಲವಾಗುತ್ತಿದೆ. ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಈ ಭಾಗ ಬಹಳ ಹಿಂದುಳಿದ ಭಾಗವಾಗಿರುವುದರಿಂದ, ತಾವು ಒಂದು ಪ್ರೊಪೋಸಲ್ಸ್‌ನ್ನು ಸರ್ಕಾರದ ಮುಂದೆಯೋ ಅಥವಾ ಕ್ಯಾಬಿನೇಟ್ ಮುಂದೆಯೋ ಇಟ್ಟು ಒಂದು ಮಂಡಲಿಯನ್ನು ಸ್ಥಾಪನೆ ಮಾಡಿದರೆ ನಮ್ಮ ಭಾಗದ ಜನರಿಗೆ ಬಹಳ ಸಹಾಯ ಮಾಡಿದಂತಾಗುತ್ತದೆಂದು ಈ ಸಂದರ್ಭದಲ್ಲಿ ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ತೋಟಗಾರಿಕೆ ಇಲಾಖೆಯ ಬಗ್ಗೆ ಹೇಳುವುದಾದರೆ, ಮಾನ್ಯ ಲಕ್ಷ್ಮೀನರಸಿಂಹಯ್ಯ ಅವರು ಈ ಇಲಾಖೆಯನ್ನು ವಹಿಸಿಕೊಂಡು ೪–೬ ದಿವಸಗಳು ಆಗಿಲ್ಲ. ಅವರಿಗೆ ತಾತ್ಕಾಲಿಕವಾಗಿ ವಹಿಸಿಕೊಟ್ಟಿದ್ದಾರೆ. ಆಮೇಲೆ ಈ ತೋಟಗಾರಿಕೆ ಇಲಾಖೆಯನ್ನು ಯಾರಿಗೆ ವಹಿಸುತ್ತಾರೆಯೋ ಗೊತ್ತಿಲ್ಲ. ತೋಟಗಾರಿಕೆ ಇಲಾಖೆಯಲ್ಲಿ ಬಹಳ ಮುಖ್ಯವಾಗಿ ಹಣ್ಣು, ತರಕಾರಿ ಮತ್ತು ಪುಷ್ಪಗಳನ್ನು ಬೆಳೆದು ಮಾರಾಟ ಮಾಡುವುದನ್ನು ಬೆಂಗಳೂರು ಮತ್ತು ಮೈಸೂರಿಗೆ ಮಾತ್ರ ಸೀಮಿತಗೊಳಿಸಿರುತ್ತಾರೆ. ಇತ್ತೀಚಿಗೆ ಮಂಗಳೂರಿಗೂ ಈ ವ್ಯವಸ್ಥೆಯನ್ನು ಮಾಡಿರುವುದನ್ನು ಬಿಟ್ಟರೆ ರಾಜ್ಯದಲ್ಲಿ ಎಲ್ಲೂ ಕೂಡ ಪಾಪ್ಯುಲರ್ ಮಾಡಲಿಕ್ಕೆ ಸಾಧ್ಯವಾಗಿಲ್ಲ. ಇಲ್ಲಿ ಲಾಲ್‌ಬಾಗ್‌ನಲ್ಲಿ ಮಾಡಿಕೊಂಡಿರುವ ಸೊಸೈಟಿಯ ಬಗ್ಗೆ ಮಾನ್ಯ ನಮ್ಮ ಸ್ನೇಹಿತರೊಬ್ಬರು ಮಾತನಾಡುತ್ತಾ ಹೇಳಿದರು, ಅಲ್ಲೂ ಕೂಡ ಮೋಸ ನಡೆಯುತ್ತಿದೆ, ರೈತರು ತಂದ ಫ್ರೆಷ್ ಮಾಲು ಏನಿರುತ್ತದೆ ಆ ಮಾಲನ್ನು ಕೃಷ್ಣರಾಜೇಂದ್ರ ಮಾರ್ಕೆಟ್ ವ್ಯಾಪಾರಸ್ಥರು ಖರೀದಿ ಮಾಡಿಬಿಡುತ್ತಾರೆ. ಇನ್ನುಳಿದ ಎರಡನೇ ದರ್ಜೆ ಮಾಲನ್ನು ಮಾತ್ರ ಲಾಲ್‌ಬಾಗ್ ಸೊಸೈಟಿಯವರು ತಮ್ಮ ವ್ಯಾಪಾರ ಮಳಿಗೆಗಳ ಮುಖಾಂತರ ವ್ಯಾಪಾರ ಮಾಡುತ್ತಾರೆ, ಅಲ್ಲೂ ಕೂಡ ದಳ್ಳಾಳಿಗಳು ಪ್ರವೇಶ ಮಾಡಿದ್ದಾರೆಂದು ಹೇಳಿದರು. ಆದ್ದರಿಂದ ಈ ಒಂದು ತೋಟಗಾರಿಕೆ ಬೆಳೆಗಾರರ ಸಂಘಗಳು ಏನು ಇದೆ, ಅವುಗಳನ್ನು ಬೆಂಗಳೂರಿಗೆ ಮಾತ್ರ ಸೀಮಿತ ಮಾಡದೆ ಜಿಲ್ಲಾ ಕೇಂದ್ರಗಳಿಗೂ ಒಂದೊಂದು ತೋಟಗಾರಿಕೆ ರೈತ ಸಂಘಗಳನ್ನು ಮಾಡಿದರೆ ರೈತರು ಮತ್ತು ಜನರು ಹಣ್ಣು ತರಕಾರಿಯನ್ನು ನೋಡಲು ಸಾಧ್ಯವಾಗುತ್ತದೆ, ಬೆಂಗಳೂರಿನಲ್ಲಂತೂ ಬಹಳ ರಸಿಕ ಹುಡುಗರು ಇರುವ ಪಟ್ಟಣ. ಕೃಷ್ಣರಾಜೇಂದ್ರ ಮಾರ್ಕೆಟ್‌ನಲ್ಲಿ ತನ್ನ ಪ್ರೇಯಸಿಗೆ ಗುಲಾಬಿ ಹೂವನ್ನು ಕೊಡಲು ಕೇಳಿದರೆ ನಾಲ್ಕು ಆಣೆಗೆಲ್ಲಾ ಸುಲಭವಾಗಿ ಸಿಗುತ್ತದೆ. ನಮ್ಮ ಕಡೆ ಗುಲಾಬಿ ಹೂವು ೪೦–೫೦ ಪೈಸೆಯನ್ನು ಕೊಟ್ಟರೂ ಸಿಗುವುದಿಲ್ಲ. ಆದ್ದರಿಂದ ಜಿಲ್ಲಾ ಕೇಂದ್ರಗಳಲ್ಲೂ ಸಹಕಾರಿ ಸಂಘ ಸಂಸ್ಥೆಗಳನ್ನು ಹಾಗೂ ಕೇಂದ್ರಗಳನ್ನು ಮಾಡಿ ಎಂದು ಹೇಳುತ್ತೇನೆ.

ಉಪಾಧ್ಯಕ್ಷರು.—ಮಾನ್ಯ ಭೂಪತಿಯವರು ಮದುವೆಯಾಗಿ ಬಹಳ ವರ್ಷಗಳಾಗಿಗುತ್ತದೆ. ಈ ಒಂದು ಎಕ್ಸ್‌ಪೀರಿಯನ್ಸ್ ಯಾವಾಗ ಆಯಿತು ?

ಶ್ರೀ ಯಂ. ಭೂಪತಿ.—ಮದುವೆಯಾಗುವುದಕ್ಕೆ ಮುಂಚೆ. ನನ್ನ ಜಿಲ್ಲೆಯ ಒಂದು ಸಣ್ಣ ಊರು ತೋರಣಗಲ್‌ನಲ್ಲಿ ೭೪ ಎಕರೆಯನ್ನು ಹೊಂದಿರುವ ಒಂದು ಫಾರಮ್ ಇದೆ. ಇದರಲ್ಲಿ ಕೇವಲ ೩೨ ಎಕರೆಯಷ್ಟು ಮಾತ್ರ ಉಪಯೋಗಿಸಿಕೊಂಡಿರುತ್ತಾರೆ. ನೀರಿನ ಸೌಕರ್ಯಕ್ಕಾಗಿ ಬೋರ್‌ವೆಲ್ ಹಾಕಿಸಿದ್ದಾರೆ. ಜಮೀನು ಉಳುವ ಸಲುವಾಗಿ ಇದ್ದ ಚೈನ್ ಟಿಲ್ಲರ್ ಅದು ಕೆಟ್ಟಿರುತ್ತದೆ. ಅದನ್ನು ತೆಗೆದುಕೊಂಡು ಹೋಗುವ ಪ್ರಯತ್ನ ಮಾಡಿಲ್ಲ. ಅದು ಅಲ್ಲೇ ಬಿದ್ದಿರುವುದಲ್ಲದೆ ಬೇರೆ ಬೇರೆ ಸಾಮಾನುಗಳೆಲ್ಲಾ ಅಲ್ಲೇ ಬಿದ್ದಿದೆ. ಇನ್ನು ೩೨ ಎಕರೆ ಖಾಲಿ ಬಿದ್ದಿದೆ. ಪ್ರತಿವರ್ಷ ಸರ್ಕಾರ ಇಲಾಖೆಗೆ ಹಣವನ್ನು ಕೊಡುತ್ತಾರೆ, ಖರ್ಚು ಮಾಡುತ್ತಾರೆ. ಆದರೂ ಏನು ಸಾಗುವಳಿಯಾಗುತ್ತಿಲ್ಲ. ಆದರೆ ಸಾಗುವಳಿಯಾಗುತ್ತಿರುವ ೩೦ ಎಕರೆಗಳಲ್ಲಿ ನಿಂಬೆ, ಮಾವು, ಸಪೋಟ, ದಾಳಿಂಬೆ ಇವೆ ಮುಂತಾದುವುಗಳನ್ನು ಬೆಳೆಯುತ್ತಾರೆ. ಒಂದೊಂದು ದಾಳಿಂಬೆ ಗಿಡದಲ್ಲಿ ೧೫೦ ರಿಂದ ೨೦೦ ರವರೆಗೆ ಹಣ್ಣು ಬಿಡುತ್ತದೆ. ಆದರೆ ಒಂದು ಕಾಯಿ ಹಣ್ಣನ್ನು ನೋಡಲಿಕ್ಕೆ ಸಿಕ್ಕುತ್ತಿಲ್ಲ.

೪–೦೦ ಪಿ. ಎಂ.

ಎಲ್ಲವನ್ನು ಅಳಿಲು ಮತ್ತಿತರ ಪಕ್ಷಿಗಳು ತಿಂದು ಹಾಕಿವೆ. ಅದನ್ನು ರಕ್ಷಣೆ ಮಾಡತಕ್ಕ ಪ್ರಯತ್ನವನ್ನು ಇಲಾಖೆಯವರು ಮಾಡಿಲ್ಲ. ನಾನು ನೋಡಿದ ಒಂದು ಫಾರಂ ಅನ್ನು ಉದಾಹರಣೆಗೆ ಹೇಳುತ್ತಿದ್ದೇನೆ. ನನ್ನ ಕ್ಷೇತ್ರದಲ್ಲಿ ಸುಮಾರು ೩–೪ ಫಾರಂಗಳು ಇವೆ. ಮಾನ್ಯ ಸೋಮಶೇಖರ್‌ರವರು ಮಂತ್ರಿಗಳಾಗಿದ್ದಾಗ ವಿಷಯವನ್ನು ಪ್ರಸ್ತಾಪ ಮಾಡಿದ್ದೆ. ಅಲ್ಲಿ ಒಂದು ದೊಡ್ಡ ರಾದ್ಧಾಂತ ನಡೆದಿತ್ತು. ೩ ಲಕ್ಷ

ರೂಪಾಯಿಗಳನ್ನು ೩-೪ ಜನ ಸೇರಿ ತಿಂದು ಹಾಕಿದ್ದರು. ಕೊನೆಗೆ ಒಂದೊಂದು ಲಕ್ಷ ರೂಪಾಯಿಗಳನ್ನು ಕಟ್ಟಿದ್ದರು. ಈ ರೀತಿ ಅವ್ಯವಹಾರಗಳು ತೋಟಗಾರಿಕೆ ಇಲಾಖೆಯಲ್ಲಿ ಜಾಸ್ತಿ ನಡೆಯುತ್ತವೆ. ವರ್ಷಕ್ಕೊಂದು ಸಾರಿ ಫಲ ಕೊಡುವಂಥ ಮಾವು, ಸಪೋಟಕ್ಕೆ ೧೫ ಸಾವಿರ ರೂಪಾಯಿಗೆ ಟೆಂಡರ್ ಮಾಡಿ ಕೊಟ್ಟಿದ್ದಾರೆ. ಇಲಾಖೆಯ ಅಧಿಕಾರಿಗಳು ಇಷ್ಟು ವ್ಯಾಲ್ಯುಯೇಷನ್ ಆಗುತ್ತದೆಂದು ಹೇಳುತ್ತಾರೆ. ಅವರಿಗೆ ಕಮಿಷನ್ ಕೊಟ್ಟರೆ ಕಡಿಮೆ ರೇಟಿಗೆ ಕೊಡುತ್ತಾರೆ. ಹೀಗಾಗಿ ತೋಟಗಾರಿಗೆ ಇಲಾಖೆಗೆ ಖರ್ಚು ಮಾಡಿದ ಹಣ ಫಾರಂಗಳಲ್ಲಿ ವಾಪಸ್ಸು ಬರುತ್ತಿಲ್ಲ. ಇದರ ಮೇಲೆ ಚೆಕ್ ಆಗಬೇಕು. ಸೂಪರ್‌ವಿಷನ್ ಮಾಡಬೇಕು. ಫಾರಂಗಳಲ್ಲಿ ಬರತಕ್ಕ ಉತ್ಪನ್ನದಿಂದ ಇವತ್ತಿನ ದಿವಸ ಇಲಾಖೆಯನ್ನು ನಡೆಸಬಹುದು. ಅಷ್ಟು ಫಲವತ್ತಾದ ಭೂಮಿ ಇದೆ. ನೀರಿನ ಸೌಕರ್ಯ ಇದೆ ಎಲ್ಲಿಯೂ ನೀರಿನ ಸೌಕರ್ಯ ಇಲ್ಲವೆಂಬುದು ಇಲ್ಲ ಬಸವರಾಜ ಪಾಟೀಲ್‌ಅನ್ವರಿಯವರು ಮಂತ್ರಿಗಳಾಗಿದ್ದಾಗ ಕೆಲವು ಅಧಿಕಾರಿಗಳನ್ನು ಪೋಸ್ಟ್ ಮಾಡಿದರು ಅವರು ಎಷ್ಟು ಬೇಜವಾಬ್ದಾರಿಯಿಂದ ಕೆಲಸಮಾಡುತ್ತಿದ್ದಾರೆಂದರೆ ಅದನ್ನು ಹೇಳುವಹಾಗೆ ಇಲ್ಲ ಇಲಾಖೆಯಲ್ಲಿ ಹಣ ದುರುಪಯೋಗ ಮಾಡಿದ ಜಿಲ್ಲಾಮಟ್ಟದ ತೋಟಗಾರಿಕೆ ಅಧಿಕಾರಿಯನ್ನು ಸಸ್ಪೆಂಡ್ ಮಾಡಿದರು. ಸಸ್ಪೆಂಡ್ ಮಾಡಿ ೬ ತಿಂಗಳಾಯಿತು. ಪೆಂಡಿಂಗ್ ಎನ್‌ಕ್ವೈರಿ ಎಂದು ಮಾಡಿದ್ದಾರೆ. ಆ ಅಧಿಕಾರಿ ಸಸ್ಪೆನ್‌ಷನ್ ಪೀರಿಯಡ್‌ನಲ್ಲಿ ೬ ತಿಂಗಳ ಕಾಲ ದೇಶಬಿಟ್ಟು ಬೇರೆ ದೇಶಕ್ಕೆ ಹೋಗಿ ನೌಕರಿ ಮಾಡಿಕೊಂಡು ಬಂದರೂ ಸರ್ಕಾರ ಕೇಳಲಿಲ್ಲ. ಇವತ್ತಿನವರೆಗೆ ಕೇಳಿಲ್ಲ. ಈಗ ಅವರು ತುಮಕೂರಿನಲ್ಲಿದ್ದಾರೆಂದು ಹೇಳುತ್ತಿದ್ದಾರೆ ನಮ್ಮ ಸ್ನೇಹಿತರು. ಮಾನ್ಯ ರಾಮಯ್ಯನವರು ಮಂತ್ರಿಗಳಾಗಿದ್ದಾಗ ಸೂಕ್ಷ್ಮವಾಗಿ ಹೇಳಿದ್ದೆ ಕ್ರಮ ತೆಗೆದುಕೊಳ್ಳುತ್ತಾರೋ ಏನೋ ಎಂದು. ಒಂದು ಪ್ರಶ್ನೆಯನ್ನು ಕೂಡ ಹಾಕಿದ್ದೆ. ಅಧಿಕಾರಶಾಹಿ ಎಷ್ಟು ಶಕ್ತಿಯುತವಾಗಿದೆ ಎಂದರೆ, ಶಾಸಕಾಂಗ ಕಾರ್ಯಾಂಗಕ್ಕಿಂತ ಮೇಲೆ ಅಂದುಕೊಂಡರೆ ಕಾರ್ಯಚರಣೆಯಲ್ಲಿ ಮಾತ್ರ ಇಲ್ಲ. ಇಲ್ಲಿ ಮಾತ್ರ ಮೇಲೆ, ಹೊರಗೆ ಮಾತ್ರ ಕೆಳಗೆ. ಎಲ್ಲವನ್ನು ಅವರೆ ಹೇಳಿಕೊಡುತ್ತಾರೆ. ಅಧಿಕಾರಿಗಳು ಈ ರೀತಿ ಹೊರದೇಶಕ್ಕೆ ಹೋಗಿದ್ದಾರಲ್ಲ ಅವರ ಕ್ರಮ ತೆಗೆದುಕೊಂಡಿದ್ದೀರಾ ಎಂದು ಕೇಳಿದ್ದೆ. ಕೇಳುವಾಗ ಒಂದು ಟೆಕ್ನಿಕಲ್ ಮಿಸ್ಟೇಕ್ ಮಾಡಿದ್ದೆ. ಅಮಾನತ್ತು ಅನ್ನುವುದಕ್ಕೆ ಬದಲಾಗಿ ವಜಾ ಎಂದು ಬರೆದಿದ್ದೆ. ಆ ಒಂದು ಶಬ್ದವನ್ನು ತಪ್ಪು ಮಾಡಿದ್ದಕ್ಕೆ ನಮ್ಮ ಇಲಾಖೆಯಲ್ಲಿ ಯಾರೂ ವಜಾ ಆಗಿಲ್ಲವೆಂದು ಉತ್ತರ ಕೊಟ್ಟರು. ಸಸ್ಪೆಂಡ್ ಆದವರು ಇಂಥವರು, ಅವರು ಬೇರೆ ದೇಶಕ್ಕೆ ಹೋಗಿದ್ದಾರೆಂಬುದು ಗೊತ್ತಿದೆ. ಆದಗೂ ಇದುವರೆಗೆ ಅವರ ಬಗ್ಗೆ ವಿಚಾರಣೆ ಮಾಡಲಿಲ್ಲ. ಇಲ್ಲಿಗೆ ೩ ಜನ ಮಂತ್ರಿಗಳಾದರು, ನೀವು ೪ನೆಯವರು. ನೀವಾದರೂ ಮಾಡಿಸುತ್ತೀರೋ ಇಲ್ಲವೋ ಗೊತ್ತಿಲ್ಲ. ನೀವು ಮಾಡಿಸದಿದ್ದರೂ ಕೇಳುವುದಕ್ಕಾಗುವುದಿಲ್ಲ. ಏಕೆಂದರೆ ನೀವು ಇತ್ತೀಚೆಗೆ ಬಂದಿದ್ದೀರಿ ಈ ರೀತಿ ಇಲಾಖೆಯಲ್ಲಿ ನಡೆಯುತ್ತಿರತಕ್ಕ ಕೃತ್ಯಗಳ ಬಗ್ಗೆ ಗಮನ ಹರಿಸದಿದ್ದರೆ ಸರ್ಕಾರ ಯಾವ ರೀತಿ ನಡೆಯುವುದಕ್ಕೆ ಸಾಧ್ಯ ? ಹಾಕಿದ ಹಣವನ್ನು ವಾಪಸ್ಸು ಪಡೆಯುವುದಕ್ಕೆ ಸಾಧ್ಯವಿಲ್ಲ. ಸಸ್ಪೆಂಡ್ ಆದ ಅಧಿಕಾರಿಗಳು ಬೇರೆ ದೇಶಕ್ಕೆ ಹೋಗಿ ದುಡಿದುಕೊಂಡು ಬರುತ್ತಾರೆ. ಹೀಗಾಗಿ ಇಲಾಖೆಯ ಮುಖ್ಯಸ್ಥರಾಗಲಿ, ಮಂತ್ರಿಗಳಾಗಲಿ ಏನಿದ್ದಾರೆ ಅವರು ಕೆಳಗಿನವರ ಮೇಲೆ ಹತೋಟಿ ಕಳೆದುಕೊಳ್ಳುತ್ತಿದ್ದಾರೆ ಕೆಳಗಿನವರು ಮಾತು ಕೇಳುವ ರೀತಿಯಲ್ಲಿ ಆಡಳಿತ ಸುಧಾರಣೆಯನ್ನು ಮಾಡಬೇಕೆಂದು ಹೇಳಿ ಮೇಲ್ನೋಟಕ್ಕೆ ನಮ್ಮ ಮುಂದಿಟ್ಟಿರತಕ್ಕ ಬೇಡಿಕೆಗಳು ಅಷ್ಟು ಸಮರ್ಪಕವಾಗಿಲ್ಲ ಅನ್ನಿಸಿದರೂ ರೈತರ ಹಿತದೃಷ್ಟಿಯಿಂದ ಈ ಬೇಡಿಕೆಗಳನ್ನು ಬೆಂಬಲಿಸಿ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ ಎಸ್. ಆಚಾರ್ (ಬೈಂದೂರು).—ಮಾನ್ಯ ಸಭಾಧ್ಯಕ್ಷರೇ, ನೇಗಿಲ ಯೋಗಿಯ ಬದುಕಿಗೆ ಭರವಸೆಯ ಉಸಿರಾಗಿರಬೇಕಾದ ಇಲಾಖೆಗಳೆಂದರೆ ಕೃಷಿ ಮತ್ತು ತೋಟಗಾರಿಕೆ ಗ್ರಾಮೀಣ ಜನತೆಯ ಆರ್ಥಿಕ ಜೀವಾಳ ಆಗಬೇಕಾದ ಇಲಾಖೆಗಳೆಂದರೆ ಈ ಎರಡು ಇಲಾಖೆಗಳು. ಆದರೆ ಕರ್ನಾಟಕ ರಾಜ್ಯದಲ್ಲಿ ಇವತ್ತು ಯಾವ ರೀತಿ ನಡೆದಿದೆ ಎಂದರೆ ರೈತರು ನಿಟ್ಟುಸಿರು ಬಿಡಬೇಕಾದ ಪ್ರಸಂಗ ಬರುತ್ತಿದೆ. ಕೋಟಿಗಟ್ಟಲೆ ರೂಪಾಯಿಗಳನ್ನು ವೆಚ್ಚ ಮಾಡಿದರೂ ಈ ಇಲಾಖೆಗಳಿಂದ ಸಾಕಷ್ಟು ಸಾಧನೆ ಆಗಿಲ್ಲ ಎಂಬುದನ್ನು ಕಾಣುತ್ತಿದ್ದೇವೆ. ಅನೇಕರು ಹೇಳಿದರು, ರೈತರ ಸಹಕಾರದಿಂದ ಈ ಸರ್ಕಾರ ಬಂತು ಎಂದು.

ಇದ್ದೇವೆ ರೈತರಿಗೆ ಸರಕಾರ ಈಗ ಏನು ಮಾಡಿದೆ ಎಂಬುದನ್ನು ನೋಡಬೇಕು. ನಾವು ನೋಡುತ್ತಾ ಇರುವುದು ಈಗಾಗಲೇ ಹೇಳಿದಹಾಗೆ ಸಾಕಷ್ಟು ವಿದ್ಯುತ್ ಪೂರೈಕೆ ಇಲ್ಲ. ರೈತರು ಪಂಪ್‌ಸೆಟ್‌ಗಳನ್ನು ಚಾಲನೆ ಮಾಡಬೇಕಾದ ಸಂದರ್ಭದಲ್ಲಿ ಪವರ್ ಕಟ್ ಇದೆ. ನಮ್ಮಲ್ಲಂತೂ ಇದರ

ಹಾವಳಿ ವಿಪರೀತ ಇದೆ. ಕೈಗಾರಿಕೆಗಳಿಗೆ ರಿಯಾಯಿತಿ ದರದಲ್ಲಿ ವಿದ್ಯುತ್ ಸಿಗುತ್ತಿದೆ. ಆದರೆ ರೈತರಿಗೆ ದರ ಏರುತ್ತಿದೆ. ಆಳುವ ಮಕ್ಕಳಿಗೆ ಪೆಪ್ಪರ್‌ಮೆಂಟ್ ಕೊಡುವ ಕ್ರಮ ಇದೆ. ಅದೇರೀತಿ ನಮ್ಮ ಸರ್ಕಾರದ ನೀತಿ ಅನ್ನಿಸುತ್ತದೆ. ಜೋರಾಗಿ ರೈತರು ಕೂಗಾಟ ಮಾಡಿದರೆ ಬಡ್ಡಿ ರಿಯಾಯಿತಿ ಸ್ವಲ್ಪ ಮಾಡುವುದು, ಆಮೇಲೆ ಪೂರ್ತಿ ರಿಯಾಯಿತಿ ಮಾಡುವುದು ನಡೆಯುತ್ತಿದೆ. ರೈತರ ಸಮಸ್ಯೆಗಳನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡಿ ಪರಿಹಾರ ನೀಡುವುದಿಲ್ಲ. ನಾಲ್ಕೈದು ವರ್ಷಗಳಿಂದ ಕ್ಷಾಮ ಬಂದಿದೆ. ಕ್ಷಾಮ ಶಾಶ್ವತವಾಗಿ ಬರದೇ ಇರುವಹಾಗೆ ಕರ್ನಾಟಕ ರಾಜ್ಯದಲ್ಲಿ ಏನಾದರೂ ಯೋಜನೆಗಳನ್ನು ಹಾಕಿಕೊಳ್ಳುವ ಬದಲಿಗೆ ತಾತ್ಕಾಲಿಕವಾಗಿ ಪರಿಹಾರವನ್ನು ಕೊಡತಕ್ಕ ಕೆಲವೊಂದು ಯೋಜನೆಗಳು ಬರುತ್ತಿವೆ. ಕರ್ನಾಟಕ ರಾಜ್ಯದಲ್ಲಿ ನೀರಾವರಿ ಅಭಿವೃದ್ಧಿ ಆಗಬೇಕು, ಎರಡು ಸಾವಿರದ ಇಸವಿಗೆ ಕರ್ನಾಟಕದ ಎಲ್ಲ ಜಿಲ್ಲೆಗಳಿಗೆ ನೀರಾವರಿ ಪೂರೈಸಬೇಕು ಎಂಬ ಯೋಜನೆ ಆಗಬೇಕಾಗಿತ್ತು. ಆದರ ಬದಲು ತಾತ್ಕಾಲಿಕವಾದ ಉಪಶಮನ ಮಾಡುತ್ತಿದ್ದಾರೆ. ಒಂದು ಸಂತೋಷದ ವಿಷಯ ಎಂದರೆ ನೀರಾವರಿ ಕುರಿತು ಕೆಲವರಾದರೂ ಚಿಂತನೆ ಮಾಡಿದ್ದಾರೆ. ಈ ಕುರಿತು ಅಧಿಕಾರವನ್ನು ಬಿಡುವ ಹಂತಕ್ಕೂ ಹೋಗಿದ್ದಾರೆ ಎಂದು ಕೆಲವೊಂದು ರೈತರಿಗೆ ಸಂತೋಷ ಅನ್ನಿಸುತ್ತಿದೆ. ಕಳೆದ ಆರು ವರ್ಷಗಳ ಕೃಷಿ ಉತ್ಪಾದನೆಯನ್ನು ರಾಜ್ಯ ಪುನರ್‌ಸಂಗಡಣೆಯಾದ ದಿನದಿಂದ ಹೋಲಿಸಿದಾಗ ಕಡಿಮೆ ಅನ್ನಿಸುತ್ತದೆ. ನಮಗೆ ಕೊಟ್ಟಿರುವ ಪುಸ್ತಕದಲ್ಲಿ ೧೯೫೬-೫೭ನೇ ಇಸವಿಯಿಂದ ಇಲ್ಲಿಯವರೆಗೆ ತುಲನಾತ್ಮಕವಾಗಿ ಅಧ್ಯಯನ ಮಾಡಿ ಕೊಡಲಾಗಿದೆ. ೧೯೫೬ ರಿಂದ ೧೯೮೩-೮೪ರವರೆಗೆ ಅಂದರೆ ಈ ಸರ್ಕಾರ ಬಂದ ವರ್ಷದವರೆಗೆ ಎಷ್ಟು ಉತ್ಪಾದನೆಯಾಗಿದೆ ಅನಂತರ ೧೯೮೭-೮೮ರ ತನಕ ಎಷ್ಟಾಗಿದೆ ಎಂಬುದನ್ನು ನೋಡಿದರೆ ಕಳೆದ ಸರ್ಕಾರ ನೀರಾವರಿ ಸೌಕರ್ಯ ಒದಗಿಸಿ ಅಭಿವೃದ್ಧಿಗೆ ಕಾರಣವಾದುದನ್ನು ನೋಡಬಹುದು. ಭತ್ತ ೧೯೮೩-೮೪ರಲ್ಲಿ ೨೨.೯೦ ಲಕ್ಷ ಟನ್ ಇದ್ದರೆ ೧೯೮೭-೮೮ರಲ್ಲಿ ೧೭.೮೭ ಲಕ್ಷ ಟನ್ ಇದೆ, ರಾಗಿ ೧೯೮೩-೮೪ರಲ್ಲಿ ೧೪.೭೨ ಲಕ್ಷ ಟನ್ ಇದ್ದರೆ ೧೯೮೭-೮೮ರಲ್ಲಿ ೧[illegible].೪೮ ಲಕ್ಷ ಟನ್ ಇದೆ. ಒಟ್ಟು ಧಾನ್ಯಗಳು ೧೯೮೩-೮೪ರಲ್ಲಿ ೬೬.೯೦ ಲಕ್ಷ ಟನ್ ಇದ್ದರೆ ೧೯೮೭-೮೮ರಲ್ಲಿ ೫೮.೭೬ ಲಕ್ಷ ಟನ್ ಇದೆ. ಒಟ್ಟು ಆಹಾರಧಾನ್ಯಗಳು ೧೯೮೩-೮೪ರಲ್ಲಿ ೭೩.೧೪ ಲಕ್ಷ ಟನ್ ಇದ್ದರೆ ೧೯೮೭-೮೮ರಲ್ಲಿ ೬೫.೭೨ ಲಕ್ಷ ಟನ್ ಇದೆ. ಕಬ್ಬು ೧೯೮೩-೮೪ರಲ್ಲಿ ೧೨೯.೧೬ ಲಕ್ಷ ಟನ್ ಇದ್ದರೆ ೧೯೮೭-೮೮ರಲ್ಲಿ ೮೭.೮೩ ಲಕ್ಷ ಟನ್ ಇದೆ ಇದು ಪ್ರಗತಿಯೇ ಎಂದು ಕೇಳಲಿಕ್ಕೆ ಬಯಸುತ್ತೇನೆ. ಆಧುನಿಕ ಕೃಷಿ ತಂತ್ರಜ್ಞಾನ ಹಳ್ಳಿಯ ಮೂಲೆ ಮೂಲೆಗೂ ಹೋಗಬೇಕು. ಮತ್ತು ಕೆಲವೇ ಮಂದಿ ವಿದ್ಯಾ[illegible] ಪ್ರಚಾರ[illegible]ಬೇಕಾಗಿದೆ. ಈ ದೃಷ್ಟಿಯಲ್ಲಿ ಕೃಷಿ ವಿಶ್ವವಿದ್ಯಾನಿಲಯದ ಸಂಶೋಧನೆಗಳು ಹಳ್ಳಿಹಳ್ಳಿಗೂ ಮುಟ್ಟಬೇಕು. ಈ ವರ್ಷದ ಕೇಂದ್ರ ಸರ್ಕಾರದ ಬಜೆಟ್ ಏನಿದೆ ಅದರಲ್ಲಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ಬಹಳಷ್ಟು ಒತ್ತು ಕೊಡಲಾಗಿದೆ. ರಾಜ್ಯ ಸರ್ಕಾರಗಳಿಗೂ ನೆರವು ನೀಡುವ ಯೋಜನೆ ಅದರಲ್ಲಿದೆ. ಕಳೆದ ವರ್ಷ ಕೂಡ ಕೇಂದ್ರ ಪುರಸ್ಕೃತ ಯೋಜನೆ ಇತ್ತು. ಉದಾಹರಣೆಗೆ ರಾಷ್ಟ್ರೀಯ ಬೀಜ ಅಭಿವೃದ್ಧಿ ಯೋಜನೆ ಇದೆ. ರಾಷ್ಟ್ರೀಯ ಕೇಂದ್ರ ವಲಯ ಯೋಜನೆಯನ್ವಯ ಪರಿಶಿಷ್ಟ ಜಾತಿ ಗೈತರ ಪ್ರದೇಶಗಳಲ್ಲಿ ಮುಸುಕಿನ ಜೋಳದ ತೀವ್ರ ಬೇಸಾಯ ಪ್ರಾತ್ಯಕ್ಷಿಕ ಯೋಜನೆ ಮಾಡಿದ್ದಾರೆ. ಕೇಂದ್ರ ವಲಯದ ಪರಿಶಿಷ್ಟ ಬುಡಕಟ್ಟು ಉಪಯೋಜನೆ ಮಾಡಿದ್ದಾರೆ. ಈ ಉಪಯೋಜನೆಯಲ್ಲಿ ೧೭೪.೮೨ ಲಕ್ಷ ಗುರಿ ಇದ್ದರೆ ಸಾಧನೆ ೧೩೬.೦೮ ಲಕ್ಷ ಆಗಿದೆ. ಬುಡಕಟ್ಟಿನ ಯೋಜನೆಯಲ್ಲಿ ಗುರಿ ೬೦.೫೫ ಲಕ್ಷ ಇದ್ದರೆ ಸಾಧನೆ ೩೩.೯ ಲಕ್ಷ ಇದೆ. ಕೇಂದ್ರದ ಪುರಸ್ಕೃತ ಯೋಜನೆಯಲ್ಲಿ ಏನು ಸಾಧನೆ ಎಂಬುದನ್ನು ಹೇಳುತ್ತಿದ್ದೇನೆ. ರಾಷ್ಟ್ರೀಯ ದ್ವಿದಳ ಧಾನ್ಯ ಅಭಿವೃದ್ಧಿ ಯೋಜನೆಗೆ ೧೯೮೭-೮೮ರ ಅನುದಾನ ೪೬ ಲಕ್ಷ ವೆಚ್ಚ ೪೨ ಲಕ್ಷ. ಕೇಂದ್ರ ಸರ್ಕಾರದ ಎಣ್ಣೆ ಕಾಳು ಅಭಿವೃದ್ಧಿ ಯೋಜನೆಗೆ ಅನುದಾನ ೨,೭೯ ೫೬ ರೂಪಾಯಿ ಇದ್ದರೆ ವೆಚ್ಚ ೨,೪೨,೦೧೧ ರೂಪಾಯಿ ಇದೆ. ಕೇಂದ್ರ ಪುರಸ್ಕೃತ ತೀವ್ರತರ ಹತ್ತಿ ಅಭಿವೃದ್ಧಿ ಯೋಜನೆ ಇದೆ. ವಿಶ್ವಬ್ಯಾಂಕಿನ ಕೃಷಿ ವಿಸ್ತರಣಾ ಯೋಜನೆ ಇದೆ. ಅದು ಎರಡನೇ ಹಂತಕ್ಕೆ ಈಗ ಬಂದಿದೆ. ೧-೧೦-೧೯೮೫ ರಿಂದ ಮುಂದೆ ೫ ವರ್ಷಗಳಿಗೆ ೨೫ ಕೋಟಿ ರೂಪಾಯಿಗಳ ಯೋಜನೆ ಇವೆ. ಒಣ ಕೃಷಿ ಭೂಮಿ ಅಭಿವೃದ್ಧಿಗೆ ಇದರಲ್ಲಿ ಒತ್ತು ಕೊಡಲಾಗಿದೆ. ಅನೇಕ ಮಂದಿ ಹೇಳುತ್ತಿದ್ದರು. ಒಣ ಕೃಷಿ ಭೂಮಿಗೆ ಅಭಿವೃದ್ಧಿ ಒತ್ತು ಕೊಡತಕ್ಕ ಕಾರ್ಯಕ್ರಮಗಳನ್ನು ನಮ್ಮ ಜನತಾ ಸರ್ಕಾರ ತಂದಿದೆ, ಎಂದು. ಆದರೆ ಇದು ವಿಶ್ವಬ್ಯಾಂಕ್‌ನ ನೆರವಿನ ಕೃಷಿ ವಿಸ್ತರಣಾ ಯೋಜನೆ ೨ನೇ ಹಂತದಲ್ಲಿ ಅಡಕವಾಗಿದೆ, ವಿಶ್ವಬ್ಯಾಂಕ್‌ಗೆ ಮಂಜೂರಾತಿಗೆ ಕಳುಹಿಸುವಾಗ ಕೇಂದ್ರದ ನೆರವಿತ್ತು. ಈ ಯೋಜನೆಯನ್ನು ಅಂಗೀಕಾರ ಮಾಡಿತ್ತು ಎಂಬುದನ್ನು ನೆನಪು ಇಟ್ಟುಕೊಳ್ಳಬೇಕಾಗುತ್ತದೆ. ಈ ಕೃಷಿ ವಿಶ್ವವಿದ್ಯಾನಿಲಯದ ಸಂಶೋಧನೆಗಳು

ವಿಜ್ಞಾನ ತಂತ್ರಜ್ಞಾನಗಳು ಪ್ರತಿಯೊಂದು ಹಳ್ಳಿಗಳಿಗೂ ಹೋಗಬೇಕಾಗಿದೆ. ಭಾರತ, ಜಪಾನ್ ಕೃಷಿ ವಿಸ್ತರಣಾ ತರಬೇತಿ ಕೇಂದಗಳಿವೆ. ಡ್ಯಾನಿಡಾ ಯೋಜನೆ ಇದೆ, ಇದರ ಮೂಲಕ ತರಬೇತಿ ಆಗುತ್ತಿದೆ. ಬೀದರ್ ಜಿಲ್ಲೆಯಲ್ಲಿ ಒಂದು ಯೋಜನೆ ಇದೆ. ಅದು ಯೂನಿಸೆಫ್ ನೆರವಿನಿಂದ ಆಗುವಂಥಾದ್ದು. ಈ ಎಲ್ಲದರ ತಂತ್ರಜ್ಞಾನ ನಮ್ಮ ಎಷ್ಟು ಹಳ್ಳಿಗಳಿಗೆ ಹೋಗುತ್ತಿದೆ ಎಂಬುದನ್ನು ನಾವು ನೋಡಬೇಕಾಗಿದೆ. ಇದರಲ್ಲಿ ವಿಶ್ವವಿದ್ಯಾನಿಲಯದ ನೆರವನ್ನು ಪಡೆಯುವ ಕುರಿತಾಗಿ ಸಹಾ ಒಂದು ವಿಚಾರ ಕಾಣುತ್ತಿದೆ. ಬೇರೆ ಎಲ್ಲ ವಿಚಾರಗಳನ್ನೂ ಬಿಟ್ಟು ನೇರವಾಗಿ ರೈತರಿಗೆ ನೆರವಾಗತಕ್ಕ ವಿಷಯಗಳನ್ನು ಮಾತ್ರ ನಾನು ಹೇಳಲಿಕ್ಕೆ ಬಯಸುತ್ತೇನೆ ವಿಶ್ವ ವಿದ್ಯಾನಿಲಯದ ಅಧೀನದಲ್ಲಿ ಬರತಕ್ಕ ೪ ವಿಸ್ತರಣಾ ಶಿಕ್ಷಣ ಘಟಕಗಳು ೯೮ ಬಗೆಯ ಪ್ರಯೋಗಗಳನ್ನು ೬೭ ಬಗೆಯ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸಿವೆ. ೬೬ ಪೂರ್ಣ ಹಿಡುವಳಿ ಪ್ರಾತ್ಯಕ್ಷಿಕೆಗಳನ್ನು ರೈತರೊಡನೆ ಕೆಲಸ ಮಾಡುವುದರೊಂದಿಗೆ ೧೮೬ ಜನ ರೈತರನ್ನೊಳಗೊಂಡ ೮ ಸಾಮೂಹಿಕ ಪ್ರಾತ್ಯಕ್ಷಿಕೆಗಳನ್ನು ಅಳವಡಿಸಲಾಯಿತು. ಭಾರತ ಸರ್ಕಾರದ ೨೦ ಅಂಶಗಳ ಕಾರ್ಯಕ್ರಮಗಳ ಅಡಿಯಲ್ಲಿ ವಿಶ್ವವಿದ್ಯಾನಿಲಯದ ವಿಸ್ತರಣಾ ಶಿಕ್ಷಣ ಘಟಕ ಸಂಶೋಧನಾ ಕೇಂದ್ರಗಳು ೪೩ ಹಳ್ಳಿಗಳನ್ನು ದತ್ತು ಸ್ವೀಕರಿಸಿವೆ. ಹೆಬ್ಬಾಳದ ಬೇಕರಿ ತರಬೇತಿ ಶಾಲೆಯು ೨೦ ವಾರಗಳ ತರಬೇತಿ ಕಾರ್ಯಕ್ರಮ, ೪೮ ಪ್ರಯೋಗಗಳನ್ನು ಸಾಧಿಸಿದೆ ಇದು ನಮ್ಮ ಕೃಷಿ ವಿಶ ವಿದ್ಯಾನಿಲಯ ಈ ಕರ್ನಾಟಕ ರಾಜ್ಯದ ಎಲ್ಲ ಜಿಲ್ಲೆಗಳ ಸಹಸ್ರಾರು ಹಳ್ಳಿಗಳಿಗೆ ಇದರ ಯೋಜನೆಯನ್ನು ವಿಜ್ಞಾನ ತಂತ್ರಜ್ಞಾನದ ಪ್ರಯೋಜನವನ್ನು ಕೊಡತಕ್ಕ ಪ್ರಸಂಗದಲ್ಲಿ ಬರೇ ನೂರು ಹಳ್ಳಿಗಳಲ್ಲಿ ೧೨೮ ಜನರಿಗೆ ಈ ಕೆಲಸವಾಗಿದೆ ಎನ್ನುವುದಾದರೆ ಇದು ನಿಜವಾಗಿಯೂ ಶೋಚನೀಯ ವಿಚಾರ. ಇದರ ಬಗ್ಗೆ ಹೆಚ್ಚಿನ ಚಿಂತನೆಯಾಗಬೇಕು.

ಇನ್ನು ಜೈವಿಕ ಅನಿಲ ಸ್ಥಾವರ ಕಳೆದ ಸಾಲಿನ ಗುರಿ ೫ ಸಾವಿರ ಇತ್ತು. ಅದರ ಸಾಧನೆ ೧೫೫೭ ಮಾತ್ರ. ಇದರಲ್ಲೂ ಸಬ್ಸಿಡಿ ರಿಲೀಸ್ ಆಗಿಲ್ಲ. ಇವತ್ತೂ ಕೂಡ ಜಿಲ್ಲಾ ಪರಿಷತ್ತುಗಳಿಗೆ ಅರ್ಜಿಗಳು ಬರುತ್ತಿವೆ. ಜೈವಿಕ ಅನಿಲದ ಸ್ಥಾವರಗಳನ್ನು ಹಳ್ಳಿಗಳಲ್ಲಿ ಯಾರ್ಯಾರು ಮಾಡಿದ್ದಾರೆ, ಬದಲಿ ಇಂಧನ ವ್ಯವಸ್ಥೆಗಾಗಿ ಅವರಿಗೆ ಸಹಾಯಧನ ಬರುತ್ತಿಲ್ಲ. ಅದೇರೀತಿ ಡಿಪಿಎಪಿ, ಎನ್‌ಆರ್‌ಇಪಿ, ಆರ್‌ಎಲ್‌ಇಜಿಪಿ ಈ ಯೋಜನೆಯಲ್ಲೂ ಕೂಡ ಕೇಂದ್ರದ ನೆರವಿನ ಕೃಷಿ ವಿಸ್ತರಣಾ ಯೋಜನೆಗಳಿವೆ ಅದರಲ್ಲೂ ಸಮಪಾತಳಿ ಬದು ಇದರ ಗುರಿ ೮೨೦೦ ಹೆಕ್ಟೇರುಗಳು, ಸಾಧನೆ ೭೫೦೮ ಹೆಕ್ಟೇರು. ಇದೇರೀತಿ ಕೊರಕಲು ತಡೆಗಳು ೩೫೫೨ ಹೆಕ್ಟೇರುಗಳ ಗುರಿ, ಸಾಧನೆ ೩೯೪೧. ಇದೂ ಹೋಗಲಿ ಇಲ್ಲಿ ನಾಲಾ ಬಂಡಿಂಗ್ ಎಂದು ಇದೆ. ಇದರ ಗುರಿ ೨೦ ಹೆಕ್ಟೇರು, ಸಾಧನೆ ೧೪ ಹೆಕ್ಟೇರು. ಹೀಗೆ ಕೇಂದ್ರ ಪುರಸ್ಕೃತ ಯೋಜನೆಗಳಲ್ಲೂ ಕೂಡ ಸಂಪೂರ್ಣ ಸಾಧನೆಯನ್ನು ಮಾಡಿಕೊಳ್ಳುವುದಕ್ಕೆ ನಮಗೆ ಆಗದೇ ಇರತಕ್ಕ ವೈಫಲ್ಯತೆಯನ್ನು ನಾವು ನೋಡುತ್ತಿದ್ದೇವೆ. ಜಲಾನಯನ ಪ್ರದೇಶ ಅಭಿವೃದ್ಧಿ ೧೯೮೭-೮೮ರಲ್ಲಿ ಗುರಿ ಸಾಧನೆ ೭೪೬೭೦ ಹೆಕ್ಟೇರು, ೬೫೭ ಲಕ್ಷ ರೂಪಾಯಿ ಅಂದಾಜು. ಸಾಧನೆ ೫೭೦೦೦ ಹೆಕ್ಟೇರು, ೫೪೯ ಲಕ್ಷ ರೂಪಾಯಿಗಳ ವೆಚ್ಚ. ವಿಶ್ವಬ್ಯಾಂಕ್‌ನ ನೆರವಿನ ಒಣ ಬೇಸಾಯ ಯೋಜನೆ ಏನಿದೆ ಅದರಲ್ಲೂ ಕೂಡ ಸಾಧನೆ ಬಹಳ ಕಡಿಮೆ. ಸ್ವಾಮಿ, ನಾನು ಈ ಫಿಗರ್ಸನ್ನು ಓದುತ್ತಾ ಹೋದರೆ ಈ ವೈಫಲ್ಯದ ಕಥೆ ಬಹಳ ವಿಸ್ತಾರವಾಗುತ್ತದೆಂದು ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಮಳೆ ಆಶ್ರಿತ ಬೇಸಾಯಕ್ಕೆ ಕೇಂದ್ರ ಪುರಸ್ಕೃತ ಯೋಜನೆ ಇದೆ. ಬೆಳೆ ಉತ್ಪಾದನೆ ಒಳಗೊಂಡ ಭೂ ತೇವಾಂಶ ನಿರ್ವಹಣೆ ೩೮೭ ಲಕ್ಷ ಗುರಿ ಇದ್ದರೆ ಸಾಧನೆ ೬೬೩ ಲಕ್ಷ. ಅಳವಡಿಸಿಕೊಂಡ ಪ್ರಯೋಗಗಳು ೧.೬೮ ಲಕ್ಷ, ಸಾಧನೆ ೮೧.೮೧ ಲಕ್ಷ. ಸುಧಾರಿತ ಸಲಕರಣೆಗಳಲ್ಲಿ ಇತ್ಯಾದಿಗಳಲ್ಲೂ ಕೂಡ ಬಹಳ ಕನಿಷ್ಠ ಪ್ರಮಾಣದಲ್ಲಿ ಸಾಧನೆ ಇರುವುದನ್ನು ನಾವು ನೋಡುತ್ತಿದ್ದೇವೆ. ವಿಶ್ವಬ್ಯಾಂಕ್‌ನ ಯೋಜನೆಯನ್ನು ಅನುಷ್ಠಾನಕ್ಕೆ ತರುವಾಗ ಮೇಲ್ಮಟ್ಟದಲ್ಲಿ ಸಾಕಷ್ಟು ಅಧಿಕಾರಿಗಳು ಇರಬಹುದು. ಆದರೆ ಕೃಷಿ ಸಹಾಯಕರು ಇಲ್ಲ. ಒಂದೊಂದು ಜಿಲ್ಲೆಯಲ್ಲಿ ನೂರು ಇನ್ನೂರು ಸ್ಥಾನಗಳು ಖಾಲಿ ಇವೆ. ನನ್ನ ತಾಲೂಕಿನಲ್ಲಿ ೪೨ ಕೃಷಿ ಸಹಾಯಕರ ಸ್ಥಾನಗಳ ಪೈಕಿ ೨೦ ಜನ ಕೃಷಿ ಸಹಾಯಕರಿದ್ದಾರೆ. ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏನು ತೊಂದರೆ ಇದೆಯೆಂದರೆ ವಿಶ್ವಬ್ಯಾಂಕ್ ಯೋಜನೆಯ ಪ್ರಕಾರ ಒಂದೊಂದು ಸರ್ಕಲ್‌ಗೆ ಇನ್‌ಛಾರ್ಜ್ ವ್ಯವಸ್ಥೆಯನ್ನೂ ಕೂಡ ಮಾಡುವಂತಿಲ್ಲ. ಒಂದೊಂದು ಸರ್ಕಲ್ ಖಾಲಿ ಇದ್ದರೆ ಅದರಲ್ಲಿ ಯಾರೂ ಕೃಷಿ ಕುರಿತು ಸವಲತ್ತುಗಳನ್ನು ಕೊಡತಕ್ಕ ಕೃಷಿ ಸಹಾಯಕರು ಬರುವಂತಿಲ್ಲ. ಅದಕ್ಕೊಂದು ಮೇಲಧಿಕಾರಿಗಳು ಬರಬೇಕಾಗುತ್ತದೆ. ಆದರೆ ಈ ಮೇಲಧಿಕಾರಿಗಳು ಬೇರೆಕಡೆ ಸೂಪರ್‌ವಿಷನ್ ಮಾಡುತ್ತಿರುತ್ತಾರೆ. ಇದಕ್ಕೆ ಇನ್‌ಛಾರ್ಜ್ ಇಲ್ಲ. ಆದರೆ ದೂರ

ದೃಷ್ಟವಶಾತ್ ಎಲ್ಲಾದರೂ ಪ್ರೈಮರಿ ಕೋ ಆಪರೇಟೀವ್ ಸೊಸೈಟಿಗೆ ಓಟು ಕೊಡಬೇಕಾದ ಪ್ರಸಂಗದಲ್ಲಿ ಇನ್ ಛಾರ್ಜ್ ಮಾಡಿ ಕಳುಹಿಸುತ್ತಾರೆ. ಕೃಷಿ ಕೆಲಸ ಮಾಡಲಿಕ್ಕೆ ವಿಶ್ವಬ್ಯಾಂಕ್‌ನ ಪ್ರಕಾರ ಇನ್ ಛಾರ್ಜ್ ಮಾಡಲಿಕ್ಕೆ ಆಗುವುದಿಲ್ಲ.

ಕೃಷಿ ಕೆಲಸವನ್ನು ಮಾಡುವುದಕ್ಕೆ ಇವರನ್ನು ಇನ್-ಛಾರ್ಜ್ ಮಾಡುವುದಕ್ಕಾಗುವುದಿಲ್ಲ, ವಿಶ್ವ ಬ್ಯಾಂಕ್‌ನ ನಿಯಮದ ಪ್ರಕಾರ. ಆದರೆ ಪ್ರೈಮರಿ ಕೊ-ಆಪರೇಟಿವ್ ಸೊಸೈಟಿಯ ಆಡಳಿತ ಮಂಡಲಿಯ ಚುನಾವಣೆಗೆ ಇನ್-ಛಾರ್ಜ್ ಮಾಡಿ ಕಳುಹಿಸುವ ಒಂದು ವ್ಯವಸ್ಥೆ ಇದೆ. ಇದು ನಮ್ಮ ದುರಾದೃಷ್ಟ. ನೇಮಕಗಳಲ್ಲಿ ಈ ರೀತಿ ಇದೆ. ಇನ್ನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಬೇಸಾಯ ಕ್ರಮವೇ ಬೇರೆ ಬೇರೆ ಕಡೆಯ ಹಾಗೆ ಅಲ್ಲ. ಇಲ್ಲಿನ ಇಲಾಖೆಗಳಲ್ಲಿ ಇರುವವರು ಹೆಚ್ಚಿನವರು ಧಾರವಾಡದ ಕಡೆಯವರು. ಜೋಳದ ಬೇಸಾಯದ ಕುರಿತು ಅರಿವು ಅವರಲ್ಲಿರುತ್ತದೆ. ದಕ್ಷಿಣ ಕನ್ನಡದ ಹವಾಮಾನ, ಅಲ್ಲಿಯ ಬೇಸಾಯಕ್ರಮ, ಅಲ್ಲಿಯ ಭಾಷೆಯಾದ ತುಳು ಇವ್ಯಾವುವೂ ಗೊತ್ತಿಲ್ಲದೆ ವಿಫಲರಾದ ಅವರು ಒಂದು ವರ್ಷದಲ್ಲಿ ಟ್ರಾನ್ಸ್‌ಫರ್ ತೆಗೆದುಕೊಳ್ಳುವುದಕ್ಕೆ ನೋಡುತ್ತಾರೆ. ಆ ದೃಷ್ಟಿಯಿಂದ ದಕ್ಷಿಣ ಕನ್ನಡದವರಲ್ಲಿ ಕೃಷಿ ಇಲಾಖೆಯು ಕೃಷಿ ಸಹಾಯಕರನ್ನಾಗಿ ನೇಮಕ ನೇಮಕ ಮಾಡಿಕೊಳ್ಳುವುದು ಅತ್ಯಂತ ಕಡಿಮೆ. ಇವರಲ್ಲಿ ಕೆಲವರಿಗಾದರೂ ಅವಕಾಶ ಕೊಟ್ಟರೆ ಸ್ವಲ್ಪ ಒಳ್ಳೆಯದಾಗುತ್ತದ. ಸ್ಥಳೀಯ ಕೃಷಿ ಅನುಭವ ಇರುವವರಿಗೆ, ಸ್ಥಳೀಯ ಭಾಷೆಯ ಪರಿಚಯ ಇರುವವರಿಗೆ ಅವಕಾಶ ಕೊಡಬೇಕೆಂದು ಹೇಳುತ್ತೇನೆ. ನಮ್ಮಲ್ಲಿ ಕಬ್ಬು ಬೆಳೆಯ ಅಭಿವೃದ್ಧಿ ಯೋಜನೆ ಇದೆ. ಇದರಲ್ಲಿ ನನ್ನ ಪ್ರಾರ್ಥನೆ ಎಂದರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೊಸ ಸಕ್ಕರೆ ಕಾರ್ಖಾನೆ ಆಗಿದೆ. ಅದಕ್ಕೆ ವಿಶೇಷ ಗಮನವನ್ನು ಕೊಡಬೇಕು. ಮಾತೆತ್ತಿದರೆ ದಕ್ಷಿಣ ಕನ್ನಡ ಅಭಿವೃದ್ಧಿ ಹೊಂದಿದೆ ಎನ್ನುವ ಮಾತು ಬರುತ್ತಾ ಇದೆ. ದಕ್ಷಿಣ ಕನ್ನಡದಲ್ಲಿ ಬಂದರು ಇದೆ, ವಿಮಾನ ನಿಲ್ದಾಣ ಇದೆ, ಎಂ. ಸಿ. ಎಫ್. ಇದೆ, ಮತ್ತೊಂದು ಕಾರ್ಖಾನೆ ಇದೆ. ಇನ್ನು ಮುಂದೆ ಆಗುತ್ತದೆ ಆದರೆ ದಕ್ಷಿಣ ಕನ್ನಡದ ರೈತರು ಮುಂದೆ ಬರಬಾರದೇ ? ರೈತರಿಗೆ ಬೇಕಾದ ಕೆಲವು ಕಾರ್ಯಕ್ರಮಗಳನ್ನು ಕೂಡಾ ಕೊಡಬೇಕೆಂದು ಹೇಳುತ್ತೇನೆ. ರಸಗೊಬ್ಬರ ನಿಯಂತ್ರಣ ಕಾಯಿದೆಯನ್ನು ನಿಷ್ಠುರವಾಗಿ ಜಾರಿಗೊಳಿಸಬೇಕು. ಕಲಬೆರಕೆ ಹಾಗೂ ಕಾಲಮೀರಿದ ಅವಧಿ ಮೀರಿದ ಗೊಬ್ಬರ ಹಾಗೂ ಕ್ರಿಮಿನಾಶಕಗಳ ಮಾರಾಟದಿಂದ ರೈತರಿಗೆ ಅನ್ಯಾಯ ಆಗದಂತೆ ನೋಡಿಕೊಳ್ಳಬೇಕು. ಬೇರೆ ಬೇರೆ ಸಂಸ್ಥೆಗಳು ಗೊಬ್ಬರ ಮಾರಾಟದಲ್ಲಿ ಬೇರೆ ಬೇರೆ ದರ ನಿಷ್ಕರ್ಷೆ ಮಾಡುತ್ತಿವೆ. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಆಗಲೀ, ಮಾರ್ಕೆಟಿಂಗ್ ಫೆಡರೇಷನ್ ಆಗಲಿ, ಬೇರೆ ಬೇರೆ ಸಹಕಾರಿ ಸಂಸ್ಥೆಗಳಾಗಲೀ ಇವುಗಳೆಲ್ಲಾ ಬೇರೆ ಬೇರೆ ರೀತಿಯ ದರದಲ್ಲಿ ಇವತ್ತು ಮಾರಾಟ ಮಾಡುತ್ತಿವೆ. ಸಹಕಾರಿ ರಂಗದಲ್ಲಿ ಮಾರ್ಕೆಟಿಂಗ್ ಫೆಡರೇಷನ್‌ನಿಂದಲೇ ತೆಗೆದುಕೊಳ್ಳಬೇಕೆಂದು ಕಡ್ಡಾಯಗೊಳಿಸಲಾಗಿದೆ. ಥ್ರೀ ಟೈರ್ ಸಿಸ್ಟಮ್‌ನ್ನು ತೆಗೆದು ಟೂ ಟೈರ್ ಸಿಸ್ಟಮ್ಮನ್ನು ಮಾಡಿ ಎಂದು ಮಾಡಿ ನೇರವಾಗಿ ಈಗ ತಾಲ್ಲೂಕು ಮಾರ್ಕೆಟ್ ಸೊಸೈಟಿಗಳಾಗಲಿ, ಪ್ರೈಮರಿ ಸೊಸೈಟಿಗಳಾಗಲೀ ಖರೀದಿ ಮಾಡುವ ಹಾಗೆ ಇಲ್ಲ. ಇದರ ಪರಿಣಾಮವಾಗಿ ಹೆಚ್ಚಿಗೆ ದರವನ್ನು ರೈತರು ಕೊಡಬೇಕಾದ ಪರಿಸ್ಥಿತಿ ಬರುತ್ತದೆ. ಈ ಬಗ್ಗೆ ಯೋಚನೆ ಮಾಡಬೇಕು. ಬೆಳೆ ವಿಮೆ ಯೋಜನೆ ಇವತ್ತು ಜಾರಿಯಲ್ಲಿದ್ದೆ

(ಮಾನ್ಯ ಅಧ್ಯಕ್ಷರು ಅಧ್ಯಕ್ಷಪೀಠವನ್ನು ಅಲಂಕರಿಸಿದರು)

ಜಾರಿಯಲ್ಲಿದೆ, ಇದು ನಿಜವಾಗಿಯೂ ಬೆಳೆ ವಿಮೆ ಯೋಜನೆ ಅಲ್ಲ, ಬೆಳೆ ಸಾಲದ ವಿಮೆ ಯೋಜನೆ. ಬೆಳೆ ವಿಮೆ ಯೋಜನೆ ಎನ್ನುವುದು ಸಾಧುವಾದದ್ದಲ್ಲ. ಬೆಳೆ ಎಲ್ಲಿ ಹಾಳು ಆಗುತ್ತದೆ, ನ್ಯಾಯವಾಗಿ ಯಾವ ರೈತನ ಹೊಲದಲ್ಲಿ ಹಾಳಾಗುತ್ತದೆ ಅಲ್ಲಿಗೆ, ಮನುಷ್ಯನ ವಿಮೆ ಇದ್ದ ಹಾಗೆ ಅಥವಾ ಜಾನುವಾರಿನ ವಿಮೆ ಇದ್ದ ಹಾಗೆ ಬೆಳೆ ನಾಶದ ಕುರಿತಾದ ಪ್ರಯೋಗ ಮಾಡಿಸಿ ಪರಿಹಾರ ಪಾವತಿ ಆಗಬೇಕೇ ಹೊರತು, ಇಡೀ ತಾಲ್ಲೂಕಿನಲ್ಲಿ ಎಲ್ಲಾದರೂ ಸರ್ವೆ ಆಗಿ ಅದರ ಆಧಾರದ ಮೇಲೆ ವಿಮೆ ಪಾವತಿ ಆಗುವಂತಹದ್ದು ಆಗಬಾರದು. ಹೀಗೆ ನಮ್ಮ ದಕ್ಷಿಣ ಕನ್ನಡದಲ್ಲಿ ಯಾವತ್ತೂ ಕೊಡುವುದಕ್ಕಾಗುವುದಿಲ್ಲ. ಸುಮ್ಮನೆ 20 ಲಕ್ಷ ರೂಪಾಯಿ ವಿಮಾ ಪ್ರೀಮಿಯಂ ಆಗಿ ಪ್ರತಿ ವರ್ಷ ರೈತರಿಂದ ದಂಡವಾಗಿ ವಸೂಲು ಮಾಡುತ್ತಾರೆ. ಆದುದರಿಂದ ಎಲ್ಲಾದರೂ ಕ್ಷಾಮ ಬರುವ ತಾಲ್ಲೂಕ್ ತಾಲ್ಲೂಕೇ ನಾಶ ಆಗುವ ಪ್ರದೇಶ ಇದ್ದರೆ ಅದಕ್ಕೆ ಲಾಗೂ ಮಾಡಬೇಕೇ ಹೊರತು ನಮ್ಮ ಜಿಲ್ಲೆಗೆ ಇದನ್ನು ಮಾಡಬಾರದು ಎಂದು ಹೇಳುತ್ತೇನೆ. ಬೆಳೆ ಸಾಲಕ್ಕೆ ಈ ವರ್ಷ ಬಡ್ಡಿ ರಿಯಾಯಿತಿ ಸಂಪೂರ್ಣ ಇದೆ. ಬೇರೆ ವರ್ಷಗಳಲ್ಲಿ 2 ಪರ್ಸೆಂಟ್ ಬಡ್ಡಿ ಕೊಟ್ಟರೆ ಸಾಕು. ಅದರ ಜೊತೆಗೆ ಸಹಕಾರಿ ಸಂಸ್ಥೆಗಳ ಮೂಲಕ

ಮಾರಾಟ ಮಾಡಿದಾಗ ಮಾರಾಟ ಸಂಯೋಜನೆಗೆ ೫ ಪರ್ಸೆಂಟ್ ರಿಯಾಯಿತಿ ಕೊಡುವುದು ಇದೆ. ಹಾಗೂ ೨ ಪರ್ಸೆಂಟ್‌ನ್ನು ಸೊಸೈಟಿಗಳಿಗೆ ಕೊಡುವ ವ್ಯವಸ್ಥೆ ಇದೆ. ಸೊಸೈಟಿಗಳು ಅದನ್ನು ರೈತನಿಗೆ ಕೊಟ್ಟರೆ ೫ ಪ್ಲಸ್ ೨ ಹೀಗೆ ೭ ಪರ್ಸೆಂಟ್ ರೈತರಿಗೆ ರಿಯಾಯಿತಿ ಆಗುತ್ತದೆ ಎಂದರೆ ಸರ್ಕಾರದಲ್ಲಿ ಕೂಡಾ ಬಡ್ಡಿ ಇಲ್ಲದೆ ಸಾಲ ಕೊಡುವ ವ್ಯವಸ್ಥೆ ಇದೆ. ಆದರೆ ಇದು ಪ್ರಾಯೋಗಿಕವಾಗಿ ಅನುಷ್ಠಾನಕ್ಕೆ ಬರುವುದಿಲ್ಲ. ಆ ಹಣ ಏನಿದೆ ಅದು ಎಪಿಎಂಸಿ.ಗೆ ಟ್ಯಾಕ್ಸ್ ಮೂಲಕ ಹೋಗಬೇಕು. ಯಾವುದನ್ನು ಮಾರಾಟ ಸಂಯೋಜನೆಗೆ ವಸೂಲು ಮಾಡುತ್ತಿರುತ್ತೇವೋ ಅದನ್ನು ರಿಯಾಯಿತಿ ಕೊಡುವುದಕ್ಕೆ ಸಾಧ್ಯವಾಗದಿದ್ದರೆ ಸರ್ಕಾರದ ಒಂದು ಘೋಷಣೆ, ಘೋಷಣೆಯಾಗಿಯೇ ಮಾತ್ರ ಇರುತ್ತದೆ. ಇನ್ನು ತರಬೇತಿ ಕಾರ್ಯಕ್ರಮಗಳು ಅನೇಕ ಇವೆ. ಇವು ಈಗ ಜಿಲ್ಲಾಪರಿಷತ್ತು, ಮಂಡಲ ಪಂಚಾಯಿತಿಗಳಿಂ ಬಂದಿರುವುದರಿಂದ ಅವುಗಳ ಮುಖಾಂತರ ಆಗಬೇಕು. ಮತ್ತು ಕೃಷಿಕ ಸಮಾಜ ಎಂದು ಇದೆ. ನಮ್ಮ ಸರ್ಕಾರದ ವ್ಯವಸಾಯ ಇಲಾಖೆಯ ಡೈರೆಕ್ಟರೊಬ್ಬರು ಅದರ ಕಾರ್ಯದರ್ಶಿಗಳಿದ್ದಾರೆ. ಕೃಷಿ ಮಂತ್ರಿಗಳು ಅದರ ಅಧ್ಯಕ್ಷರಿದ್ದಾರೆ. ಆದರ ವ್ಯವಸ್ಥೆ ಸರಿಯಾಗಿ ಆಗಬೇಕು. ಪ್ರದೇಶ ಕೃಷಿಕ ಸಮಾಜದಲ್ಲಿ ನಾನು ಕೇಳಿದ ಹಾಗೆ ಎರಡೆರಡು ಅಧ್ಯಕ್ಷರಿದ್ದಾರೆ. ಕೃಷಿಕ ಸಮಾಜದಲ್ಲಿ ಸಮರ್ಪಕವಾಗಿ ಕೆಲಸ ನಡೆಯುತ್ತಿಲ್ಲ. ಅದನ್ನು ಒಂದು ವ್ಯವಸ್ಥೆಗೆ ಒಳಪಡಿಸಿ ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ತೋಟಗಾರಿಕೆ ಇಲಾಖೆಯ ವಿಚಾರದಲ್ಲಿ ಒಂದೆರಡು ವಿಚಾರಗಳನ್ನು ಹೇಳುತ್ತೇನೆ, ಆಹಾರಧಾನ್ಯಗಳ ಬೆಲೆಯು ಅನೇಕ ಮಿತ್ರರು ಹೇಳಿದಹಾಗೆ ವಿಪರೀತ ಕಡಿಮೆಯಾಗುತ್ತಿದೆ. ಆದರೆ ತೋಟಗಾರಿಕೆ ಇಲಾಖೆ ಅಂದರೆ ಲಾಲ್‌ಬಾಗ್, ಕಬ್ಬನ್‌ಪಾರ್ಕ್ ಮತ್ತು ವಿಧಾನಸೌಧದ ಮಧ್ಯದಲ್ಲಿ ಕೆಲಸ ಮಾಡುವಂತಹದ್ದು ಮಾತ್ರ ಆಗಿದೆ. ಸಾರ್ಕ್ ಸಮ್ಮೇಳನದಲ್ಲಿ Indian and Foreign Dignataries... ಪ್ರಶಸ್ತಿಯನ್ನು ಕೊಟ್ಟಿದ್ದಾರೆಂದು ವರದಿಯಲ್ಲಿದೆ. ಇದರ ಬದಲಿಗೆ ಇದು ಹಳ್ಳಿಯ ಮೂಲೆಗೆ ತಲುಪಬೇಕು. ಅವರು ಹಳ್ಳಿಗಳನ್ನು ನೋಡಲಿಲ್ಲ. ಮಾನ್ಯ ಭೂಪತಿಯವರು ಮಾತನಾಡುತ್ತಾ ದಕ್ಷಿಣ ಕನ್ನಡ ಜಿಲ್ಲೆಗೆ ಒಂದು ಯೋಜನೆಯಿದೆಯೆಂದು ಹೇಳಿದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕ್ಯಾಶ್ಯೂ ಪ್ರಾಜೆಕ್ಟ್ ಯೋಜನೆ ಮಾಡಿದ್ದಾರೆ. ಅದನ್ನು ಬೇರೆ ಕಡೆ ಮಾಡುವುದಕ್ಕಾಗುವುದಿಲ್ಲ ಬನಾನ ಯೋಜನೆ ಸಹ ಇದೆ. ಬನಾನವನ್ನು ಎಕ್ಸ್‌ಪೋರ್ಟ್ ಮಾಡತಕ್ಕ ಉದ್ದೇಶದ. ಆ ಯೋಜನೆ ಮಂಜೂರು ಆಗಿದ್ದರೂ ಪ್ರಗತಿಯಾಗಿಲ್ಲ. ಪ್ರಾತ್ಯಕ್ಷತೆ ಹಂತದಲ್ಲಿಯೇ ಇದೆ, ತರಕಾರಿ ಹಣ್ಣು ಬೆಳೆದು ರಫ್ತು ಮಾಡಬಹುದು. ಸಣ್ಣ ಹಿಡುವಳಿದಾರರು ಇದ್ದಾರೆ, ಭೂಸುಧಾರಣೆ ಕಾನೂನಿನ ಮೂಲಕ ಭೂಮಿಯನ್ನು ಪಡೆದುಕೊಂಡಂತಹವರು ಇದ್ದಾರೆ. ಅವರ ಆರ್ಥಿಕ ಸ್ಥಿತಿ ಸುಧಾರಣೆಯಾಗಲಿಕ್ಕೆ ಪೂರ್ವಯೋಜಿತ ಯೋಜನೆಗಳನ್ನು ಮಾಡಿಕೊಂಡು ಕೆಲಸಮಾಡಬೇಕು. ಕಸಿ ಮಾವಿನ ಗಿಡಗಳನ್ನು ಕೊಡಬೇಕು. ನಮ್ಮಲ್ಲಿ ಯಾವುದೇ ಫ್ರೂಟ್ಸ್ ಗಿಡಗಳ ರೂಟ್ ಸ್ಟಾಕಿಲ್ಲ. ಉತ್ಪಾದನೆ ಮಾಡುವಂತಹ ಕ್ರಮ ನಮ್ಮಲ್ಲಿಲ್ಲ. ತೆಂಗಿನ ಗಿಡಗಳನ್ನು ಉತ್ಪಾದನೆ ಮಾಡಲಿಕ್ಕೆ ರೀತಿಯ ತೆಂಗಿನಕಾಯಿಗಳನ್ನು ರೈತರಿಂದ ಖರೀದಿ ಮಾಡಬೇಕು. ಇಲಾಖೆಯವರು ರೈತರಿಂದ ಖರೀದಿ ಮಾಡದೆ ಮಾರ್ಕೆಟ್‌ನಿಂದ ಖರೀದಿ ಮಾಡುತ್ತಿದ್ದಾರೆ. ಒಳ್ಳೆಯ ರೀತಿಯ ತೆಂಗಿನ ಸಸಿಗಳನ್ನು ರೈತರಿಗೆ ಕೊಡಬೇಕು. ತೆಂಗಿನ ಸಸಿಗಳನ್ನು ನೆಡುವಾಗ ಅಧಿಕಾರಿಗಳು ೫–೧೦ ಅಡಿಗಳಿಗೆಲ್ಲಾ ನೆಡಸುತ್ತಿದ್ದಾರೆ ತೆಂಗಿನ ಸಸಿಗಳನ್ನು ನೆಡುವಾಗ ೩೦ ಅಡಿಗಳಿಗೆ ಒಂದರಂತೆ ನೆಡಬೇಕು. ಇಲಾಖೆಯವರು ರೈತರಿಗೆ ಸರಿಯಾದ ರೀತಿಯಲ್ಲಿ ಹೇಳಬೇಕು. ತೆಂಗಿನ ಗಿಡಗಳನ್ನು ನೆಡುವಾಗ ರೈತರನ್ನು ನಿಲ್ಲಿಸಿ ಹೇಳಬೇಕು. ಜನರಿಗೆ ಸ್ಫೂರ್ತಿಕೊಟ್ಟು ರೈತರಿಗೆ ಹತ್ತಿರವಾಗಿ ಕೃಷಿ ಮತ್ತು ತೋಟಗಾರಿಕೆ ಇಲಾಖೆಯವರು ಮುಂದೆ ಬರಬೇಕು. ತೋಟಗಾರಿಕೆ ಇಲಾಖೆಯಲ್ಲಿ ಒಂದು ವಿಚಾರವನ್ನು ಕೇಳಿದ್ದೇನೆ. ಅನೇಕ ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದರೂ ಅಲ್ಲಿ ಸೀನಿಯಾರಿಟಿ ಫಿಕ್ಸ್ ಮಾಡಿಲ್ಲ. ೧೯೬೩ನೇ ಇಸವಿಯಲ್ಲಿ ಕೃಷಿ ಇಲಾಖೆಯಿಂದ ತೋಟಗಾರಿಕೆ ಇಲಾಖೆನೆ ಬಂದರೂ ಕೂಡ ಎರಡು ಮೂರು ಸಲ ಈ ಬಗ್ಗೆ ಚಿಂತನೆ ಆದರೂ ಸೀನಿಯಾರಿಟಿ ಫಿಕ್ಸ್ ಆಗಿಲ್ಲವೆನ್ನುವ ವಿಚಾರವನ್ನು ಕೇಳಿದ್ದೇನೆ ಅದನ್ನು ಸರಿಪಡಿಸಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ತಾವು ಬೇಗ ಮುಗಿಸಿ.

ಶ್ರೀ ಜಿ. ಎಸ್. ಆಚಾರ್.—ಇನ್ನು ಒಂದೆರಡು ವಿಚಾರಗಳನ್ನು ಹೇಳುತ್ತೇನೆ. ಈ ವರ್ಷ ಅಡಿಕೆ ಬೆಲೆ ವಿಪರೀತ ಕುಸಿತವಾಗಿದೆ. ಹಿಂದಿನ ವರ್ಷ ಒಂದು ಕೆ.ಜಿ. ಅಡಿಕೆ ಬೆಲೆ ೩೦ ರೂಪಾಯಿ

ಇತ್ತು. ಈ ವರ್ಷ ಒಂದು ಕೆ.ಜಿ. ಅಡಿಕೆ ಬೆಲೆ ೧೮ ರೂಪಾಯಿ ೨೦ ರೂಪಾಯಿ ಇದೆ, ಕಳೆದ ವರ್ಷವೇ ಈ ಬಗ್ಗೆ ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಿದಾಗ, ಇದರ ವಿಚಾರವಾಗಿ...

ಅಧ್ಯಕ್ಷರು,—ಏನಾಗಬೇಕೆಂಬುದರ ಬಗ್ಗೆ ಸಲಹೆ ಕೊಡಿ, ಪ್ರಿಯಾಂಬಲ್ ಬೇಡ.

ಶ್ರೀ ಜಿ. ಎಸ್. ಆಚಾರ್.—ಈ ವಿಚಾರದ ಬಗ್ಗೆ ನಿಯೋಗ ಬಂದಾಗ ಮಾನ್ಯ ಮಂತ್ರಿಗಳು ಇದರ ಬಗ್ಗೆ ಕುರಿತು ವಿಚಾರ ಮಾಡುತ್ತೇನೆ, ಪರಿಶೀಲನೆ ಮಾಡುತ್ತೇನೆ, ಒಂದು ಪ್ರಯೋಗ ಮಾಡುತ್ತೇನೆಂದು ಹೇಳಿದರು. ಈ ಬಗ್ಗೆ ಯಾವ ವ್ಯವಸ್ಥೆಯನ್ನೂ ಮಾಡಲಿಲ್ಲ, ಪರಿಶೀಲನೆಯನ್ನು ಮಾಡಲಿಲ್ಲ, ಅಡಿಕೆ ಬೆಲೆ ಕುಸಿತವಾಗುತ್ತಿದೆ. ದಿನಾಂಕ ೦–೧೦–೧೯೮೭ರಲ್ಲಿ ಕನ್ನಡಪ್ರಭ ಪತ್ರಿಕೆಯ ಮುಖಪುಟದಲ್ಲಿ ಒಂದು ವರದಿ ಇದೆ. ಅದೇನೆಂದರೆ ತೋಟಗಾರಿಕೆ ಇಲಾಖೆಯ ರಾಜ್ಯ ಮಂತ್ರಿಗಳಾದ ಬಿ. ಸೋಮಶೇಖರ್‌ರವರದ್ದು "ತೆಂಗಿನ ಬೆಳೆಗೆ ಬೆಂಬಲ ಬೆಲೆಯನ್ನು ದೊರಕಿಸಿ ಕೊಡುವ ಬಗ್ಗೆ ರಾಜ್ಯ ಸರ್ಕಾರ ತೀವ್ರ ಆಸಕ್ತಿ ವಹಿಸಿದೆ'' ಎಂದು ಹೇಳಿದ್ದಾರೆ.

ಅಧ್ಯಕ್ಷರು.—ಏನು ಆಗಬೇಕೆಂಬುದರ ಬಗ್ಗೆ ಸರ್ಕಾರಕ್ಕೆ ಸಲಹೆ ಕೊಡಿ.

ಶ್ರೀ ಜಿ. ಎಸ್. ಆಚಾರ್.—ದಿನದಿಂದ ದಿನಕ್ಕೆ ತೆಂಗಿನ ಬೆಲೆ ಇಳಿಯುತ್ತಾ ಇದೆ. ಅದರ ಬಗ್ಗೆ ಬೆಂಬಲ ಬೆಲೆ ದೊರಕಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಿದ್ದರು ಆದರೆ ಏನೂ ಆಗಲಿಲ್ಲ. ಇದನ್ನು ಕುರಿತು ಕೂಡ ಆಲೋಚನೆ ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ ಕೃಷಿ ಕ್ಷೇತ್ರದ ವೈಫಲ್ಯ ಕುರಿತು ಇಬ್ಬರು ವಿಜ್ಞಾನಿಗಳು ಕೆಲವೊಂದು ವಿಚಾರಗಳನ್ನು ಹೇಳಿದ್ದಾರೆ ವಿಜ್ಞಾನಿಗಳ ಹೆಸರು ಗೀತಾಂಜಲಿಮಾಲಿಕೆ ಮತ್ತು ಕಿಶನ್‌ರಾವ್ ಎಂಬುವವರು ಏನು ಹೇಳಿದ್ದಾರೆಂದರೆ......

ಅಧ್ಯಕ್ಷರು.—ಸಲಹೆ ಕೊಡಿ ಭಾಷಣ ಮಾಡುವುದು ಬೇಡ.

ಶ್ರೀ ಜಿ. ಎಸ್. ಆಚಾರ್.—ಅವರು ಏನು ಹೇಳಿದ್ದಾರೆಂದರೆ ಭಾರತದಲ್ಲಿ ಆಹಾರ ಧಾನ್ಯಗಳ ಉತ್ಪಾದನೆ ಒಂದು ಹೆಕ್ಟೇರ್‌ಗೆ ೧೭೫೦ ಕೆ. ಜಿ. ಆದರೆ. ಜಪಾನ್ ದೇಶದಲ್ಲಿ ಒಂದು ಹೆಕ್ಟೇರ್‌ಗೆ ೬.೭೬೦ ಕೆ. ಜಿ. ಬೆಳೆಯುತ್ತಾರೆ. ಇದಕ್ಕೆ ಏನು ಕಾರಣ ಎಂಬುದನ್ನು ವಿಶ್ಲೇಷಣೆ ಮಾಡಿದ್ದಾರೆ. ಭೂ ಸಂಧಾರಣೆ ಮತ್ತು ಭೂ ಅಭಿವೃದ್ಧಿ ಯೋಜನೆಗಳ ಅನುಷ್ಠಾನದಲ್ಲಿ ವಿಳಂಬ. ಎಲ್ಲಾ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸದೇ ಇರುವುದರಿಂದ ಬೇಸಾಯಕ್ಕೆ ಸಾಕಷ್ಟು ನೀರು ಒದಗಿಸಲು ವೈಫಲ್ಯವಾಗಿರುವುದು ಕೃಷಿ ಸಂಶೋಧನೆಯ ಫಲಿತಾಂಶ ಪ್ರೇರಿತ ಅಭಿವೃದ್ಧಿ ಹಾಗೂ ವಿತರಣೆಯ ವ್ಯವಸ್ಥೆ ಸಮರ್ಪಕವಾಗಿಲ್ಲದೆ ಇರುವುದು. ಕಡಿಮೆ ಬಡ್ಡಿಯ ಎಲ್ಲ ವಿಧದ ಎಲ್ಲಾ ಹಣಕಾಸಿನ ನೆರವು ಎಲ್ಲಾ ರೈತರಿಗೆ ಸಕಾಲದಲ್ಲಿ ಸಿಗದೇ ಇರುವುದು. ಸಿಗುವಲ್ಲಿಯ ವ್ಯವಸ್ಥೆಯಲ್ಲಿಯೇ ಲೋಪವಿರುವುದು. ಪರಿಪೂರ್ಣ ಸಂಬಧ್ರ ಪ್ರೋತ್ಸಾಹಕದ ಬೆಲೆ ಸಿಗದೆ ಇರುವುದು, ಮಾರ್ಕೆಟ್ ವ್ಯವಸ್ಥೆ ಇಲ್ಲದೆ ಇರುವುದು. ಗ್ರಾಮೀಣ ಪ್ರದೇಶಗಳ ಅಂತರ್ಗತ ಮಾನವ ಶಕ್ತಿ ಮತ್ತು ಉತ್ಪಾದನೆಯ ಸಾಮರ್ಥ್ಯ, ಹೊಸ ಸಂಸ್ಥೆಗಳ ರಚನೆಯ ಅವಶ್ಯಕತೆ ಇರುವುದು...ಈಗ ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯತ್‌ಗಳು ಬಂದಿರುವುದರಿಂದ ಈ ಹೊಸ ಸಂಸ್ಥೆಗಳ ಮೂಲಕ, ಕೃಷಿ, ಪಶುಸಂಗೋಪನೆ, ಗ್ರಾಮೀಣಾಭಿವೃದ್ಧಿ ಮತ್ತು ಸಹಕಾರ ಇವುಗಳ ಒಂದು ಸಂಯೋಜಿತ ಕಾರ್ಯಕ್ರಮ ಆಗಬೇಕು. ಇದರ ಕುರಿತಾದ ಚಿಂತನೆ ಮೂಡಿ ಬರಬೇಕು. ಬರೇ ಅಧಿಕಾರಿಗಳ ಕಾರ್ಯಕ್ರಮ ಆಗಬಾರದು ಇವತ್ತು ಮಂಡಳ–೨ ಪ್ರೋಗ್ರಾಮ್ ಎನ್ನುವುದರ ಅನುಷ್ಠಾನ ಅಧಿಕಾರಿಗಳಿಂದ ನಡೆಸಲ್ಪಡುತ್ತಿದೆ ಎನ್ನುವಂಥಾದ್ದು ಮಂಡಲಗಳಿಗೆ ಇವತ್ತಿಗೂ ಅರಿವು ಆಗುವುದಿಲ್ಲ. ಇದರ ಕುರಿತಾದ ಸಂಪೂರ್ಣವಾದ ಸಂಯೋಜಿತ ಕಾರ್ಯಕ್ರಮ ಆಗಬೇಕು ಎಂದು ಹೇಳುತ್ತೇನೆ.

ಅಧ್ಯಕ್ಷರು.—ನಾನು ನಿಮಗೆ ನಿಲ್ಲಿಸಿ ಎಂದು ಹೇಳಬೇಕಾಗುತ್ತದೆ, ರೆಕಾರ್ಡ್ ಮಾಡಬೇಡಿ ಎಂದು ಹೇಳಬೇಕಾಗುತ್ತದೆ. ಮುಗಿಸಿರಿ ಎಂದು ಹೇಳಿದರೆ ಮತ್ತೆ ಮಾತನಾಡುತ್ತಿದ್ದೀರಿ. ಕೊನೆಯ ಮಾತು ಎಂದು ಉದ್ದಕ್ಕೆ ಹೇಳಿಕೊಂಡು ಹೋದರೆ ಹೇಗೆ ? ಸರ್ಕಾರಕ್ಕೆ ನೇರವಾಗಿ ನಿಮ್ಮ ಸಲಹೆಯನ್ನು ಕೊಟ್ಟುಬಿಡಿ.

ಶ್ರೀ ಜಿ ಎಸ್. ಆಚಾರ್.—ಅಧ್ಯಕ್ಷರೇ, ಇದು ಕೊನೆಯ ವಾಕ್ಯವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಾನು ಏನು ಹೇಳಬೇಕೆಂದು ಇದ್ದೇನೋ ಅದನ್ನು ನನ್ನ ಚಿಂತನೆಯ ಧಾಟಿಯಲ್ಲಿ ಹೇಳಬೇಕೇ ಹೊರತು ಅದನ್ನು ತಾವು ಮತ್ತೊಂದು ರೀತಿಯಲ್ಲಿ ಡೈರೆಕ್ಟ್ ಮಾಡಬಾರದು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಡೈರೆಕ್ಟ್ ಮಾಡುವುದಕ್ಕೆ ನನಗೆ ಅಧಿಕಾರ ಇದೆ, ನಾನು ಹೇಳುತ್ತೇನೆ. ಈಗ ಭಾಷಣ ನಿಲ್ಲಿಸಿ ಎಂದು ಹೇಳುವುದಕ್ಕೆ ಅಧಿಕಾರ ಇದೆ, ಮತ್ತೊಬ್ಬರನ್ನು ಕರೆಯುವುದಕ್ಕೂ ನನಗೆ ಅಧಿಕಾರ ಇದೆ. ತಾವು ಕೊಡಿರಿ ಎಂದು ಹೇಳುವುದಕ್ಕೆ ಬರುತ್ತದೆ. ಆದರೆ ನಾನು ಹೇಳುವುದಿಲ್ಲ. ಬೇಗ ಮುಗಿಸಿರಿ ಎಂದು ಹೇಳುತ್ತಿದ್ದೇನೆ.

ಶ್ರೀ ಆರ್. ಎನ್. ನಾಯಕ್.—ನಾನು ಶ್ರೀ ಆಚಾರ್ ಅವರಿಗೆ ಅಡ್‌ವೈಸ್ ಮಾಡುತ್ತೇನೆ. ತಾವು ಪ್ರಾರ್ಥನೆ ಮಾಡುವುದನ್ನು ಬಿಟ್ಟುಬಿಡಬೇಕು. ಪ್ರಾರ್ಥನೆ ಮಾತ್ರ ಮಾಡಬಾರದು. ಪ್ರಾರ್ಥನೆ ಮಾಡಿಕೊಂಡರೆ ನಿಮಗೇ ತೊಂದರೆ ಬರುತ್ತದೆ.

ಅಧ್ಯಕ್ಷರು.—ನೀವು ಮುಗಿಸಿರಿ. ಇಲ್ಲದಿದ್ದರೆ ರೆಕಾರ್ಡ್ ಮಾಡಬೇಡಿ ಎಂದು ಹೇಳಬೇಕಾಗುತ್ತದೆ. ಮುಕ್ತಾಯಮಾಡಿ.

ಶ್ರೀ ಜಿ. ಎಸ್. ಆಚಾರ್.—ಬೇಡ ಎಂದರೆ ನಿಲ್ಲಿಸುತ್ತೇನೆ. ಕೃಷಿ ಮತ್ತು ತೋಟಗಾರಿಕೆ ಇಲಾಖೆ ಗ್ರಾಮೀಣ ಬದುಕಿನ ಆರ್ಥಿಕತೆಯ ಜೀವಾಳ ಆಗಬೇಕು. ನೇಗಿಲಯೋಗಿಯ ಬದುಕಿಗೆ ಹೊಸ ಚೇತನವನ್ನು ತುಂಬಬೇಕು, ಉಸಿರು ತುಂಬಬೇಕು. ರೈತರ ಅವಶ್ಯಕತೆಗಳನ್ನು ಅದು ಸ್ಪಂದಿಸಬೇಕು. ಬೇಂದ್ರೆಯವರು ಹೇಳಿದ ಹಾಗೆ "ಅನ್ನ ಬ್ರಹ್ಮನ ದೇಗುಲದಲ್ಲಿ ಬೈಗುಬೆಳಗು ಚಳಿ ಚಿಟಿ ಬೆಂಕಿ ಎನ್ನುವ ಬದಲು ಅನ್ನ ಬ್ರಹ್ಮನ ದೇಗುಲದಲ್ಲಿ ಬೈಗೂ ಬೆಳಗೂ ತಂಪಿನ" ಸೊಂಪು ಆಗುವ ಹಾಗೆ ಆಗಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಎಂ. ರೇವಣಸಿದ್ದಯ್ಯ (ಸಿರುಗಪ್ಪ).—ಮಾನ್ಯ ಅಧ್ಯಕ್ಷರೇ, ನಾನು ಈ ಬೇಡಿಕೆಗಳನ್ನು ಅನುಮೋದಿಸುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪಿಸುತ್ತಿದ್ದೇನೆ. ವ್ಯವಸಾಯ ಈ ದೇಶದ ಮುಖ್ಯ ವೃತ್ತಿ. ಇದನ್ನು ಅವಲಂಬಿಸಿರತಕ್ಕಂಥವರು ದೇಶದ ಜನಸಂಖ್ಯೆಯ ೧೦೦ಕ್ಕೆ ೭೦ರಷ್ಟು ಎಂದು ಅನೇಕ ಸ್ನೇಹಿತರು ಹೇಳಿದರು, ಆದರೆ ೭೦ರಷ್ಟು ಅಲ್ಲ ನೂರಕ್ಕೆ ನೂರರಷ್ಟು ಜನ ವ್ಯವಸಾಯವನ್ನು ಅವಲಂಬಿಸಿ ಬದುಕಬೇಕಾಗಿದೆ. ಕೇವಲ ವ್ಯವಸಾಯಗೋಸ್ಕರ ಅಲ್ಲ, ದೇಶದ ಅಳಿವು ಉಳಿವು ಇದನ್ನು ಅವಲಂಬಿಸಿದೆ, ಜನ ಬದುಕಬೇಕಾದರೆ ವ್ಯವಸಾಯ ಅಗತ್ಯ. ಅವರು ಯಾರೇ ಇರಬಹುದು. ಅದಕ್ಕಾಗಿ ಹೇಳುತ್ತಾರೆ ಉಳುಮೆ ಆರಂಭವಾದಾಗ ಇತರ ಕಲೆ, ಕೌಶಲ್ಯಗಳು ಅದನ್ನು ಹಿಂಬಾಲಿಸುತ್ತವೆ ಎಂದು. ಕಲೆ ಕೌಶಲ್ಯಗಳು ಯಾರನ್ನು ಹಿಂಬಾಲಿಸುತ್ತವೆ ಎಂದರೆ ಉಳುಮೆಯನ್ನು. ಆದ್ದರಿಂದ ರೈತ ಮಾನವ ನಾಗರೀಕತೆಯ ಸಂಸ್ಥಾಪಕ. ಆದರೂ ರೈತನನ್ನು ಅನಾಗರೀಕ ಎಂದು ಅನೇಕ ಸಲ ಅಲಕ್ಷ್ಯ ಮಾಡುವುದೂ ಉಂಟು. ಇದು ಎಲ್ಲರಿಗೂ ಅನ್ವಯಿಸಲಿಕ್ಕಿಲ್ಲ. ಆದರೆ ಕೆಲವರು ಹೀಗೆ ತಿಳಿದುಕೊಂಡಿರುತ್ತಾರೆ. ಏಕೆಂದರೆ ಹಗಲು, ಇರುಳು, ಬಿಸಿಲು, ಗಾಳಿ, ಮಳೆಯಲ್ಲಿ ದುಡಿದು ದೇಶಕ್ಕೆ ಸಮೃದ್ಧಿಯನ್ನು ಒದಗಿಸತಕ್ಕಂಥ ಅವನು ಅನಾಗರೀಕನಾ ? ಇವತ್ತು, ದೇಶದಲ್ಲಿ ವ್ಯವಸಾಯದ ಅಭಿವೃದ್ಧಿಯಾಗಿದೆ. ಆದರೆ ವ್ಯವಸಾಯಗಾರನ ಅಭಿವೃದ್ಧಿ ಆಗಿಲ್ಲ. ವ್ಯವಸಾಯದ ಅಭಿವೃದ್ಧಿ ಆಗದೇ ಇದ್ದರೆ ದೇಶದ ಅರ್ಧದಷ್ಟು ಜನರು ಅನ್ನ ಇಲ್ಲದೆ, ಅಥವಾ ಅರೆಹೊಟ್ಟೆ ಊಟ ಮಾಡಬೇಕಾದೀತು. ಆದರೆ ಈಗ ವ್ಯವಸಾಯದ ಅಭಿವೃದ್ಧಿಯಾಗಿದೆ. ಇದಕ್ಕೆ ರೈತನ ಶ್ರಮ ಒಂದೇ ಅಲ್ಲ. ವ್ಯವಸಾಯ ತಜ್ಞರು, ಸಂಶೋಧಕರು ಮತ್ತು ನೀರಾವರಿ ಇವುಗಳು ಇದಕ್ಕೆ ಸಹಕಾರ ಕೊಟ್ಟಿವೆ. ಆದರೆ ರೈತನ ಅಭಿವೃದ್ಧಿ ಆಗಿಲ್ಲ, ಏಕೆಂದರೆ ಅಭಿವೃದ್ಧಿ ಎಂದರೆ ಏನು ? ಅತನು ತನ್ನ ಕಾಲ ಮೇಲೆ ನಿಂತು ಇನ್ನೊಬ್ಬರನ್ನು ಯಾಚನೆ ಮಾಡದಹಾಗೆ, ಸಾಲಗಾರನಾಗದಂತೆ ಬದುಕಬೇಕು,

೪-೩೦ ಪಿ. ಎಂ.

ಆದರೆ ಇವತ್ತು ಆ ಸ್ಥಿತಿ ಇದೆಯೇ, ಇಲ್ಲ. ೧೦ ವರ್ಷದ ಹಿಂದೆ ರೈತನ ಸಾಲ ಏನಿತ್ತು, ಅದರ ೧೦ ಪಟ್ಟು ಈ ದಿನ ಸಾಲಗಾರನಾಗಿದ್ದಾನೆ. ಹಾಗಾದರೆ ಅಭಿವೃದ್ಧಿ ಇಲ್ಲ. ಇವತ್ತು ರೈತನಲ್ಲವನ ಅಭಿವೃದ್ಧಿ ಆಗಿದೆಯೇ ಹೊರತು, ರೈತನ ಅಭಿವೃದ್ಧಿ ಆಗಿಲ್ಲ. ಏಕೆಂದರೆ ನಮ್ಮಲ್ಲಿ ಪ್ಲಾನ್

ಪ್ರೋಗ್ರಾಮ್‌ಗಳು ಏನಿವೆ, ಅವು ರಾಜ್ಯಕ್ಕೆ ಸಂಬಂಧಪಟ್ಟಿಲ್ಲ. ಇವು ರಾಷ್ಟ್ರಸರ್ಕಾರಕ್ಕೆ ಸಂಬಂಧಪಟ್ಟಿವೆ. ಇವತ್ತು ಪಂಚವಾರ್ಷಿಕ ಯೋಜನೆಗಳು ಇರಬಹುದು, ಬೇರೆ ಬೇರೆ ಯೋಜನೆಗಳು, ಕಾರ್ಯಕ್ರಮಗಳು ಇರಬಹುದು. ಇವು ದೇಶದ ಅಗತ್ಯಗಳಿಗೆ ಅನುಗುಣವಾಗಿ ನಡೆದಿಲ್ಲ. ಹೊರದೇಶದ ತಜ್ಞರು ಈ ದೇಶದಲ್ಲಿ ಪ್ರವಾಸ ಮಾಡಿದಾಗ ಅವರ ಅಭಿಪ್ರಾಯವನ್ನು ಕೇಳಿದಾಗ, ಅವರು ಹೇಳಿದರು. ಈ ದೇಶದ ಪ್ಲಾನ್ ಪ್ರೋಗ್ರಾಂಗಳಲ್ಲಿ ಗಿಡಗಳಿಗೆ ಬೇರುಗಳಿಗೆ ಗೊಬ್ಬರ ಹಾಕುವ ಬದಲು ಕೊಂಬೆ ರೆಂಬೆಗಳಿಗೆ ಗೊಬ್ಬರ ಹಾಕಿದ್ದಾರೆ. ಎಂದು ಹೇಳಿದ್ದಾರೆ ಈ ದೇಶದಲ್ಲಿ ವ್ಯವಸಾಯದ ಬಗ್ಗೆ ಏನು ಮಾಡಬೇಕಾಗಿತ್ತೋ ಅದನ್ನು ಮಾಡಿಲ್ಲ. ರೈತನ ಉದ್ಧಾರ, ದೇಶದ ಉದ್ಧಾರ, ಹಳ್ಳಿಗಳ ಉದ್ಧಾರವೇ, ದೇಶದ ಉದ್ಧಾರ ಎಂದು ಹೇಳುತ್ತೇವೆ. India lives in villages and not in towns. ಎಂದು ಮಹಾತ್ಮ ಗಾಂಧಿಯವರು ಹೇಳಿದ್ದಾರೆ. ಆದರ ಅರಿವು ಎಷ್ಟು ಜನಕ್ಕೆ ಇದೆ ? It is the bonds of debt that shakle agriculture. This is the problem faced by farme s. ಇದೇ ಮುಗಿದಿಲ್ಲ. ಇವತ್ತು ೧೦ರಷ್ಟಲ್ಲ, ನೂರರಷ್ಟು ಸಾಲಗಾರರಾಗಿದ್ದಾರೆ. ಇಂದು ಪರಿಸ್ಥಿತಿ ಏನಾಗಿದೆ ಎಂದರೆ, ''ಬಿಸಿಲಿನಲ್ಲಿ ನಿಂತು ಚಳಿಯಾಗುತ್ತದೆ'' ಎಂದು ಹೇಳಬೇಕಾಗಿದೆ. ಆದುದರಿಂದ ನಾವು ಅರ್ಥಮಾಡಿಕೊಳ್ಳಬೇಕು. ಆಳುವವರು ಯಾರೂ ಈ ಬಗ್ಗೆ ಕಿವಿಯಲ್ಲಿ ಹಾಕಿಕೊಂಡಿಲ್ಲ. It is the bonds of debt that is pestering farmers. ಇವತ್ತು ಅವನ ಸಮಸ್ಯೆ ಏನೆಂದರೆ ಸಾಲ. ಸಾಲ, ಶೂಲ ಎಂದು ನಮ್ಮಲ್ಲಿ ಹೇಳುತ್ತಾರೆ. ಇದು ಮುಗಿದಿಲ್ಲ. ರೈತನ ಅಭಿವೃದ್ಧಿ ಆಗಬೇಕಾದರೆ ಏನಾಗಬೇಕು, ಇವತ್ತಿನ ವ್ಯವಸಾಯಕ್ಕೆ ಮಳೆಗಳು ಸಕಾಲಕ್ಕೆ ಬರುತ್ತಿಲ್ಲ. ನೀರಾವರಿಗಳು ತೃಪ್ತಿಕರವಾಗಿ ನಡೆದಿಲ್ಲ, ಯಾವುದು ಮೊದಲು ಆಗಬೇಕಾಗಿತ್ತೋ ಅದು ಆಗಿಲ್ಲ. ನೀರಾವರಿ ಯೋಜನೆಗಳು, ನೀರಿನ ಸಮಸ್ಯೆ ಮೊದಲು ಬಗೆಹರಿಸಬೇಕು, ಈ ಕೆಲಸ ಆಗಿಲ್ಲ. ಮಳೆ ಪ್ರಕೃತಿ ಕೈಯಲ್ಲಿ ಇದೆ. ಇದು ಕಾಲಕ್ಕೆ ಸರಿಯಾಗಿ ಬರುತ್ತಿಲ್ಲ. ಆದರೆ ನೀರಾವರಿ ಮಾಡುವುದು ನಮ್ಮ ಕೈಯಲ್ಲಿ ಇದೆ. ಜಲಸಮೃದ್ಧಿಯನ್ನು ಒದಗಿಸುವ ವ್ಯವಸ್ಥೆಯನ್ನು ನಾವು ಮಾಡಬೇಕು ಮತ್ತು ಇದಕ್ಕೆ ಬೇಕಾದ ಬಜೆಟ್ ತಯಾರು ಮಾಡಬೇಕು. ಈ ಕೆಲಸವನ್ನು ನಾವು ಮಾಡುತ್ತಾ ಇಲ್ಲ. ನಮ್ಮ ಮಿತ್ರರು ಇವತ್ತು ಬಜೆಟ್‌ನಲ್ಲಿ ಕೇವಲ ೬ ಪರ್ಸೆಂಟ್ ಮಾತ್ರ ಇಟ್ಟಿದ್ದಾರೆಂದು ಹೇಳಿದರು. ಇದು ಡಿಫಸಿಟ್‌ನಲ್ಲಿದೆ, ಇನ್ನೂ ಬಹಳಷ್ಟು ಬೇಕಾಗಿದೆ, ನಾವು ವ್ಯವಸಾಯಕ್ಕೆ ಮಾಡಿರುವುದು ಏನು ? ಇವತ್ತು ಸಾಲ ಒಂದನ್ನು ಬಿಟ್ಟು ಏನಾದರೂ ಕೊಟ್ಟಿದ್ದೇವೆಯೇ ? ಈ ದೇಶದ ಸರ್ಕಾರವಾದರೂ ಹೇಳಲಿ. I wish all the agriculturists become tax payers. ಈ ದೇಶ ಅಭಿವೃದ್ಧಿಯಾಗಿದೆ ಎಂದು ಯಾರು ಹೇಳುತ್ತಾರೆ ? Farmers are in a debt trap. ಇದು ಇವತ್ತು ಇರತಕ್ಕ ಈ ದೇಶದ ಸಮಸ್ಯೆ. ಇವತ್ತು ಹಳ್ಳಿಗಳು ಬಡವಾಗುತ್ತವೆ, ಕೃಶವಾಗುತ್ತಿವೆ. ರೈತ ಬಡವ ಆಗುತ್ತಿದ್ದಾನೆ ಮತ್ತು ಸಾಲಗಾರನಾಗುತ್ತಿದ್ದಾನೆ. ರೈತರು ಇಲ್ಲದೇ ಇರತಕ್ಕ ಪಟ್ಟಣಗಳು ಶ್ರೀಮಂತವಾಗುತ್ತಿವೆ. ಇವತ್ತು ಪಟ್ಟಣಗಳಲ್ಲಿರತಕ್ಕವರು ಬೇಕಾದಷ್ಟು ಆಸ್ತಿ ಮಾಡಿಕೊಂಡಿದ್ದಾರೆ. ಈ ಒಂದು ವಾತಾವರಣವನ್ನು ಹೇಗೆ ಬಗೆಹರಿಸಬೇಕು ಎಂಬ ಬಗ್ಗೆ ಯಾರೂ ಚಿಂತನೆ ಮಾಡುತ್ತಾ ಇಲ್ಲ. ನಮಗಿಂತ ದೊಡ್ಡವರು ಕೇಂದ್ರದಲ್ಲಿ ಕುಳಿತು ಮಾತನಾಡುತ್ತಾರೆ. ಆದರೆ ಕೃಷಿಯಲ್ಲಿ ಇವತ್ತು ಏನಾಗಿದೆ, ಒಂದೇ ಒಂದು ಮಾತಿನಲ್ಲಿ ಹೇಳಬೇಕಾದರೆ, ರೈತ ಇವತ್ತು ಹೊರಕ್ಕೆ ಹೋಗಿ, ಯಾವುದೇ ಒಂದು ವಸ್ತುವನ್ನು ಕೊಂಡು ತರತಕ್ಕ ಸ್ಥಿತಿಯಲ್ಲಿ ಇಲ್ಲ. ರೈತ ದಡ್ಡ ಇದ್ದಾನೆ, ಅವಿದ್ಯಾವಂತ ಇದ್ದಾನೆ, ಅಸಂಘಟಿತ ಇದ್ದಾನೆ. ಅವನ ಸಂಘಟನೆಗಾಗಿಯೇ ಇವತ್ತು ರಾಜ್ಯದಲ್ಲಿ ಜನತಾ ಸರ್ಕಾರ ಬಂದಿದೆ. ಈ ಸರ್ಕಾರ ರೈತರ ಏಳಿಗೆಗಾಗಿ ಹಲಕೆಲವು ಪ್ರಯತ್ನಗಳನ್ನು ಮಾಡಿದೆ. ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೆ ಇದು ಇನ್ನೂ ಸಾಲದು. ಸಾಲಗಳ ಮೇಲಿನ ಬಡ್ಡಿ ಮನ್ನಾ ಮಾಡಿದೆ. ಆದರೆ ರಾಷ್ಟ್ರೀಯ ಬ್ಯಾಂಕುಗಳ ಸಾಲಗಳ ಮೇಲಿನ ಬಡ್ಡಿಯನ್ನು ಮನ್ನಾ ಮಾಡುವುದಕ್ಕಾಗುವುದಿಲ್ಲ. ಸೊಸೈಟಿಗಳು ರಾಜ್ಯಸರ್ಕಾರದ ವ್ಯಾಪ್ತಿಯಲ್ಲಿ ಬರುವುದರಿಂದ, ಇವುಗಳ ಸಾಲಗಳ ಮೇಲಿನ ಬಡ್ಡಿಯನ್ನು ಮನ್ನಾ ಮಾಡಿದೆ. ಹಾಗೂ ೧೨ ರಿಂದ ೧೪ ಪರ್ಸೆಂಟ್ ಇದ್ದ ಬಡ್ಡಿಯ ದರವನ್ನು ೭ ಪರ್ಸೆಂಟ್‌ಗೆ ಇಳಿಸಿದೆ. ಇಡೀ ರಾಜ್ಯದಲ್ಲಿ ಮಾತ್ರವಲ್ಲ, ಇವತ್ತು ರೈತರ ಬವಣೆ ಇಡೀ ದೇಶದಲ್ಲಿ ಇದೆ. ಆ ಸರಕಾರವು ಸಹ ಮನಸ್ಸು ಮಾಡಲಿ. ಮನಸ್ಸು ಮಾಡಿದರೆ ಬೇಕಾದಷ್ಟನ್ನು ಮಾಡಬಹುದು. ಇದು ಇವತ್ತು ದೇಶದಲ್ಲೇ ಆಗಲಿ.

(ಗೊಂದಲ)

ಅಧ್ಯಕ್ಷರು.—ನಾಯಕರೇ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿ. ಎಂ. ರೇವಣ್ಣಸಿದ್ದಯ್ಯ.—ನೀರಾವರಿ ವ್ಯವಸಾಯಕ್ಕೆ ಅಗತ್ಯ ಎಂದು ಇವತ್ತು ನಾನು ಹೇಳುತ್ತಿದ್ದೇನೆ, ನೀರು ರೈತನಿಗೆ ಬಂಗಾರ. ತುಂಗಭದ್ರಾ ಪ್ರಾಜೆಕ್ಟ್‌ಗೆ ನಾಂದಿ ಹಾಕಿ, ಆ ಪ್ರಾಜೆಕ್ಟ್‌ನು ಸ್ಥಾಪನೆ ಮಾಡಿದಂಥ ತಿರುಮಲಯ್ಯಂಗಾರ್ ಎನ್ನುವವರು ಈ ಸಮಸ್ಯೆ ಬಂದಾಗ ನೀರು ರೈತನಿಗೆ ಬಂಗಾರ ಎಂದು ಹೇಳಿದರು, ಆದರೆ ಇವತ್ತು ನೀರಾವರಿ ಸೌಲಭ್ಯ ಜಾಸ್ತಿ ಇಲ್ಲ. ನೀರು ಕೇವಲ ರೈತನಿಗೆ ಮಾತ್ರ ಬಂಗಾರ ಅಲ್ಲ ಇಡೀ ದೇಶಕ್ಕೆ ಅದು ಬಂಗಾರ. At the time of constructing the T. B. Dam, Sri Thirumala Iyengar said 'Projects are needed only by farmer's. ಇದು ಸರಿಯಲ್ಲ. ಇವತ್ತು ಪ್ರಾಜೆಕ್ಟ್‌ಗಳು ಇಲ್ಲದಿದ್ದರೆ, ಬೆಳೆ ಬೆಳೆಯದಿದ್ದರೆ, ಇಡೀ ದೇಶವೇ ಉಪವಾಸ ಬೀಳುತ್ತಿತ್ತು. ಇಲ್ಲಿರುವ ನಾವು ಅಲ್ಲಿ ಕುಳಿತಿರುವ ಅಧಿಕಾರಿಗಳು ಉಪವಾಸ ಬೀಳಬೇಕಾಗುತ್ತಿತ್ತು. ಬೆಳೆ ಬೆಳೆಯದೇ ಹೋದರೆ ದುಡ್ಡನ್ನು ತಿನ್ನುವುದಕ್ಕೆ ಬರುವುದಿಲ್ಲ. Our programmes to tap the underground water is very essential. ಅದಕ್ಕಾಗಿ ಎಲ್ಲಾ ಕಾರ್ಯಕ್ರಮಗಳನ್ನೂ ನಿಲ್ಲಿಸಿರಿ. ಈಗಾಗಲೇ ನಾನು ಓದಿದಹಾಗೆ ಉಳುಮೆ ಆರಂಭವಾದಾಗ ಉಳಿದ ಕಲೆ ಕೌಶಲಗಳು ಅದನ್ನು ಹಿಂಬಾಲಿಸುತ್ತವೆ. ಆದುದರಿಂದ ಎಲ್ಲಾ ಕಲೆ ಕೌಶಲಗಳನ್ನು ರದ್ದು ಮಾಡಿರಿ. ರದ್ದು ಮಾಡಬೇಕು. ಮೊದಲು ಇದನ್ನು ಮಾಡಿರಿ. ದೇಶಕ್ಕೆ ಅಗತ್ಯವಾದುದನ್ನು ಮಾಡಿರಿ. ದೇಶಕ್ಕೆ ಅಗತ್ಯವಾದುದನ್ನು ಬಿಟ್ಟು ಬಟ್ಟೆ ವಸ್ತ್ರ ಮುಂತಾದವುಗಳನ್ನು ಒದಗಿಸುವುದಕ್ಕೆ ಪ್ರಾಮುಖ್ಯತೆ ಕೊಡಬೇಡಿ. ವ್ಯವಸಾಯಕ್ಕೆ ಕೊಟ್ಟಿರುವ ಪ್ರೋತ್ಸಾಹ ಬಹಳ ಕಡಿಮೆ ವ್ಯವಸಾಯಕ್ಕೆ ಪ್ರೋತ್ಸಾಹ ಕೊಡಲಾಗದೇ ಇದ್ದರೆ ಏನೂ ಮಾಡುವುದಕ್ಕೆ ಆಗುವುದಿಲ್ಲ. ನಾನು ಪ್ಲಾನಿಂಗ್ ಕಮಿಷನ್ ವೈಸ್‌ಚೇರ್‌ಮೆನ್‌ರವರಾದ ಲಖಡಾವಾಲಾರೂ ಅವರ ಹತ್ತಿರ ಮಾತನಾಡುತ್ತಿದ್ದೆ. What he said was, 'a direct taxation is to be levied to farmers'. Then, I asked him, which tax is not paid by farmers ? Even the Income-tax which is paid by industrialists and merchants is being paid by farmers. ರೈತನು ಉತ್ಪತ್ತಿ ಮಾಡಿದ ಪದಾರ್ಥಗಳನ್ನು ವಹಾರಿ ಅವರಿಂದ ಬಂದ ಲಾಭದ ಮೇಲೆ ತಾನೆ ಅವನು ಇನಕಮ್‌ಟ್ಯಾಕ್ಸ್ ಕೊಟ್ಟಿದ್ದು. ಇಲ್ಲದೇ ಹೋದರೆ ವ್ಯಾಪಾರಸ್ಥ ಎಲ್ಲಿ ಇನ್‌ಕಮ್ ಟ್ಯಾಕ್ಸ್ ಕೊಡುತ್ತಿದ್ದ. ಆದುದರಿಂದ ರೈತನೇ ಇನ್‌ಕಮ್ ಟ್ಯಾಕ್ಸನ್ನೂ ಸಹ ಕೊಟ್ಟ ಹಾಗೆ ಆಯಿತು, No doubt indirectly all the taxes are paid by farmers. ನಾನು ಈ ರೀತಿ ಹೇಳಿದ ಮೇಲೆ ಅವನು ಸುಮ್ಮನಾದ. ಇದು ಇವತ್ತಿನ ಸ್ಥಿತಿ. ರೈತನಿಗೆ ಬಹಳಷ್ಟು ಸಮಸ್ಯೆಗಳಿವೆ. ಅನೇಕ ಸಮಸ್ಯೆಗಳಿವೆ. ಬಹಳಷ್ಟು ಜನ ಇದರ ಬಗ್ಗೆ ಹೇಳಿದ್ದಾರೆ. ಇವತ್ತು ನೀರಾವರಿಗೆ ಬಹಳಷ್ಟು ಆದ್ಯತೆ ಕೊಡಬೇಕು. ಇವತ್ತು ನೀರಾವರಿ ರೈತನೇ ಬೇರೆ, ಡ್ರೈ ಫಾರ್ಮಿಂಗ್ ರೈತನೇ ಬೇರೆ. ನೀರಾವರಿ ರೈತನ ಕಷ್ಟ ಕಡಿಮೆ. ಸಾಲ ಎಷ್ಟಾದರೂ ಇರಲಿ, ಮನೆಯಲ್ಲಿ ತುಂಬುವುದಕ್ಕೆ ಒಂದಿಷ್ಟು ಕಾಳು ಬರುತ್ತದೆ. ನೀರಾವರಿ ಇಲ್ಲದ ರೈತ ಮಳೆ ಹೋದರೆ ಬೀಜ ಕಳೆದುಕೊಳ್ಳುತ್ತಾನೆ, ಮಾಡಿದ ಬದುಕು ಕಳೆದುಕೊಳ್ಳುತ್ತಾನೆ, ಬೆಳೆ ಸಂಪೂರ್ಣವಾಗಿ ಹಾಳಾಗುತ್ತದೆ. ಆದುದರಿಂದ ನೀರಾವರಿಗೆ ಆದ್ಯತೆ ಕೊಡಬೇಕು.

ಶ್ರೀ ಆರ್. ಎನ್, ನಾಯಕ್.—ಮುಖ್ಯಮಂತ್ರಿಗಳು ನೀರಾವರಿಯಷ್ಟೇ......

(ಗೊಂದಲ)

SRI C. M. REVENASIDDAIAH.—I will answer your questions afterwards and not now. Please be seated,

ಶ್ರೀ ಆರ್. ಎನ್. ನಾಯಕ್.— ನೀರಾವರಿಗೆ ದುಡ್ಡು ಕೊಡುವುದಕ್ಕೆ ಮುಖ್ಯ ಮಂತ್ರಿಗಳು...

(ಗೊಂದಲ)

ಅಧ್ಯಕ್ಷರು.—. ನಾಯಕರೇ, ಕುಳಿತುಕೊಳ್ಳಿ ಏನಿದು ಹುಡುಗಾಟ ? ದಯವಿಟ್ಟು ಕುಳಿತುಕೊಳ್ಳಿರಿ. ಮಾನ್ಯ ರೇವಣ್ಣಸಿದ್ದಯ್ಯನವರೇ, ನೀವು ಮಾತನಾಡಿ.

ಶ್ರೀ ಎಂ. ರಘುಪತಿ.— ಮಾನ್ಯ ರೇವಣ್ಣಸಿದ್ದಯ್ಯನವರ ಅನುಭವದಷ್ಟು ವಯಸ್ಸಾಗಿಲ್ಲ... ಏನು ಮಾಡಬೇಕು ಈ ನಾಯಕರಿಗೆ ?...

ಶ್ರೀ ಆರ್. ಎನ್. ನಾಯಕ್.—ಮಾನ್ಯ ಮುಖ್ಯ ಮಂತ್ರಿಗಳು ಶುಕ್ರವಾರದಲ್ಲಿ ಮಾತನಾಡುತ್ತಾ ನೀರಾವರಿಗೆ ದುಡ್ಡು ಕೊಡುವುದಿಲ್ಲ, ನೀರಾವರಿ ಅಷ್ಟೇ ಮುಖ್ಯ ಅಲ್ಲ ಎಂದು ಹೇಳಿದರು. ಅಕ್ಕಿ ಕೊಡುವುದು, ಮದುವೆ ಮಾಡಿಸುವುದು ಮುಖ್ಯ ಎಂದು ಹೇಳಿದರು. ಅದನ್ನು ನೆನಪಿಸಿದೆ ಅಷ್ಟೇ.

ಅಧ್ಯಕ್ಷರು.— ಅದು ಅವರಿಗೂ ಗೊತ್ತಿದೆ, ನೀವು ಕುಳಿತುಕೊಳ್ಳಿ.

ಶ್ರೀ ಸಿ. ಎಂ ರೇವಣ್ಣಸಿದ್ದಯ್ಯ.— ನಾನು ಡ್ರೈಫಾರ್ಮಿಂಗ್ ವಿಷಯ ಹೇಳುತ್ತಿದ್ದೆ. ರಾಜ್ಯದಲ್ಲಿ ೧೦೦ಕ್ಕೆ ೮೭ ರಷ್ಟು ಡ್ರೈ ಫಾರ್ಮಿಂಗ್ ಇದೆ. ಕೇವಲ ೧೩ ಪರ್ಸೆಂಟ್ ನೀರಾವರಿ ಇದೆ. ರೈತರ ಜನ ಸಂಖ್ಯೆಯಲ್ಲೂ ಕೂಡಾ ನೂರಕ್ಕೆ ಎಂಬತ್ತರಷ್ಟು ಜನ ಒಣ ಬೇಸಾಯದ ಮೇಲೆ ಆಧಾರ ಪಡೆದಿದ್ದಾರೆ. ಶೇಕಡಾ ಹದಿನೆಂಟರಷ್ಟು ಜನ ಮಾತ್ರ ನೀರಾವರಿ ಬೇಸಾಯದ ಮೇಲೆ ಆಧಾರ ಪಟ್ಟಿದ್ದಾರೆ. ಇವರ ಕಥೆ ಹೇಳುವುದಕ್ಕೆ ತೀರದು. ಒಣ ಬೇಸಾಯಗಾರರು ಆರ್ಥಿಕವಾಗಿ ಬಹಳಷ್ಟು ನಿಕೃಷ್ಟವಾಗಿ ಜೀವನ ಮಾಡುತ್ತಿದ್ದಾರೆ. ಅಲ್ಲಿ ಏನು ಮಾಡಬೇಕೆಂದರೆ, ಒಣ ಬೇಸಾಯದ ಪ್ರದೇಶಗಳಲ್ಲಿ ಬಾವಿಗಳನ್ನು ತೋಡಬೇಕು. ಬೋರ್ಸ್ ಹಾಕಬೇಕು, ಕೆರೆಕಟ್ಟೆಗಳನ್ನು ಹೆಚ್ಚು ಹೆಚ್ಚು ನಿರ್ಮಾಣ ಮಾಡಬೇಕು. ಇದಕ್ಕಾಗಿ ಒಂದು ಸಮಯೋಚಿತವಾದ ಸಂಪೂರ್ಣವಾದ ಕಾರ್ಯಕ್ರಮವನ್ನು ಹಾಕಬೇಕು.

ಅದಕ್ಕೆ ಸಂಬಂಧಪಟ್ಟ ಕಾರ್ಯಕ್ರಮ ಯಾವ ಜಿಲ್ಲೆಯಲ್ಲಿ ಯಾವ ತಾಲ್ಲೂಕಿನಲ್ಲಿ ಸಾಧ್ಯವಿದೆ ಅದನ್ನು ಮಾಡಬೇಕು. where we can control water or harness water or bring more wells and bores. ಅದನ್ನು ಮಾಡಬೇಕು. ಇದು ಮುಖ್ಯವಾಗಿ ಆಗಬೇಕು. ಹಣವಿಲ್ಲದಿದ್ದರೆ ದುಂದುವೆಚ್ಚ ಮಾಡುವ ಅನೇಕ ಕಾರ್ಯಕ್ರಮಗಳನ್ನು ರದ್ದು ಮಾಡಿ ಈ ದಿಸೆಯಲ್ಲಿ ಹಣ ಖರ್ಚು ಮಾಡುವಂತಾದ್ದು ನಡೆಯಬೇಕು. ಇದಕ್ಕಿಂತ ಹೆಚ್ಚು ಹೇಳುವ ಮನಸ್ಸು ನನಗೆ ಇಲ್ಲ. ಇವತ್ತು ಈ ನಾಡಿನಲ್ಲಿ ನೀರಿನ ಒಂದೇ ಸಮಸ್ಯೆ ಅಲ್ಲ. ಬೆಳೆಗೆ ರೋಗ ಬರುತ್ತದೆ. ಹುಳ ಬೀಳುತ್ತದೆ ಸಾಮಾನ್ಯವಾಗಿ ಎಲ್ಲಾ ಬೆಳೆಗಳಿಗೂ ರೋಗ ಬರುತ್ತದೆ. ಆಗ ರೈತ ಏನು ಮಾಡಬೇಕು ? ಅವನು ಏನು ಮಾಡುವುದಕ್ಕಾಗುವುದಿಲ್ಲ. ಅವನಿಂದ ಏನೂ ನಡೆಯುವುದಿಲ್ಲ. The produce is needed for the consumption of the State or the nation and not only for the farmers. ಬೀಜ ನೀರು ಕೊಟ್ಟರೆ ಅವನ ಬದುಕು ಆಗುವುದಿಲ್ಲ ಅವನು ದನ ಕಾಯಬೇಕು, ಗುಬ್ಬಿಗಳನ್ನು ಕಾಯಬೇಕು. ಇದರ ಜೊತೆಗೆ ರೋಗ ಸಹ ಬಂದರೆ ರೈತ ಏನು ಮಾಡುವುದು ? ಈ ಬಗ್ಗೆ ತಾವು ಗಮನ ಹರಿಸಬೇಕು. ಬೆಳೆಗೆ ಬರುವ ರೋಗವನ್ನು ದೂರ ಮಾಡುವುದಕ್ಕೆ ರೈತನಿಗೆ ಸಹಕರಿಸಬೇಕು. ಇವತ್ತು ಜನರಿಗೆ ಕಾಲರಾ ಬಂದರೆ ಚುಚ್ಚುಮದ್ದು ಕೊಟ್ಟು ಕೊರಡಿಗಳಲ್ಲಿ ಸಾವಿರಾರು ಜನರನ್ನು ಹಿಡಿದಿಟ್ಟುಕೊಂಡು ಚಿಕಿತ್ಸೆ ಕೊಡುತ್ತೀರಿ. To save the humanity, they give Cholera innoculation. Like that, to feed the nation, to feed the humanity, the Crop is to be protected by the National Government. It is the responsibility of the National Government or the State Government. ಅದೇ ರೀತಿ ರೈತನ ಬೆಳೆಗಳನ್ನು ಸಹ ರೋಗದಿಂದ ಉಳಿಸಿ. ನೀವು ಹಣ ಎಲ್ಲಿದೆ ಎಂದು ಹೇಳಬಹುದು, ಅದಕ್ಕೆ ನಾನು ಹೇಳುತ್ತೇನೆ. ನಮ್ಮ ಬೇಡಿಕೆಗಳಲ್ಲಿ ಇದೂ ಒಂದು. Insect or pest, to control it, there must be a programme of the Government. Sir, itmust be the programme of the Government and not of the farmer. ಇಂದು ಏನಾಗಿದೆ ಎಂದರೆ ೧೦೦ ಎಕರೆಗಳಲ್ಲಿ ರೋಗ ಬಂದರೆ ಉತ್ತಮವಾದಂಥ ರೈತ ೧೦ ಎಕರೆಗೆ ಔಷಧಿ ಹಾಕಿದರೆ ಇನ್ನು ಉಳಿದ ೯೦ ಎಕರೆ ಬೆಳೆಗೆ ರೋಗ ಇದ್ದರೆ ಆ ೧೦ ಎಕರೆ ಬೆಳೆಯನ್ನು ಸಹ ಉಳಿಸುವುದಕ್ಕೆ ಆಗುವುದಿಲ್ಲ. ಎಷ್ಟೇ ಔಷಧಿ ಹಾಕಿದರೂ ಸಹ ಅದು ಉಳಿಯುವುದಿಲ್ಲ, ಮತ್ತೆ ಆ ೧೦ ಎಕರೆ ಬೆಳೆಗೆ ರೋಗ ಬಂದೇ ಬರುತ್ತದೆ. ಇದರಿಂದ ಅವನ ಔಷಧಿ ಖರ್ಚು ನಾಶ. ಬೆಳೆ ನಾಶ. It is a national waste. ಆದ್ದರಿಂದ ಈ ಬಗ್ಗೆ ಸ್ವಲ್ಪ ನಿಗಾ ವಹಿಸಬೇಕಾಗುತ್ತದೆ. ಇಲ್ಲದಿದ್ದರೆ ಇದರಿಂದ ಅನಾಹುತವಾಗುತ್ತದೆಂದು ನಾನು

ಹೇಳುತ್ತೇನೆ. ಇಂದಲ್ಲ ನಾಳೆ ಅನಾಹುತವಾಗಬಹುದು.. This is a new demand I am placing through this August Assembly. ರಾಜ್ಯ ಸರ್ಕಾರವೇ ಆಗಲಿ, ಕೇಂದ್ರ ಸರ್ಕಾರವೇ ಆಗಲಿ ಈ ಬಗ್ಗೆ ಎಚ್ಚರಿಕೆ ವಹಿಸಬೇಕು. ಯಾವುದಕ್ಕೆ ಹಣ ಖರ್ಚು ಮಾಡಬೇಕೋ ಅದಕ್ಕೆ ಹಣ ಖರ್ಚು ಮಾಡಲೇಬೇಕು. ಇದು ನಮ್ಮ ಮುಖ್ಯ ಕಾರ್ಯಕ್ರಮವಾಗಬೇಕೆಂದು ನಾನು ಮಾನ್ಯ ಮಂತ್ರಿಗಳಿಗೆ ಸಲಹೆ ಮಾಡುತ್ತೇನೆ. ಹಿಂದೆ ಮಲ್ಲರಾಜ ಅರಸ್‌ರವರು director of Agriculture ಆಗಿದ್ದರು. I was an MLA in 1961-64. ಆಗ ಸಬ್‌ಸೀಡಿ ರೇಟ್‌ನಲ್ಲಿ ಔಷಧಿಯನ್ನು ಒದಗಿಸಬೇಕೆಂದು ಮಾನ್ಯ ನಾರಾಯಣಗೌಡರು ಮಂತ್ರಿಯಾಗಿದ್ದರು ಅವರಿಗೆ ಹೇಳಿದ್ದೆ. ಆಗ ಮಲ್ಲರಾಜ ಅರಸ್‌ರವರು I did not agree ಎಂದಿದ್ದರು. ಆದರೂ ಸಹ ಆಗ ಸಬ್‌ಸೀಡಿ ರೇಟ್‌ನಲ್ಲಿ ಔಷಧಿಯನ್ನು ಕೊಡಬೇಕೆಂದು ತೀರ್ಮಾನ ಮಾಡಿದರು. ಇವತ್ತು ಏನು ಅಲ್ಪ ಸ್ವಲ್ಪ ರಿಯಾಯಿತಿ ಕೊಡುತ್ತಿದ್ದಾರೆ, ಅದೇನೇನು ಸಾಲದು. ಪೂರ್ತಿ ರಿಯಾಯಿತಿ ಕೊಟ್ಟು ಈ ಬೆಳೆಗಳಿಗೆ ಬರುವ ರೋಗವನ್ನು, ಹುಳುಗಳನ್ನು ನಿಕಾಲಿ ಮಾಡುವಂತಹ ಕಾರ್ಯಕ್ರಮ ಸರ್ಕಾರದವರು ತೆಗೆದುಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ. ಅನೇಕ ವಿಷಯಗಳ ಬಗ್ಗೆ ನಮ್ಮ ಮಾನ್ಯ ಸ್ನೇಹಿತರು ಈಗಾಗಲೇ ಮಾತನಾಡಿದ್ದಾರೆ. ಬೆಲೆಗಳ ಬಗ್ಗೆ ಹೇಳುವುದಾದರೆ, ನಾವು ಕೊಳ್ಳುವ ಪದಾರ್ಥಗಳು ಮಾರಾಟದ ಬೆಲೆಗಳಿಗಿಂತ ದುಪ್ಪಟವಾಗಿದೆ. ನಮ್ಮ ಬೆಳೆಗೆ ಬೆಲೆ ಇದೆ ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಕೊಂಡುಕೊಳ್ಳುವ ಪದಾರ್ಥಗಳ ಬೆಲೆ ಮಾತ್ರ ಜಾಸ್ತಿಯಾಗಿದೆ. ನಾನು ಅನೇಕ ಸಲ ಮಾನ್ಯ ಕೃಷಿ ಮಂತ್ರಿಗಳನ್ನು ಮತ್ತು ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡಿದ್ದೆ. ಮಾನ್ಯ ಮಂತ್ರಿಗಳಾದ ಬಸವರಾಜ ಪಾಟೀಲ್ ಅನ್ವರಿಯವರಿಗೆ ಹೇಳಿದೆ ನೀವು ಪದಾರ್ಥಗಳನ್ನು ಕೊಂಡುಕೊಳ್ಳುವ ವ್ಯವಸ್ಥೆ ಮಾಡಿ ಎಂದು. ಅದು ರಾಗಿಯಾಗಿರಬಹುದು, ಜೋಳವಾಗಿರಬಹುದು ಕೊಂಡುಕೊಳ್ಳಿ ಎಂದು ಹೇಳಿದ್ದೆ. ಈ ಬಗ್ಗೆ ನಮ್ಮ ರಾಜ್ಯದಲ್ಲಿ ಏನೂ ಕಾರ್ಯಕ್ರಮ ಮಾಡಿಲ್ಲ. ಇವತ್ತು ನಮ್ಮ ನ್ಯಾಷನಲ್ ಇಂಡಸ್ಟ್ರಿಗಳಿಂದ ರಾಜ್ಯ ಸರ್ಕಾರಕ್ಕೆ ೩ ಕೋಟಿ ರೂಪಾಯಿಗಳ ನಷ್ಟವಾಗಿದೆ. ಆದರೆ ಜೀವಂತವಾಗಿ ಈ ದೇಶದ ಜನರಿಗೆ ಅನ್ನ ಕೊಡುವ ಅನ್ನ ದಾತನಿಗೆ ನೀವು ಎಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ ? ನಮ್ಮ ಜನತಾ ಸರ್ಕಾರ ನೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ ಎಂದು ಹೇಳಿದರು. ಮಾಡಲಿ. ಇನ್ನು ರಿಯಾಯಿತಿ ಕೊಡಿ. ಏತಕ್ಕೆ ಕೊಡಬಾರದು ? ವ್ಯವಸಾಯಕ್ಕಾಗಿ ಕೊಡಿ. ಇವತ್ತು ಬೆಲೆಗಳು ತಕ್ಷಣ ಇಳಿದಿದ್ದರೆ ನಾಳೆ ತಕ್ಷಣ ಬೆಲೆಗಳು ಜಾಸ್ತಿಯಾಗುತ್ತವೆ.

ನಮ್ಮ ರಾಜ್ಯದಲ್ಲಿ ೮ ದಿನದ ಹಿಂದೆ ಶೇಂಗಾ ಬೆಲೆ ೬೮೦ ರಿಂದ ೭೦೦ ರೂಪಾಯಿಗಳವರೆಗೆ ಇತ್ತು. ಇವತ್ತು ೫೦೦ ರೂಪಾಯಿಗಳಿಗೆ ಇಳಿದಿದೆ. When there is no stability of price, it is the duty of any democratic Government to assure prices to the farmers. If that is not assured, ಇದನ್ನು ಪ್ರಜಾ ಸರ್ಕಾರ ಎಂದು ನಮ್ಮ ರೈತರು ತಿಳಿದುಕೊಳ್ಳಬೇಕಾ ಎಂದು ಪ್ರಶ್ನೆ ಹಾಕುತ್ತಿದ್ದೇನೆ. It is the responsibility of the State to assure price to the farmers to their produce. I know that it indirectly applies more to Central Government than to the State Government. ರೈತರು ಬೆಳೆದ ಮಾಲಿಗೆ ಸರಿಯಾದ ಬೆಲೆಯನ್ನು ಕೊಟ್ಟರೆ ಸಾಕು, ಬೇರೆ ರೀತಿಯ ಯಾವುದೇ ರಿಯಾಯಿತಿಗಳನ್ನು ಕೊಡಬೇಕಾಗಿಲ್ಲ. ಒಳ್ಳೆ ಬೆಲೆ ರೈತ ಬೆಳೆದ ಮಾಲಿಗೆ ಸಿಕ್ಕರೆ ಅವನು ಸಾಲಗಾರನಾಗಿ ಬದುಕಲಾರ. ಇವತ್ತು ರೈತರ ಜೀವನ ಬಹಳ ನಿಕೃಷ್ಟವಾದುದಾಗಿದೆ. ಹಳ್ಳಿಗಳ ಜೀವನಕ್ಕೆ ಪಟ್ಟಣದ ಜೀವನವನ್ನು ಹೋಲಿಸಿದರೆ ಅಜಗಜಾಂತರ ವ್ಯತ್ಯಾಸ ಇದೆ. ಪಟ್ಟಣಗಳಲ್ಲಿ ಕುಡಿಯುವುದಕ್ಕೆ ನೀರಾದರೂ ಸಿಗುತ್ತದೆ, ಹಳ್ಳಿಗಳಲ್ಲಿ ಕುಡಿಯುವ ನೀರು ಸಿಗದಂಥ ದುಃಸ್ಥಿತಿ ಇದೆ. ಆಮೇಲೆ ಇನ್ನೂ ಕೆಲವು ರೈತರುಗಳ ಬೇಡಿಕೆಗಳು ಇವೆ. ಅದರಲ್ಲಿ ಪಾಸ್ ಬುಕ್ ಕೊಡುವ ಬಗ್ಗೆ ಒಂದು ಬೇಡಿಕೆ ಇದೆ. ಮಾನ್ಯ ಬೊಮ್ಮಾಯಿಯವರು ಈಗ ಸದನದಲ್ಲಿ ಇಲ್ಲ.

ಶ್ರೀ ಬಸವರಾಜ ಪಾಟೀಲ್ ಅನ್ವರಿ —ರೈತರುಗಳ ಬಗ್ಗೆ ನಮ್ಮ ಸರ್ಕಾರ ಕಳವಳ ವ್ಯಕ್ತಪಡಿಸಿ ಜೋಳ ಮತ್ತು ರಾಗಿಯನ್ನು ಬೆಂಬಲ ಬೆಲೆ ಕೊಟ್ಟು ಕೊಂಡು ಕೊಳ್ಳುವುದಕ್ಕೆ ಆದೇಶ ಹೊರಡಿಸಿದ್ದೇವೆ. ತಾವೇ ಒಂದು ಸಾರಿ (ಮಾನ್ಯ ರೇವಣ ಸಿದ್ಧಯ್ಯನವರನ್ನು ಉದ್ದೇಶಿಸಿ) ನನಗೆ ಪತ್ರ ಬರೆದು ಜೋಳ ಮತ್ತು ರಾಗಿಯನ್ನು ಬೆಂಬಲ ಬೆಲೆಯಲ್ಲಿ ಸರ್ಕಾರ ಕೊಂಡುಕೊಳ್ಳಬೇಕೆಂದು ಸೂಚಿಸಿದ್ದೀರಿ.

ತಮ್ಮ ಒತ್ತಾಯದ ಮೇರೆಗೆ ನಾವು ಜೋಳವನ್ನು ಒಂದು ಕ್ವಿಂಟಾಲ್‌ಗೆ ೨೦೦ ರೂಪಾಯಿಗಳಂತೆ ಮತ್ತು ರಾಗಿಯನ್ನು ೧೫೦ ರೂಪಾಯಿಗಳಿಗೆ ಕೊಂಡುಕೊಳ್ಳುವುದಕ್ಕೆ ಸರ್ಕಾರ ಆದೇಶ ಹೊರಡಿಸಿದೆ.

ಶ್ರೀ ಸಿ. ಎಂ. ರೇವಣ್ಣ ಸಿದ್ದಯ್ಯ.—ಅವುಗಳನ್ನು ಕೊಂಡುಕೊಳ್ಳುವುದಕ್ಕೆ ಹಣ ಮತ್ತು ಶೇಖರಣೆ ಮಾಡುವುದಕ್ಕೆ ಕೇಂದ್ರಗಳನ್ನು ಮಾಡಿದ್ದೀರಾ ?

ಅಧ್ಯಕ್ಷರು.—ರೇವಣಸಿದ್ದಯ್ಯನವರೇ ಮುಕ್ತಾಯ ಮಾಡಿ.

ಶ್ರೀ ಸಿ. ಎಂ. ರೇವಣ್ಣ ಸಿದ್ದಯ್ಯ.—ಲ್ಯಾಂಡ್ ರಿಫಾರ್ಮ್ಸ್ ಆ್ಯಕ್ಟ್ ಬಂದ ಮೇಲೆ ಉಳುವವನೇ ಹೊಲದ ಒಡೆಯ ಎಂದಾಯಿತು. ಆದರೆ, ವಿಲೇಜ್ ಅಕೌಂಟೆಂಟ್‌ಗಳು ಕೆಲವು ಸಾರಿ ನಿಜವಾಗಿ ಯಾರು ಭೂಮಿಯನ್ನು ಹೊಂದಿರುತ್ತಾರೋ ಅವರುಗಳಿಗೆ ಪಹಣಿ ಬರೆಯದೆ ಬೇರೆಯವರಿಗೆ ಬರೆದುಬಿಡುತ್ತಾರೆ. ಈ ರೀತಿ ಆಗುವುದನ್ನು ತಪ್ಪಿಸಬೇಕಾದರೆ ಪಾಸ್‌ಬುಕ್ ವ್ಯವಸ್ಥೆಯನ್ನು ತರಬೇಕು. ಪಾಸ್‌ಬುಕ್ ವ್ಯವಸ್ಥೆಯನ್ನು ತನ್ನಿ ಎಂದು ಕೇಳಿದರೆ ಮಾನ್ಯ ಬೊಮ್ಮಾಯಿಯವರು ಇನ್ನೂ ನಾಲ್ಕೈದು ವರ್ಷಗಳಾಗಬಹುದು ಎಂದು ಹೇಳಿದ್ದಾರೆ. ಪಾಸ್‌ಬುಕ್ ಕೊಡುವ ವ್ಯವಸ್ಥೆಯನ್ನು ಸರ್ಕಾರ ಮಾಡಿದರೆ ಅದಕ್ಕೆ ತಗಲುವ ಖರ್ಚನ್ನು ರೈತರುಗಳು ಬೇಕಾದರೆ ಕೊಡುತ್ತಾರೆ, If it is not possible to print it at the Government Press, then, give it to any Press in Bangalore or elsewhere. ಪಾಸ್‌ಬುಕ್ ಕೊಡುವ ಬಗ್ಗೆ ಇನ್ನೊಂದು ತಿಂಗಳೊಳಗೆ ತೀರ್ಮಾನ ಮಾಡಿ, ಪಾಸ್‌ಬುಕ್ ಕೊಟ್ಟರೆ ರೈತರಿಗೆ ಆಗುವ ಅನ್ಯಾಯ ತಪ್ಪುತ್ತದೆ. ಆಮೇಲೆ ಲ್ಯಾಂಡ್ ರಿಫಾರ್ಮ್ಸ್ ಆ್ಯಕ್ಟ್‌ನಲ್ಲಿ ಕೆಲವು ತೊಂದರೆಗಳು ಇವೆ. ಲ್ಯಾಂಡ್ ರಿಫಾರ್ಮ್ಸ್ ಆ್ಯಕ್ಟ್ ಮಾಡಿದ ಮೇಲೆ ಅಮೆಂಡ್‌ಮೆಂಟ್ ಮಾಡಿಲ್ಲ. ಸೆಕ್ಷನ್ ೭೯ (ಎ)(ಬಿ)(ಸಿ)ನಲ್ಲಿ ೧೨ ಸಾವಿರದಷ್ಟು ಆದಾಯ ಇದ್ದವನು ಹೊಲ, ಗದ್ದೆಯನ್ನು ಕೊಂಡುಕೊಳ್ಳುವ ಹಾಗಿಲ್ಲವೆಂದು ಹೇಳಲಾಗಿದೆ. ೧೨ ಸಾವಿರ ಆದಾಯ ಇರುವವರು ಬಹಳ ಮಂದಿ ಉಂಟು. ಹೋಟೆಲ್‌ನಲ್ಲಿ ಒಬ್ಬ ಕೆಲಸ ಮಾಡಿಕೊಂಡಿರುವವನೊಬ್ಬ ಜಮೀನು ತೆಗೆದುಕೊಳ್ಳಬೇಕೆಂದರೆ, ವ್ಯವಸಾಯಗಾರನಲ್ಲದವನು ಜಮೀನು ಕೊಂಡುಕೊಳ್ಳದ ಹಾಗೆ ಕಾನೂನು ಮಾಡಿಟ್ಟಿದ್ದಾರೆ. This is most . impracticable. A person working in a Hotel or a Hotelier is ready to pay Rs. 4000 but he is not eligibl to purchase that land. Therefore' it is a detrimental Section. It is detrimental to the interests of the farmers. He cannot sell it to the person for a better price. He has to sell it to a person who is going to pay less ಏಕೆ ಮಾಡಿದರು ಇದನ್ನು ? It is a question that is before us. ರೈತನು ತನ್ನ ಹೊಲವನ್ನು ಮಾರಿಕೊಂಡು ತನ್ನ ಮಗನಿಗೆ ಬಿ.ಇ.ಯೋ ಅಥವಾ ಇತರ ಉನ್ನತ ಶಿಕ್ಷಣವನ್ನೋ ಕೊಡಲು ಹೊಲ ಮಾರಿ ೫೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಓದಿಸಿದರೆ ಅವನಿಗೆ ಅನುಕೂಲವಾಗುವುದಿಲ್ಲವೇ ? ಇದನ್ನು ಏತಕ್ಕೆ ಯೋಚನೆ ಮಾಡಿಲ್ಲ ? I doubt very much the bonafides of Section 79(a)(b)(c), ಅದನ್ನು ಬದಲಾವಣೆ ಮಾಡಬೇಕು. It is detrimental to the interest and development of farmers. So, section 79(a)(b) & (c) should be deleted. I have made it clear to our Revenue Minister Sri S. R. Bommai.

ಅಧ್ಯಕ್ಷರು.—ರೇವಣ್ಣಸಿದ್ದಯ್ಯನವರು ತಮ್ಮ ಭಾಷಣವನ್ನು ಮುಕ್ತಾಯ ಮಾಡಬೇಕು. ಈಗಾಗಲೇ ೨೦ ನಿಮಿಷಗಳು ಆಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಮಾತನಾಡುತ್ತಾ ಇದ್ದಾರೆ. ನೀವು ಏತಕ್ಕಾಗಿ ಅವರಿಗೆ ಅಡಚಣೆ ಮಾಡುತ್ತಾ ಇದ್ದೀರಿ ?

ಅಧ್ಯಕ್ಷರು.—ಹಾಗಾದರೆ ನಿಮ್ಮೆಲ್ಲರ ಅಪ್ಪಣೆ ಪಡೆದು ಅವರಿಗೆ ಐದು ನಿಮಿಷಗಳ ಹೆಚ್ಚು ಅವಧಿಯನ್ನು ಕೊಡೋಣವೇ ?

ಶ್ರೀ ಸಿ. ಎಂ. ರೇವಣ್ಣಸಿದ್ದಯ್ಯ.—ಇತ್ತೀಚೆಗೆ ಹಳ್ಳಿಗಳಲ್ಲಿ ಜನಸಂಖ್ಯೆ ಏರುತ್ತಾ ಇದೆ. ಅಲ್ಲಿ ಹೊಲ, ಭೂಮಿ ಇರುವವರು ಇದ್ದಾರೆ, ಇಲ್ಲದಿರುವರು ಇದ್ದಾರೆ. There is a programme

to the landless and houseless people but not in respect of farmers who owns four acres of lands. ಈಗ ಹಳ್ಳಿಗಳಲ್ಲಿ ರೈತರು ಇದ್ದಾರೆ, ಕೂಲಿಗಾರರು ಇದ್ದಾರೆ. ಆದರೆ ಈಗ ಏನಾಗಿದೆ ಅಂದರೆ, there is no programme to provide sites to the farmers. Where should he keep manure ? It is the need of every village. ಅದಕ್ಕಾಗಿ ನಾನು ಸಲಹೆ ಮಾಡುತ್ತಾ ಇದ್ದೇನೆ. ರೈತನಿಗೆ provide him sites. There may be four brothers. Where they should live ? ಏನು ಮಾಡಿದ್ದೀರಿ ಇದಕ್ಕಾಗಿ ? There is no provision anywhere. ಅದರ ಮೇಲೆ ಇರುವುದಕ್ಕೆ ಸಾಧ್ಯವಾಗುತ್ತದೆಯೇ ? So, acquire sites and provide sites to the farmers to keep their produce, manure and other articles. It is the duty of the Government.

ನೀವೇ ಹೇಳುತ್ತೀರಿ ಒಳ್ಳೆಯ ಗೊಬ್ಬರ ಮಾಡಬೇಕು ಎಂದು. ಹಾಗಾದರೆ ಅವನು ಗೊಬ್ಬರವನ್ನು ಎಲ್ಲಿ ಮಾಡಬೇಕು? ಮಹಡಿಯ ಮೇಲೆ ಮಾಡಬೇಕೆ? ಅವನಿಗೆ ಇದಕ್ಕೆಲ್ಲಾ ಸಾಕಷ್ಟು ಜಾಗ ಬೇಡವೆ? ಅದನ್ನು ಅವನು ಮಾಡಿಕೊಳ್ಳದೆ ಹೇಗೆ ಸಾಧ್ಯವಾಗುತ್ತದೆ? ಇದೊಂದು ಸಮಸ್ಯೆ ಇದೆ. ರೈತರು ತಮ್ಮ ಹೊಲಗಳಿಗೆ ಹೋಗಲು ರಸ್ತೆಗಳು ಇಲ್ಲ ಇವೊತ್ತು ರಸ್ತೆಗಳಿಲ್ಲದೆ ಎಷ್ಟು ತೊಂದರೆಯಾಗಿದೆ. ಅಂದರೆ ಅದರಲ್ಲಿಯೂ ನೀರಾವರಿ ಭೂಮಿಗಳಿಗೆ ವ್ಯವಸಾಯಗಾರನು ತನ್ನ ಉಪಕರಣಗಳನ್ನು, ಬೆಳೆಯನ್ನು ಸಾಗಿಸಲು, ಕೊಂಡೊಯ್ಯಲು ತುಂಬಾ ಕಷ್ಟ ಪಡುತ್ತಿದ್ದಾನೆ. ಒಂದು ೫೦ ಕೆ.ಜಿ.ಯ ಚೀಲವನ್ನು ತೆಗೆದುಕೊಂಡು ಹೋಗಲು ರಿಕ್ಷಾದವರು ಒಂದು ರೂಪಾಯಿಯನ್ನು ಕೇಳುತ್ತಾರೆ. ರಸ್ತೆಗಳಿಲ್ಲದಿದ್ದರೆ ಎಲ್ಲಾ ವಿಧದಲ್ಲಿಯೂ ರೈತರು ಕಷ್ಟಪಡಬೇಕಾಗಿ ಬರುತ್ತದೆ. ಹೀಗೆ ರೈತರಿಗೆ ತಮ್ಮ ಹೊಲಗದ್ದೆಗಳಿಗೆ ಹೋಗಲು ಒಂದು ರಸ್ತೆಯ ಅನುಕೂಲವನ್ನು ಒದಗಿಸಿಕೊಡಲು ಯೋಜನೆ ಮಾಡಿಕೊಳ್ಳಬೇಕು. ಅದು ಈಗ ಕಡಿತವಾಗಿದೆ. ಇಂಥ ಒಂದು ಕಾರ್ಯಕ್ರಮವನ್ನು ಗ್ರಾಮೀಣ ಪ್ರದೇಶಗಳಲ್ಲಿ ಅತ್ಯಗತ್ಯವಾಗಿ ಹಾಕಿಕೊಂಡು ರೈತರಿಗೆ ಅನುಕೂಲ ಮಾಡಿಕೊಡಬೇಕು.

ಇನ್ನು ಬಡ್ಡಿ ರಿಯಾಯಿತಿಯನ್ನು ನೀವು ಕೇವಲ ಸಹಕಾರಿ ಸಂಸ್ಥೆಗಳಿಂದ ಪಡೆದ ಸಾಲಗಾರರಿಗೆ ಮಾತ್ರ ಅನ್ವಯ ಮಾಡಿದ್ದೀರಿ ಆದರೆ ಇತರ ಸಾಲಗಾರರು ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಕೃಷಿಗಾಗಿಯೇ ಸಾಲ ಮಾಡಿದ್ದಾರೆ. ಅವರಿಗೆ ಈ ಸೌಲಭ್ಯ ಇಲ್ಲದಾಗಿದೆ. ಹೀಗೆ ಕೃಷಿ ಬೇಕೆಗಾಗಿ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಸಾಲ ಮಾಡಿದರ ಬಗ್ಗೆಯೂ ಅನ್ವಯವಾಗುವ ರೀತಿಯಲ್ಲಿ ಒಂದು ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ ಇಂಥ ಒಂದು ಸಾಮಾನ್ಯ ಬೇಡಿಕೆಯನ್ನು ಸರಕಾರದ ಮುಂದೆ ಇಡಬೇಕೆಂದು ನಾನು ಯೋಚನೆ ಮಾಡುತ್ತಾ ಇದ್ದೇನೆ.

ಇನ್ನು ಕ್ರಿಮಿನಾಶಕ ಹಾಗೂ ಗೊಬ್ಬರಗಳ ಬಳಕೆ ಈಗ ಸಾಕಷ್ಟು ಇದೆ. ಆದರೆ ಸಾಕಷ್ಟು ಪ್ರಮಾಣದಲ್ಲಿ ಪರೀಕ್ಷಾ ಕೇಂದ್ರಗಳು ಇಲ್ಲವೇ ಇಲ್ಲ ಎಂದು ಹೇಳಬಹುದು. ನಮ್ಮ ಜಿಲ್ಲೆಯಲ್ಲಿ ತುಂಗಭದ್ರಾ ಪ್ರಾಜೆಕ್ಟ್ ಪ್ರದೇಶದಲ್ಲಿ ನೀರಾವರಿ ಭೂಮಿ ಇದೆ ಅಲ್ಲಿ ಕೋಟಿಗಟ್ಟಲೆ ವ್ಯಾಪಾರ ನಡೆಯುತ್ತದೆ. ಆದರೆ ನಮ್ಮಲ್ಲಿ ಎಷ್ಟು ಪ್ರಮಾಣದಲ್ಲಿ ಕ್ರಿಮಿನಾಶಕ ಮತ್ತು ಗೊಬ್ಬರದ ಅಂಶಗಳನ್ನು ಸೂಕ್ತವಾಗಿ ತಿಳಿದುಕೊಳ್ಳಲು ಪರೀಕ್ಷಾ ಕೇಂದ್ರಗಳೇ ಇಲ್ಲ. ಏಕೆಂದರೆ ಇವುಗಳನ್ನು ಉಪಯೋಗಿಸುವವರು ಆ ಬಗ್ಗೆ ತಿಳಿದುಕೊಳ್ಳಬೇಕಾಗುತ್ತದೆ. ಗೊಬ್ಬರ ಮತ್ತು ಕ್ರಿಮಿನಾಶಕಗಳ ವ್ಯಾಪಾರ ಹೆಚ್ಚಿದಂತೆ ಪರೀಕ್ಷಾ ಕೇಂದ್ರಗಳನ್ನು ಕೂಡ ಸ್ಥಾಪನೆ ಮಾಡಿ ಅವುಗಳ ಬಳಕೆಯು ಉಪಯುಕ್ತವಾಗುವಂತೆ ನೋಡಿಕೊಂಡು ಬೆಳೆಗಳನ್ನು ಉಳಿಸುವುದಕ್ಕೆ ಪ್ರಯತ್ನ ಮಾಡಬೇಕು ಹೀಗೆ ಬೆಳೆಯನ್ನು ಉಳಿಸಲು ಪರೀಕ್ಷಾ ಕೇಂದ್ರಗಳನ್ನು ಮಾಡಿದರೆ ಮಾತ್ರ ಸಾಧ್ಯವಾಗುತ್ತದೆ. ಆದುದರಿಂದ ಈ ಬಗ್ಗೆ ಸೂಕ್ತ ಗಮನವನ್ನು ಕೊಟ್ಟು ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳಿ, ನನಗೆ ಮಾತನಾಡಲು ಅವಕಾಶವನ್ನು ಮಾಡಿಕೊಟ್ಟ ತಮಗೆ ಕೃತಜ್ಞತೆಗಳನ್ನು ಅರ್ಪಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಡಿ.ಎ. ಚಿನ್ನಪ್ಪ (ಮಡಿಕೇರಿ).—ಅಧ್ಯಕ್ಷರೇ, ಇವತ್ತು ವ್ಯವಸಾಯ ಮತ್ತು ತೋಟಗಾರಿಕೆ ಡಿಮಾಂಡ್‌ಗಳನ್ನು ವಿರೋಧಿಸಿ ಕೆಲವು ಮಾತುಗಳನ್ನು ಆಡುತ್ತೇನೆ. ಇವತ್ತು ಕೃಷಿಕರು ಸಂಘಟಿತರಾಗಲು ಸರ್ಕಾರ ಬಿಡುತ್ತಿಲ್ಲ. ಒಂದು ಗುಂಪಾಗಿದ್ದ ಅವರನ್ನು ಒಡೆದು ಬೆನ್ನು ಮುರಿ.

ಮುರಿದು ಅವರನ್ನೆಲ್ಲಾ ಬೇರೆ ಮಾಡಿ ಹಾಕಿದ್ದಾರೆ. ರೈತರ ಪರಿಸ್ಥಿತಿ ತುಂಬಾ ದುಃಖಕರವಾಗಿದೆ. ಅವರು ಶೋಷಣೆಗೆ ಒಳಗಾಗಿದ್ದಾರೆ. ಕೃಷಿಕರು ಏನು ಬೆಳೆಯುತ್ತಾರೆ ಮುಖ್ಯವಾಗಿ ಅದಕ್ಕೆ ಒಂದು ಮಾರುಕಟ್ಟೆಯನ್ನು ಏರ್ಪಾಡು ಮಾಡಬೇಕು. ಆಮೇಲೆ ಬೆಳೆದ ಪದಾರ್ಥ ಏನಿದೆ ಅದನ್ನು ಮಾರುಕಟ್ಟೆಗೆ ಸಾಗಿಸುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಅಷ್ಟೇ ಅಲ್ಲದೆ ಮಾರುಕಟ್ಟೆಗೆ ಹೋಗುವ ಪದಾರ್ಥಕ್ಕೆ ಒಳ್ಳೆಯ ಬೆಲೆ ಕೊಡಿಸುವ ವ್ಯವಸ್ಥೆ ಮಾಡಿಕೊಟ್ಟರೆ ಅವರು ಸುಧಾರಿಸಿಕೊಳ್ಳುವುದಕ್ಕೆ ಸಾಧ್ಯತೆ ಇದೆ. ಬಹಳಷ್ಟು ಜನ ಗ್ರಾಮಗಳನ್ನು ಬಿಟ್ಟು ಪಟ್ಟಣಗಳಿಗೆ ಬರುತ್ತಿದ್ದಾರೆ. ಏಕೆಂದರೆ ಅಲ್ಲಿ ವ್ಯವಸಾಯ ಮಾಡಲು ಆದರಿಂದ ಜೀವನ ಸಾಗಿಸಲು ಸಾಧ್ಯವಾಗುತ್ತಿಲ್ಲ ಆದ್ದರಿಂದ ಸಣ್ಣ ಹಿಡುವಳಿದಾರರ ಕಷ್ಟ ಕಾರ್ಪಣ್ಯ ಜಾಸ್ತಿ. ಕೃಷಿಕರಿಗೆ ಬೇಕಾದ್ದು ಮೊದಲನೆಯದಾಗಿ ನೀರು. ಅದನ್ನು ಒದಗಿಸಬೇಕಾದ್ದು ಸರ್ಕಾರದ ಕೆಲಸ. ಎಷ್ಟೋ ತೊರೆಗಳು ಹಳ್ಳಗಳು ಇದ್ದರೂ ಕೂಡ ಅದಕ್ಕೆ ಸಣ್ಣ ಕಟ್ಟೆಗಳನ್ನು ಕಟ್ಟಿ ರೈತರಿಗೆ ನೀರು ಒದಗಿಸುವ ಕೆಲಸವನ್ನು ಸರ್ಕಾರ ಕೊಡುತ್ತಿಲ್ಲ. ಬದಲಿಗೆ ದೊಡ್ಡ ಯೋಜನೆಗಳನ್ನು ಕೈಗೊಳ್ಳುತ್ತಿರುವುದರಿಂದ ಅದಕ್ಕೆ ವರ್ಷಗಳೇ ಹಿಡಿಯುತ್ತದೆ. ಸೈಂಟಿಫಿಕ್ಕಾಗಿ ಅಗ್ರಿಕಲ್ಚರ್ ಮಾಡುವ ದೃಷ್ಟಿಯಿಂದ ಬೇಕಾದಷ್ಟು ಟ್ರೈನಿಂಗ್ ಸೆಂಟರ್, ಕಾಲೇಜಸ್ ಇವೆ. ಆದರೆ ನಿಜವಾಗಿಯೂ ಅವುಗಳನ್ನು ಗ್ರಾಮಸ್ಥರಿಗೆ ಹಾಗೂ ಬಡ ರೈತರಿಗೆ ತಲುಪಿಸುವ ವ್ಯವಸ್ಥೆ ಮಾಡುತ್ತಿಲ್ಲ. ಮಾರ್ಗದರ್ಶನಕ್ಕೆ ಕೋರಿದಾಗಲೆಲ್ಲಾ, ಇಲ್ಲ ಎನ್ನುವ ಪರಿಸ್ಥಿತಿ ಬಂದಿದೆ, ಇದೆಲ್ಲಾ ನೋಡಿದಾಗ ನಿಜವಾಗಿಯೂ ನಮ್ಮ ಕರ್ನಾಟಕದಲ್ಲಿ ರೈತರು ಹೀನಸ್ಥಿತಿಯಲ್ಲಿ ಜೀವಿಸುತ್ತಿದ್ದಾರೆ ಎಂದು ಗೊತ್ತಾಗುತ್ತಿದೆ. ಈಗಾಗಲೇ ಬಹಳಷ್ಟು ಯೋಜನೆಗಳನ್ನು ಸರ್ಕಾರ ಕೈಗೊಂಡಿದೆ. ಆದರೆ ಬಹಳಷ್ಟು ಪೇಪರ್‌ನಲ್ಲಿವೇ ವಿನಃ ನೇರವಾಗಿ ಕಾರ್ಯಗತವಾಗುತ್ತಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಆ ಸ್ಥಳದಲ್ಲಿರುವುದಿಲ್ಲ. ಅವರು ಪಟ್ಟಣಗಳಲ್ಲಿದ್ದುಕೊಂಡು ಅಧಿಕಾರ ನಡೆಸಿಕೊಂಡು ರೈತರ ಪಾಲಿಗೆ ನಿರುಪಯೋಗಿಗಳಾಗಿದ್ದಾರೆ. ಬೇಕಾದಷ್ಟು ಕಾರ್ಪೊರೇಷನ್ಸ್ ಇವೆ. ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್, ಕರ್ನಾಟಕ ಸೀಡ್ಸ್ ಕಾರ್ಪೊರೇಷನ್ ಮುಂತಾದುವು ಇವೆ.

ಇವೆಲ್ಲದರ ಉದ್ದೇಶ ಈಡೇರಿ ಫಲ ರೈತರಿಗೆ ಸಿಕ್ಕಿದೆಯೇ ಎಂದು ನೋಡಿದಾಗ ಇವು ಗ್ರಾಮೀಣ ಮಟ್ಟಕ್ಕೆ ತಲುಪಿಯೇ ಇಲ್ಲ. ಬರೀ ಪಟ್ಟಣಿಗರ, ಸಿರಿವಂತ ರೈತರ ಓಡಾಟ ಪ್ರದರ್ಶನಗಳಿಗೆ ಮಾತ್ರ ಸೀಮಿತವಾಗಿದೆ ಎಂದರೆ ತಪ್ಪಾಗುವುದಿಲ್ಲ,

೫-೦೦ ಪಿ. ಎಂ.

ಇವತ್ತು ಬಡ್ಡಿಯನ್ನು ಮಾಫಿ ಮಾಡಿದ್ದೀರಿ. ರೈತರು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನಲ್ಲಿ ಏನು ಸಾಲ ತೆಗೆದುಕೊಂಡಿದ್ದಾರೆ ಆ ಸಾಲಕ್ಕೆ ಬಡ್ಡಿ ಕಟ್ಟತಕ್ಕಂತಹ ಅವಧಿ ಬಂದಿದ್ದು ಈ ವರ್ಷ ಎಲ್ಲಾ ಬಡ್ಡಿಯನ್ನು ತೆಗೆದುಕೊಂಡಿದ್ದಾರೆ. ಅಸಲು ಕಟ್ಟುವ ಅವಧಿ ಬರುವ ವರ್ಷಕ್ಕೆ ಬಂದರೆ ಬಡ್ಡಿ ಕಟ್ಟುವ ಅವಧಿ ಈ ವರ್ಷ ಬಂದಿದೆ. ಏಪ್ರಿಲ್ ಕೊನೆಯೊಳಗೆ ಸಾಲದ ಹಣವನ್ನು ಕಟ್ಟಿದರೆ ಬಡ್ಡಿ ರಿಯಾಯಿತಿ ಇದೆ. ಅದೇ ರಿಯಾಯಿತಿಯನ್ನು ಬೇರೆಯವರಿಗೂ ಕೊಡಬೇಕು. ಮತ್ತು ಹಿಂದೆ ಎಷ್ಟು ಹಣ ವಸೂಲಾಗಿದೆ ಅದನ್ನು ಅವರವರಿಗೇ ವಾಪಸ್ ಕೊಡಿಸಬೇಕು. ಇನ್ನು ವೆಸ್ಟರ್ನ್ ಘಾಟ್ ಡೆವಲಪ್‌ಮೆಂಟ್ ಸ್ಕೀಮ್ ಏನು ಇದೆ ಅದರಲ್ಲಿ ಅಗ್ರಿಕಲ್ಚರ್ ಮತ್ತು ಹಾರ್ಟಿಕಲ್ಚರ್ ಇಲಾಖೆಯವರು ಗಿಡಗಳನ್ನು ಬೆನಿಫಿಷರೀಸ್‌ಗಳಿಗೆ ಕೊಡುತ್ತಾರೆ. ಎರಡು ಕಿತ್ತಳೆ ಗಿಡ, ಎರಡು ನಿಂಬೆ ಗಿಡ, ಎರಡು ತೆಂಗಿನ ಗಿಡಗಳನ್ನು ಕೊಟ್ಟಿದ್ದಾರೆ. ಇದರಿಂದ ಏನಾದರೂ ಪ್ರಯೋಜನವಾಗುತ್ತದೆಯೇ? ಅದನ್ನೂ ಸಹ ಮಳೆಗಾಲದಲ್ಲಿ ಕೊಟ್ಟಿಲ್ಲ, ಬೇಸಿಗೆ ಕಾಲದಲ್ಲಿ ಕೊಟ್ಟರು. ಇಂತಹ ವ್ಯವಸ್ಥೆಯಾದರೆ ಅವರು ಹಳ್ಳಿಗಳಲ್ಲಿ ಯಾವ ರೀತಿ ಬದುಕುವುದಕೆ ಸಾಧ್ಯವಾಗುತ್ತದೆಂಬುದನ್ನು ನೋಡಬೇಕು. ವೆಸ್ಟರ್ನ್ ಘಾಟ್ ಸ್ಕೀಮ್‌ನಲ್ಲಿ ವಾಟರ್ ಷೆಡ್ ಸ್ಕೀಮ್ ಎಂದು ಇದೆ. ಅದಕ್ಕೆ ಬಹಳಷ್ಟು ಹಣ ಕೇಂದ್ರ ಸರ್ಕಾರದಿಂದ ಬರುತ್ತದೆ. ಇಡೀ ಮಳೆಗಾಲದಲ್ಲಿ ಹರಿದು ಬರತಕ್ಕಂತಹ ನೀರನ್ನು ಶೇಖರಣೆ ಮಾಡಿ ಬೇಸಿಗೆಯಲ್ಲಿ ಅಂದರೆ ನೀರು ಇಲ್ಲದೇ ಇರುವ ಸಮಯದಲ್ಲಿ ವ್ಯವಸಾಯಕ್ಕೆ ನೀರು ಕೊಡುವ ಉದ್ದೇಶಕ್ಕೋಸ್ಕರ ಇದನ್ನು ಮಾಡಿರುವುದು. ಆದರೆ ಅದು ನಿಜವಾಗಿ ಆಗುತ್ತಿದೆಯೋ ಎಂಬುದನ್ನು ಯೋಚನೆ ಮಾಡಬೇಕು. ಇದನ್ನು ಜಿಲ್ಲಾ ಪರಿಷತ್ತಿಗೆ ವಹಿಸಿದ್ದಾರೆ, ಜಿಲ್ಲಾ ಪರಿಷತ್ತಿನವರು ಇದನ್ನು ಗಮನಕ್ಕೆ ತೆಗೆದುಕೊಂಡಿಲ್ಲ. ಜಿಲ್ಲಾ ಪರಿಷತ್ತಿನ ಸದಸ್ಯರ ಮನೆಗೆ ಮಂಡಲ ಪಂಚಾಯತಿಯ ಪ್ರಧಾನರ ಮನೆಗಳಿಗೆ ಇದರಿಂದ ಅನುಕೂಲವಾಗುತ್ತಿರುವುದನ್ನು ನೋಡಿದರೆ ಬಹಳ ವ್ಯಸನವಾಗುತ್ತದೆ. ಅಲ್ಲಿ ನೀರು ನಿಲ್ಲ

ತಕ್ಕಂತಹ ವ್ಯವಸ್ಥೆಯೇ ಇಲ್ಲ. ಈ ಸ್ಕೀಮ್‌ನ್ನು ಕಾರ್ಯಗತ ಮಾಡಲಿಕ್ಕೆ ಸರಕಾರ ಏನಾದರೂ ಪ್ರಯತ್ನ ಪಟ್ಟಿದೆಯೇ ಎಂದು ಕೇಳಿದರೆ ಇಲ್ಲ ಎಂದು ಹೇಳಬೇಕಾಗುತ್ತದೆ. ಇನ್ನು ಸೆಪ್ಟೆಂಬರ್ ತಿಂಗಳಲ್ಲಿ ಸೀಡ್ಸ್ ಪ್ಯಾಕೆಟ್ ಎಂದು ಕೊಡುತ್ತಾರೆ. ಇದರಿಂದ ಜನರಿಗೆ ಪ್ರಯೋಜನವಾಗುವುದಿಲ್ಲ. ರೈತರು ವ್ಯವಸಾಯವನ್ನು ಯಾವಾಗ ಪ್ರಾರಂಭ ಮಾಡುತ್ತಾರೆ ಆಗ ಕೊಟ್ಟರೆ ಅನುಕೂಲವಾಗುತ್ತದೆ. ಆದರೆ ಆಗ ಇವರು ಅದನ್ನು ಕೊಡುತ್ತಿಲ್ಲ ಇದರಿಂದಾಗಿ ಆ ಸೀಡ್ಸ್ ವೇಸ್ಟ್ ಆಗುತ್ತದೆ ಅಲ್ಲದೆ ಅದರಿಂದ ಏನೂ ಪ್ರಯೋಜನವಾಗಲಾರದು. ಇನ್ನು ಅಧಿಕಾರಿಗಳು ಬಡ ರೈತರಿಗೆ ಕೊಡತಕ್ಕಂತಹ ಸಲಕರಣೆಗಳ ದುರುಪಯೋಗವನ್ನು ಎಷ್ಟರ ಮಟ್ಟಿಗೆ ಮಾಡುತ್ತಾರೆಂದು ಹೇಳಿದರೆ ತಪ್ಪಾಗಲಾರದೆಂದು ನನಗನ್ನಿಸುತ್ತದೆ. ಇದರ ಬಗ್ಗೆ ಎನ್‌ಕ್ವೈರಿಯಾದರೂ ಸಹ ಮಾಡಬೇಕು. ಜಿಲ್ಲಾ ಪರಿಷತ್ತಿನ ಸದಸ್ಯರು ನಮ್ಮ ಸ್ನೇಹಿತರು, ನೆಂಟರು ಎಂದು ಹೇಳಿ ವರದಿಯನ್ನು ಕೊಡುತ್ತಿಲ್ಲ. ಗ್ರಾಮಗಳಲ್ಲಿನ ವ್ಯವಸಾಯ ಅಧಿಕಾರಿಗಳು ಗ್ರಾಮಕ್ಕೆ ಹೋಗುವುದಿಲ್ಲ ಇಂತಹ ಪರಿಸ್ಥಿತಿಯಲ್ಲಿರುವಾಗ ರೈತರಿಗೆ ತೊಂದರೆಯಾಗುವುದಿಲ್ಲವೇ ? ಇದಕ್ಕೆ ಸರಕಾರ ಹೆಚ್ಚಿನ ಮಾನ್ಯತೆಯನ್ನು ಕೊಡಬೇಕು. ಬರೀ ಪೇಪರ್‌ಗಳಲ್ಲಿ ಅಥವಾ ವಿಶ್ವವಿದ್ಯಾನಿಲಯಗಳಲ್ಲಿ ಟ್ರೈನಿಂಗ್ ಸೆಂಟರ್‌ಗಳಲ್ಲಿ ಇದನ್ನು ಮಾಡಿಕೊಂಡಿದ್ದೀರಿ. ಇದರಿಂದ ವ್ಯವಸಾಯದ ಉತ್ಪತ್ತಿಯಾಗಲಾರದು, ರೈತರ ಬೆಳವಣಿಗೆಯಾಗಲಾರದು, ರೈತರು ಉದ್ಧಾರವಾಗಲಾರರು. ಯಾವಾಗ ರೈತರ ಉದ್ಧಾರವಾಗುವುದಿಲ್ಲ, ಆಗ ನಮ್ಮ ರಾಜ್ಯ ಉದ್ಧಾರವಾಗುವುದಿಲ್ಲ ಹಾಗೂ ದೇಶಕ್ಕೆ ಒಳ್ಳೆಯದಾಗುವುದಿಲ್ಲ. ನಮ್ಮ ದೇಶದ ಬೆನ್ನೆಲುಬು ರೈತರೆಂದು ಹೇಳುತ್ತೇವೆ, ಆದರೆ ಅಂತಹ ರೈತನ ಬೆನ್ನನ್ನು ಮುರಿಯುತಕ್ಕಂತಹ ಪ್ರಯತ್ನವನ್ನು ನಾವು ಮಾಡಬಾರದು. ಇನ್ನೂ ಬಹಳಷ್ಟು ಹೇಳುವುದಕ್ಕೆ ವಿಷಯ ಇದೆ ಆದರೆ ತಾವು ಅದಕ್ಕೆ ಅವಕಾಶ ಕೊಡುತ್ತಿಲ್ಲವಾದುದರಿಂದಾಗಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಮಲ್ಲಪ್ಪ (ಮಾಯಕೊಂಡ).—ಮಾನ್ಯ ಸಭಾಧ್ಯಕ್ಷರೇ, ಕೃಷಿ ಇಲಾಖೆ ಹಾಗೂ ತೋಟಗಾರಿಕೆ ಇಲಾಖೆಗಳ ಬೇಡಿಕೆಗಳನ್ನು ಬೆಂಬಲಿಸುತ್ತಾ ಈ ಸಂದರ್ಭದಲ್ಲಿ ಕೃಷಿ ಇಲಾಖೆ ಮತ್ತು ತೋಟಗಾರಿಕಾ ಇಲಾಖೆಯ ಬಗ್ಗೆ ಕೆಲವು ಮಾತುಗಳನ್ನು ಮತ್ತು ಸಲಹೆಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ರಾಷ್ಟ್ರ ಮತ್ತು ರಾಜ್ಯದ ಮುಖ್ಯವಾದ ಕಸುಬು ಎಂದರೆ ಕೃಷಿ ಉದ್ಯೋಗ. ಈ ಉದ್ಯೋಗಕ್ಕೆ ಹೆಚ್ಚಿನ ಮಹತ್ವವನ್ನು ಕೊಡಬೇಕಾದ್ದು ಸಮಾಜದ ಮತ್ತು ಸರ್ಕಾರದ ಒಂದು ಜವಾಬ್ದಾರಿ ಹೊಣೆಗಾರಿಕೆ ಎಂಬ ಮಾತನ್ನು ಹೇಳುತ್ತೇನೆ. ಕೃಷಿ ಕೇವಲ ಒಕ್ಕಲುತನದ ಆಧಾರದ ಮೇಲೆ ಜೀವನ ನಡೆಸತಕ್ಕಂಥ ಸಂದರ್ಭದಲ್ಲಿ ಅವನ ಮೂಲ ಕಸುಬು ಆದಂಥ ಈ ವ್ಯವಸಾಯದ ಕಸುಬಿಗೆ ಉತ್ತಮವಾದಂಥ ಸಲಕರಣೆಗಳನ್ನು ಬೀಜಗಳನ್ನು ಉತ್ತಮ ಶ್ರೇಷ್ಠ ಮಟ್ಟದ ಬೀಜಗಳನ್ನು ಕೊಡಬೇಕಾದ್ದು ಸರ್ಕಾರದ ಒಂದು ಹೊಣೆಗಾರಿಕೆ ಇದೆ. ಕೆಲವು ಸಂದರ್ಭಗಳಲ್ಲಿ ಕಳಪೆ ಬೀಜಗಳನ್ನು ಕೊಡುವುದರ ಮೂಲಕ ಆ ಕಳಪೆ ಬೀಜಗಳಿಂದ ಉತ್ಪಾದನೆಯನ್ನು ಮಾಡಿ ಅವನು ಆರ್ಥಿಕವಾಗಿಯೂ ಕೂಡಾ ನಷ್ಟವನ್ನು ಅನುಭವಿಸಿರುವುದೂ ಅಲ್ಲದೇ ಅವನನ್ನು ಸಾಲಗಾರನನ್ನಾಗಿ ಮಾಡಿರುತ್ತಾರೆ ಅಂತಹ ಒಂದು ಪರಿಸ್ಥಿತಿಯನ್ನು ನಾವು ಕೆಲವು ಸಂದರ್ಭಗಳಲ್ಲಿ ಕಾಣುತ್ತಿದ್ದೇವೆ. ಆದ್ದರಿಂದ ಈ ದಿಸೆಯಲ್ಲಿ ಬೀಜ ನಿಗಮದವರು ಉತ್ತಮವಾದ ಶ್ರೇಷ್ಠ ಮಟ್ಟದ ಬೀಜಗಳನ್ನು ಕೊಡುವುದರ ಮೂಲಕ ಕೃಷಿಗೆ ಹೆಚ್ಚು ನೆರವಾಗತಕ್ಕಂಥ ಒಂದು ಸಂದರ್ಭದಲ್ಲಿ ಮತ್ತು ಈ ಕಸುಬಿಗೆ ಹೆಚ್ಚಿನ ಒಂದು ಮಹತ್ವವನ್ನು ಪ್ರೋತ್ಸಾಹವನ್ನು ಕೊಡಬೇಕಾಗಿದೆ. ಖುಷ್ಕಿ ಬೆಳೆ ತೆಗೆಯತಕ್ಕಂಥ ಸಂದರ್ಭದಲ್ಲಿ ಅವನ ಉತ್ಪಾದನೆಯಲ್ಲಿ ಹೆಚ್ಚಳವಾಗಲಿಕ್ಕೆ ಕೊಳವೆ ಬಾವಿಗಳ ಮೂಲಕ, ಏತ ನೀರಾವರಿಗಳ ಮೂಲಕ ಅವನು ಬೆಳೆ ಉತ್ಪಾದನೆಯನ್ನು ಹೆಚ್ಚು ಮಾಡಲಿಕ್ಕೆ ಪ್ರಯತ್ನ ಪಡುತ್ತಿದ್ದಾನೆ. ಆದರೆ ಇತ್ತೀಚಿನ ವಿದ್ಯುತ್ ಕೊರತೆಯಿಂದ ಬಹಳ ನಷ್ಟವನ್ನು ಅನುಭವಿಸತಕ್ಕಂಥ ಸನ್ನಿವೇಶಗಳನ್ನು ನಾವು ಕಾಣುತ್ತಿದ್ದೇವೆ. ಆದ್ದರಿಂದ ಹೆಚ್ಚಿನ ಆದ್ಯತೆಯನ್ನು ಕೃಷಿಗೆ ಈ ದೇಶದ ಉತ್ಪಾದನೆಗೆ ಮುಖ್ಯವಾದಂಥ ಗಮನವನ್ನು ಕೊಡಬೇಕಾದ್ದು ಅಗತ್ಯ ಇದೆ. ಅದೇ ರೀತಿ ಕಚ್ಚಾ ಪದಾರ್ಥಗಳನ್ನು ಉತ್ಪಾದನೆ ಮಾಡಲಿಕ್ಕೆ ಹೆಚ್ಚಿನ ನೆರವನ್ನು ಕೊಡಬೇಕು. ಆದ್ದರಿಂದ ವಿದ್ಯುತ್‌ನ್ನು ಪೂರ್ಣವಾಗಿ ವ್ಯವಸ್ಥಿತ ರೀತಿಯಿಂದ ಸರಬರಾಜು ಮಾಡತಕ್ಕಂಥ ರೀತಿಯಲ್ಲಿ ಸರ್ಕಾರ ಮಾಡಬೇಕು. ನಂತರ ಇತ್ತೀಚಿನ ಕೆಲವು ನೀರಾವರಿ ಪ್ರದೇಶಗಳಲ್ಲಿ ಜಮೀನಿನ ಗುಣಮಟ್ಟ ಹಾಳಾಗುತ್ತಿದೆ. ಜಮೀನುಗಳು ಸವುಳಾಗಿ ಬೆಳೆ ಬೆಳೆಯುತಕ್ಕಂಥ ಜಮೀನುಗಳನ್ನು ನಾವು ಕಳೆದುಕೊಳ್ಳುತ್ತಿದ್ದೇವೆ. ಮತ್ತೆ ಉತ್ಪಾದನೆ ಕೂಡಾ ಕಡಿಮೆಯಾಗುತ್ತಿದೆ. ಭೂಮಾಲೀಕನಿಗೂ ಕೂಡಾ ಹಾನಿಯಾಗಿ ದೇಶವು ಉತ್ಪಾದನೆಯ ಕಷ್ಟವನ್ನು ಅನುಭವಿಸುವಂಥ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಅತೀ ಮುಖ್ಯವಾಗಿ ಸರ್ಕಾರ ಈ ಕೂಡಲೇ ಹೆಚ್ಚಿನ ರೀತಿಯಲ್ಲಿ

ಸವಳು ಪ್ರದೇಶದಲ್ಲಿರತಕ್ಕಂಥ ಜಮೀನುಗಳಿಗೆ ಈ ಡ್ರೈನೇಜ್ ವ್ಯವಸ್ಥೆಯನ್ನು ಮಾಡಬೇಕು. ಇದನ್ನು ಮಾಡುವುದರ ಜೊತೆಗೆ ಸರ್ಕಾರ ಆರ್ಥಿಕ ಸಹಾಯವನ್ನು ಕೂಡಾ ಕೊಡಬೇಕಾಗಿದೆ. ಈ ರೀತಿ ಮಾಡಿದಲ್ಲಿ ಜಮೀನಿನ ಉತ್ತಮ ಗುಣಮಟ್ಟವನ್ನು ಕಾಪಾಡಿದ ಹಾಗೆ ಆಗುತ್ತದೆ. ಇದೊಂದು ಉತ್ತಮವಾದ ಕೆಲಸ ಮಾಡಿದ ಹಾಗೆ ಆಗುತ್ತದೆ. ಆಗ ರೈತರ ತಮ್ಮ ಜಮೀನಿನ ಗುಣಮಟ್ಟವನ್ನು ಉಳಿಸಿಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ. ಈ ದಿಸೆಯಲ್ಲಿ ಈ ಒಂದು ಮುಖ್ಯವಾದ ಕಾರ್ಯಕ್ರಮವನ್ನು ಸರ್ಕಾರ ಮಾಡಬೇಕು ಎಂದು ತಮ್ಮ ಮೂಲಕ ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ. ಇತ್ತೀಚಿನ ವರ್ಷಗಳಲ್ಲಿ ನಮ್ಮ ರಾಷ್ಟ್ರದೊಳಗೆ ಮತ್ತು ರಾಜ್ಯದೊಳಗೆ ಎಣ್ಣೆಕಾಳುಗಳು ಮತ್ತು ದ್ವಿದಳ ಧಾನ್ಯಗಳ ಕೊರತೆಯಿಂದ ಸಾಮಾನ್ಯ ವರ್ಗದ ಜನತೆ ಒಂದು ಸೌಟು ಎಣ್ಣೆ ಉಪಯೋಗಿಸಿ ಕೊಳ್ಳಲಿಕ್ಕೂ ಕೂಡಾ ಈ ಆರ್ಥಿಕ ಪರಿಸ್ಥಿತಿಯಲ್ಲಿ ಬಹಳ ಕಷ್ಟಕರವಾಗಿದೆ. ಇದನ್ನು ಸಾಮಾನ್ಯ ವರ್ಗದ ಜನತೆ ಇದನ್ನು ಕೊಂಡು ಕೊಂಡು ಊಟ ಮಾಡತಕ್ಕಂಥ ಪರಿಸ್ಥಿತಿಗೂ ಕೂಡಾ ಕಷ್ಟಕರವಾಗಿದೆ. ಈ ಒಂದು ದಿಶೆಯಲ್ಲಿ ಇತ್ತೀಚಿಗೆ ನಮ್ಮ ರಾಜ್ಯ ಸರ್ಕಾರ ಒಂದು ಯೋಜನೆಯನ್ನು ಮಾಡಿರುವುದರ ಜೊತೆಗೆ ಕೇಂದ್ರ ಸರ್ಕಾರಕ್ಕೆ ''ಪಾಮಾಯಿಲ್ ಟ್ರೀಸ್''ನ್ನು ಬೆಳೆಯಬೇಕು ಎನ್ನುವ ದೃಷ್ಟಿಯಿಂದ ಸುಮಾರು ಮೂರು ನೂರು ಕೋಟಿ ರೂಪಾಯಿಯ ಯೋಜನೆಯನ್ನು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಡಲಾಗಿದೆ. ಇದನ್ನು ಮಾಡಿದರೆ ರೈತರಿಗೆ ಹೆಚ್ಚಿನ ಒಂದು ಅನುಕೂಲವಾಗುತ್ತದೆ ಮತ್ತು ಸಹಾಯವಾಗುತ್ತದೆ. ಆದ್ದರಿಂದ ಇದನ್ನು ತೀವ್ರ ಗತಿಯಲ್ಲಿ ಈ ಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿರತಕ್ಕಂಥ ಒಂದು ವಿಚಾರದಲ್ಲಿ ಕೂಡಲೇ ಇದಕ್ಕೆ ಮಂಜೂರಾತಿಯನ್ನು ಪಡೆಯುವುದರ ಮೂಲಕ ರಾಜ್ಯದಲ್ಲಿ ಉತ್ಪಾದನೆಯು ರೈತರಿಗೆ ಲಾಭದಾಯಕವಾಗಿ ಮತ್ತು ರೈತರಿಗೂ ಹೆಚ್ಚಿನ ಸಹಾಯವೂ ಕೂಡಾ ಆಗುವ ದಿಸೆಯಲ್ಲಿ ಕ್ರಮ ಕೈಗೊಳ್ಳಬೇಕು. ಇದನ್ನು ನೀವು ತೀವ್ರ ಗತಿಯಲ್ಲಿ ಮಾಡಿದರೆ ಈ ಎಣ್ಣೆ ಕೊರತೆಯನ್ನು ನೀಗಿಸಿಕೊಳ್ಳುವುದಕ್ಕೆ ಸಹಾಯವಾಗುತ್ತದೆ. ಆದ್ದರಿಂದ ಇದನ್ನು ತೀವ್ರ ಗತಿಯಲ್ಲಿ ಈ ಕೆಲಸ ಮಾಡಬೇಕು ಎಂದು ತಮ್ಮ ಮೂಲಕ ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ.

ಕಬ್ಬು ಬೆಳೆಗಾರರ ಬಗ್ಗೆ ಒಂದು ಮಾತು ಹೇಳುತ್ತಿದ್ದೇನೆ. ಕಬ್ಬು ಬೆಳೆಯು ಹಿಂದೆ ೧೩ ತಿಂಗಳು ಅಥವಾ ೧೪ ತಿಂಗಳಿನಲ್ಲಿ ದೊರೆಯತಕ್ಕಂಥ ಸಂದರ್ಭಗಳು ಇತ್ತು, ಇವೊತ್ತಿನ ದಿವಸ ಬೆಳೆ ತಜ್ಞರು ೯ ತಿಂಗಳಿನಲ್ಲಿ ಉತ್ತಮವಾಗಿ ಇಳುವರಿ ಬರತಕ್ಕ ಹಾಗೆ ಸಂಶೋಧನೆ ಮಾಡಿದ್ದಾರೆ. ೧೨ ಅಥವಾ ೧೩ ತಿಂಗಳಿನಲ್ಲಿ ೧೧ ಪರ್ಸೆಂಟ್ ಇಳುವರಿ ಬರತಕ್ಕಂಥ ಕಬ್ಬನ್ನು ರೈತರು ಉಪಯೋಗಿಸುತ್ತಾ ಇದ್ದರು. ಇವೊತ್ತು ೯ ತಿಂಗಳಿನಲ್ಲಿಯೇ ೧೧ ಪರ್ಸೆಂಟ್ ಕಬ್ಬನ್ನು ಬೆಳೆಯತಕ್ಕಂಥ ಪರಿಸ್ಥಿತಿಯು ತಜ್ಞರ ಮುಖಾಂತರವಾಗಿ ಆಗಿದೆ. ಇವರು ಕಂಡು ಹಿಡಿದಿರತಕ್ಕಂಥ ಸಂಶೋಧನೆಯನ್ನು ನಮ್ಮ ರಾಜ್ಯದಲ್ಲಿರತಕ್ಕ ರೈತರಿಗೆ ವ್ಯಾಪಕವಾಗಿ ಪ್ರಚಾರವನ್ನು ಮಾಡಬೇಕು. ಮಾನ್ಯ ಕೃಷಿ ಸಚಿವರು ಅಧಿಕ ಇಳುವರಿ ಕೊಡತಕ್ಕಂಥ ಸಂಶೋಧನೆ ಬಗ್ಗೆ ಅದರಿಂದ ಹೆಚ್ಚು ಬೆಳೆ ಬರತಕ್ಕದ್ದರ ಬಗ್ಗೆ ಕೃಷಿ ಇಲಾಖೆಯವರು ರೈತರಿಗೆ ಪ್ರಚಾರ ಮಾಡುವುದರ ಬಗ್ಗೆ ಆದೇಶವನ್ನು ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಇದರಿಂದ ಹೆಚ್ಚು ಉತ್ಪಾದನೆ ಆಗಿ ರೈತರ ಉತ್ಪಾದನೆ ಜಾಸ್ತಿ ಆಗುತ್ತದೆ. ಮಾನ್ಯ ಸಚಿವರಲ್ಲಿ ನಾನು ಕೋರಿಕೊಳ್ಳುವುದೇನೆಂದರೆ, ಈ ರಾಜ್ಯದಲ್ಲಿ ನಾವು ಪಾಮ್ ಆಯಿಲ್ ಟ್ರೀಸ್ ಅನ್ನು ಹೆಚ್ಚಾಗಿ ಬೆಳೆಸುವುದರ ಮೂಲಕ ರಾಜ್ಯದಲ್ಲಿ ಉಂಟಾಗಿರತಕ್ಕ ಎಣ್ಣೆಕಾಳುಗಳ ಕೊರತೆಯನ್ನು ನೀಗಿಸಬೇಕು. ಈ ದೃಷ್ಟಿಯಿಂದ ದ್ವಿದಳ ಧಾನ್ಯವನ್ನು ಇನ್ನೂ ಹೆಚ್ಚಿಸುವ ಪ್ರಯತ್ನ ಮಾಡಬೇಕು, ದಾವಣಗೆರೆಯಲ್ಲಿ ಕಾಡಜಿ ಎಂಬ ಗ್ರಾಮದಲ್ಲಿ ಅಗ್ರಿಕಲ್ಚರಲ್ ಟ್ರೈನಿಂಗ್ ಕಾಲೇಜಿನಲ್ಲಿ ಸುಮಾರು ೨೦೦ ಎಕರೆ ಜಮೀನು ಇದೆ. ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದವರು, ಜಮೀನನ್ನು ಕೃಷಿಗಾಗಿ ಕೊಟ್ಟು ಸರ್ಕಾರ ಹೆಚ್ಚು ಪ್ರೋತ್ಸಾಹ ಕೊಟ್ಟರೆ ಅಲ್ಲಿ ಎಣ್ಣೆಕಾಳುಗಳನ್ನು ಮತ್ತು ದ್ವಿದಳ ಧಾನ್ಯವನ್ನು ಉತ್ಪತ್ತಿ ಮಾಡತಕ್ಕ ಸಂಶೋಧನಾ ಕೇಂದ್ರವನ್ನು ಮಾಡುವ ಮೂಲಕ ರಾಜ್ಯದಲ್ಲಿ ವ್ಯಾಪಕವಾಗಿ ಮತ್ತು ರಾಜ್ಯದಲ್ಲಿ ರೈತರಿಗೆ ಬಹಳ ಸಹಾಯವಾಗುತ್ತದೆ. ಮಾನ್ಯ ಕೃಷಿ ಸಚಿವರಿಗೆ ಮಂಜೂರಾತಿಗಾಗಿ ಬಂದಿದೆ. ಕೃಷಿ ಶಾಲೆಯನ್ನು ಕೃಷಿ ವಿಶ್ವವಿದ್ಯಾಲಯಕ್ಕೆ ವಹಿಸಿಕೊಡುವ ಕಾರ್ಯವನ್ನು ಮಾಡಬೇಕು. ರಾಜ್ಯಕ್ಕೆ ಹಾಗೂ ರಾಷ್ಟ್ರಕ್ಕೆ ಅನುಕೂಲ ಆಗತಕ್ಕ ಈ ಕೆಲಸವನ್ನು ಮಾಡಬೇಕೆಂದು ಮಾನ್ಯ ಸಚಿವರನ್ನು ಕೋರಿಕೊಳ್ಳುತ್ತೇನೆ.

ಇನ್ನು ತೋಟಗಾರಿಕೆ ಇಲಾಖೆ ಬಗ್ಗೆ ಒಂದು ಮಾತನ್ನು ಮಾನ್ಯ ಕೃಷಿ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಸಾಕಷ್ಟು ತೋಟಗಾರಿಕೆ ಇಲಾಖೆಗೆ ಸಂಬಂಧಪಟ್ಟ ಫಾರ್ಮ್‌ಗಳು ಇವೆ. ಅಲ್ಲಿ

ನೀರಿನ ವ್ಯವಸ್ಥೆ ಮಾತ್ರ ಸರಿಯಾಗಿ ಇಲ್ಲ. ನೀರು ಇದೆ ಎಂದರೆ ಕರೆಂಟ್ ವ್ಯವಸ್ಥೆ ಇಲ್ಲ. ಫಾರ್ಮ್ಸ್‌ಗಳಲ್ಲಿ ಹಲವಾರು ರೀತಿಯ ತೊಂದರೆಗಳು ಇವೆ ಎಂದು ಹೇಳುತ್ತಿದ್ದೇನೆ. ಫಾರ್ಮ್ಸ್‌ಗಳು ಕೇವಲ ಫಾರ್ಮ್ಸ್‌ಗಳಾಗಿ ಮುಂದುವರಿಯುವ ಬದಲು ಉತ್ಪಾದನೆಯ ಜೊತೆಗೆ ಹೆಚ್ಚಿನ ಪ್ರಯೋಜನ ಆಗುವ ರೀತಿಯಲ್ಲಿ ತೋಟಗಾರಿಕೆ ಇಲಾಖೆ ತೀವ್ರಗತಿಯಲ್ಲಿ ಹೆಚ್ಚಿನ ಬೆಳೆಯನ್ನು ತೆಗೆಯುವುದರ ಮೂಲಕ ರೈತರಿಗೆ ಉಪಯೋಗ ಆಗುವಂತೆ ನೋಡಿಕೊಳ್ಳಬೇಕು, ತೋಟಗಾರಿಕೆ ಇಲಾಖೆಯಲ್ಲಿ ತರಕಾರಿ, ಹಣ್ಣು-ಹಂಪಲುಗಳನ್ನು, ದ್ವಿದಳ ಧಾನ್ಯಗಳನ್ನು ಬೆಳೆಸುವುದಕ್ಕೋಸ್ಕರ ಮುಖ್ಯವಾಗಿ ಅಲ್ಲಿರತಕ್ಕ ಫಾರ್ಮ್ಸ್‌ಗಳನ್ನು ಅಭಿವೃದ್ಧಿ ಮಾಡುವಲ್ಲಿ ಪ್ರಯತ್ನ ಮಾಡಬೇಕೆಂದು ಕೋರಿಕೊಳ್ಳುತ್ತೇನೆ. ಜೊತೆಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ರೈತರು ಬೆಳೆದಂತಹ ಬೆಳೆಗಳಿಗೆ ಸರಿಯಾದ ಬೆಲೆ ದೊರೆಯುವ ಹಾಗೆ ಏರ್ಪಾಡು ಮಾಡಬೇಕು. ರೈತರು ಬೆಳೆದಂತಹ ಬೆಳೆಗೆ ಬೆಂಬಲ ಬೆಲೆಯನ್ನು ಸರ್ಕಾರ ಹಂತ ಹಂತವಾಗಿ ಘೋಷಣೆ ಮಾಡಬೇಕು. ಸುಗ್ಗಿಯ ಕಾಲದಲ್ಲಿ ಬೆಳೆದ ಬೆಳೆಗಳಿಗೆ ದ್ವಿದಳ ಧಾನ್ಯಗಳಿಗೆ ಮಾರ್ಚ್ ತಿಂಗಳಿನವರೆಗೆ ಬೆಂಬಲ ಬೆಲೆಯನ್ನು ನೀಡುವುದಾಗಿ ಆಜ್ಞೆ ಹೊರಡಿಸಿದ್ದಾರೆ. ಕೇವಲ ಸುಗ್ಗಿ ಕಾಲದಲ್ಲಿ ಮಾತ್ರ ರೈತರಿಗೆ ಬೆಂಬಲ ಬೆಲೆಯನ್ನು ಕೊಡುವ ಪದ್ಧತಿ ಇದೆ. ರೈತರ ಆರ್ಥಿಕ ಸ್ಥಿತಿ ಸುಧಾರಿಸಬೇಕಾದರೆ ಬೆಂಬಲ ಬೆಲೆಯನ್ನು ಕೇವಲ ಸುಗ್ಗಿ ಕಾಲದಲ್ಲಿ ಮಾತ್ರ ನೀಡದೆ ಬೇರೆ ಕಾಲದಲ್ಲೂ ನೀಡಿ, ರೈತರುಗಳಿಗೆ ಆಗತಕ್ಕ ನಷ್ಟವನ್ನು ತಪ್ಪಿಸಬೇಕೆಂದು ಮಾನ್ಯ ಕೃಷಿ ಸಚಿವರಲ್ಲಿ ಕೋರಿಕೊಂಡು, ಇದರ ಬಗ್ಗೆ ಗಮನ ಹರಿಸಬೇಕೆಂದು ಹೇಳಿ ನನಗೆ ಕಾಲಾವಕಾಶ ಕೊಟ್ಟ ತಮಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಲ್ ಉಸ್ತಾದ್ (ಬಿಜಾಪುರ).—ಮಾನ್ಯ ಅಧ್ಯಕ್ಷರೇ, ಇಡೀ ನಮ್ಮ ರಾಷ್ಟ್ರದಲ್ಲಿ ಹಳ್ಳಿಯಲ್ಲಿನ ಜನರು ಶೇಕಡಾ ೮೦ರಷ್ಟು ಇರುತ್ತಾರೆ. ನಾವು ರೈತನನ್ನು ರಾಷ್ಟ್ರದ ಬೆನ್ನೆಲುಬು ಎಂದು ಹೇಳುತ್ತೇವೆ. ಆದರೆ ಅವನಿಗೆ ಅನ್ಯಾಯ ಆಗುತ್ತಿದೆ, ಈ ಅನ್ಯಾಯದಿಂದ ರೈತ ಬೇಸತ್ತು ಹೋಗಿದ್ದಾನೆ. ಇವೊತ್ತಿನ ದಿವಸ ನಾವು ನಮ್ಮ ಮನಸ್ಸಿನಲ್ಲಿ, ನಮ್ಮ ಅಂತರಂಗದಲ್ಲಿ ಹೊಕ್ಕು ನೋಡುವುದಾದರೆ, ನಾವು ಬರೇ ರೈತರ ಬಗ್ಗೆ ಭಾಷಣ ಮಾಡುತ್ತೇವೆ. ರೈತರ ಬಗ್ಗೆ ಕಿಂಚಿತ್ ಆದರೂ ಕಾಳಜಿ ಮಾಡುವುದಿಲ್ಲ. ಯಾವುದೇ ಪಕ್ಷದ ಸರ್ಕಾರ ಇರಬಹುದು. ರೈತರ ಬಗ್ಗೆ ದೊಡ್ಡ ದೊಡ್ಡ ಭಾಷಣವನ್ನು ಮಾಡಿ ರೈತನು ಪಡುವಂತಹ ಕಷ್ಟದ ಬಗ್ಗೆ ಚಿಂತೆ ಇಲ್ಲ. ನಾವು ಒಣ ರಾಜಕೀಯವನ್ನು ಮಾಡುತ್ತೇವೆಯೋ ಹೊರತಾಗಿ ರೈತರ ಬಗ್ಗೆ, ಅವರ ಅಭಿವೃದ್ಧಿ ಬಗ್ಗೆ ಯೋಚನೆ ಮಾಡುವುದಿಲ್ಲ. ಯಾವ ಪ್ರಕಾರವಾಗಿ ರೈತರಿಗೆ ಯೋಜನೆಗಳನ್ನು ಮಾಡಿ ಅವರನ್ನು ಅಭಿವೃದ್ಧಿಗೆ ತರಬೇಕು ಎಂಬುದನ್ನು ನಾವು ಯೋಚನೆ ಮಾಡುವುದೇ ಇಲ್ಲ, ಎಂದು ಹೇಳುತ್ತೇನೆ.

ಇವೊತ್ತಿನ ದಿವಸ ಹಳ್ಳಿಗಳಲ್ಲಿರುವ ಜನರು ಏನು ಮಾತನಾಡಿಕೊಳ್ಳುತ್ತಿದ್ದಾರೆಂದರೆ, ಈ ಜಿಲ್ಲಾ ಪರಿಷತ್‌ಗಳು ಮತ್ತು ಮಂಡಲ್ ಪಂಚಾಯತ್‌ಗಳು ಅಸ್ತಿತ್ವದಲ್ಲಿ ಬಂದಮೇಲೆ ಎಲ್ಲರೂ ಒಣ ರಾಜಕೀಯ ಮಾಡಲು ಹತ್ತಿದ್ದಾರೆಯೇ ಹೊರತು ರೈತರ ಸಲುವಾಗಿ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ ಎಂದು. ಇವೊತ್ತು ಯಾವುದೇ ಕೈಗಾರಿಕೆಯನ್ನು ತೆಗೆದುಕೊಂಡರೂ ಸಹ ಅಲ್ಲಿ ತಯಾರಾಗುವ ಮಾಲಿಗೆ ಅವರೇ ಬೆಲೆ ನಿಗದಿ ಮಾಡುತ್ತಾರೆ. ಬಟ್ಟೆ ಮಿಲ್‌ನವರು ಬಟ್ಟೆಯ ಬೆಲೆ ಮೀಟರ್‌ಗೆ ಹತ್ತು ರೂಪಾಯಿಗಳೆಂದು ನಿಗದಿ ಮಾಡಿ ಮಾರಾಟಕ್ಕೆ ಕಳುಹಿಸುತ್ತಾರೆ ಪೆನ್ನನ್ನು ತಯಾರು ಮಾಡುವವರು ಪೆನ್ನಿನ ಬೆಲೆ ೫ ರೂಪಾಯಿಗಳೆಂದು ಬೆಲೆ ನಿಗದಿ ಮಾಡುತ್ತಾರೆ. ಆದರೆ ರೈತರು ತಾವು ಬೆಳೆದ ಭತ್ತ. ಜೋಳ, ಗೋಧಿ ಹಾಗೂ ಇನ್ನಿತರ ಬೆಳೆಗಳಿಗೆ ಬೆಲೆಯನ್ನು ನಿಗದಿ ಮಾಡುವ ಅಧಿಕಾರವನ್ನು ಹೊಂದಿಲ್ಲ. ಈ ಒಂದು ವ್ಯತ್ಯಾಸ ಏತಕ್ಕೆ ಎಂಬ ಭಾವನೆ ನನಗೆ ಬರುತ್ತದೆ ? ಮತ್ತೆ ಎರಡನೆಯದಾಗಿ ವಿಚಾರ ಮಾಡುವುದಾದರೆ, ನಮ್ಮ ರಾಜ್ಯದ ಬಡ್ಜೆಟ್ ೨೬೦೦ ಕೋಟಿ ರೂಪಾಯಿಗಳು. ನಮ್ಮ ರಾಜ್ಯದಲ್ಲಿ ೪ ಕೋಟಿ ಕನ್ನಡಿಗರು ಇದ್ದಾರೆ. ಈ ರಾಜ್ಯದ ಆಡಳಿತವನ್ನು ನಡೆಸಲು ಪ್ರತಿಯೊಬ್ಬ ಕನ್ನಡಿಗನೂ ಸಹ ೭೦೦ ರೂಪಾಯಿಗಳ ಕಾಂಟ್ರಿಬ್ಯೂಷನ್ ಮಾಡುತ್ತಾನೆ. ಕೆಲವರು ಹೆಚ್ಚು ಮಾಡಬಹುದು ಮತ್ತೆ ಕೆಲವರು ಕಡಿಮೆ ಮಾಡಬಹುದು. ಆದರೆ ಸರಾಸರಿ ಇಷ್ಟು ಬರುತ್ತದೆ. ಈ ರಾಜ್ಯದಲ್ಲಿರುವಂತಹ ಸರ್ಕಾರದ ನೌಕರರು ಅಂದರೆ ಜವಾನರಿಂದ ಹಿಡಿದು ಐ.ಎ.ಎಸ್. ಅಧಿಕಾರಿಗಳವರೆಗೆ ಆಗುವಂತಹ ಖರ್ಚನ್ನು ಭರಿಸಲು ಪ್ರತಿಯೊಬ್ಬ ಕನ್ನಡಿಗನೂ ಸರಾಸರಿ ೬೦೦ ರೂಪಾಯಿಗಳ ಪ್ರಕಾರ ಕಾಂಟ್ರಿಬ್ಯೂಷನ್ ಕೊಡಬೇಕಾಗುತ್ತದೆ. ಈ ಸರ್ಕಾರವಿರುವುದು ಕೇವಲ ಅಧಿಕಾರಿಗಳ ಮತ್ತು ನೌಕರರ ಸಲುವಾಗಿ ಎಂದು ನನಗನ್ನಿಸುತ್ತದೆ. ಇವರ ಸಲುವಾಗಿ ಇಷ್ಟೆಲ್ಲಾ ಹಣವನ್ನು ಸರಾಸರಿ ಸರ್ಕಾರ

ಖರ್ಚು ಮಾಡಿದರೂ ಸಹ, ರೈತರಾಗಲೀ ಅಥವಾ ಸಾಮಾನ್ಯ ನಾಗರೀಕರಾಗಲೀ ತಹಶೀಲ್‌ದಾರರ ಕಛೇರಿಗೆ ಹೋಗಿ ತಮ್ಮ ಕೆಲಸವನ್ನು ಮಾಡಿಕೊಡಿ ಎಂದರೆ ಕೂಡಲೇ ಮಾಡಿಕೊಡುವುದಿಲ್ಲ. ನಂತರ ಬಾ ಎಂದು ಹೇಳುತ್ತಾರೆ. ಇಂತಹವರಿಗೆ ಯಾವುದರಲ್ಲಿ ಹೊಡೆಯಬೇಕು ? ತೋಟಗಾರಿಕೆಯ ಅಭಿವೃದ್ಧಿ ಬಗ್ಗೆ, ಎಣ್ಣೆ ಬೀಜಗಳ ಅಭಿವೃದ್ಧಿ ಬಗ್ಗೆ, ಕಬ್ಬಿನ ಬೆಳೆ ಅಭಿವೃದ್ಧಿ ಬಗ್ಗೆ ಎಲ್ಲರೂ ಮಾತನಾಡಿದ್ದಾರೆ. ನಮ್ಮ ಬಿಜಾಪುರ ಜಿಲ್ಲೆಯ ಬಗ್ಗೆ ಹೇಳಬೇಕಾದರೆ, ಅಲ್ಲಿ ಹೆಚ್ಚು ದ್ರಾಕ್ಷಿ ಬೆಳೆಯುತ್ತಾರೆ. ಅಲ್ಲಿ ಬೆಳೆಯುವ ದ್ರಾಕ್ಷಿ ನಮ್ಮ ರಾಷ್ಟ್ರದ ಬೇರೆ ಯಾವ ಕಡೆಯೂ ಬೆಳೆಯುವುದಿಲ್ಲ. ನಮ್ಮ ಜಿಲ್ಲೆಯ ಬಾಬಾನಗರ್ ಮತ್ತು ಬಿಜ್ಜರಗಿಯಲ್ಲಿ ಬೆಳೆಯುವಂತಹ ದ್ರಾಕ್ಷಿಯನ್ನು ಹೊರದೇಶಗಳಿಗೆ ರಫ್ತು ಮಾಡುತ್ತಾರೆ. ಆದ್ದರಿಂದ ಗ್ರೇಪ್ಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಎಂದು ಏತಕ್ಕೆ ರಚನೆ ಮಾಡಬಾರದು? ಇದರ ಕಡೆಗೆ ಮಾನ್ಯ ಮಂತ್ರಿಗಳು ಗಮನಹರಿಸಬೇಕು. ನಮ್ಮ ರೈತರ ಸಮಸ್ಯೆಗಳನ್ನು ಅರಿತುಕೊಳ್ಳುವ ಸಲುವಾಗಿ ಸರ್ಕಾರದವರು ಒಂದು ತಜ್ಞರ ಸಮಿತಿಯನ್ನು ರಚನೆ ಮಾಡಿದ್ದಾರೆ. Some time back, the Government had set up an Expert Committee to study the problems of the farmers. I would like to know from the Hon. Minister, who are the Members of that Committee, what is the expenditure they have incurred, whether they have submitted any report and if so, what is the action the Govsrumen has taken on it.

ಮಾನ್ಯ ಅಧ್ಯಕ್ಷರೇ, ಮಾನ್ಯ ದೇಶಪಾಂಡೆ ಸಾಹೇಬರು ಒಕ್ಕಲು ಮನೆತನದಿಂದ ಬಂದಿದ್ದಾರೆ. ಆದ್ದರಿಂದ ಮಾನ್ಯ ದೇಶಪಾಂಡೆ ಅವರು ಪಟ್ಟಣಪಾಂಡೆ ಆಗಬಾರದು. ಅವರು ಮಂತ್ರಿಗಳಾದ ಮೇಲೆ ಇಡೀ ರಾಜ್ಯದಲ್ಲಿ ಎಷ್ಟು ಸಲ ಪ್ರವಾಸ ಮಾಡಿದ್ದಾರೆ ಮತ್ತು ರೈತರ ಅಭಿವೃದ್ಧಿ ಸಲುವಾಗಿ ಏನೇನು ಚಿಂತನೆ ಮಾಡಿದ್ದಾರೆಂಬುದನ್ನು ತಿಳಿಸಬೇಕು ?

ಶ್ರೀ ಆರ್. ವಿ. ದೇಶಪಾಂಡೆ.—ನಾನು ಇಡೀ ರಾಜ್ಯದಲ್ಲಿ ಪ್ರವಾಸ ಮಾಡಿದ್ದೇನೆ. ಬಿಜಾಪುರ ಜಿಲ್ಲೆಗೆ ಮೂರು ಸಲ ಬಂದಿದ್ದೇನೆ. ನಾನು ಬಿಜಾಪುರಕ್ಕೆ ಬಂದಿದ್ದಾಗ ಜಿಲ್ಲಾ ಪರಿಷತ್ ಸದಸ್ಯರ ಮತ್ತು ಶಾಸಕರ ಸಭೆಯನ್ನು ಕರೆದಿದ್ದೆ. ಆದರೆ ದುರ್ದೈವದಿಂದ ನೀವು ಆ ಸಭೆಗೆ ಬರಲಿಲ್ಲ.

ಶ್ರೀ ಎಂ. ಎಲ್. ಉಸ್ತಾದ್.—ನೀವು ಮುಖ್ಯ ಮಂತ್ರಿಗಳ ಜೊತೆ ಬಂದು ಮೀಟಿಂಗ್ ಮಾಡಿದಾಗ ನಾನು ಸಹ ಆ ಮೀಟಿಂಗ್‌ನಲ್ಲಿ ಭಾಗವಹಿಸಿದ್ದೆ. ಆದರೆ ನಾನು ನಿಮಗೆ ಕಾಣಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಸದಸ್ಯರು ಎತ್ತರವಿಲ್ಲದ ಕಾರಣ ಅವರು ನಿಮಗೆ ಕಾಣಿಸಲಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ.—ನಾನು ಬಿಜಾಪುರಕ್ಕೆ ಹೋಗಿದ್ದೆ. ಆಗ ಮಾನ್ಯ ಸದಸ್ಯರು ಇರಲಿಲ್ಲವೆಂದು ಹೇಳಿದೆ.

ಶ್ರೀ ಎಂ. ಎಲ್, ಉಸ್ತಾದ್.—ರೈತರ ಬಗ್ಗೆ ಕಾಳಜಿ ವಹಿಸಿ ಮತ್ತು ಅವರ ಬಗ್ಗೆ ಚಿಂತನೆ ಮಾಡಿ ಎಂದು ಕೇಳಿಕೊಳ್ಳುತ್ತಿದ್ದೇನೆ. ತಾವು ತಿರುಗಾಡಿದ್ದೇನೆ ಅಂದರೆ ಬಹಳ ಥ್ಯಾಂಕ್ಸ್. ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಕರ್ನಾಟಕದಲ್ಲಿ ರೈತರು ಏನಪ್ಪ ಗುಂಡೂರಾವ್ ಸರ್ಕಾರ ಸರಿ ಇತ್ತು ಎಂದು ಹೇಳುತ್ತಾರೆ. ನಾವು ಬಿಜಾಪುರ ಜಿಲ್ಲೆಯಲ್ಲಿ ಅಲ್ಲಿನ ಮತಿಯಿಂದ ಅವರಿಗೆ ಒಂದು ಬೆಳ್ಳಿ ಪಂಪ್‌ಸೆಟ್ ಕೊಟ್ಟಿದ್ದೆವು. ಅವರು ಅಷ್ಟು ಹೆಲ್ಪ್ ಮಾಡಿದ್ದರು, ಆದರೆ ಇವರು ಬಂದು ಮೀಟರು ಹಾಕಿಸಿದರು. ಇದರ ಸಲುವಾಗಿ ನಾನು ಕೇಳಿಕೊಳ್ಳುತ್ತೇನೆ. ರೈತರ ಬಗ್ಗೆ ಕಾಳಜಿ ವಹಿಸಿ ಮೀಟರನ್ನು ತೆಗೆದು ಮೊದಲು ಮಿನಿಮಂ ಏನು ಇಟ್ಟಿದ್ದರೋ ಅದೇರೀತಿ ಮಾಡಬೇಕು, ತಾವು ಸಹಾಯ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ತಾವು ೫ ನಿಮಿಷ ಟೈಂ ಕೊಟ್ಟಿದ್ದೀರಿ. ನಾನು ಏನೇನು ಹೇಳಬೇಕು ಎಂದು ಬರೆದುಕೊಂಡು ಬಂದಿದ್ದೆ, ಆದರೆ ಅವೆಲ್ಲವನ್ನು ಹೇಳಲು ಆಗಲಿಲ್ಲ. ಆದ್ದರಿಂದ ಇಷ್ಟು ಹೇಳಿ, ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎನ್.ಹೆಚ್. ಗೌಡ (ಕುಮಟ).—ಸನ್ಮಾನ್ಯ ಅಧ್ಯಕ್ಷರೆ, ಇವತ್ತು ನಮ್ಮ ಕೃಷಿ ಸಚಿವರಾದ ಸನ್ಮಾನ್ಯ ದೇಶಪಾಂಡೆಯವರು ಹಾಗೂ ತೋಟಗಾರಿಕೆ ಇಲಾಖೆಯ ಸಚಿವರಾದ ಸನ್ಮಾನ್ಯ ಲಕ್ಷ್ಮಿನರಸಿಂಹಯ್ಯನವರು ಸದನದಲ್ಲಿ ಮಂಡಿಸಿದಂಥ ಬೇಡಿಕೆಗಳನ್ನು ಸ್ವಾಗತಿಸುತ್ತಾ ಒಂದೆರಡು ವಿಷಯ ಮಾತನಾಡುತ್ತೇನೆ. ನಿಜವಾಗಿ ವೇಳೆ ಬಹಳ ಕಡಿಮೆ ಕೊಟ್ಟಿದ್ದೀರಿ. ನಾನು ಅದಷ್ಟು ಅವಧಿಯಲ್ಲಿ

ಪ್ರಾರಂಭ ಮಾಡುತ್ತಾ ಇದ್ದೇನೆ. ನನ್ನ ರಾಜಕೀಯ ಗುರುಗಳಾದ ದಿನಕರ ದೇಸಾಯಿಯವರು ೧೯೬೭ನೇ ಇಸವಿಯಲ್ಲಿ ಲೋಕಸಭೆಯಲ್ಲಿ ಆಯ್ಕೆಯಾದಂಥ ಸಂದರ್ಭದಲ್ಲಿ ಜನ ತನ್ನ ಕುರಿತು ಈಗ ಏನು ಮಾತನಾಡಿಕೊಳ್ಳುತ್ತಾರೋ ಎನ್ನುವುದನ್ನು ಊಹಿಸಿಕೊಳ್ಳುತ್ತಾ ಒಂದು ಚುಟುಕ ಬರೆದರು. ಅದು ಏನೆಂದರೆ,

ದೇಸಾಯಿ ದಿನಕರನು ಲೋಕ ಸಭೆಯಲಿ ಕುಳಿತುಕೊಂಡ
ನಾವು ಹಾಕಿದ ವೋಟಾಯಿತು ಬ್ರಹ್ಮದಂಡ,
ಅವನಾದರೂ ಮಾಡಿದ್ದು ಯಾವ ಉದ್ಧಾರ,
ಅಗ್ಗವಾಯ್ತೇನು ಇಡ್ಲಿ–ಸಾಂಬಾರ್,,

ಎಂದು ನಿಜವಾಗಿಯೂ ರೈತರು, ಬಡ ಜನರು, ಹಳ್ಳಿ ಹಳ್ಳಿಗಳಲ್ಲಿ ಇದ್ದವರ ವೋಟನ್ನು ಪಡೆದು ಕೊಂಡು ಆಯ್ಕೆಯಾಗಿ ಬಂದಂಥ ಎಲ್ಲ ಶಾಸಕರು ನಾವು ಏನು ಉದ್ಧಾರ ಮಾಡುತ್ತಾ ಇದ್ದೇವೆ, ಅವರು ಹಾಕಿದ ವೋಟು ಬ್ರಹ್ಮದಂಡವಾಯಿತೇ ಎಂದು ಸ್ವಲ್ಪ ವಿಚಾರ ಮಾಡಬೇಕಾಗುತ್ತದೆ. ದಿನಕರ ದೇಸಾಯಿಯವರು ಹೇಳಿದಹಾಗೆ ಅಗ್ಗವಾಯ್ತೇನು ಇಡ್ಲಿ–ಸಾಂಬಾರ್ ಅಂದರೆ ಇಡೀ ದೇಶದ ಜನತೆಗೆ ಇಡ್ಲಿ ಸಾಂಬಾರ್ ಒಂದೇ ಅಲ್ಲ ಹೊಟ್ಟೆ ಬಟ್ಟೆ ವಸತಿಗೆ ಪ್ರತಿಯೊಂದು ವಸ್ತುಗಳು ಅಗ್ಗವಾಗಿ ದೊರೆಯು ವಂತಾಗಬೇಕು. ಅರ್ಥಾತ್ ನಮ್ಮ ಜನ ಇವತ್ತು ಹೊಟ್ಟೆ ಬಟ್ಟೆಗೆ ಬೇಕಾದಂಥ ದಿನನಿತ್ಯದ ವಸ್ತು ಗಳನ್ನು ಕೊಂಡುಕೊಳ್ಳುವ ಶಕ್ತಿಯನ್ನು ಪಡೆದುಕೊಂಡಿದ್ದಾರೆಯೋ ಎಂದು ವಿಚಾರ ಮಾಡಿದರೆ ಇಲ್ಲ ಎಂದು ದುಃಖದಿಂದ ಹೇಳಬೇಕಾಗುತ್ತದೆ. ಏಕೆಂದರೆ, ನಮ್ಮ ಜನಕ್ಕೆ ದುಡಿಯುವ ಜನಕ್ಕೆ ಬೆವರು ಸುರಿಸುವ ಜನಕ್ಕೆ, ಭೂಮಿಯಲ್ಲಿ ರಕ್ತ ಹರಿಸುವಂಥ ಜನಕ್ಕೆ ಇವತ್ತು ವಸ್ತುಗಳನ್ನು ಕೊಳ್ಳು ವಂಥ ಸಾಮರ್ಥ್ಯ ಬರಲಿಲ್ಲ, ಇದರ ಬಗ್ಗೆ ನಾವು ವಿಚಾರ ಮಾಡಬೇಕಾಗುತ್ತದೆ. ೧೯೫೧ ರಿಂದ ಇಲ್ಲಿಯವರೆಗೆ ಅಂದರೆ ಎಂದು ನಮ್ಮ ದೇಶದ ಉದ್ಧಾರಕ್ಕಾಗಿ ಆರ್ಥಿಕ ಉನ್ನತಿಗಾಗಿ ನಾವು ಪಂಚವಾರ್ಷಿಕ ಯೋಜನೆಗಳನ್ನು ಪ್ರಾರಂಭಮಾಡಿದೆವೋ ಅಂದಿನಿಂದ ಇಲ್ಲಿಯವರೆಗೆ ೪ನೇ ಪಂಚ ವಾರ್ಷಿಕ ಯೋಜನೆಯನ್ನು ಮುಗಿಸಿ ಈಗ ೧೯೭೪–೭೯ರ ಅವಧಿಯಲ್ಲಿ ೫ನೇ ಪಂಚವಾರ್ಷಿಕ ಯೋಜನೆ ಯಲ್ಲಿ ಹೊರಟ್ಟಿದ್ದೇವೆ. ಈ ಎಲ್ಲ ಯೋಜನೆಗಳಲ್ಲೂ ಕೂಡ ನಾವು ಜನಸಾಮಾನ್ಯರ ದಿನನಿತ್ಯದ ಉಪಯೋಗಿ ವಸ್ತುಗಳನ್ನು ಉತ್ಪಾದಿಸುವುದರ ಕಡೆಗೆ ದೇಶದಲ್ಲಿ ಸಮೃದ್ಧವಾದಂಥ ಒಂದು ಪರಿಸ್ಥಿತಿ ಯನ್ನು ನಿರ್ಮಾಣ ಮಾಡುವುದರ ಕಡೆಗೆ ನಮ್ಮ ಲಕ್ಷ್ಯ ಹೋಗಲಿಲ್ಲ ಎಂದು ಹೇಳಬೇಕಾಗುತ್ತದೆ. ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಒಕ್ಕಲುತನಕ್ಕೆ ಪ್ರಥಮ ಪ್ರಾಶಸ್ತ್ಯವೆಂದು ಹೇಳಲಾಗಿದ್ದರೂ ಕೂಡ, ಒಕ್ಕಲುತನಕ್ಕೆ ಎಷ್ಟು ಲಕ್ಷವನ್ನು ಪೂರೈಸಬೇಕಾಗಿತ್ತೊ, ಎಷ್ಟು ಹಣವನ್ನು ಖರ್ಚು ಮಾಡ ಬೇಕಾಗಿತ್ತೊ, ಅಷ್ಟನ್ನು ಮಾಡಿಲ್ಲ. ಇವತ್ತು ನಾವು ಉತ್ಪಾದನೆ ಮಾಡುವುದೆಲ್ಲಾ ಕೇವಲ ಶೇಕಡ ೧೫ ಜನ ಬಳಸುವಂತ ಸುಖದ ವಸ್ತುಗಳನ್ನು ಮತ್ತು ಭೋಗದ ವಸ್ತುಗಳನ್ನು ಉತ್ಪಾದನೆ ಮಾಡು ತ್ತಿದ್ದೇವೆ ಸಾಮಾನ್ಯ ಜನಕ್ಕೆ ಬೇಕಾದಂತಹ ವಸ್ತುಗಳನ್ನು ಉತ್ಪಾದನೆ ಮಾಡುತ್ತಿಲ್ಲ. ನಮ್ಮ ದೇಶದಲ್ಲಿ ಒಕ್ಕಲುತನದಲ್ಲಿ ಯಾವುದೇ ರೀತಿಯ ಪ್ರಗತಿಯಾಗಿಲ್ಲ. ಒಕ್ಕಲುತನದಲ್ಲಿ ತೊಡಗಿದಂತ ವ್ಯಕ್ತಿಗೆ, ಯಾರನ್ನು ದೇಶದ ಬೆನ್ನೆಲುಬು ಎಂದು ಕರೆಯುತ್ತೇವೆಯೋ, ಯಾರನ್ನು, ನಮ್ಮ ದೇಶದ ಅನ್ನದಾತನೆಂದು ಕರೆಯುತ್ತೇವೆಯೊ, ಅವನಿಗೆ ಪ್ರೋತ್ಸಾಹ ಕೊಡುತ್ತಿಲ್ಲ, ಎಲ್ಲರಿಗೂ ಒಂದಲ್ಲ ಒಂದು ರೀತಿಯಲ್ಲಿ ಸಾಂಕೇತಿಕವಾಗಿ ಪ್ರೋತ್ಸಾಹ ಸಿಕ್ಕಿದೆ. ಸಾಹಿತಿಗಳಿಗೆ, ವಿಜ್ಞಾನಿಗಳಿಗೆ, ಕಲಾವಿದರಿಗೆ, ಸಮಾಜ ಸೇವಕರಿಗೆ, ಅಧ್ಯಾಪಕರುಗಳಿಗೆ, ಪ್ರೋತ್ಸಾಹ ದೊರಕಿದೆ. ಆದರೆ ಈ ಎಲ್ಲರ ಜೀವನಕ್ಕೆ ಆದರ್ಶಪ್ರಾಯವಾದಂತ ರೈತನಿಗೆ ಸಾಂಕೇತಿಕವಾಗಿ ಕೂಡ, ಪ್ರೋತ್ಸಾಹ ದೊರೆತ್ತಿಲ್ಲ. ನಾನು ಮಾನ್ಯ ಕೃಷಿ ಸಚಿವರಿಗೆ ಒಂದು ಕಿವಿ ಮಾತನ್ನು ಹೇಳುತ್ತೇನೆ ನಿಮ್ಮ ಅಧಿಕಾರ ಅವಧಿಯಲ್ಲಾದರೂ ಕೂಡ, ರೈತರಿಗೆ ರಾಜ್ಯಮಟ್ಟದಲ್ಲಿ ಪ್ರಶಸ್ತಿ, ನೀಡುವಂತಹ ಒಂದು ಯೋಜನೆಯನ್ನು ಹಾಕಿಕೊಳ್ಳಬೇಕು, ಎಲ್ಲಾ ರೈತರಿಗೂ ಇದನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಆದರೆ ಯಾವ ರೈತ ತನ್ನ ಭೂಮಿಯನ್ನು ಆರ್ಥಿಕ ಹಿಡುವಳಿಯಲ್ಲಿನ್ನಾಗಿ ನಿರ್ಮಾಣ ಮಾಡಿಕೊಂಡು, ಹೆಚ್ಚು ಉತ್ಪಾದನೆಯನ್ನು ಮಾಡು ತ್ತಾನೆಯೋ ಅಂತಹ ರೈತರಿಗೆ ಪ್ರತಿ ಜಿಲ್ಲೆಗೆ ೫ ಹಂತ ಗುರುತಿಸಿ ಇಡೀರಾಜ್ಯದಲ್ಲಿ ವರ್ಷಕ್ಕೆ ೧೦೦ ಜನಕ್ಕಾದರೂ ಪ್ರಶಸ್ತಿ ಕೊಡತಕ್ಕ ವ್ಯವಸ್ಥೆಯನ್ನು ಮಾಡಿ, ಆ ಮೂಲಕ ರೈತ ಸಮುದಾಯಕ್ಕೆ ಮನ್ನಣೆ ಕೊಡಬೇಕೆಂದು ಹೇಳುತ್ತೇನೆ. ಎಲ್ಲ ರೀತಿಯಿಂದಲೂ ರೈತರಿಗೆ ಸಾಲ ಕೊಡಬೇಕಾದ

ಪರಿಸ್ಥಿತಿ ಬಹಳ ಇದೆ. ರೈತ ತನ್ನ ಭೂಮಿಯನ್ನು ತನ್ನ ಹಣದಿಂದಲೇ ಸಾಗುವಳಿ ಮಾಡುವಂತ ಪರಿಸ್ಥಿತಿ ಇಲ್ಲದೆ ಇರುವುದರಿಂದ, ಸಾಲವನ್ನೇ ಆಧಾರಿಸಿ, ಈ ಉದ್ಯೋಗವನ್ನು ಮುಂದುವರಿಸಿಕೊಂಡು ಹೋಗಬೇಕಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ರೈತನ ಸಾಲವನ್ನು ಸಂಪೂರ್ಣ ಮನ್ನಾ ಮಾಡುವುದು ಒಳ್ಳೆಯದು. ಯಾವುದೇ ದೃಷ್ಟಿಯಿಂದಲೂ ನಮಗೆ ಅನ್ನವನ್ನು ಕೊಡತಕ್ಕ ರೈತ ಸಾಲದ ಬಲೆಯಲ್ಲಿ ಬಿದ್ದಿರಬಾರದು. ಸಾಲದಲ್ಲಿ ಸಿಲುಕಿ ಮಿಲಿಮಿಲಿ ಒದ್ದಾಡಬಾರದು. ಸಂಪೂರ್ಣವಾಗಿ ರೈತನ ಸಾಲವನ್ನು ಮನ್ನಾ ಮಾಡಿ, ಅವನಿಗೆ ಎಲ್ಲಾ ರೀತಿಯ ಸಹಾಯ ಧನವನ್ನು ಕೊಟ್ಟು ೧೦೦ಕ್ಕೆ ೮೦ರಷ್ಟು ಇರುವ ರೈತರ ಉದ್ಧಾರಕ್ಕೆ ಸಂಪೂರ್ಣವಾದ ಲಕ್ಷ್ಯವನ್ನು ಸರ್ಕಾರದವರು ಕೊಡಬೇಕಾದುದು ಅವರ ಆದ್ಯ ಕರ್ತವ್ಯ. ಕರ್ನಾಟಕಕ್ಕೆ ಮಾತ್ರವಲ್ಲ, ಇಡೀ ದೇಶದ ರೈತರ ಏಳಿಗೆಗಾಗಿ, ಅವರ ಬದುಕನ್ನು ಹಸನು ಮಾಡಲು ಸೂಕ್ತ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ತೋಟಗಾರಿಕೆ ಇಲಾಖೆಯ ಬಗ್ಗೆ ಹೇಳುವುದಾದರೆ ಇವತ್ತು ತೋಟಗಾರಿಕೆ ಇಲಾಖೆಯವರು, ಹಣ್ಣುಗಳ ಬಗ್ಗೆ, ಕಾಯಿ ಪಲ್ಯಗಳ ಬಗ್ಗೆ ಯೋಗ್ಯವಾದಂತಹ ದರವನ್ನು ಗೊತ್ತುಮಾಡಬೇಕು. ಇವತ್ತು ಹಣ್ಣು ಹಂಪಲು, ಕಾಯಿ ಪಲ್ಯಗಳನ್ನು ಬೆಳೆಯಂತಕ್ಕ ರೈತರಿಗೆ ಯೋಗ್ಯವಾದ ಬೆಲೆ ಬರುತ್ತಿಲ್ಲ.

೫–೩೦ ಪಿ. ಎಂ.

ಏಕೆಂದರೆ ಹಳ್ಳಿಗಳ ಈ ವಸ್ತುಗಳಿಗೆ ಮಾರುಕಟ್ಟೆಗಳ ಅನುಕೂಲತೆ ಇಲ್ಲ. ಎಂಬುದನ್ನು ಕೇಳಿದಾಗ ಬಹಳ ದುಃಖವಾಗುತ್ತದೆ. ನಾನು ಹಳ್ಳಿಯಲ್ಲಿ ಹುಟ್ಟಿ ಬೆಳೆದವ, ತೋಟಗಾರಿಕೆಯಲ್ಲಿ, ಕೃಷಿಯಲ್ಲಿ ತೊಡಗಿದವ. ಹಳ್ಳಿಯ ಜನ ಇವತ್ತು ಹಣ್ಣು ಮತ್ತು ಕಾಯಿಪಲ್ಲೆಗಳನ್ನು ಬೆಳೆದು ಯಾರದೋ ಅಂಗಡಿ ಮುಂದೆ ಕುಳಿತು ಮಾರುವುದನ್ನು ಮತ್ತು ಅಲ್ಲಿ ಮಾರುವಾಗ ಆ ಅಂಗಡಿಗಳವರಿಂದ ಬೈಯಿಸಿಕೊಳ್ಳುವ ಪ್ರಸಂಗವನ್ನು ಕಾಣುತ್ತೇವೆ. ಹಣ ಎಲ್ಲಾ ದಳ್ಳಾಳಿಗಳ ಕೈಯಲ್ಲಿ ಸಿಗುತ್ತಿದೆ. ಉತ್ಪಾದಿಸುವವನು ಮತ್ತು ಉಪಭೋಗಿಸುವವನು ಇವರ ಮಧ್ಯದಲ್ಲಿ ದಳ್ಳಾಳಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಇದನ್ನು ನಿರ್ಮೂಲನ ಮಾಡಬೇಕು. ನಿರ್ಮೂಲನ ಮಾಡಿ ಉತ್ಪಾದನೆ ಮಾಡುವವನ ಮತ್ತು ಕೊಳ್ಳುವವನ ಮಧ್ಯೆ ಒಂದು ಸರಿಯಾದ ವ್ಯವಸ್ಥೆ ಆಗಬೇಕೆಂದು ವಿನಂತಿ ಮಾಡಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).—ಅಧ್ಯಕ್ಷರೆ, ರೈತನ ಬಗ್ಗೆ ನಾವು ಎಷ್ಟು ಅನಾದರಣೆ ಮಾಡುತ್ತಿದ್ದೇವೆ ಎಂದರೆ ನೀವು ನನಗೆ ಮಾತನಾಡುವುದಕ್ಕೆ ಐದು ನಿಮಿಷ ಕೊಡುತ್ತಿದ್ದೀರಿ. ೯೯ ಭಾಗ ಇರತಕ್ಕ ರೈತರ ಪ್ರತಿನಿಧಿಗಳು ಇಲ್ಲಿದ್ದೇವೆ. ಆದರೆ ಅವರ ಪ್ರಶ್ನೆ ಬಂದಾಗ ಒಂದು ದಿವಸದಲ್ಲಿ ಐದೈದು ನಿಮಿಷ ಕೊಟ್ಟು ಐದು ನಿಮಿಷದಲ್ಲಿ ಮಾತನಾಡು ಎಂದು ಹೇಳುತ್ತೀರಿ,

ಅಧ್ಯಕ್ಷರು.—ನೀವು ಮಾತನಾಡಿ, ಚೆನ್ನಾಗಿ ಮಾತನಾಡುತ್ತೀರಿ.

ಶ್ರೀ ಜಿ. ಎಸ್. ಶಿವನಂಜಪ್ಪ.—ಐದು ನಿಮಿಷದಲ್ಲಿ ಏನು ಚೆನ್ನಾಗಿ ಮಾತನಾಡುವುದು ? ನೀವು ಎಷ್ಟು ಅನಾದರಣೆ ಮಾಡುತ್ತಿದ್ದೀರಿ ಎಂಬುದಕ್ಕೆ ಹೇಳಿದೆ. ನೀವು ಅವಕಾಶ ಕೊಡದೇ ಇದ್ದರೂ ಚಿಂತೆ ಇಲ್ಲ. ಈ ವಿಚಾರಕ್ಕೆ ಹೆಚ್ಚು ಟೈಮ್ ಬೇಕಾಗಿತ್ತು. ನಾವು ಮಾತನಾಡುವುದಕ್ಕೆ ಪ್ರಾರಂಭ ಮಾಡಿದಾಗ ನಮ್ಮ ತಲೆ ಮೇಲೆ ಬಡಿದು ಕೂರಿಸಿದರೆ ನಾವು ರೈತರಿಗೆ ಏನು ಉತ್ತರ ಕೊಡಬೇಕು ? ಆದ್ದರಿಂದ ನಾನು ಮಾತನಾಡುವಾಗ ದಯವಿಟ್ಟು ಬೆಲ್ ಹೊಡೆಯಬೇಡಿ. ಬೆಲ್ ಮಾಡಿದರೆ ನಾನು ಮಾತನಾಡುವ ಧಾಟಿಯೇ ಬದಲಾವಣೆಯಾಗುತ್ತದೆ. ಆದ್ದರಿಂದ ದಯವಿಟ್ಟು ಬೆಲ್ ಹೊಡೆಯಬೇಡಿ.

ಅಧ್ಯಕ್ಷರು.—ನೀವು ಮಾತನಾಡುವುದಾದರೆ ಮಾತನಾಡಿ, ಇಲ್ಲದಿದ್ದರೆ ಬಿಡಿ. ಜಾಸ್ತಿ ಟೈಮ್ ಕೊಡುವುದಕ್ಕಾಗುವುದಿಲ್ಲ. ಎಲ್ಲರಿಗೂ ಐದು ನಿಮಿಷ ಕೊಟ್ಟಿದ್ದೇನೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಸ್ವಾಮಿ, ನೀವೂ ರೈತರೆ.

ಅಧ್ಯಕ್ಷರು.—ಅದಕ್ಕೆ ಹೇಳುತ್ತಿದ್ದೇನೆ. ನನಗೂ ಗೊತ್ತಿದೆ. ಯಾರೂ ಹೇಳದೇ ಇರುವಂಥದ್ದನ್ನು ನೀವು ಹೇಳಿ.

ಶ್ರೀ ವೀರಣ್ಣ.—ಅಧ್ಯಕ್ಷರು ಹೇಳಿದಹಾಗೆ ಕೇಳಿ. ಅವಕಾಶ ಕೊಟ್ಟರೆ ಮಾತನಾಡಿ.

ಶ್ರೀ ಜಿ. ಎಸ್. ಶಿವನಂಜಪ್ಪ.—ರೈತನ ಬೆಂಬಲದಿಂದ ನೀವು ಅಧಿಕಾರಕ್ಕೆ ಬಂದಿರಿ. ರೈತರ ಬಗ್ಗೆ ಯಾವರೀತಿ ಟ್ರೀಟ್ ಮಾಡುತ್ತಿದ್ದೀರಿ ಎಂಬುದು ಇದರಿಂದ ಗೊತ್ತಾಗುತ್ತದೆ.

ಶ್ರೀ ವೀರಣ್ಣ.—ನೀವು ಏನು ಹೇಳಿದರೂ ಜನ ಕೇಳುವುದಿಲ್ಲ. ರೈತರಿಗೆ ಗೊತ್ತಿದೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಅನ್ನದಾತೋ ಸುಖೀಭವ. ಅನ್ನದಾನ ಮಾಡುವವನ ಬಗ್ಗೆ ಸರ್ಕಾರ ನಡೆಸತಕ್ಕವರು ಅಥವಾ ಈ ಕಡೆಯುವರು ಯಾವರೀತಿ ವಿಚಾರ ಮಾಡುತ್ತಿದ್ದಾರೆ ಎಂಬುದು ಅವನಿಗೆ ಗೊತ್ತಾದರೆ ನಮ್ಮನ್ನು ನಿಮ್ಮನ್ನು ಊರಿನಲ್ಲಿ ಬಿಟ್ಟುಕೊಳ್ಳುವುದಿಲ್ಲ. ನಿಮಗೆ ರಾಜ್ಯಮಟ್ಟದ ಸಚಿವ ಸ್ಥಾನದಿಂದ ರಾಮಕೃಷ್ಣ ಹೆಗಡೆಯವರು ಪ್ರೊಮೋಷನ್ ಕೊಟ್ಟಿದ್ದಾರೆ. ಆದರೆ ಯಾವ ಹಣ ವನ್ನೂ ಕೊಟ್ಟಿಲ್ಲ. ಅದನ್ನು ವಿರೋಧ ಮಾಡುತ್ತಿದ್ದೇನೆ. ೮೦ ಪರ್ಸೆಂಟ್ ಹಣ ಏನು ಬರಬೇಕಾ ಗಿತ್ತೋ ಅಷ್ಟನ್ನು ನಿಮ್ಮ ಮಂತ್ರಿಮಂಡಲದಲ್ಲಿ ಕೂಡಿಸಿಕೊಳ್ಳುವುದಕ್ಕೆ ಆಗದೇ ಇರುವುದರಿಂದ ವಿರೋಧ ಮಾಡುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ನನ್ನ ಇಲಾಖೆಯಲ್ಲಿ ಏನು ಹಣ ಕೊಟ್ಟಿದ್ದರೂ ಅದನ್ನು ಖರ್ಚು ಮಾಡಿದ್ದೇವೆ. ಅದರ ಬಗ್ಗೆ ಕಾಳಜಿ ಬೇಡ.

ಶ್ರೀ ಜಿ. ಎಸ್. ಶಿವನಂಜಪ್ಪ.—ಅವರಿಗೆ ಕೊಟ್ಟಿರುವ ಹಣ ಬರೀ ಎಸ್ಟಾಬ್ಲಿಷ್‌ಮೆಂಟಿಗೇ ಆಗುತ್ತಿದೆ. ಆರ್ಮಿ ಆಫ್ ಆಫೀಸರ್ಸ್ ಇದ್ದಾರೆ. ನನ್ನ ಕ್ಷೇತ್ರದಲ್ಲೇ ೨೨ ಜನ ಅಗ್ರಿಕಲ್ಚರಲ್ ಆಫೀಸರ್ಸ್ ಇದ್ದಾರೆ. ಜನರಿಗೆ ತಿಳಿವಳಿಕೆ ಕೊಡುವುದಕ್ಕೆ ಯಾರೂ ಸಿಗುತ್ತಿಲ್ಲ. ಮೊದಲು ವಾರ ಕ್ಕೊಂದು ಸಾರಿ ಸಿಗುತ್ತಿದ್ದರು, ಈಗ ಅದೂ ಸಿಗುವುದಿಲ್ಲ. ಅವರೆಲ್ಲಾ ಈಗ ಲೆಕ್ಚರರ್ಸ್ ಆಗಿದ್ದಾರೆ. ಪ್ರತಿಯೊಂದು ಆಫೀಸ್‌ನಲ್ಲಿ ನಿಮ್ಮ ಅಧಿಕಾರಿಗಳು ಇರತಕ್ಕ ವ್ಯವಸ್ಥೆ ಮಾಡಿ. ನೀವು ಖರ್ಚು ಮಾಡಿರ ತಕ್ಕ ಹಣದ ಬಗ್ಗೆ ಈ ಪುಸ್ತಕದಲ್ಲಿ ಏನು ಅಂಕಿಅಂಶಗಳನ್ನು ಕೊಟ್ಟಿದ್ದೀರಿ ಇದೆಲ್ಲಾ ೧೦೦ಕ್ಕೆ ೯೯ಭಾಗ ಬಂಕಮ್. ಯಾವುದೂ ನಂಬತಕ್ಕದ್ದಲ್ಲ.

ಶ್ರೀ ಆರ್. ವಿ. ದೇಶಪಾಂಡೆ.—ಹಾಗಾದರೆ ಕೇಂದ್ರ ಸರ್ಕಾರದ ಅಂಕಿ ಸಂಖ್ಯೆ ಒಪ್ಪಿಕೊಳ್ಳುತ್ತೀರಾ? ರಾಜ್ಯ ಸರ್ಕಾರದ ಅಂಕಿಸಂಖ್ಯೆ ಸುಳ್ಳಾದರೆ ಕೇಂದ್ರ ಸರ್ಕಾರದ ಅಂಕಿಸಂಖ್ಯೆಯೂ ಸುಳ್ಳು,

ಶ್ರೀ ಡಿ. ವಿ. ಚಿನ್ನಪ್ಪ.—ಅಲ್ಲಿ ಜನತಾ ಪಕ್ಷದವರು ಕೇಂದ್ರ ಸರ್ಕಾರಕ್ಕೆ ಹೇಳಲಿ.

ನೀವು ಇಲ್ಲಿ ಹೇಳಬೇಡಿ ಎಂದರೆ ನಾನು ಏನನ್ನು ಹೇಳುವುದಕ್ಕೆ ಹೋಗುವುದಿಲ್ಲ, ದಯವಿಟ್ಟು ಕೇಳಿ ನಾನು ಅಂಕಿಅಂಶಗಳ ಬಗ್ಗೆ ಬಹಳ ಜವಾಬ್ದಾರಿಯುತವಾಗಿ ಮಾತನಾಡುತ್ತಿದ್ದೇನೆ. ೨೦ ಅಂಶಗಳ ಕಾರ್ಯಕ್ರಮದ ಬಗ್ಗೆ ನಿಮ್ಮ ಇಲಾಖೆಯವರು ವರದಿ ಕೊಟ್ಟಿರುವುದನ್ನು ನೋಡಿದರೆ ಆಶ್ಚರ್ಯ ವಾಗುತ್ತದೆ. ನಿಮ್ಮ ಇಲಾಖೆಯಿಂದ ತೋಟಗಾರಿಕೆ ಇಲಾಖೆಗೆ ಸಹಾಯ ಸಿಗಬೇಕು. ಮೈನರ್ ಇರಿಗೇಷನ್ ಆಗಬೇಕು. ಪಶು ಸಂಗೋಪನಾ ಇಲಾಖೆ ನಿಮಗೆ ಬರಬೇಕು. ಡೈರಿ ಡೆವಲಪ್‌ಮೆಂಟ್ ನಿಮಗೆ ಬರಬೇಕು. ಈ ಎಲ್ಲಾ ಇಲಾಖೆಗಳನ್ನು ಸಂಯೋಜನೆ ಮಾಡಿ ಪುಸ್ತಕ ಪ್ರಿಂಟ್ ಮಾಡಿ ರೈತರ ಬಗ್ಗೆ ನಿಮಗೆ ಕಳಕಳಿ ಇದ್ದರೆ, ಅವರ ಕಷ್ಟ ಸುಖವನ್ನು ವಿಚಾರಿಸಿ ಆ ರೀತಿ ಮಾಡಿದರೆ I would have been the first man to congratuiate you ಇವತ್ತಿನ ದಿವಸ ಬಹಳ ವಿಷಾದ ದಿಂದ ಹೇಳಬೇಕಾಗಿದೆ. ಬ್ರಿಟೀಷರ ಕಾಲದಲ್ಲಿ ಎಸ್ಟಾಬ್ಲಿಷ್‌ಮೆಂಟಿಗೆ ಒಬ್ಬ ಡೈರೆಕ್ಟರ್ ಇದ್ದರೆ ನೀವು ೨೦ ಜನ ಡೈರೆಕ್ಟರ್‌ನ್ನು ಅಪಾಯಿಂಟ್ ಮಾಡಿದ್ದೀರಿ. ಹೀಗೆ ಇಲಾಖೆಯನ್ನು ದೊಡ್ಡದು ಮಾಡಿ ಕೊಂಡು ಹೋಗುತ್ತಿದ್ದರೇ ಹೊರತು ಇಲಾಖಾ ಕಾರ್ಯ ಕ್ರಮಗಳ ಬಗ್ಗೆ ಏನು ಮಾಡಿಲ್ಲವೆಂದು ಹೇಳ ಬೇಕಾಗುತ್ತದೆ. ತಮ್ಮ ಡಿಪಾರ್ಟ್‌ಮೆಂಟ್ ಯಾವ ರೀತಿ ನಡೆದಿದೆ ಎಂದರೆ ಒಂದು ರೀತಿ ಹ್ಯಾಂಡ್ ಪೋಸ್ಟ್ ಇದ್ದ ಹಾಗೆ ಇದೆ. ವ್ಯವಸಾಯಗಾರರಿಗೆ ಬೀಜವನ್ನು ಒದಗಿಸಿಕೊಡಿ ಎಂದರೆ ಬೀಜದ ನಿಗಮಕ್ಕೆ ಹೋಗಿ ಎಂದು ಹೇಳುತ್ತೀರಿ, ಫರ್ಟಿಲೈಸರ್ಸ್ ಕೊಡಿ ಎಂದರೆ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ಗೆ ಹೋಗಿ ಎಂದು ಹೇಳುತ್ತೀರಿ. ಇದರಿಂದ ನಿಮ್ಮ ಇಲಾಖೆ ಒಂದು ರೀತಿ ಹ್ಯಾಂಡ್ ಪೋಸ್ಟ್ ಇದ್ದ ಹಾಗೆ ಎಂದು ಹೇಳಬೇಕಾಗಿದೆ. ಮಾನ್ಯ ನಜೀರ್‌ಸಾಬ್ ರವರನ್ನು ಕೇಳಿದರೆ ಮಂಡಲ್ ಪಂಚಾಯತ್‌ಗೆ ಹೋಗಿ ಎಂದು ಹೇಳುತ್ತಾರೆ. ತಾವೆಲ್ಲರೂ ಏನು ಕೇಳಿದರೂ ನಿಗಮಕ್ಕೆ ಹೋಗಿ ಎಂದು ಹೇಳುತ್ತೀರಿ. ಏತಕ್ಕೆ ಈ ನಿಗಮಗಳು ಬೇಕು ? ಈ ನಿಗಮಗಳಲ್ಲಿ ಬಹಳವಾಗಿ ಅಧಿಕಾರಗಳನ್ನು ಸಂಘಟಿಸಿದ್ದೀರೇ ಹೊರತು ಅವರಿಂದ ಉಪಯೋಗ ಪಡೆದುಕೊಳ್ಳುವ ಶಕ್ತಿ ಇಲ್ಲದಂತಾಗಿದೆ. ಈವತ್ತಿನ ದಿವಸ ಬಿತ್ತನೆ ಮುಸುಕಿನ ಜೋಳವನ್ನು ಕೊಟ್ಟಿರಿ. ಅದು ತೆನೆಯೇ ಬರಲಿಲ್ಲ. ಬರೇ ಹೆಣ್ಣು ಬೀಜ ಕೊಟ್ಟಿರಿ ಗಂಡು ಬೀಜವನ್ನು ಕೊಡಲಿಲ್ಲ. ಇದರಿಂದಾಗಿ ನನಗೆ ಸುಮಾರು ೭-೮ ಸಾವಿರ ರೂಪಾಯಿ ಲಂಕ್ಸಾನಾಯಿತು.

ಶ್ರೀ ವೀರಣ್ಣ.—ಕಳೆದಸಾರಿ ತಾವು ಒಳ್ಳೆಯ ಬೀಜವನ್ನು ಕೊಟ್ಟಿದ್ದರಿಂದ ಒಳ್ಳೆಯ ಲಾಭ ಬಂದಿದೆ ಎಂದು ತಾವೆ ಹೇಳಿದಿರಿ.

ಶ್ರೀ ಜಿ. ಎಸ್. ಶಿವನಂಜಪ್ಪ.—ಇದು ಸತ್ಯಕ್ಕೆ ದೂರವಾದ ಮಾತು. ತಮ್ಮ ಖಾತೆಯ ಬಗ್ಗೆ ಮಾತನಾಡುತ್ತೇನೆ, ಆವಾಗ ಮಾತನಾಡಿ. ನಿಂಬೆಗಿಡಗಳನ್ನು ಕೊಟ್ಟಿದ್ದರು. ಅದು ಮುಸುಕುಕಾಯಿ ಆಗಿದೆ. ಅದಕ್ಕೆ ಯಾರು ಜವಾಬ್ದಾರರು ? ಇಂಥ ಬೀಜವನ್ನು ಯಾರು ಸಪ್ಲೈ ಮಾಡಿದರು ? ನಿಮ್ಮ ಡೈರೆಕ್ಟರ್‌ಗೆ ಈ ಆಫೀಸರುಗಳ ಮೇಲೆ ಏನು ಹಿಡಿತ ಇದೆ ? ಅವರ ಮೇಲೆ ಸರ್ಕಾರ ಸರಿಯಾದ ಹಿಡಿತ ಇಟ್ಟು ಕೊಳ್ಳದಿದ್ದರೆ ಏನು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ರೈತರ ಬಗ್ಗೆ ಇಷ್ಟೊಂದು ಅನಾದಾರಣೆ ಮಾಡಬಾರದು. ಇವತ್ತು ಅವ್ಯವಹಾರ ನಡೆಸಿರುವವರನ್ನು ಕಂಡು ಹಿಡಿದು ಎಷ್ಟು ಕೇಸ್‌ಗಳನ್ನು ಹಾಕಿದ್ದೀರಿ ? ಎಲ್ಲದಕ್ಕೂ ಸರ್ಟಿಫೈಡ್ ಬೀಜಗಳೆಂದು ಬರೆದಿರುತ್ತೀರಿ. ಇದರಿಂದ ನಿಮ್ಮ ಹತ್ತಿರ ರೈತರು ಬರುತ್ತಾರೆ, ಅವುಗಳನ್ನು ತೆಗೆದುಕೊಂಡು ಹೋಗುತ್ತಾರೆ. ೮೦ ಪರ್ಸೆಂಟ್ ಆಗುತ್ತದೆಂದು ಸರ್ಟಿಫೈಡ್ ಮಾಡಿರುತ್ತೀರಿ. ಇದು ಸರ್ಟಿಫೈಡ್ ಮಾಡುವ ವಿಧಾನವೇ? ಸರ್ಟಿಫೈಡ್ ಏಜೆನ್ಸಿ ಯಾರು ಯಾರು ಇದ್ದಾರೆ ಅವರ ಬಗ್ಗೆ ನಿಗಾ ಇಡಬೇಕು. ಯಾರು ದುಡ್ಡನ್ನು ಕೊಡುತ್ತಾರೆ, ಅವರನ್ನುಸರ್ಟಿಫೈಡ್ ಮಾಡುವ ವ್ಯವಸ್ಥೆಯನ್ನು ಇಟ್ಟುಕೊಂಡು ಇಡೀ ಬೇಸಾಯದಲ್ಲಿ ಜೀವನಮಾಡುವವನಿಗೆಅನ್ಯಾಯವನ್ನು ಮಾಡುತ್ತಿದ್ದೀರಿ. ಈ ರೀತಿ ಆಗಬಾರದು. ಅವನ ಬದುಕನ್ನು ಹಸನುಮಾಡಬೇಕೇಹೊರತು ಅವನಿಗೆ ಅನ್ಯಾಯ ಮಾಡಬಾರದೆಂದು ಹೇಳುತ್ತೇನೆ.

ಇನ್ನು ನಮ್ಮ ತುಮಕೂರು ಜಿಲ್ಲೆಯಲ್ಲಿ ದೇವರದಯದಿಂದ ಒಳ್ಳೆ ಮಳೆಯಾಗಿದೆ. ಮುಂಗಾರು ಬೆಳೆ ಬೆಳೆಯಬೇಕು. ಇದಕ್ಕೆ ಬಿತ್ತನೆ ಬೀಜದ ವ್ಯವಸ್ಥೆಯಾಗಬೇಕು. ಹೆಸರು ಬೇಕು, ರಾಗಿಬೇಕು, ಜೋಳ ಬೇಕು. ಮುಂಗಾರು ಬೆಳೆಯನ್ನು ಬೆಳೆಯಲು ಬಿತ್ತನೇ ಬೀಜಗಳಿಗೆ ಯಾರನ್ನು ಕೇಳಬೇಕು ? ೨೦ ಅಂಶಗಳ ಕಾರ್ಯಕ್ರಮದನ್ವಯ ಬೀಜಗೊಬ್ಬರ ಕೊಡಿ ಎಂದು ರೈತರು ಕೇಳುತ್ತಾರೆ. ಇಲ್ಲವೆಂದು ಹೇಳುತ್ತೀರಾ ? ಹಾಗಿದ್ದರೆ ನಿಮ್ಮ ಇಲಾಖೆ ಏತಕ್ಕೆ ಇರಬೇಕು ? ೧೦೦ಕ್ಕೆ ೯೦ ಜನ ವ್ಯವಸಾಯವನ್ನೇ ಅವಲಂಬಿಸಿರುವ ರೈತರಿಗೆ ಈ ರೀತಿ ಮಾಡಿದರೆ ಸರಿಹೋಗುವುದಿಲ್ಲ. ಈ ಒಂದು ಹ್ಯಾಂಡ್ ಪೋಸ್ಟ್ ವ್ಯವಸ್ಥೆ ಏನು ಇದೆ ಇದನ್ನು ಮೊದಲು ಸರಿಪಡಿಸಬೇಕು. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿ ಲಾಭ ಬರುವ ಬಗ್ಗೆ ಹೇಳಿದ್ದಾರೆ. ಹೋದ ವರ್ಷ ನಾವು ಹೇಳಿದ್ದೇವು, ಅಲ್ಲಿ ಕೋಟ್ಯಾಂತರ ರೂಪಾಯಿ ನಷ್ಟವಾಗಿದೆ, ಭ್ರಷ್ಟಾಚಾರ ನಡೆದಿದೆ. ಅಲ್ಲಿಗೆ ಬಂದಂತಹವರಿಗೆಲ್ಲ ಎಂ.ಡಿ.ಯವರು ಮನೆಗೆ ತೆಗೆದುಕೊಂಡು ಹೋಗಿದ್ದಾರೆಂದು ೨೦ ಪುಟದ ದೂರನ್ನು ಕೊಟ್ಟೆವು. ಅದರ ಬಗ್ಗೆ ಏನು ಮಾಡಿದ್ದೀರಿ ? ವಿಚಾರಣೆ ಮಾಡಿದ್ದೀರಾ ?

ಶ್ರೀ ಆರ್.ವಿ. ದೇಶಪಾಂಡೆ.—ತಾವು ಮತ್ತು ಮಾನ್ಯ ಬಸವರಾಜ್ (ಲೋಕಸಭಾ ಸದಸ್ಯರು) ಬಂದು ತುಮಕೂರಿನಲ್ಲಿ ಹೇಳಿದಾಗ ಅದರ ಬಗ್ಗೆ ನೇರವಾಗಿ ಕ್ರಮ ತೆಗೆದುಕೊಂಡಿದ್ದೇವೆ. ಮಾನ್ಯ ಬಸವರಾಜ್ ರವರು ಬಂದು ಧನ್ಯವಾದ ಹೇಳಿದ್ದಾರೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ನೀವು ಮಾನ್ಯ ಬಸವರಾಜ್‌ರವರಿಗೆ ಹೇಳಿದ್ದೀರಿ. ನನಗೆ ಹೇಳಿಲ್ಲ. ಅಲ್ಲಿ ಏನು ಭ್ರಷ್ಟಾಚಾರ, ಅವ್ಯವಹಾರ ನಡೆದಿದೆ ಅದರ ಬಗ್ಗೆ ತನಿಖೆಯ ವರದಿಯನ್ನು ಸದನಕ್ಕೆ ಒಪ್ಪಿಸಬೇಕಾಗುತ್ತದೆ. ಕೋಟಿ ಗಟ್ಟಲೆ ಹಣ ಲೂಟಿಯಾಗಿದೆ. ಯಾರ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಉತ್ತರ ನೀಡುವಾಗ ಹೇಳಬೇಕು. ತೋಟಗಾರಿಕೆ ಇಲಾಖೆ ಬಗ್ಗೆ ಎರಡು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸಿಬಿಡುತ್ತೇನೆ. ಮಾನ್ಯ ಲಕ್ಷ್ಮೀನರಸಿಂಹಯ್ಯನವರಿಗೂ ತೋಟಗಾರಿಕೆಗೂ ಹೇಗೆ ಸಂಬಂಧ ಬಂತೋ ಗೊತ್ತಿಲ್ಲ ಪವರ್ ವಿಚಾರದಲ್ಲೇನೋ ಚೆನ್ನಾಗಿ ತಿಳಿದುಕೊಂಡಿದ್ದಾರೆ. ಆದರೆ ತೋಟಗಾರಿಕೆ ವಿಚಾರ ಅವರಿಗೆ ಅಷ್ಟಾಗಿ ಗೊತ್ತಿಲ್ಲ, ನಿಮ್ಮ ಕ್ಷೇತ್ರದಲ್ಲಾಗಲಿ, ನಮ್ಮ ಕ್ಷೇತ್ರದಲ್ಲಾಗಲಿ ಯಾರಾದರೂ ಬಡ ರೈತ ಎರಡು ಕಿತ್ತಲೆ ಹಣ್ಣು ತಿಂದಿದ್ದಾನೆಯೋ ಎಂದರೆ ತಿಂದಿರುವುದಿಲ್ಲ: ಅವನು ತಿನ್ನುವುದು ಯಾವಾಗ ಎಂದರೆ ವೈದ್ಯರು ಬಂದು ನಿನ್ನ ಹೆಂಡತಿಗೆ ಎರಡು ಕಿತ್ತಲೆ ಹಣ್ಣಿನ ರಸ ಕೊಟ್ಟರೆ ಬದುಕುತ್ತಾಳೆ ಅಂದಾಗ ಹಣ್ಣು ತರಲು ಓಡಿಹೋಗುತ್ತಾನೆ. ಆಗ ಅವನು ಹಣ ಕೊಟ್ಟು ಕಿತ್ತಲೆ ಹಣ್ಣನ್ನು ತರಬೇಕು. ಈ ಒಂದು ಇಲಾಖೆಯನ್ನು ಮಾಡಿರತಕ್ಕ ಕಾನ್‌ಸೆಪ್ಟ್ ಏನೋ ಒಳ್ಳೆಯದು ಇದೆ. ಸ್ಥಳೀಯವಾಗಿ ಏನು ಬೆಳೆ ಬೆಳೆಯುತ್ತದೆ ಫಲ ದೊರೆಯುತ್ತದೆ ಅದರಲ್ಲಿ ಅರ್ಧ ಭಾಗ ಸಿಗಬೇಕೆಂದು ಬಡಜನರಿಗೆ ಇದೆ, ಆದರೆ ಅಲ್ಲಿ ಬೆಳೆದದ್ದನ್ನೆಲ್ಲ ಹರಾಜು

ಹಾಕುತ್ತಾರೆ. ಯಾರೋ ಸಾಬರು, ಕಂಟ್ರಾಕ್ಟರು ಅದನ್ನು ತೆಗೆದುಕೊಂಡು ಬರುತ್ತಾರೆ. ಹೀಗಾದರೆ ಸುತ್ತಮುತ್ತ ಇರತಕ್ಕ ರೈತರ ಗತಿ ಏನಾಗಬೇಕು? ಅಲ್ಲಿ ಬೆಳೆದಂಥ ಪದಾರ್ಥಗಳು ಸ್ಥಳದಲ್ಲೇ ಸಿಗತಕ್ಕ ಅವಕಾಶ ಮಾಡಿಕೊಡಬೇಕಾಗುತ್ತದೆ. ತೆಂಗಿನ ಬೀಜಗಳನ್ನು ಕೊಡತಕ್ಕದ್ದರ ಬಗ್ಗೆ ಹೇಳುವುದಾದರೆ, ನಿಮ್ಮ ಕಡೆ ತೆಂಗಿನಗಿಡ ಈಗ ಪ್ರಾರಂಭವಾಗಿದೆ. ಇವರು ತೆಂಗಿನಗಿಡಕ್ಕೆ ಯಾವ ತೋಟದಿಂದ ಬೀಜ ತೆಗೆದುಕೊಳ್ಳಬೇಕೆಂದು ಗುರುತು ಮಾಡಿರುತ್ತಾರೋ ಆ ತೋಟದಿಂದ ತೆಗೆದುಕೊಳ್ಳುವುದಿಲ್ಲ. ಕೊಬ್ಬರಿ ಕಾಯಿ ಹೊಸ ಮರದ್ದೋ ಹಳೆಯ ಮರದ್ದೋ ಒಂದು ಸಾವಿರಕ್ಕೆ ನೂರು ರೂಪಾಯಿ ಲಾಭ ಬರುತ್ತದೆಂದು ಗುರುತು ಮಾಡಿದ ತೋಟದಲ್ಲಿ ತೆಗೆದುಕೊಂಡು ಬರುವುದಿಲ್ಲ. ಬೇರೆ ಬೀಜ ತೆಗೆದುಕೊಂಡು ಬಂದು ರೈತನಿಗೆ ಸಸಿ ಮಾಡಿ ಕೊಡುತ್ತಾರೆ. ಅದು ೨೦ ವರ್ಷವಾದರೂ ಫಲ ಬಿಡುವುದಿಲ್ಲ. ಉದಾಹರಣೆಗೆ ಫಾರಂನಿಂದ ತಂದು ನನ್ನ ತೋಟದಲ್ಲಿ ಒಂದು ಗಿಡವನ್ನು ಹಾಕಿದ್ದೇನೆ, ಅದಕ್ಕೆ ೧೨ ವರ್ಷವಾದರೂ ಇನ್ನೂ ಫಲ ಬಿಟ್ಟಿಲ್ಲ. ಅದೇ ನನ್ನ ತೋಟದ ಸಸಿಯಲ್ಲಿ ೪-೫ ವರ್ಷಕ್ಕೆಲ್ಲ ಫಲ ಬಿಡುತ್ತಿದೆ. ಏಕಾಂತಯ್ಯನವರೇ, ನಿಮಗೂ ತೋಟ ಇದೆ. ನೀವು ಈ ಪ್ರಯೋಗವನ್ನು ಮಾಡಿ ನೋಡಿ ಗೊತ್ತಾಗುತ್ತದೆ, ಇವರು ಒಂದು ಸಾವಿರ ತೆಂಗಿನಕಾಯಿಗೆ ೩ ಸಾವಿರ ರೂಪಾಯಿ ರೇಟನ್ನು ಗೊತ್ತುಮಾಡಿದ್ದಾರೆ. ಒಂದು ಸಾವಿರಕ್ಕೆ ನೂರು ರೂಪಾಯಿ ಲಾಭ ಬರುತ್ತದೆಂದು ಸಿಕ್ಕಿದ ಕಾಯಿಯನ್ನು ತಂದರೆ ೩೦ ಸಾವಿರಕ್ಕೆ ೩ ಸಾವಿರ ರೂಪಾಯಿ ಬಿಟ್ಟು ಬಂತು. ಇದರ ಆಸೆಗೆ ಲಕ್ಷಾಂತರ ಸಸಿಗಳನ್ನು ಹಂಚಿ ಬಡವರ ಮನೆಯನ್ನು ಹಾಳು ಮಾಡುತ್ತಿದ್ದಾರೆ. ಅವರ ಬಗ್ಗೆ ಕ್ರಮ ಕೈಗೊಳ್ಳುವುದಕ್ಕೆ ವ್ಯವಸೆ ಮಾಡುತ್ತೀರಾ ? ಇದನ್ನು ಕೂಡಲೇ ಸರಿಪಡಿಸಬೇಕು. ಫಾರಂಗಳಿಗೆ ಕೊಡತಕ್ಕ ಗೊಬ್ಬರ ಒಂದು ಕೆ.ಜಿ.ಯೂ ಆ ಮರಕ್ಕೆ ಹೋಗುವುದಿಲ್ಲ. ಅದನ್ನೆಲ್ಲ ಮಾರಿಕೊಳ್ಳುತ್ತಿದ್ದಾರೆ. ಈ ಕೆಲಸವನ್ನು ಎಲ್ಲಾ ಫಾರಂಗಳಲ್ಲೂ ಮಾಡುತ್ತಾರೆ. ಫಾರಂ ಹರಾಜಿನ ಬಗ್ಗೆ ಹೇಳುವುದಾದರೆ ಹಿಂದೆ ಒಂದು ಸಾರಿ ಯಲಹಂಕದ ಹತ್ತಿರ ಸಪೋಟ ಫಾರಂ ಅನ್ನು ೨೫ ಸಾವಿರ ರೂಪಾಯಿಗೆ ಹರಾಜು ಮಾಡಲಾಯಿತು. ಮಲ್ಲಯ್ಯನವರು ಡೈರೆಕ್ಟರಾಗಿದ್ದಾಗ ಅವರು ಅದನ್ನು ಒಪ್ಪಲಿಲ್ಲ. ಎರಡನೆ ಸಾರಿ ೫೦ ಸಾವಿರ ರೂಪಾಯಿಗೆ ಹರಾಜಾಯಿತು. ಅದನ್ನೂ ಅವರು ಒಪ್ಪಲಿಲ್ಲ. ೩ನೇ ಸಾರಿ ಒಂದು ಲಕ್ಷ ರೂಪಾಯಿಗೆ ತಂದರು. ೪ನೇ ಸಾರಿ ೨ ಲಕ್ಷ ರೂಪಾಯಿಗೆ ಹೋಯಿತು, ಅಂದರೆ ೨೫ ಸಾವಿರ ರೂಪಾಯಿ ಎಲ್ಲಿ, ೨ ಲಕ್ಷ ರೂಪಾಯಿ ಎಲ್ಲಿ ? ಹೀಗೆ ಪ್ರತಿಯೊಂದು ಫಾರಂನಲ್ಲೂ ಅವ್ಯವಹಾರ ಮಾಡಿ ಹಣ ಗಳಿಸುತ್ತಿದ್ದಾರೆ. ಈಗಿರತಕ್ಕ ಡೈರೆಕ್ಟರ್ ಒಂದು ಫಾರಂ ಅನ್ನೂ ನೋಡಿಲ್ಲ. ಈಗ ಯಾರು ಡೈರೆಕ್ಟರಾಗಿದ್ದಾರೋ ಗೊತ್ತಿಲ್ಲ.

ಹೀಗಾಗಿ ರೈತರಿಗೆ ಎಲ್ಲಾ ವಿಧದಿಂದ ಅನುಕೂಲವನ್ನು ದೊರಕಿಸಿಕೊಡಬೇಕಾದ ೨ ಇಲಾಖೆಗಳ ಬಗ್ಗೆ ಶ್ರಮವಹಿಸಬೇಕಾಗುತ್ತದೆ. ರೈತನಿಗೆ ಬೀಜ ಕೊಟ್ಟು ನೀರಿನ ವ್ಯವಸ್ಥೆ ಮಾಡುವ ಬಗ್ಗೆ ಹೇಳಿದ್ದೀರಿ. ಇವತ್ತು ಆ ರೈತನಿಗೆ ಬೇಕಾಗಿರತಕ್ಕದ್ದು ರಸ್ತೆ. ಈ ಬಗ್ಗೆ ಲ್ಯಾಂಡ್ ರೆವಿನ್ಯೂ ಆಕ್ಟ್‌ನಲ್ಲಿ ಅಮೆಂಡ್‌ಮೆಂಟ್ ತಂದಿದ್ದೀರಿ, ಇವತ್ತು ಒಬ್ಬ ರೈತನಿಗೆ ೪ ಎಕರೆ ಜಮೀನು ಬಂದರೆ ಆತನ ಪಕ್ಕದಲ್ಲಿ ಸಾಹುಕಾರನಿರುತ್ತಾನೆ. ಆತ ಇವನಿಗೆ ಒಳಗೆ ಹೋಗುವುದಕ್ಕೆ ದಾರಿ ಬಿಡುವುದಿಲ್ಲ. ಈ ರೀತಿಯ ತೊಂದರೆಗಳು ಬೇಕಾದಷ್ಟು ಇವೆ. ಆತನ ಜಮೀನಿಗೆ ನೀರು ಹೋಗುವುದಕ್ಕೆ ಬೇಕಾದ ಜಮೀನಿನ ಬಗ್ಗೆ ಏನು ಲ್ಯಾಂಡ್ ರೆವಿನ್ಯೂ ಆಕ್ಟ್‌ನಲ್ಲಿ ತಿದ್ದುಪಡಿ ತರುತ್ತಿದ್ದೀರಿ ಅದರಲ್ಲಿ ನೀರಿನ ಜೊತೆಗೆ ದಾರಿಯನ್ನೂ ಬಿಡಬೇಕೆಂಬುದರ ಬಗ್ಗೆ ಹೇಳಬೇಕೆಂದು ಹೇಳಿ ಇಷ್ಟು ಮಾತನಾಡಲು ಹೆಚ್ಚು ಸಮಯವನ್ನು ಕೊಟ್ಟ ಮಾನ್ಯ ಅಧ್ಯಕ್ಷರಿಗೆ ಉಪಕೃತನಾಗಿ ನನ್ನ ಧನ್ಯವಾದಗಳನ್ನು ಅರ್ಪಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ಪಾಟೀಲ್ (ಬಸವನ ಬಾಗೇವಾಡಿ).—ಮಾನ್ಯ ಅಧ್ಯಕ್ಷರೇ, ಭೂಸಾರ ಜಲ ರಕ್ಷಣೆ ವ್ಯವಸಾಯ ಹಾಗೂ ತೋಟಗಾರಿಕೆ ಇಲಾಖೆಗಳ ಬೇಡಿಕೆಗಳ ಬಗ್ಗೆ ಒಂದೆರಡು ಮಾತುಗಳನ್ನಾಡುತ್ತೇನೆ, ಈಗಾಗಲೇ ಬಹಳ ಜನ ಈ ಒಕ್ಕಲುತನದ ಮೇಲೆ ಮಾತನಾಡಿದ್ದಾರೆ. ನಮ್ಮ ದೇಶದಲ್ಲಿ ನೂರಕ್ಕೆ ಎಂಭತ್ತು ಜನ ವ್ಯವಸಾಯವನ್ನು ಅವಲಂಭಿಸಿದ್ದಾರೆಂದು ಹೇಳುತ್ತಿದ್ದೇವೆ. ಆದರೆ ಇದಕ್ಕೆ ಎಷ್ಟು ಆದ್ಯತೆಯನ್ನು ಕೊಡಬೇಕೋ ಅಷ್ಟನ್ನು ಕೊಟ್ಟಿಲ್ಲ ಎಂದು ಹೇಳಬಹುದು. ಇವತ್ತಿನ ದಿವಸ ಇಂಗ್ಲೀಷ್‌ನಲ್ಲಿ ಅಗ್ರಿಕಲ್ಚರ್ ಎನ್ನುವುದು ಈಗ ಅಗ್ಲಿಕಲ್ಚರ್ ಆಗಿದೆ. ಏಕೆಂದರೆ ಇವತ್ತಿನ ದಿವಸ ಯಾರಾದರೂ ವ್ಯಾಪಾರದಲ್ಲಿ ಹಣವನ್ನು ಇನ್‌ವೆಸ್ಟ್ ಮಾಡಿದರೆ ಅವರಿಗೆ ರಿಟರ್ನ್ ಎಂಬುದು ಇದೆ. ಆದರೆ ಬೆಳೆ ಮೇಲೆ, ಒಕ್ಕಲುತನದ ಮೇಲೆ ಇನ್‌ವೆಸ್ಟ್ ಮಾಡಿದ ಹಣ ತಿರುಗಿ

ಬರುವುದಿಲ್ಲ. ಬೆಳೆಯ ಮೇಲೆ ಇನ್ಸೂರೆನ್ಸ್ ಮಾಡುವ ವ್ಯವಸ್ಥೆ ಆಗಬೇಕು. ಕನಿಷ್ಟಪಕ್ಷ ಹಾಕಿದ ಬೀಜ, ಗೊಬ್ಬರ ಹಾಗೂ ವ್ಯವಸಾಯಕ್ಕೆ ಮಾಡಿದ ಖರ್ಚನ್ನಾದರೂ ಇನ್ಸೂರೆನ್ಸ್ ರೂಪದಲ್ಲಿ ರೈತರಿಗೆ ಕೊಡುವ ವ್ಯವಸ್ಥೆ ಆಗಬೇಕು. ನಮ್ಮಲ್ಲಿ ಐದಾದರೂ ಪಂಚವಾರ್ಷಿಕ ಯೋಜನೆಗಳು ಆಗಿಹೋದವು. ಇವತ್ತು ಯೋಜನೆಗಳನ್ನು ತಯಾರು ಮಾಡುವವರು ಐಎಎಸ್ ಹಾಗೂ ಐಸಿಎಸ್ ಆಫೀಸರ್‌ಗಳು. ವ್ಯವಸಾಯದ ಬಗ್ಗೆ ತಿಳಿಯದ ಇಂತಹವರ ಯೋಜನೆಗಳ ಗತಿ ಏನು ? ಟಮೋಟೋ ನೆಲದೊಳಗೆ ಬೆಳೆಯುತ್ತದೆ ಶೇಂಗಾ ಗಿಡದ ಮೇಲೆ ಬೆಳೆಯುತ್ತದೆ ಎನ್ನುವ ಜನ ಯೋಜನೆಗಳನ್ನು ತಯಾರಿಸುತ್ತಾರೆ. ರೈತರಿಗೆ ಯಾವ ರೀತಿಯಲ್ಲೂ ಅನುಕೂಲವನ್ನು ಮಾಡಲಾಗದ ಪರಿಜ್ಞಾನವುಳ್ಳ ಯೋಜನೆಗಳು ನಮ್ಮವಾಗಿದೆ. ಇವತ್ತು ಆಡಳಿತದಲ್ಲಿ ಯಾವ ರೀತಿಯಿಂದಲೂ ಬದಲಾವಣೆ ಆಗಿಲ್ಲ. ಬರೀ ಮುಖ ಬದಲಾವಣೆ ಆಗಿದೆ. ಮೊದಲು ಕೆಂಪು ಮೂರ್ತಿಗಳು ಇದ್ದದ್ದು ಈಗ ಕರೀ ಮೂರ್ತಿಗಳು ಬಂದಿವೆಯೆಂದು ವ್ಯಸನದಿಂದ ಹೇಳಬೇಕಾಗಿದೆ, ನಮ್ಮ ನಾಡಿನ ಬಹುಪಾಲು ಜನ ಕೃಷಿಯ ಮೇಲೆಯೇ ತಮ್ಮ ಉದ್ಯೋಗವನ್ನು ಅವಲಂಬಿಸಿದ್ದಾರೆ. ಇವತ್ತು ಒಬ್ಬ ಹೆಣ್ಣು ಮಗಳು ನಮ್ಮ ತೋಟದಲ್ಲಿ ಆಗಲೀ ಅಥವಾ ಹೊಲದಲ್ಲಿ ಆಗಲೀ ಕಳೆ ತೆಗೆಯುವುದಕ್ಕೆ ಕೆಲಸಕ್ಕೆ ಬಂದರೆ ಆಕೆಯ ಬಳಿ ೩ ತಿಂಗಳ ಕೂಸು ಇರುತ್ತದೆ. ಆ ಕೂಸನ್ನು ಗಿಡದ ನೆರಳಲ್ಲಿ ಬಿಟ್ಟು ಕೆಲಸ ಮಾಡುತ್ತಿರುವಾಗ ಆ ಕೂಸನ್ನು ನೋಡಿಕೊಳ್ಳಲು ಅಲ್ಲಿ ೨ ವರ್ಷದ ಇನ್ನೊಂದು ಕೂಸು ಇರುತ್ತದೆ. ಇಂತಹ ಒಂದು ಬಡತನದ ಪರಿಸ್ಥಿತಿ ನಮ್ಮಲ್ಲಿ ಇವತ್ತು ಇದೆ. ನಮ್ಮ ರಾಜ್ಯದ ಇನ್ನೊಂದು ವೈಶಿಷ್ಟ್ಯ ಏನೆಂದರೆ ಸ್ವಾತಂತ್ರ್ಯ ಸಿಗುವುದಕ್ಕಿಂತಾ ಮುಂಚೆ ನೂರಕ್ಕೆ ೨೬ ಜನ ಬಡತನ ರೇಖೆಯ ಕೆಳಗೆ ಇದ್ದರೆ ಆ ಸಂಖ್ಯೆ ಇವತ್ತು ೪೧ಕ್ಕೆ ಏರಿದೆ. ಎಂದರೆ ಬಡವರ ಸಂಖ್ಯೆ ಹೆಚ್ಚಾಗಿದೆಯೇ ಹೊರತು ಕಡಿಮೆಯಾಗಿಲ್ಲ. ನಮ್ಮ ದೇಶದಲ್ಲಿ ಸ್ವಾತಂತ್ರ್ಯ ಸಿಗುವುದಕ್ಕಿಂತಾ ಮುಂಚೆ ಎಷ್ಟು ಜನ ಸ್ವಾತಂತ್ರ್ಯಕ್ಕಾಗಿ ಹೋರಾಡಿದಂತಹ ಯೋಧರು ಇದ್ದರೋ ಅದಕ್ಕಿಂತಾ ಎರಡು ಪಟ್ಟು ಯೋಧರ ಸಂಖ್ಯೆ ಸ್ವಾತಂತ್ರ್ಯಾನಂತರ ಹೆಚ್ಚಾಗಿದೆ, ಇವೆರಡೇ ನಮ್ಮ ದೇಶದಲ್ಲಿ ಹೆಚ್ಚು ಆಗಿರುವುದು, ಇವತ್ತು ನಮ್ಮ ರೈತರಿಗೆ ಬೆಳೆ ಸಾಲ, ಮಾಲಿಗೆ ಯೋಗ್ಯ ಬೆಲೆ ಬೇಕಾಗಿದೆ. ಈ ಬಗ್ಗೆ ಸರ್ಕಾರ ವ್ಯವಸ್ಥೆ ಮಾಡಬೇಕು. ಇವತ್ತು ಮಹಾರಾಷ್ಟ್ರದಲ್ಲಿ ಸೊಸೈಟಿಗಳನ್ನು ಮಾಡಿ ಕಡಿಮೆ ಬಡ್ಡಿ ದರದಲ್ಲಿ ಮಾಲನ್ನು ಸಂಗ್ರಹಣೆ ಮಾಡಿ ಯಾವಾಗ ಬೆಲೆ ಬರುತ್ತದೋ ಆಗ ಮಾರಾಟ ಮಾಡುವ ಏರ್ಪಾಟು ಮಾಡಿದ್ದಾರೆ. ನಮ್ಮಲ್ಲಿ ಕೇವಲ ೩೬ ಸಕ್ಕರೆ ಕಾರ್ಖಾನೆಗಳು ಇದ್ದರೆ ಮಹಾರಾಷ್ಟ್ರದಲ್ಲಿ ಇಂತಹ ೧೨೦ ಸಕ್ಕರೆ ಕಾರ್ಖಾನೆಗಳು ಇವೆ. ಅಂದರೆ ರೈತರು ಬೆಳೆಯತಕ್ಕ ಕಬ್ಬಾಗಲಿ ಅಥವಾ ಬೇರೆ ಇನ್ನೊಂದಾಗಲಿ ಅಲ್ಲಿ ೪-೪ ಎಕರೆಯನ್ನು ಇಟ್ಟುಕೊಂಡಿರತಕ್ಕ ಸಾಧಾರಣ ರೈತರೂ ಕೂಡ ಸೈಕಲ್ ಮೋಟಾರ್‌ನಲ್ಲಿ ಅಡ್ಡಾಡುತ್ತಾರೆ. ೧೨-೧೦ ಎಕರೆ ಇಟ್ಟುಕೊಂಡಿರತಕ್ಕ ರೈತರು ಕಾರುಗಳಲ್ಲಿ ಅಡ್ಡಾಡುತ್ತಾರೆ ಆದರೆ ನೂರಾರು ಎಕರೆ ಜಮೀನನ್ನು ಇಟ್ಟುಕೊಂಡಿರತಕ್ಕ ನಮ್ಮ ರೈತ ಕೂಲಿಗಾಗಿ ನೆರೆ ರಾಜ್ಯವಾದ ಮಹಾರಾಷ್ಟ್ರಕ್ಕೆ ಅಥವಾ ಬೇರೆ ಕಡೆಗೆ ಹೋಗಬೇಕಾದ ಪರಿಸ್ಥಿತಿ ಬಂದಿದೆ. ಸ್ವಾಮಿ, ನಾನು ಪದೇ ಪದೇ ಹೇಳುತ್ತಿದ್ದೇನೆ, ನಮ್ಮಲ್ಲಿ ನೀರಾವರಿ ಯೋಜನೆಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿಲ್ಲ. ೧೮ ಪರ್ಸೆಂಟ್ ಆಗಲಿ ಅಥವಾ ಎಷ್ಟೇ ಪರ್ಸೆಂಟ್ ಆಗಲಿ ನೀವು ನೀರಾವರಿಗೆ ನಮ್ಮ ರಾಜ್ಯದಲ್ಲಿ ಆದ್ಯತೆಯನ್ನು ಕೊಟ್ಟರೆ ರೈತರು ತಮ್ಮ ಮೂಲಾಧಾರವಾದ ಬೆಳೆಗಳನ್ನು ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಈ ಮಾತನ್ನು ಈ ಸದನದಲ್ಲಿ ನಾನು ಬಹಳಷ್ಟು ಸಾರಿ ಮಾತನಾಡಿದ್ದೇನೆ ಆದರೂ ಏನೂ ಆಗಲಿಲ್ಲ. ಇದರಿಂದ ನನಗನಿಸುತ್ತದೆ ಇನ್ನು ಮುಂದೆ ಇದರ ಬಗ್ಗೆ ನಾನು ಮಾತನಾಡಲೇಬಾರದು ಎಂದು. ಇದು ಅರಣ್ಯ ರೋಧನ ಅನಿಸುತ್ತದೆ. ನಾನು ಇಲ್ಲಿ ಮಾತನಾಡುವುದು ಉಪಯೋಗ ಆಗಲಿಲ್ಲ ಎಂದರೆ ನಾವು ಇಲ್ಲಿ ಏತಕ್ಕೆ ಮಾತನಾಡಬೇಕು ? ಈ ಅಸೆಂಬ್ಲಿಗೆ ಏತಕ್ಕೆ ಬರಬೇಕು ? ಇನ್ನು ಮುಂದೆ ಇಲ್ಲಿ ಮಾತನಾಡಲೇ ಬಾರದು ಎನ್ನುವ ನಿರ್ಣಯಕ್ಕೆ ಬರಬೇಕಾಗಿದೆ. ನಾನು ಹೇಳಿದಂಥ ಕೆಲಸಗಳನ್ನು ಅಥವಾ ರೈತರಿಗೆ ಅನುಕೂಲವಾಗತಕ್ಕ ಕೆಲಸಗಳನ್ನು ನೀವು ತೆಗೆದುಕೊಳ್ಳಬೇಕೆಂದು ನಾನು ಪದೇ ಪದೇ ಹೇಳುತ್ತಿದ್ದೇನೆ. ನಮ್ಮ ದೇಶದಲ್ಲಿ ಬರಗಾಲ ಬಿದ್ದಾಗ ಕೇವಲ ರಸ್ತೆಗಳನ್ನು ಮಾತ್ರ ಮಾಡಿಸುತ್ತಿದ್ದಾರೆ. ಆದರೆ ಮಹಾರಾಷ್ಟ್ರದಲ್ಲಿ ೧೨೦-೧೩೦ ಅಡಿ ಆಳವಾದ ಸಾಮೂಹಿಕ ಭಾವಿಗಳನ್ನು ಮಾಡಿಸುತ್ತಾರೆ. ಬಂಡಿಂಗ್, ಒಡ್ಡು, ನಾಲಾಗಳ ಕೆಲಸ, ಭಾಂಡಾರಗಳ ಕೆಲಸಗಳು ಮುಂತಾದುವನ್ನು ಮಾಡಿಸುತ್ತಾರೆ. ೫ ಕಿಲೋಮೀಟರ್, ೧೦ ಕಿಲೋಮೀಟರ್ ಬ್ಯಾರೇಜ್‌ಗಳನ್ನು ಮಾಡಿಸುತ್ತಾರೆ. ನಮ್ಮಲ್ಲಿ ಕುಡಿಯುವುದಕ್ಕೂ ನೀರಿಲ್ಲ. ಹೋದಸಾರಿ ನಾವು ಮಹಾರಾಷ್ಟ್ರದವರಿಗೆ ೨ ಕೋಟಿ ರೂಪಾಯಿ ಕೊಟ್ಟಿದ್ದಕ್ಕೆ ಅವರು ಒಂದು ಟಿ.ಎಂ.ಸಿ.ಎಫ್.ಟಿ, ನೀರನ್ನು ಕೊಟ್ಟರು, ಆದರೆ ಆ ನೀರು ನಮ್ಮ

ಜಿಲ್ಲೆಯುವರೆಗೂ ಕೂಡ ಬರಲಿಲ್ಲ. ನಾನು ಏನಾದರೂ ಮಾತನಾಡಿದೆ ಇವರು ಏನು ಬಹಳ ಮಾತನಾಡುತ್ತಾರೆ ಎಂದು ಅಧಿಕಾರಿಗಳು ನನ್ನ ಬಗ್ಗೆ ಅಂದುಕೊಳ್ಳುತ್ತಾರೆ. ಕಳೆದವರ್ಷ ನನ್ನ ಜಿಲ್ಲೆಯಲ್ಲಿ ಅದರಲ್ಲೂ ನನ್ನ ತಾಲ್ಲೂಕಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಎಣ್ಣೆ ಕಾಳುಗಳನ್ನು ಬೆಳೆದರು. ನನ್ನ ತಾಲ್ಲೂಕಿನಲ್ಲಿ ಸೂರ್ಯಕಾಂತಿ ಬೀಜವನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಾರೆ, ಆದರೆ ಹೋದವರ್ಷ ಈ ಬೆಳೆಗೆ ರೋಗ ಬಂತು. ನಾನು ಮಾನ್ಯ ದೇಶಪಾಂಡೆ ಯವರಿಗೆ ಬಹಳಷ್ಟು ಹೇಳಿದೆ. ನೆರೆ ರಾಜ್ಯವಾದ ಮಹಾರಾಷ್ಟ್ರದಿಂದ ಸೂರ್ಯಕಾಂತಿ ಬೀಜ ಬರುತ್ತದೆ. ಅವರ ರೇಟು ೧೪೦ ರೂ. ಇದೆ ಆದರೆ ಇದನ್ನು ನಮ್ಮ ರಾಜ್ಯದಲ್ಲಿ ೫೦೦ ರೂಪಾಯಿವರೆಗೂ ಮಾರಾಟ ಮಾಡುತ್ತಿದ್ದಾರೆ ಎಂದು ಹೇಳಿದಕ್ಕೆ ಅವರು ಏನು ಹೇಳಿದರು ಎಂದರೆ ಇದು ನಮ್ಮ ಕಂಟ್ರೋಲ್‌ಗೆ ಬರುವುದಿಲ್ಲ, ಇದು ಕೇಂದ್ರ ಸರ್ಕಾರಕ್ಕೆ ಸೇರಿದ್ದು ಎಂದು ಹೇಳಿದರು ಅಡಲ್ಟ್ರೇಷನ್ ನಡೆಯುತ್ತಿದೆ, ಇದನ್ನು ಮಾಡತಕ್ಕ ಜನರ ಮೇಲೆ ಕೇಸು ಹಾಕಿ ಎಂದು ಹೇಳಿದೆ. ಏಕೆಂದರೆ ಇಲ್ಲಿ ಬೆಳೆದಿದ್ದನ್ನು ಸೋಲಾಪುರಕ್ಕೆ ಕಳುಹಿಸಿ ಅಲ್ಲಿ ಪ್ಯಾಕೆಟ್ ಮಾಡಿಕೊಂಡುಬಂದು ಮೈಕೋ ಸೀಡ್ಸ್ ಕಂಪೆನಿ ಎಂದು ಮುದ್ರಿಸಿ ಮಾರಾಟ ಮಾಡಿರತಕ್ಕ ಉದಾಹರಣೆಗಳಿವೆ. ಅವರು ಬ್ಲಾಕ್‌ಮಾರ್ಕೆಟ್ ಮಾಡುತ್ತಿದ್ದಾರೆ, ೫೦೦ ರೂಪಾಯಿವರೆಗೂ ಮಾರಾಟ ಮಾಡುತ್ತಿದ್ದಾರೆ. ಆದ್ದರಿಂದ ಅವರನ್ನು ನೀವು ಬ್ಯಾನ್ ಮಾಡಬೇಕು. ನಮ್ಮ ರಾಜ್ಯದಲ್ಲಿ ಛಲೋ ಬೀಜಗಳನ್ನು ಬೆಳೆಯುತ್ತಿದ್ದಾರೆ. ಇದನ್ನು ನಮ್ಮಲ್ಲಿ ಸಂಸ್ಕರಣ ಮಾಡಿ ಇಡುವುದಕ್ಕೆ ವ್ಯವಸ್ಥೆ ಮಾಡಿ, ಇಲ್ಲದಿದ್ದರೆ ನಿಮ್ಮ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ಇದ್ದೂ ಏನು ಉಪಯೋಗ ?

ಇನ್ನು ಕ್ರಿಮಿನಾಶಕದ ಬಗ್ಗೆ ಹೇಳುವುದಾದರೆ, ಈ ಕ್ರಿಮಿನಾಶಕಗಳನ್ನು ನೀವೇ ತಯಾರು ಮಾಡಿದರೆ ನೂರಕ್ಕೆ ನೂರು ಪರ್ಸೆಂಟ್ ರೋಗನಿರೋಧವನ್ನು ಮಾಡಲಿಕ್ಕೆ ಆಗುತ್ತದೆ. ಇದನ್ನು ನೀವು ಕಾರ್ಯಾಚರಣೆಗೆ ತರುತ್ತೀರೆಂದು ನಾನು ಆಶಯ ಮಾಡುತ್ತೇನೆ.

ಇನ್ನು ಎಣ್ಣೆ ಕಾಳಿನ ವಿಚಾರದಲ್ಲಿ ಹೇಳುವುದಾದರೆ. ಕೇಂದ್ರ ಸರ್ಕಾರದವರು ಪ್ರತಿವರ್ಷವೂ ೧೨ ನೂರು ಕೋಟಿಯಿಂದ ೧೫ ನೂರು ಕೋಟಿ ರೂಪಾಯಿಯವರೆಗೂ ಹೊರಗಿನ ದೇಶಗಳಿಂದ ಎಣ್ಣೆಯನ್ನು ತರಿಸುತ್ತಿದ್ದಾರೆ. ಆದರೆ ಅದೇ ಹಣವನ್ನು ನಮ್ಮ ದೇಶದಲ್ಲಿರುವ ರೈತರಿಗೆ ಎಣ್ಣೆ ಕಾಳುಗಳನ್ನು ಬೆಳೆಯಲು ಹಂಚಿದರೆ ರೈತರು ಹೆಚ್ಚಿನ ಕಾಳುಗಳನ್ನು ಬೆಳೆಯಲು ಅನುಕೂಲವಾಗುತ್ತದೆ. ಇದರ ಜೊತೆಗೆ ಕ್ರಿಮಿನಾಶಕಗಳನ್ನು ಕೊಟ್ಟರೆ ಬಹಳ ಅನುಕೂಲವಾಗುತ್ತದೆ.

ಇನ್ನು ದ್ವಿದಳ ಧಾನ್ಯದ ಬಗ್ಗೆ ಹೇಳುವುದಾದರೆ, ಬೇಳೆಯ ಕಾಳು ಇವತ್ತು ೧೨ ರೂ.ಗೆ ಒಂದು ಕಿಲೋ ಇದೆ ಸಾಧಾರಣ ಮನುಷ್ಯ ಯಾರೂ ಕೂಡ ಇಷ್ಟೊಂದು ಕೊಟ್ಟು ತಿನ್ನುವುದಕ್ಕಾಗುವುದಿಲ್ಲ. ಆದ್ದರಿಂದ ದ್ವಿದಳ ಧಾನ್ಯಗಳನ್ನು ಬೆಳೆಸುವುದಕ್ಕೆ ನಮ್ಮ ರಾಜ್ಯದಲ್ಲಿ ವ್ಯವಸ್ಥೆ ಮಾಡಬೇಕೆಂದು ಹೇಳ ಬಯಸುತ್ತೇನೆ. ಇದೇರೀತಿ ತೋಟಗಾರಿಕೆ ಬಗ್ಗೆ ಹೇಳುವುದಾದರೆ ಇದರಲ್ಲಿ ಹಣ್ಣು ಹಂಪಲು, ಸಾಂಬಾರ ಪದಾರ್ಥಗಳನ್ನು ಬೆಳೆಯುತ್ತಿದ್ದಾರೆ. ಇವುಗಳನ್ನು ಸಂರಕ್ಷಣೆ ಮಾಡಿ ಹೊರದೇಶಗಳಿಗೆ ಕಳುಹಿಸಬಹುದು. ಇವತ್ತು ಅರಬ್ ರಾಷ್ಟ್ರಗಳಲ್ಲಿ ಇವುಗಳನ್ನು ಬೆಳೆಯುವುದಿಲ್ಲ, ಅವರಿಗೆ ಇಲ್ಲಿಂದ ಕಳುಹಿಸಲು ವ್ಯವಸ್ಥೆ ಮಾಡಬಹುದು. ಇದರಿಂದ ನಮ್ಮ ರಾಜ್ಯಕ್ಕೆ ಹೆಚ್ಚು ಆದಾಯ ಬರುತ್ತದೆ.

ಇನ್ನು ನಮ್ಮ ರಾಜ್ಯದಲ್ಲಿ ನಿಂಬೆ ಹಣ್ಣನ್ನು ಬಹಳವಾಗಿ ಬೆಳೆಯುತ್ತಾರೆ. ಚಳಿಗಾಲದಲ್ಲಿ ಇನ್ನು ದೊಡ್ಡ ಪ್ರಮಾಣದಲ್ಲಿ ಇದನ್ನು ಬೆಳೆಯುತ್ತಾರೆ. ಕೆಲವು ಸಂದರ್ಭದಲ್ಲಿ ಹೆಚ್ಚು ಬೆಳೆ ಬಂದಾಗ ತಿಪ್ಪೆಗೂ ಚೆಲ್ಲುತ್ತಾರೆ. ಸಾಧಾರಣವಾಗಿ ಒಂದು ರೂಪಾಯಿಗೆ ೧೦೦ ನಿಂಬೆ ಹಣ್ಣುಗಳನ್ನು ಮಾರುತ್ತಾರೆ. ಆದ್ದರಿಂದ ನಾನು ಇದರ ಬಗ್ಗೆ ಕೂಡ ಪದೇ ಪದೇ ಹೇಳುತ್ತಿದ್ದೇನೆ. ಇದಕ್ಕೆ ಒಂದು ವ್ಯವಸ್ಥೆಯನ್ನು ಮಾಡಿಕೊಟ್ಟರೆ ನಿಂಬೆ ಹಣ್ಣು ಬೆಳೆಯುವವರಿಗೆ ಪ್ರೋತ್ಸಾಹ ಸಿಕ್ಕಿದಂತಾಗುತ್ತದೆ.

ಇನ್ನು ನಮ್ಮ ಜಿಲ್ಲೆಯಲ್ಲಿ ಸಿಹಿ ದ್ರಾಕ್ಷಿಯನ್ನು ಬಹಳ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಾರೆ. ಈ ದ್ರಾಕ್ಷಿಯಿಂದ ಮನೂಕವನ್ನು ತಯಾರು ಮಾಡುತ್ತಾರೆ. ಇದನ್ನು ನಾವೇ ಉಪಯೋಗ ಮಾಡಿ ಕೊಳ್ಳಬಹುದು. ಏಕೆಂದರೆ ಇವತ್ತು ಇರಾನ್‌ನಿಂದ ಸುಮಾರು ೫೦೦ ಕೋಟಿ ರೂಪಾಯಿ ಬೆಲೆಯಷ್ಟು ಮನೂಕವನ್ನು ನಮ್ಮ ದೇಶದಲ್ಲಿ ತರಿಸುತ್ತಿದ್ದೇವೆ. ಇದರ ಬಗ್ಗೆಯೂ ಕೂಡ ನಮ್ಮ ರೈತರಿಗೆ ಹೆಚ್ಚಿನ ಅನುಕೂಲ ಮಾಡಿಕೊಡಬೇಕು. ತೋಟಗಾರಿಕೆ ವಿಚಾರಕ್ಕೆ ಸಂಬಂಧಪಟ್ಟಂತೆ ಸ್ವಿಡ್ಜರ್ಲೆಂಡ್‌ಗೆ ಏನೂ ಹೋಗಿ ನೋಡಿಕೊಂಡು ಬರಬೇಕಾಗಿಲ್ಲ ಅಥವಾ ಬೇರೆಕಡೆ ಹೋಗುವುದೂ ಬೇಡ. ನಮ್ಮ ನೆರೆ

ರಾಜ್ಯವಾದ ಮಹಾರಾಷ್ಟ್ರಕ್ಕೆ ಹೋಗಿ ಅಲ್ಲಿ ಯಾವರೀತಿ ಮಾಡುತ್ತಿದ್ದಾರೆ, ಎಂಬುದನ್ನು ನೋಡಿಕೊಂಡು ಬಂದರೆ ಸಾಕು. ಮಾನ್ಯ ದೇಶಪಾಂಡೆಯವರು ರೈತ ಮನೆತನದವರು. ಇವರು ತಮ್ಮ ಎಕ್ಸ್‌ಪರ್ಟ್ಸನ್ನು ತಮ್ಮ ಜೊತೆ ಕರೆದುಕೊಂಡು ಮಹಾರಾಷ್ಟ್ರಕ್ಕೆ ಹೋಗಿ ಅಲ್ಲಿ ಯಾವ ಯಾವ ರೀತಿಯಲ್ಲಿ ಈ ತೋಟಗಾರಿಕೆ ಮಾಡುತ್ತಾರೆಂಬುದನ್ನು ನೋಡಿಕೊಂಡು ಬರಲಿ.

ನಮ್ಮಲ್ಲಿ ಇವತ್ತು ಏನಾಗುತ್ತಿದೆ ಎಂದರೆ, ಯಾವುದೋ ಒಂದು ಸಂಸ್ಥೆಯಲ್ಲಿ ಇದ್ದಂತಹ ಕಾರ್ಯದರ್ಶಿಯೊಬ್ಬರನ್ನು ಅಧ್ಯಯನಕ್ಕೆಂದು ಕಳುಹಿಸುವುದು, ಅಧ್ಯಯನ ಆದಮೇಲೆ ಮತ್ತೊಂದು ಇಲಾಖೆಗೆ ಕಳುಹಿಸುವುದು. ಅಧ್ಯಯನ ಮಾಡುವುದಕ್ಕೆ ಲಕ್ಷಾಂತರರೂಪಾಯಿಗಳನ್ನು ಖರ್ಚು ಮಾಡಿಅಲ್ಲಿಂದ ಬಂದ ಮೇಲೆಮತ್ತೊಂದು ಇಲಾಖೆಗೆ ಕಳುಹಿಸುವುದು. ಇದು ಯಾವ ಪದ್ಧತಿ? ಇಂತಹಪದ್ಧತಿಯನ್ನೇ ಅನುಸರಿಸಿಕೊಂಡುಬರಲಾಗುತ್ತಿದೆ. ಯಾರಾದರೂ ಇವತ್ತುನಿಮ್ಮ ಮಗ ಏನುಮಾಡುತ್ತಾನೆಂದು ಕೇಳಿದಾಗ, ನಮ್ಮ ಮಗ ಕೃಷಿ ಕೆಲಸ ಮಾಡುತ್ತಿದ್ದಾನೆಂದರೆಅವನಿಗೆಹೆಣ್ಣನ್ನು ಕೊಡುವುದಕ್ಕೆ ಯಾರೂಮುಂದೆ ಬರುವುದಿಲ್ಲ. ಕಳೆದ ಸಾಲಿನಲ್ಲಿ ನೌಕರದಾರರಿಗೆ ಹೆಚ್ಚಿಗೆ ಸಂಬಳವನ್ನು ೩೦೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ ಇದನ್ನು ಏಕೆ ಕೊಟ್ಟಿದ್ದೀರಿ? ಅವರು ಏನಾದರೂ ನಿಮ್ಮನ್ನು ಕೇಳಿದರಾ? ಅವರು ಇರುವಂತಹದ್ದು ೪ ಲಕ್ಷ ಜನ, ಆದರೆ ೪ ಕೋಟಿ ಜನ ಕೃಷಿಕರಾದ ನಾವು ಇದ್ದೇವೆ. ಅದೇ ರೀತಿ ಕಳೆದ ವರ್ಷ ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ೫೮ಕ್ಕೆ ಏರಿಸಿದ್ದೀರಿ. ಅವರೇನಾದರೂ ನಿಮ್ಮನ್ನು ಕೇಳಿದ್ದರಾ? ಇಂತಹ ಒಂದು ಪದ್ಧತಿಯನ್ನು ಏಕೆ ಅನುಸರಿಸಿಕೊಂಡು ಬರುತ್ತಿದ್ದೀರಿ? ಪ್ರಾಕ್ಟಿಕಲ್ಲಾಗಿ ವಿಚಾರ ಮಾಡಿ. ಏರ್‌ಕಂಡೀಷನ್ ರೂಮಿನಲ್ಲಿ ಕುಳಿತುಕೊಂಡು ಯೋಜನೆ ಮಾಡುವುದಲ್ಲ. ನಮ್ಮ ಯೋಜನೆಯನ್ನು ನಾವೇ ಮಾಡಿಕೊಳ್ಳುವಂತಹ ವ್ಯವಸ್ಥೆಯಾಗಬೇಕು. ಯಾವ ಜಿಲ್ಲೆಯಲ್ಲಿ ಏನು ಬೆಳೆಯನ್ನು ಬೆಳೆಯುತ್ತಾರೆ ಎಂಬುದನ್ನು ನೋಡಿಕೊಂಡು ಆಯಾ ಜಿಲ್ಲೆಗಳ ಹವಾಮಾನ ಹಾಗೂ ಪರಿಸರಕ್ಕೆ ತಕ್ಕಂತಹ ಯೋಜನೆಗಳನ್ನು ನಾವೇ ಮಾಡಿಕೊಳ್ಳಬೇಕು. ಅದನ್ನು ಬಿಟ್ಟು ದೆಹಲಿಯಲ್ಲಿ ಕುಳಿತುಕೊಂಡು ಯೋಜನೆಯನ್ನು ಮಾಡುವುದು ಎಷ್ಟರಮಟ್ಟಿಗೆ ಸರಿ? ಇದು ಸರಿಯಾದುದಲ್ಲ. ನಾನು ಇಷ್ಟು ಸಮಯದಲ್ಲಿ ಹೇಳಿದಂತಹದ್ದನ್ನು ಕಾರ್ಯಾಚರಣೆಯಲ್ಲಿ ತರುತ್ತಾರೆಂದು ಆಶಯ ಮಾಡುತ್ತೇನೆ,

† ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ). — ಸನ್ಮಾನ್ಯ ಅಧ್ಯಕ್ಷರೆ, ಕೃಷಿ ಸಚಿವರು ಮತ್ತು ತೋಟಗಾರಿಕಾ ಸಚಿವರು ತಂದಿರತಕ್ಕ ಬೇಡಿಕೆಗಳಲ್ಲಿ ಕೆಲವು ಲೋಪದೋಷಗಳು ಕಂಡಿದ್ದರಿಂದ ಅವುಗಳನ್ನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷಿಸುತ್ತೇನೆ. ಆದರಲ್ಲೂ ಈ ಇಲಾಖೆಯ ಬಗ್ಗೆ ೫ ನಿಮಿಷದಲ್ಲಿ ಮಾತನಾಡುವಂತಹದ್ದು ಬಹಳ ಕಷ್ಟದ ಕೆಲಸ. ಕೃಷಿ ಪ್ರಧಾನವಾದ ಈ ದೇಶದಲ್ಲಿ, ಕೃಷಿ ಇಲಾಖೆಯ ಬೇಡಿಕೆಗಳನ್ನು ಮೊದಲನೆಯ ದಿವಸ ಇಟ್ಟಿದ್ದು ಒಳ್ಳೆಯದು. ಆದರೆ ಒಂದೇ ದಿವಸದಲ್ಲಿ ಮುಗಿಸುವುದು ಸರಿಯಲ್ಲ. ಇನ್ನೊಂದು ದಿವಸ ಹೆಚ್ಚಿಗೆ ಇಡಬೇಕಾಗಿತ್ತು, ಭಾರತ ದೇಶ ಕೃಷಿ ಪ್ರಧಾನವಾದ ದೇಶ. ಗಾಂಧೀಜಿಯವರೂ ಕೂಡ ಅದೇ ಮಾತನ್ನು ಹೇಳಿದ್ದರು ಭಾರತ ದೇಶ ಮೇಲೆ ಬರಬೇಕಾದರೆ ಕೃಷಿಕನು ಉದ್ಧಾರವಾಗಬೇಕು. ಅವನ ಅಭಿವೃದ್ಧಿಯಾಗಬೇಕು. ಇಲ್ಲದಿದ್ದರೆ ಭಾರತ ದೇಶ ಉದ್ಧಾರವಾಗುವುದಿಲ್ಲವೆಂದು ಸ್ವಾತಂತ್ರ್ಯಕ್ಕೆ ಮೊದಲೇ ಹೇಳಿದ್ದರು. ಅದನ್ನು ಕಂಡುಕೊಂಡು ಅಂದಿನ ನಮ್ಮ ದೇಶದ ರಾಜಕೀಯ ಮುಖಂಡರು ಆ ಬಗ್ಗೆ ಅನೇಕ ಕೆಲಸ ಕಾರ್ಯಗಳನ್ನು ಮಾಡಿದರು. ಆಗ ಹಸಿರು ಕ್ರಾಂತಿ ಅಂತ ಹೇಳಿದರು. ಹಸಿರು ಕ್ರಾಂತಿ ಎಂಬುದಾಗಿ ಹೇಳಿಕೊಂಡು ಬಾಕ್ರಾನಂಗಲ್ ಅಣೆಕಟ್ಟು ಕಟ್ಟಿದರು. ಅದೇ ರೀತಿ ಇನ್ನೂ ಅನೇಕ ಅಣೆಕಟ್ಟುಗಳನ್ನು ಕಟ್ಟಿದರು. ಆ ಒಂದು ಶ್ರಮದಿಂದಲೇ ಇವತ್ತು ಪಂಜಾಬ್ ಮತ್ತು ಹರಿಯಾಣ ಇಡೀ ರಾಷ್ಟ್ರದಲ್ಲೇ ಹಸಿರು ಕ್ರಾಂತಿಯನ್ನು ಕಾಣುವಂತಹ ರಾಜ್ಯವಾಗಿದೆ. ಅದು ಯಾವ ರೀತಿ ಮುಂದೆ ಬರುತ್ತಿದೆ ಎಂಬುದನ್ನು ನಾವು ನೋಡಬಹುದು. ಅದೇ ರೀತಿ ನಮ್ಮ ರಾಜ್ಯವನ್ನೂ ಕೂಡ ಹಸಿರು ಕ್ರಾಂತಿಯನ್ನಾಗಿ ಮಾಡಿ, ದೊಡ್ಡ ರಾಜ್ಯ ಪಂಜಾಬಿನ ಹಾಗೆ ಮಾಡುವುದಕ್ಕೆ ಕೃಷಿ ಸಚಿವರಾದ ಶ್ರೀಮಾನ್ ದೇಶಪಾಂಡೆಯವರು ಪಣತೊಟ್ಟರೆ ಆ ರೀತಿ ಮಾಡಲಿಕ್ಕೆ ಸಾಧ್ಯ ಇರಬಹುದು ಎಂಬುದಾಗಿ ನಾನು ಭಾವಿಸುತ್ತೇನೆ, ಹಳ್ಳಿಗಳಲ್ಲಿ ಯಾರೂ ವಾಸ ಮಾಡುವುದಕ್ಕೆ ಇಷ್ಟಪಡುತ್ತಿಲ್ಲ. ಎಲ್ಲರೂ ಪಟ್ಟಣದ ಕಡೆಗೆ ವಲಸೆ ಬರುತ್ತಿದ್ದಾರೆ. ಕೃಷಿಯ ಕೆಲಸಕ್ಕೆ ಹಳ್ಳಿಗಳಲ್ಲಿ ಯಾರೂ ಸಿಕ್ಕುತ್ತಿಲ್ಲ. ಜೊತೆಗೆ ಕೃಷಿಕರಿಗೆ ಕೂಡ ತಕ್ಕಂತಹ ಕೂಲಿ ಸಾಕಾಗುವುದಿಲ್ಲ. ಅವರು ಬೀಡಿಯನ್ನು ಕಟ್ಟುವುದಕ್ಕೆ ಹೋಗುತ್ತಾರೆ. ಮತ್ತೆ ಇದಕ್ಕಿಂತ ಹೆಚ್ಚಿನ ಕೂಲಿ ಸಿಕ್ಕತಕ್ಕ ಕಡೆ ಕೆಲಸಕ್ಕೆ ಹೋಗುತ್ತಾರೆ. ಪೇಟೆಯಲ್ಲಿ ರೇಡಿಯೋ ಇರುತ್ತದೆ, ನಾಟಕ ಇರುತ್ತದೆ. ಸಿನಿಮಾ ಇರುತ್ತದೆ. ಟಿ.ವಿ. ಇರುತ್ತದೆ. ರಾಮಾಯಣ ಬರುತ್ತದೆ. ಇದರಿಂದಾಗಿ

ಎಲ್ಲರೂ ಹಳ್ಳಿಗಳಿಂದ ಪಟ್ಟಣಕ್ಕೆ ಬರುತ್ತಿದ್ದಾರೆ. ಈ ರೀತಿಯಾಗಿ ವಲಸೆ ಬರುವಂತಹದ್ದನ್ನು ತಪ್ಪಿಸುವಂತಹ ಕೆಲಸವನ್ನು ಮಾಡಿದರೆ ಅದು ಒಳ್ಳೆಯ ಕೆಲಸ ಆಗುತ್ತದೆ. ಇದರಿಂದಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಕೃಷಿ ಕೆಲಸ ಮಾಡುವುದಕ್ಕೆ ಯಾರೂ ಸಿಕ್ಕುವುದಿಲ್ಲ. ೭೦ ಪರ್ಸೆಂಟ್ ಕೃಷಿಕರೇ ಇರತಕ್ಕ ದೇಶ ಇದು. ಆದರೆ ಇವತ್ತು ಅವನನ್ನು ನಾವು ರಕ್ಷಣೆ ಮಾಡುತ್ತಿಲ್ಲ. ಅವನನ್ನು ಇವತ್ತು ಕಡೆಗಣಿಸಿದ್ದೇವೆ. ರಾಷ್ಟ್ರ ಕವಿಗಳಾದಂತಹವರು ೫೦-೬೦ ವರ್ಷಗಳ ಮೊದಲೇ ಬಹಳ ದೊಡ್ಡ ಮಾತುಗಳನ್ನು ಹೇಳಿರತಕ್ಕ ಮಾತು ನೆನಪಿಗೆ ಬರುತ್ತಿದೆ. ಜ್ಞಾನಪೀಠ ಪ್ರಶಸ್ತಿಯನ್ನು ಪಡೆದಂತಹ ರಾಷ್ಟ್ರಕವಿ ಕುವೆಂಪುರವರು ಏನು ಹೇಳುತ್ತಾರೆಂದರೆ

''ನೇಗಿಲ ಹಿಡಿದಾ ಹೊಲದೊಳು ಉಳುತ, ಉಳುವ ಯೋಗಿಯ ನೋಡಲ್ಲಿ, ರಾಜ್ಯಗಳಳಿಯಲಿ, ರಾಜ್ಯಗಳುದಿಸಲಿ, ರಾಜ್ಯಗಳಳಿಯಲಿ, ರಾಜ್ಯಗಳುದಿಸಲಿ ಹಾರಲಿ ಗದ್ದುಗೆಯು ಮುಕುಟದಲಿ,

ಬಿತ್ತುಳುವುದನು ಅವನು ಬಿಡುವುದೇ ಇಲ್ಲ. ರಾತ್ರೀ ಹಗಲೂ ಬಿತ್ತುಳುವುದನು ಅನು ಬಿಡುವುದೇ ಇಲ್ಲ, ಬಾಳಿತು ನಮ್ಮೀ ನಾಗರೀಕತೆಯು ಮಣ್ಣಲಿ ನೇಗಿಲನಾಶ್ರಯದಿ ನೇಗಿಲ ಗುಳದೊಳೆ ಅಡಗಿದೆ ಕರ್ಮ ನೇಗಿಲ ಮೇಲೆಯೇ ನಿಂತಿದೆ ಧರ್ಮ.''

ಈ ರೀತಿ ಹೇಳಿದ್ದಾರೆ ರಾಷ್ಟ್ರ ಕವಿ. ಆದರೆ ಅದರಂತೆ ಎಷ್ಟು ಜನ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ ಎಂಬುದು ಪ್ರಶ್ನೆ. ಆದರೆ ಇವತ್ತು ಕೃಷಿಕನ ಅಧಿಕಾರಿಗಳ ಮನೆಯ ಬಾಗಿಲ ಹತ್ತಿರ ಹೋಗಿ ಕಾಯಬೇಕು. ಆಗ ಕೂಡಾ ಅಧಿಕಾರಿಗಳು ನಾಳೆ ಬಾ, ನಾಡಿದ್ದು ಬಾ ಎಂಬುದಾಗಿ ಕಾಯಿಸುತ್ತಿದ್ದಾರೆ. ಶ್ರೀಮಾನ್ ದೇಶಪಾಂಡೆಯವರ ಕಾಲದಲ್ಲಿ ಅವರು ಅಧಿಕಾರಿಗಳ ಮನೆಯ ಬಾಗಿಲಲ್ಲಿ ಕಾಯದೆ ಇರತಕ್ಕಂತಹ ಕೆಲಸ ಮಾಡಿದ್ದೇ ಆದರೆ ಅದ್ಭುತದಲ್ಲಿ ಅದ್ಭುತವಾದ ಕೆಲಸವನ್ನು ಮಾಡಿದಂತಾಗುತ್ತದೆ. ಯಾವ ಕೃಷಿಕನಿಗೆ ಬೇಕಾದ ಬೀಜಗಳು, ಯಾವ ಕೃಷಿಕನಿಗೆ ಬೇಕಾದ ಗೊಬ್ಬರ.

೬-೦೦ ಪಿ. ಎಂ.

ಹಾರೆ, ಪಿಕಾಸೆ ಎಲ್ಲವನ್ನೂ ರೈತನ ಮನೆಯ ಬಾಗಿಲಿಗೆ ಮುಟ್ಟಿಸುತ್ತೇವೆಂದು ಮೊದಲೇ ಹೇಳಿದ್ದೀರಿ. ಆ ರೀತಿ ಮುಟ್ಟಿಸಿ ಇದೊಂದು ಕೆಲಸ ಮಾಡಿದರೆ ಆಫೀಸರುಗಳೆಲ್ಲಾ ಮಣ್ಣುಮುಕ್ಕಿ ಹೋಗುತ್ತಾರೆ, ಅವರ ಕಾಲ ಬಳಿಗೆ ರೈತ ಎಷ್ಟು ಸಾರಿ ಬರುವುದು ? ಎಷ್ಟು ಸಾರಿ ರೈತನನ್ನು ಓಡಾಡಿಸುವುದು ? ನಾಳೆ ಬಾ, ನಾಳಿದ್ದು ಬಾ ಎಂದು ಹೇಳುವುದರಿಂದ ರೈತರಿಗೆ ತೊಂದರೆಯಾಗಿದೆ. ಎಲ್ಲವನ್ನೂ ರೈತರ ಮನೆ ಬಾಗಿಲಿಗೆ ಮುಟ್ಟಿಸತಕ್ಕ ವ್ಯವಸ್ಥೆಯನ್ನು ಮಾಡಬೇಕು. ರಸಾಯನಿಕ ಗೊಬ್ಬರ ಅತಿಯಾಗಿದೆ, ಹಟ್ಟಿಗೊಬ್ಬರದ ಬಗ್ಗೆ ಇವತ್ತು ಚಿಂತನೆಯಿಲ್ಲ. ಈ ರಾಷ್ಟ್ರಕವಿ ಕುವೆಂಪುರವರು ಏನು ಹೇಳಿದ್ದಾರೆಂದರೆ, '' ಬಹಳ ಶ್ರೀಮಂತರಾಗಿದ್ದೀರಿ, ಪುಣುಗು, ಜವಾಜಿ, ಗಂಧ ಲೇಪ ಹಾಕುತ್ತೀರಿ ನಮಗೂ ಒಂದು ಕಾಲ ಬರುತ್ತದೆಂದು ಹೇಳುತ್ತಾರೆ.

ಹಚ್ಚಿಕೊಳ್ಳಿರೋ ಹಚ್ಚಿಕೊಳ್ಳಿ ॥
ಕತ್ತುರಿ ಗಂಧಲೇಪವ

ಎಷ್ಟು ದಿನ ಹಚ್ಚಿಕೊಳ್ಳುವಿರಿ ನೋಳ್ಪೆ ॥
ಒಂದು ದಿವಸ ಹೊತ್ತ ಗೊಬ್ಬರದರಸ
ನನಗೆ ಪುಣುಗು. ನನಗೆ ಜವಾಜಿ, ನನಗೆ ಕತ್ತುರಿ
ನನಗೆ ಗಂಧದಲೇಪ ಆಗಲಿಕ್ಕೆ ಸಾಧ್ಯ ಇದನ್ನು ತಿಳಿದುಕೊಳ್ಳಿಯೆಂದು

ಹೇಳುತ್ತಾರೆ. '' ಇದನ್ನು ಎಷ್ಟು ಜನ ಭಾವಿಸುತ್ತಾರೆ ಗೊಬ್ಬರದಲ್ಲಿರತಕ್ಕ ಮಹತ್ವ ಗೊಬ್ಬರದ ರಾಶಿಗೆ ಇರತಕ್ಕ ಮಹತ್ವವನ್ನು ಇವತ್ತು ಯಾರು ಭಾವಿಸುತ್ತಾರೆ, ಅದನ್ನು ತಮಾಷೆ ಮಾಡುತ್ತಾರೆ. ಪುಣುಗು ಜವಾಜಿ, ಕತ್ತುರಿ ಗಂಧ ಗೊಬ್ಬರದರಸದಿಂದ ಕಾಂತಿಯಾಗುತ್ತದೆಂದು. ಆ ಕಾಲ ಬರುತ್ತದೆ ಎಂದು ಕವಿ ೬೦ವರ್ಷಗಳಿಗೆ ಮೊದಲೇ ಹೇಳಿದ್ದಾರೆ. ನಾನು ಹೇಳುವಂತಹದ್ದು ಇವತ್ತು ಎಲ್ಲವನ್ನು ರೈತರ ಮನೆ ಬಾಗಿಲಿಗೆ ಮುಟ್ಟಿಸತಕ್ಕ ಕೆಲಸವನ್ನು ಮಾಡಬೇಕು. ಇನ್ನೊಂದು ಅತನು ಬೆಳೆದಂತಹ ಬೆಳೆ, ರಾಗಿ ಜೋಳ ಅಕ್ಕಿ ಇವುಗಳಿಗೆ ಸರಿಯಾದ ಹಣ ಸಿಗುವುದಿಲ್ಲ ಈಗತಾನೇ ನನ್ನ ಮಿತ್ರರು ಹೇಳಿದರು. ಸೂಜಿ ಮಾಡುವವನಿಗೆ, ಮತ್ತೊಂದು ಮಾಡುವವನಿಗೆ ಸರಿಯಾದ ಬೆಲೆ ಸಿಗುತ್ತದೆ.

ಆದರೆ ಬೆಳೆಯನ್ನು ಬೆಳೆದಂತಹ ಈ ಮನುಷ್ಯನಿಗೆ ತಾನು ಬೆಳೆದ ಅಕ್ಕಿ ರಾಗಿ, ಜೋಳ ಇವುಗಳಿಗೆ ಸರಿಯಾದ ಕ್ರಯ ಸಿಗುತ್ತಿಲ್ಲ. ಸರಿಯಾದ ಬೆಲೆ ಸಿಗದೇ ಇರುವುದಕ್ಕೆ ಕೇಂದ್ರಸರ್ಕಾರ ರಾಜ್ಯಸರ್ಕಾರ ಯಾರೇ ಕಾರಣರಿರಲಿ. ಒಂದು ರೀತಿಯಲ್ಲಿ ಆಲೋಚನೆ ಮಾಡಿ, ರೈತ ಬೆಳೆದಂತಹ ವಸ್ತುಗಳಿಗೆ ಸರಿಯಾದ ರೀತಿಯಲ್ಲಿ ಹಣ ಸಿಗುವಂತಹ ವ್ಯವಸ್ಥೆಯಾಗಬೇಕು. ಹಾಗಾದರೆ ಮಾತ್ರ ನಮ್ಮ ರಾಜ್ಯದಲ್ಲಿ ಉತ್ತಮ ಕೆಲಸವನ್ನು ಕೃಷಿಯಲ್ಲಿ ಮಾಡಿದ್ದೇವೆಂದು ಹೇಳಬಹುದು, ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ, ನಮ್ಮಲ್ಲಿ ಮೂರು ತಿಂಗಳು ಮಳೆ ಬರುತ್ತದೆ ಎಲ್ಲಾ ನೀರು ಸಮುದ್ರಕ್ಕೆ ಹೋಗುತ್ತದೆ. ಇದು ಮಾನ್ಯ ದೇಶಪಾಂಡೆಯವರಿಗೆ ಗೊತ್ತು. ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಗತಿ ಎಂತಹದ್ದು ಎಂದು ಅವರಿಗೆ ಗೊತ್ತುಂಟು. ನದಿಯ ಬಳಿಯಲ್ಲಿ ರೈತರು ಪಂಪ್‌ಸೆಟ್‌ಗಳನ್ನು ಇಟ್ಟುಕೊಂಡಿರುತ್ತಾರೆ. ಆ ಪಂಪ್‌ಸೆಟ್‌ಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುತ್ತಿಲ್ಲ, ಮೂರು ತಿಂಗಳು ಜನವರಿ, ಫೆಬ್ರುವರಿ, ಮಾರ್ಚಿ ತಿಂಗಳುಗಳಲ್ಲಿ ಹಣಾಹಣಿಯಾಗಿ ವಿದ್ಯುತ್ ಕೊಡದಿದ್ದರೆ ಬೆಳೆಯನ್ನು ಬೆಳೆಯಲಿಕ್ಕೆ ಸಾಧ್ಯವಿಲ್ಲ. ಧರ್ಮಸ್ಥಳದಿಂದ ಮಲೆನಾಡಿನವರೆಗೆ, ಗುರುಪುರದಿಂದ ಮಂಗಳೂರಿನವರೆಗೆ ಎಲ್ಲರೂ ಬೆಳೆಯನ್ನು ಬೆಳೆಯುತ್ತಾರೆ. ಈ ರೈತರಿಗೆ ಇರತಕ್ಕ ತೊಂದರೆ ವಿದ್ಯುತ್ ಕೊರತೆ ಅದರ ಕಡೆಗೆ ಮಂತ್ರಿಗಳು ಗಮನಹರಿಸಬೇಕು. ನಾನು ಬಹಳ ದೀರ್ಘವಾಗಿ ಮಾತನಾಡಲಿಕ್ಕೆ ಅಧ್ಯಕ್ಷರು ಬಿಡುವುದಿಲ್ಲ, ೫ ನಿಮಿಷ ಮಾತ್ರ ಮಾತನಾಡಲಿಕ್ಕೆ ಹೇಳಿದ್ದಾರೆ ಕೃಷಿ ಇಲಾಖೆ ಬಹಳ ಪ್ರಮುಖ್ಯವಾದ ಇಲಾಖೆ, ನನಗೆ ಮೊದಲೇ ಮಾತನಾಡಿದ ಮಹನೀಯರು ಅಧಿಕಾರಿಗಳ ಸಂಖ್ಯೆ ಜಾಸ್ತಿಯಾಯಿತು ಎಂದು ಹೇಳಿದ್ದಾರೆ, ನಾನೂ ಸಹ ಹೇಳುತ್ತೇನೆ. ಜಿಲ್ಲಾ ಪರಿಷತ್‌ಗೆ ಸಭೆಗೆ ಯಾವ ಅಧಿಕಾರಿಯೂ ಬರುವುದಿಲ್ಲ, ಮಂಡಲ ಪಂಚಾಯಿತಿ ಸಭೆಗೆ ಬರುವುದಿಲ್ಲ, ಗ್ರಾಮಸಭೆಗೆ ಬರುವುದೇ ಇಲ್ಲ. ಅಷ್ಟು ದೊಡ್ಡ ಅಸಡ್ಡೆ ಅವರಿಗೆ ಮಾನ್ಯ ಸಚಿವರಾದ ದೇಶಪಾಂಡೆಯವರು ಒಂದು ಕೆಲಸ ಮಾಡಿ ಎಲ್ಲರೂ ಸಿಕ್ಕಿ ಬೀಳುತ್ತಾರೆ ಅನಿರೀಕ್ಷಿತ ಭೇಟಿ ಕೊಡಬೇಕು. ನೀವು ಬರುತ್ತೇವೆಂದು ಮೊದಲೇ ಹೇಳಬಾರದು, ನೀವು ಪತ್ತೆ ಮಾಡದಿದ್ದರೆ ಕೆಲಸ ಆಗುವುದಿಲ್ಲ, ಎಲ್ಲರೂ ಬೆಳೆದಿದ್ದಾರೆ. ಕೃಷಿಕರಿಗೆ ಉಪಕಾರ ಮಾಡಬೇಕಾದರೆ ಅನಿರೀಕ್ಷಿತ ಭೇಟಿ ಮಾಡಿ ತಾವು ಹೇಳಿದಂತಹ ಕೆಲಸ ಏತಕ್ಕೆ ಆಗಿಲ್ಲ, ತಮ್ಮ ಆದೇಶ ಏತಕ್ಕೆ ಪಾಲನೆಯಾಗಿಲ್ಲವೆಂದು ತಾವು ಕೇಳಿದರೆ ಎಲ್ಲರೂ ಸಿಕ್ಕಿ ಬೀಳುತ್ತಾರೆ ಸಿಕ್ಕಿಬಿದ್ದವರಿಗೆ ದಂಡನೆ ಕೊಡಬೇಕು ಯಾವುದರಲ್ಲಿಯಾದರೂ ಅನ್ಯಾಯವಾಗಿದ್ದರೆ ೫೦೦ ರೂಪಾಯಿ ಅಥವಾ ೨೦೦ ರೂಪಾಯಿ ದಂಡ ಹಾಕಬೇಕು. ಅರಬ್‌ಸ್ತಾನದ ಕಂಟ್ರಿಗಳಲ್ಲಿ ಕದ್ದವನ ಕೈ ಕಡಿಯುತ್ತಾರೆ, ಅದು ಬಹಳ ಕ್ರೂರವೆಂದು ತಾವು ಹೇಳಬಹುದು. ಆ ತರಹ ಮಾಡುತ್ತೇವೆಂದರೆ ಯಾರೂ ಕಳ್ಳತನ ಮಾಡುವುದೇ ಇಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಾದರೂ ನಮ್ಮಲ್ಲಿ ಅನ್ಯಾಯ ನಡೆಯಬಾರದು. ರೈತರ ಅದೇರೀತಿ ಜನರ ಟ್ಯಾಕ್ಸ್‌ನಿಂದ ಬೆಳೆದಿರತಕ್ಕ ಅಧಿಕಾರಿಗಳು ಏನಿದ್ದಾರೆ, ಅಧಿಕಾರಿಗಳಲ್ಲಿ ಒಳ್ಳೆಯವರು ಇದ್ದಾರೆ ಒಳ್ಳೆಯವರು ಇಲ್ಲವೆಂದು ಹೇಳುವುದಿಲ್ಲ. ಕೆಳಗಿನ ಹಂತದಲ್ಲಿರತಕ್ಕ ಗ್ರಾಮಸೇವಕರು ಕೂಡ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ನಮ್ಮಲ್ಲಿ ೧೫೦ ಗ್ರಾಮಸೇವಕರ ಹುದ್ದೆಗಳು ಖಾಲಿಯಿವೆ. ಅವುಗಳನ್ನು ಭರ್ತಿಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ನೀವು ಅಧಿಕಾರಿಗಳನ್ನು ಚೆಕ್ ಮಾಡಬೇಕಾದರೆ ಅನಿರೀಕ್ಷಿತ ಭೇಟಿ ಕೊಟ್ಟು ಸ್ವಲ್ಪ ಕೆಲಸಮಾಡಿದರೆ ಕೃಷಿ ಇಲಾಖೆಯಲ್ಲಿ ಒಳ್ಳೆಯದಾಗುತ್ತದೆ. ರಾಷ್ಟ್ರ ಕವಿಗಳಾದ ಕುವೆಂಪುರವರು ಏನು ಹೇಳಿದ್ದಾರೆ ಅದು ಕಾರ್ಯರೂಪಕ್ಕೆ ಬರುತ್ತದೆ. ಬಾಕ್ರಾನಂಗಲ್ ಅಣೆಕಟ್ಟು, ದಾಮೋದರ ಅಣೆಕಟ್ಟು ಪಂಜಾಬ್, ಹರಿಯಾಣ ಮತ್ತು ಆಂಧ್ರಕ್ಕೆ ಆಯಿತು ಕರ್ನಾಟಕಕ್ಕೆ ಅದರಲ್ಲೂ ದಕ್ಷಿಣ ಕನ್ನಡ ಉತ್ತರ ಕನ್ನಡ ಜಿಲ್ಲೆಗಳಿಗೆ ಯಾವ ನೀರಾವರಿಯೂ ಇಲ್ಲ. ನಮಗೆ ಏನಾದರೂ ವ್ಯವಸಾಯ ಮಾಡಬೇಕಾದರೆ ಮಳೆಗಾಲದಲ್ಲಿ ಸ್ವಲ್ಪ ನೀರು ಸಿಗುತ್ತದೆ. ನಮ್ಮಲ್ಲಿ ೫ ವರ್ಷಗಳಿಂದ ಬರಗಾಲ ಬಂದು ಅದೊಂದು ಶನಿ ಕಾಟವಾಗಿದೆ, ಇಷ್ಟೆಲ್ಲಾ ಆದರೂ ನೀರಾವರಿಗೆ ಕೊಡಬೇಕಾದ ಹಣ ನಮ್ಮಲ್ಲಿ ಇಲ್ಲ. ನಾವು ಬಹಳ ದೊಡ್ಡ ಸಂಕಷ್ಟದಲ್ಲಿದ್ದೇವೆ. ಆದರಿಂದ ಮೇಲೆ ಬರಬೇಕಾದರೆ ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಅದನ್ನು ಒಳ್ಳೆಯ ರೀತಿಯಲ್ಲಿ ಕಾಪಾಡದೆ ಹೋದರೆ ಎಲ್ಲವೂ ಮುಳುಗಿ ಹೋಗುತ್ತದೆ. ಎಲ್ಲಾ ಬಣವನ್ನು ಮುಸಿ ನುಂಗಿದಂತಾಗುತ್ತದೆಂದು ಹೇಳುತ್ತೇನೆ. ಇಷ್ಟು ಹೇಳಿ ಕಟ್ಟ ಕಡೆಯದಾಗಿ ನಾನೇ ಬರೆದಿರತಕ್ಕಂಥ ಮೂರು ಚರಣಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಇದನ್ನು ಒಳ್ಳೆ ರೀತಿಯಲ್ಲಿ ಗಮನದಲ್ಲಿಟ್ಟುಕೊಂಡರೆ ಇದು ಸರ್ಕಾರಕ್ಕೆ ಒಂದು ಒಳ್ಳೆಯ ಟಾನಿಕ್ ಆಗುತ್ತದೆ ಎಂದು ಹೇಳುತ್ತೇನೆ.

ರೈತನ ಬಿಟ್ಟರಿ ಕೆಟ್ಟೀತು ದೇಶ
ರೈತನೇ ಮುಖ್ಯನು ದೇಶದ ಕೋಶ
ರೈತನ ಅವನತಿ ದೇಶದ ನಾಶ
ರೈತನ ಅಪಜಯು ದೇಶಕೆ ಕ್ಲೇಶ
ಕೃಷಿಯನ್ನು ಉಳಿಸು, ರೈತನ ಉಳಿಸು
ಓ ಜಗದೀಶ

ಅಧ್ಯಕ್ಷರು.—ಚೆನ್ನಾಗಿ ಮಾತನಾಡಿದಿರಿ. You are the best Speaker of the day. ಶ್ರೀ ದೇಶಪಾಂಡೆಯವರೇ, ಅವರು ಹೇಳಿದನ್ನೆಲ್ಲಾ ನೋಟ್ ಮಾಡಿಕೊಳ್ಳಿ. ಟಾನಿಕ್, ಇಂಜಕ್ಷನ್, ಎಲ್ಲಾ ನಿಮಗೆ ಕೊಟ್ಟಿದ್ದಾರೆ.

† ಶ್ರೀ ಎಸ್. ಜಿ, ನಂಜಯ್ಯನಮಠ (ಗುಳೇದಗುಡ್ಡ).—ಮಾನ್ಯ ಅಧ್ಯಕ್ಷರೇ, ಕೆಲವೊಂದು ಲೋಪದೋಷಗಳನ್ನು ಕಂಡು ವಿರೋಧಿಸುವಾಗ ಕೆಲವೊಂದು ವಿಷಯುಗಳನ್ನು ಪ್ರಸ್ತಾಪ ಮಾಡಲು ಇಚ್ಛೆಪಡುತ್ತೇನೆ. ಹಲವಾರು ವಿಷಯುಗಳನ್ನು ಈಗಾಗಲೇ ನನ್ನ ಸ್ನೇಹಿತರು ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ ಪ್ರಾಮುಖ್ಯವಾಗಿರತಕ್ಕಂಥಾದ್ದು ಈ ರಾಜ್ಯದಲ್ಲಿ ಬಹಳಷ್ಟು ಭೂಮಿ ಬೆಳೆಯುವ ಭೂಮಿ ಯಾಗಿದೆ. ಕೆಲವು ಭೂಮಿ ಚೌಳು ಭೂಮಿಯಾಗಿದೆ. ಜನಸಂಖ್ಯೆ ದಿನೇದಿನೇ ಬೆಳೆಯುತ್ತಾ ಹೋಗು ತ್ತಿದೆ. ಜನಸಂಖ್ಯೆ ಬೆಳೆದಂತೆ ಭೂಮಿಯನ್ನು ಆಮದು ಮಾಡಿಕೊಳ್ಳುವುದು ಸೃಷ್ಟಿಯಲ್ಲಿ ನಿರ್ಮಾಣ ಆಗಿಲ್ಲ. ಈ ಸಂದರ್ಭದಲ್ಲಿ ಜವಾಬ್ದಾರಿಯನ್ನು ಹೊತ್ತಿರತಕ್ಕಂಥ ಸರ್ಕಾರ ಇದ್ದ ಭೂಮಿಯಲ್ಲೇ ಹೆಚ್ಚು ಬೆಳೆಗಳನ್ನು ಬೆಳೆಯುವುದನ್ನು ಸಂಶೋಧನೆ ಮಾಡಬೇಕು. ಬೆಳೆಯದೇ ಉಳಿದಿರತಕ್ಕಂಥ ಚೌಳು ಭೂಮಿಯನ್ನು ಬೆಳೆಯುವ ಭೂಮಿಯನ್ನಾಗಿ ಪರಿವರ್ತಿಸುವಂಥಾದ್ದು ಬಹಳ ಪ್ರಾಮುಖ್ಯವಾದುದು ಎಂದು ನನ್ನ ನಂಬಿಕೆ ಏಕೆಂದರೆ ಎಷ್ಟೋ ಸಾವಿರಾರು ಎಕರೆ ಚೌಳು ಭೂಮಿಯನ್ನು ಹಾಗೆಯೇ ಬಿಡುತ್ತಾ ಹೋದಂತೆ ಅದರ ಪಕ್ಕದ ಭೂಮಿ ಸಹ ಚೌಳು ಭೂಮಿಯಾಗಿ ಎಲ್ಲವೂ ಚೌಳು ಭೂಮಿಯಾಗುತ್ತಾ ಹೋದರೆ ಒಳ್ಳೆಯ ಭೂಮಿ ಉಳಿಯಲಾರದು. ಮಾನ್ಯ ಕೃಷಿ ಸಚಿವರು ಈ ವಿಚಾರದಲ್ಲಿ ಹೆಚ್ಚಿನ ಆಸ್ಥೆ ವಹಿಸಿ ಈಗಿರತಕ್ಕಂತ ಚೌಳು ಭೂಮಿಯನ್ನು ಬೆಳೆಯುವ ಭೂಮಿಯನ್ನಾಗಿ ಪರಿವರ್ತಿಸುವಲ್ಲಿ ಸಮರೋಪಾದಿಯ ಹೆಜ್ಜೆಯನ್ನು ಇಡಬೇಕೆಂದು ಕೇಳಿಕೊಳ್ಳುತ್ತೇನೆ.

ಎರಡನೆಯದಾಗಿ ಬೆಳೆದಿರತಕ್ಕಂತ ರೈತನ ಮಾಲಿಗೆ ಬೆಲೆಯನ್ನು ನಿಗದಿಮಾಡತಕ್ಕಂತ ವಿಷಯದ ಬಗ್ಗೆ ಎಷ್ಟೋ ಮಂದಿ ಸ್ನೇಹಿತರು ತಿಳಿಸಿದ್ದಾರೆ. ಇದರಲ್ಲಿ ಒಂದು ವ್ಯವಸ್ಥೆ ಆಗಬೇಕು. ಹೋದಸಾರಿ ಎರಡು ನೂರು ರೂಪಾಯಿಗೆ ಒಂದು ಕ್ವಿಂಟಾಲ್ ಜೋಳವನ್ನು ಖರೀದಿ ಮಾಡಬೇಕೆಂದು ಸರ್ಕಾರ ನಿರ್ಣಯ ಮಾಡಿತು. ಆದರೆ ಯಾವಾಗ ಖರೀದಿ ಮಾಡಬೇಕು, ಯಾವಾಗ ಖರೀದಿಗೆ ಹೋಗಬೇಕು ಎನ್ನುವುದನ್ನು ಸ್ವಲ್ಪ ಸೂಕ್ಷ್ಮವಾಗಿ ವಿಚಾರಿಸಬೇಕು, ಹೋದಸಾರಿ ಖರೀದಿಗೆ ಬಂದಾಗ ನಮ್ಮ ತಾಲ್ಲೂಕಿ ನಲ್ಲಿ ರೈತರು ಬೆಳೆದಿರತಕ್ಕಂತ ಬಿಳಿ ಜೋಳವನ್ನು ಎಲ್ಲಾ ದಳ್ಳಾಳಿ ಅಂಗಡಿಗೆ ಮಾರಿದಮೇಲೆ, ಜೋಳ ಇಲ್ಲದೇ ಇರತಕ್ಕಂತ ಸಂದರ್ಭದಲ್ಲಿ ಸರ್ಕಾರ ಖರೀದಿಗೆ ಬರುತ್ತದೆ. ಹೀಗೆ ಮಾಡಿದರೆ ಯಾವ ರೈತನಿಗೆ ಲಾಭ ಬರುವುದಕ್ಕೆ ಸಾಧ್ಯತೆ ಇದೆ ? ಆಗ ಡಿ ಸಿ. ಯವರಿಗೆ ಟೆಲಿಗ್ರಾಮ್ ಕೊಟ್ಟು ಇದನ್ನು ಬಂದ್ ಮಾಡಿಸಬೇಕಾಯಿತು. ರೈತರಿಂದ ಕ್ವಿಂಟಾಲಿಗೆ ೧೭೫ ರೂ. ನಂತೆ ಖರೀದಿ ಮಾಡಿದ ದಳ್ಳಾಳಿ ಅಂಗಡಿ ಯವರು ಅದನ್ನು ಸರ್ಕಾರಕ್ಕೆ ಕ್ವಿಂಟಾಲಿಗೆ ೨೦೦ ರೂ.ನಂತೆ ಮಾರಿಕೊಂಡರು ಇದನ್ನು ಆಗಿಂದಾಗ್ಗೆ ಅಧಿಕಾರಿಗಳ ನಜರಿಗೆ ತಂದಾಗ ಇದು ಕೆಲವು ಕಡೆ ಬಂದ್ ಆಯಿತು. ಆದರೆ ಈ ವ್ಯವಸ್ಥೆಯನ್ನು, ರೈತ ಹತ್ತಿಯಾಗಲೀ, ಅಕ್ಕಿ, ಜೋಳ, ರಾಗಿಯನ್ನು ಬೆಳೆದಿರತಕ್ಕಂತ ಸಂದರ್ಭದಲ್ಲಿ ಮಾರಾಟದ ವ್ಯವಸ್ಥೆ ಮಾಡಿದರೆ ನೇರವಾಗಿ ರೈತನಿಗೆ ಹಣ ಸಿಗುವುದಕ್ಕೆ ಸಾಧ್ಯ ಇದೆ. ಏಕೆಂದರೆ ರೈತ ತಾನು ಬೆಳೆಯನ್ನು ಬೆಳೆಯುವುದಕ್ಕೆ ಮುಂಚೆಯೇ ಇಷ್ಟು ಬರುತ್ತದೆ, ಇಷ್ಟು ಸಿಗಬಹುದು ಎಂದು ಮಾರುವ ಸಂದರ್ಭ ಇರುತ್ತದೆ, ಆದ್ದರಿಂದ ಈ ಖರೀದಿಯ ವ್ಯವಸ್ಥೆಯನ್ನು ಆತನ ಬೆಳೆ ಬರುವಂತ ಸಂದರ್ಭದಲ್ಲಿಯೇ ಮಾಡಿದರೆ ನೇರವಾಗಿ ಹಣ ಆತನಿಗೆ ಮುಟ್ಟುವುದಕ್ಕೆ ಸಾಧ್ಯವಾಗುತ್ತದೆ.

ಇದರಲ್ಲಿ ಒಂದು ಸಲಹೆಯನ್ನು ತಮ್ಮ ಮೂಲಕ ಸರ್ಕಾರಕ್ಕೆ ಕೊಡಲು ಇಚ್ಛೆಪಡುತ್ತೇನೆ ಕೇವಲ ವಿಭಾಗೀಯ ಸ್ಥಳಗಳಲ್ಲಿ ಈ ವ್ಯವಸ್ಥೆಯನ್ನು ಮಾಡಬೇಡಿ, ಜಿಲ್ಲಾ ಕೇಂದ್ರಗಳಿಗೆ ಸೀಮಿತವಾಗಿ ಈ ವ್ಯವಸ್ಥೆಯನ್ನು ಮಾಡಬೇಡಿ ತಾಲ್ಲೂಕು ಕೇಂದ್ರದಲ್ಲಿ ಮಾತ್ರ ಈ ವ್ಯವಸ್ಥೆಯನ್ನು ಮಾಡಬೇಕು.

ಹೇಗಾದರೂ ಈಗ ಕರ್ನಾಟಕದ ಭೂಮಂಡಲವನ್ನು ಆಳುವುದಕ್ಕೆ ಮಂಡಲ್ ಪಂಚಾಯ್ತಿಗಳ ವ್ಯವಸ್ಥೆ ಆಗಿದೆ ಮಂಡಲ್ ಪಂಚಾಯ್ತಿಯಲ್ಲೇ ಖರೀದಿ ಮಾಡಬೇಕೆಂದು ನಾನು ಹೇಳುವುದಿಲ್ಲ. ಅಲ್ಲಿಯವರೆಗೆ ಖರೀದಿದಾರರು ಬರುವಂತ ವ್ಯವಸ್ಥೆ ಮಾಡಬೇಕು. ಸುಮಾರು ನಾಲ್ಕಾರು ಸ್ಥಳಗಳಲ್ಲಿ ಇರತಕ್ಕಂತ ಕಡೆಗೆ ರೈತರು ತಮ್ಮ ಚಕ್ಕಡಿಗಳಲ್ಲಿ ತಾವು ಬೆಳೆದಿರತಕ್ಕಂತ ಮಾಲನ್ನು ತಂದು, ಮಾರಿ ಅಲ್ಲಿಂದ ಹಣ ವನ್ನು ತೆಗೆದುಕೊಂಡು ಹೋಗುವಂತ ವ್ಯವಸ್ಥೆಯಾದರೆ ಸಮರ್ಪಕವಾಗಿ ರೈತರಿಗೆ ಹಣ ಸಿಗುತ್ತದೆ. ಕೆಲವೊಂದು ತಾಲ್ಲೂಕುಗಳಲ್ಲಿ ೧೪೨ ರಿಂದ ೬೦-೭೦ ಹಳ್ಳಿಗಳು ಇವೆ. ಅವರು ಒಂದು ಹಳ್ಳಿಯಿಂದ ೨೫ ಕಿಲೋಮೀಟರ್‌ನಿಂದ ೪೦ ಕಿಲೋಮೀಟರ್‌ವರೆಗೆ ತಾಲ್ಲೂಕು ಸ್ಥಳಗಳಿಗೆ ಹೋಗ ತಕ್ಕಂತ ವ್ಯವಸ್ಥೆ ಉಂಟು, ಇಂತಹ ಸಂದರ್ಭದಲ್ಲಿ ಮಂಡಲ್‌ಗಳ ಮಟ್ಟಕ್ಕೆ ಹೋಗಿ. ಇಂತಹ ದಿವಸ ನಾವು ನಿಮ್ಮಲ್ಲಿ ಖರೀದಿಗೆ ಬರುತ್ತೇವೆಂದು ತಿಳಿಸಿದರೆ, ಡಂಗೂರ ಸಾರಿದರೆ, ಬೆಳೆದಿರತಕ್ಕಂಥ ರೈತನ ಮಾಲು ಅಲ್ಲಿಯೇ ಖರೀದಿಯಾದರೆ, ಅಥವಾ ಖರೀದಿಗಾಗಿ ವ್ಯವಸ್ಥೆ ಮಾಡಿದರೆ, ರೈತನು ಬೆಳೆದ ಮಾಲಿಗೆ ನೇರವಾಗಿ ಪ್ರತಿಫಲ ಮುಟ್ಟುವುದಕ್ಕೆ ಸಾಧ್ಯವಾಗುತ್ತದೆ.

ಇನ್ನು ಸಂಶೋಧನೆ ವಿಷಯವನ್ನು ತೆಗೆದುಕೊಂಡಾಗ, ವರಲಕ್ಷ್ಮಿ ಹತ್ತಿ ಮತ್ತಿತರ ಹತ್ತಿ ವಿಚಾರ ದಲ್ಲಿ ಹಿಂದೆ ೧೯೭೦ರಲ್ಲಿ ಆಗಿರತಕ್ಕಂಥ ಸಂಶೋಧನೆ ಆದಮೇಲೆ ಮತ್ತೆ ಈ ವಿಷಯದಲ್ಲಿ ಸಂಶೋಧನೆ ಆಗಿಲ್ಲ, ಇದರಲ್ಲಿ ಇನ್ನೂ ಹೆಚ್ಚಿನ ತಳಿಯ ವ್ಯವಸ್ಥೆಯ ಸಂಶೋಧನೆಗಳು ಆಗಬೇಕು. ಯೂನಿ ವರ್ಸಿಟಿಗಳು ಹೆಚ್ಚಾದರೆ ಕೇವಲ ಬಿ ಎಸ್.ಸಿ ಮತ್ತು ಇತರ ಡಿಗ್ರಿಯವರನ್ನು ಹೊರಗೆ ಕಳುಹಿಸುವಂಥ ಬೆಳವಣಿಗೆಯಾಗುತ್ತಿದೆಯೇ ಹೊರತು ಬೇರೇ ಏನೂ ಆಗುವುದಿಲ್ಲ ಇವುಗಳ ಮುಖಾಂತರ ಕಡಿಮೆ ಭೂಮಿಯಲ್ಲಿ ಹೆಚ್ಚಿನ ಬೆಳೆ ಬೆಳೆಯುವಂತ ಸಂಶೋಧನೆಗೆ ಹೆಚ್ಚು ಒತ್ತು ಕೊಟ್ಟರೆ ಮಾತ್ರ ರೈತನ ಕೃಷಿ ಸಮಸ್ಯೆಯನ್ನು ನೀಗಿಸುವುದಕ್ಕೆ ಸಾಧ್ಯವಾಗುತ್ತದೆ. ಇನ್ನು ಒಣ ಭೂಮಿ ಅಭಿವೃದ್ಧಿ ಸಲುವಾಗಿ ಕೆಲವೊಂದು ಬೋರ್ಡ್, ಮಂಡಲಿ ಮಾಡಿದ್ದಾರೆ. ಇದಕ್ಕಾಗಿಯೇ ಕೆಲವೊಂದು ಹಣವನ್ನು ನಿಗದಿ ಮಾಡಿದ್ದಾರೆ. ಪರಿಣಾಮ ಕಾರಿಯಾಗಿ ಇನ್ನೂ ಕೂಡ ಒಣ ಭೂಮಿ ಅಭಿವೃದ್ಧಿಗೆ ವ್ಯವಸ್ಥೆ ಆಗಿಲ್ಲ ಎಂದು ಸಮೀಕ್ಷೆ ಮಾಡಿದಾಗ ತಿಳಿದುಬರುತ್ತದೆ. ಆದರೆ ಅಲ್ಲಿ ನೇಮಿಸಿರತಕ್ಕಂಥ ಅಧ್ಯಕ್ಷರು, ಅವರಿ ಗಾಗಿ ಮಾಡಿರತಕ್ಕ ವ್ಯವಸ್ಥೆಯಾಗಬಾರದು. ಒಣಭೂಮಿ ಅಭಿವೃದ್ಧಿ ಸಂಸ್ಥೆಗೆ ನಿಯಮಿತವಾಗಿರತಕ್ಕಂತ ಅಧ್ಯಕ್ಷರಿಗೆ ನೀರುಣಿಸುವ ಸಂಸ್ಥೆಯಾದರೆ, ಇದರಿಂದ ಯಾವುದೇ ಪರಿಣಾಮವಾಗುವುದಿಲ್ಲ. ಅವರ ಕಾರು ಕೇವಲ ಬೆಂಗಳೂರಿಗೆ ಬಂದು ರಾಜಕೀಯ ಮಾಡುವುದಕ್ಕೆ ಆಗಬಾರದು. ಒಣ ಭೂಮಿ ಪರಿ ಣಾಮಕಾರಿಯಾಗಿ ಅಭಿವೃದ್ಧಿಯಾದರೆ ಮಾತ್ರ ರೈತರಿಗೆ ಅನುಕೂಲವಾಗುತ್ತದೆ. ಇದು ಒಂದು ಪ್ರಾಮುಖ್ಯವಾದ ಯೋಜನೆ. ಕೇಂದ್ರಸರ್ಕಾರ ಎಷ್ಟೋ ಪ್ರಮಾಣದಲ್ಲಿ ಸಹಾಯ ಸವಲತ್ತನ್ನು ಕೊಡುತ್ತಿದೆ. ಇದರ ಜೊತೆಗೆ ತಮ್ಮ ಕೈಯನ್ನೂ ಜೋಡಿಸಿದರೆ, ಈ ವ್ಯವಸ್ಥೆಯು ಪರಿಣಾಮಕಾರಿ ಯಾಗುವುದಲ್ಲಿ ಸಂಶಯ ಇಲ್ಲ. ಆದ್ದರಿಂದ ಈ ವಿಚಾರದಲ್ಲಿ ರಾಜ್ಯಸರ್ಕಾರಕ್ಕೆ ನಾನು ವಿನಯಪೂರ್ವಕ ವಾಗಿ ಕೇಳಿಕೊಳ್ಳುತ್ತೇನೆ. ಇನ್ನು ಭೂ ಅಭಿವೃದ್ಧಿ ಬ್ಯಾಂಕುಗಳ ಮುಖಾಂತರ ಬಾವಿಯನ್ನು ಕೊಡುವ ವ್ಯವಸ್ಥೆ ಇದೆ ಬೋರ್‌ವೆಲ್ ಕೊಡುವ ವ್ಯವಸ್ಥೆ ಇದೆ. ಆದರೆ ಇವತ್ತು ಬಾವಿಯನ್ನು ತೆಗೆಸುವುದಕ್ಕೆ ಭೂ ಅಭಿವೃದ್ಧಿ ಬ್ಯಾಂಕಿನ ಮುಖಾಂತರ ಅಥವಾ ಬೇರೆ ಬ್ಯಾಂಕುಗಳ ಮುಖಾಂತರ ತೆಗೆದುಕೊಂಡ ಹಣ ದುರುಪಯೋಗವಾಗುವುದು ಹೆಚ್ಚಾಗಿ ಕಾಣುತ್ತಿದೆ. ಬಾವಿಗಳ ಸಂಖ್ಯೆ ಸಾವಿರಾರು ಇರುತ್ತದೆ, ಭೂ ಅಭಿವೃದ್ಧಿ ಬ್ಯಾಂಕುಗಳಲ್ಲಿ ಎಷ್ಟೋ ಬಾವಿಗಳು ಕಳುವಾಗಿರುವುದು ಕಂಡುಬರುತ್ತದೆ. ಇದರಲ್ಲಿ ನನ್ನ ಸಲಹೆ, ಭೂ ವಿಜ್ಞಾನಿಗಳ ಮುಖಾಂತರ ಅಥವಾ ತಜ್ಞರ ಮುಖಾಂತರ ಪರೀಕ್ಷೆ ಮಾಡಿ ರೈತರ ಹೊಲದಲ್ಲಿ ಬೋರ್‌ವೆಲ್‌ಗಳನ್ನು ತೋಡಿಸಿ, ಪಂಪ್‌ಸೆಟ್‌ಗಳನ್ನು ಕೂಡಿಸಿ, ರೈತರ ಹೊಲದ ಮೇಲೆ ಆಗಿರತಕ್ಕಂಥ ಖರ್ಚು ಕೂಡಿಸಿದರೆ, ಪರಿಣಾಮಕಾರಿಯಾಗಿ ರೈತರಿಗೆ ಅನುಕೂಲವಾಗುತ್ತದೆ. ಆಂಧ್ರ ಪ್ರದೇಶದಲ್ಲಿ ಈ ವ್ಯವಸ್ಥೆ ಇದೆಯೆಂದು ನಮ್ಮ ಗಮನಕ್ಕೆ ಕೇಳಿಕೆ ಮುಖಾಂತರ ತಿಳಿದು ಬಂದಿದೆ ನೀರು ಬೀಳದೇ ಇದ್ದ ಸಂದರ್ಭದಲ್ಲಿ ಆ ಭಾರವನ್ನು ಹಾಕುವುದು ಬೇಡ. ನೀರು ಬಿದ್ದರೆ ಮಾತ್ರ ಹಾಗೂ ಪಂಪ್‌ಸೆಟ್ ಕೂಡಿಸಿಕೊಟ್ಟರೆ ಅದು ಒಂದು ವರದಾನವಾಗುತ್ತದೆ, ದೇವರು ವರ ಕೊಟ್ಟಂತೆ ಆಗುತ್ತದೆ ಎಂದು ಹೇಳುತ್ತೇನೆ. ಇನ್ನು ಭೂಸಾರ ಸಂರಕ್ಷಣೆ ವಿಷಯವಾಗಿ ಹೇಳುವುದಾದರೆ, ಕೆಲವೊಂದು ಕಡೆ ಬರಗಾಲದ ಕೃಷಿಕ ಕಾರ್ಮಿಕರಿಗೆ ಉದ್ಯೋಗ ಕೊಡುವ ಸಲುವಾಗಿ ಭಾರಿ ಪ್ರಮಾಣದಲ್ಲಿ ಯೋಜನೆ ಹಾಕಿಕೊಂಡರು. ಎಷ್ಟೋ ಲಕ್ಷ ಖರ್ಚು ಮಾಡಿ ಒಡ್ಡುಗಳನ್ನು ನಿರ್ಮಾಣ ಮಾಡಿದರು. ಇವುಗಳಲ್ಲಿ ೧೫-೨೦ ಕಟ್ಟೆಗಳು ಇದ್ದರೆ, ೪೦-೫೦ ಕಟ್ಟೆಗಳು ಹೋಗಿರುತ್ತವೆ. ನಾನು ಭ್ರಷ್ಟಾಚಾರದ ವಿಷಯ

ವಾಗಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಎರಡು ಕೈ ಜೋಡಿಸಿದರೇ ಚಪ್ಪಾಳೆಯಾಗುತ್ತದೆ, ಒಂದೇ ಕೈ ಚಪ್ಪಾಳೆ ಆಗುವುದಕ್ಕೆ ಸಾಧ್ಯವಿಲ್ಲ.

ನಾನು ಈ ವಿಷಯವನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಬರಗಾಲದ ಸಮಯದಲ್ಲಿ ರೈತರ ಒಪ್ಪಿಗೆ ಇಲ್ಲದೆ ಒತ್ತಾಯದಿಂದ, ಕೃಷಿಕಾರ್ಮಿಕರಿಗೆ ಉದ್ಯೋಗವನ್ನು ಕೊಡುವ ಉದ್ದೇಶಕ್ಕಾಗಿ ನಿರ್ಮಾಣ ಮಾಡಿರತಕ್ಕ ಬದುಗಳ ಖರ್ಚನ್ನು ರೈತರ ಮೇಲೆ ಏತಕ್ಕೆ ಹೇರುತ್ತೀರಿ ಎಂದು ಕೇಳುವುದಕ್ಕೆ ಹೇಳುತ್ತಿದ್ದೇನೆ. ಎಷ್ಟೋ ರೈತರ ಹೊಲದ ಉತಾರಗಳನ್ನು ತೆಗೆದು ನೋಡಿದಾಗ ಈ ಬಂಡಿಂಗ್‌ಗೆ ಕೊಡಬೇಕಾದ ಬಾಕಿಗಳೇ ಕಾಣುತ್ತವೆ. ಕೃಷಿ ಕಾರ್ಮಿಕರಿಗೆ ಉದ್ಯೋಗ ವ್ಯವಸ್ಥೆ ಮಾಡುವುದಕ್ಕೋಸ್ಕರ ಈ ಕೆಲಸ ಮಾಡಿ, ಈಗ ಕೃಷಿ ಅವಲಂಭಿತರ ಮೇಲೆ ಈ ಹಣವನ್ನು ಹಾಕುವುದರಲ್ಲಿ ಅರ್ಥ ಇಲ್ಲ. ಈ ಸಂದರ್ಭದಲ್ಲಿ ನಾನು ರೈತರಪರವಾಗಿ ಸರಕಾರಕ್ಕೆ ಒತ್ತಾಯ ಮಾಡಿ ಕೇಳಿಕೊಳ್ಳುವುದು ಏನೆಂದರೆ, ಬರಗಾಲದ ಸಮಯದಲ್ಲಿ ಕೃಷಿ ಕಾರ್ಮಿಕರಿಗೆ ಕೆಲಸ ಕೊಡಲು ಮಾಡಿರತಕ್ಕ ಈ ಭೂಸಾರ ಸಂರಕ್ಷಣೆಯ ಒಡ್ಡುಗಳ ಮೇಲೆ ಆಗಿರತಕ್ಕ ಖರ್ಚನ್ನು ರೈತರ ಮೇಲೆ ಹಾಕಬಾರದು. ಈಗ ಇದರಲ್ಲಿ ಅರ್ಧದಷ್ಟು ಬಾಕಿಯನ್ನು ತೆಗೆದಿದ್ದೀರಿ ಎಂದು ಕೇಳಿದ್ದೇನೆ, ಆದರೆ ಅಧಿಕೃತವಾಗಿ ಯಾವುದೇ ಕಾಗದ ಪತ್ರಗಳು ಯಾವ ಆಫೀಸ್‌ಗೂ ಹೋಗಿಲ್ಲ. ಆದುದರಿಂದ ಇದರ ಮೇಲೆ ಇರತಕ್ಕ ಎಲ್ಲಾ ಬಾಕಿಗಳನ್ನೂ ಸ್ವಚ್ಛ ಮಾಡತಕ್ಕ ಕೆಲಸವನ್ನು ಸರಕಾರ ಮಾಡಿದರೆ ರೈತರಿಗೆ ಅನುಕೂಲ ಮಾಡಿದಹಾಗೆ ಆಗುತ್ತದೆ. ಸರಕಾರ ಮಾಡಿರತಕ್ಕ ಒಂದು ಕೆಲಸವನ್ನು ಮೆಚ್ಚಿಕೊಂಡು ಮಾತನಾಡಬೇಕಾಗಿದೆ, ರೈತರ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಿರುವುದನ್ನು ನಾನು ಮೆಚ್ಚಿಕೊಳ್ಳುತ್ತೇನೆ. ಆದರೆ ಇದಕ್ಕೆ ನಿಗದಿ ಪಡಿಸಿರತಕ್ಕಂಥ ಸಮಯ ಬಹಳ ಕಡಿಮೆ ಇದೆ. ರೈತರು ತಮ್ಮ ಕೈಯಲ್ಲಿ ಹಣ ಇಲ್ಲದಾಗ, ಅವರ ಮೇಲಿನ ಏಳು ಪರ್ಸೆಂಟ್ ಬಡ್ಡಿಯನ್ನು ಅವರು ಉಳಿಸಲು ಹೋಗಿ, ೨೫ ಪರ್ಸೆಂಟ್ ಬಡ್ಡಿ ಕೊಟ್ಟು ಸಾಲ ತೆಗೆದುಕೊಂಡು ತುಂಬುವಂತಹ ಪರಿಸ್ಥಿತಿ ಬೇಡ. ನಾಳೆ ದಿವಸ ಇದು ಬೇಕಾದಿತು, ಅದು ಬೇಡವಾದೀತು ಎಂಬ ಸಂದರ್ಭ ಬರಹುದು. ರೈತನು ಈ ವರ್ಷ ಒಂದು ಪೀಕನ್ನು ಪಡೆದು ಬ್ಯಾಂಕ್‌ಗೆ ಹಣ ತುಂಬುವವರೆಗೆ ಅವಧಿಯನ್ನು ವಿಸ್ತರಣೆ ಮಾಡಬೇಕೆಂದೂ, ಉ ದಿರತಕ್ಕಂಥ ರೈತರಿಗೆ ಇದರ ಲಾಭ ತಟ್ಟುವಂತಹ ವ್ಯವಸ್ಥೆ ಮಾಡಬೇಕೆಂಬ ವಿಷಯವನ್ನು ಈ ಸಂದರ್ಭದಲ್ಲಿ ಸರಕಾರದ ಗಮನಕ್ಕೆ ತರುತ್ತೇನೆ.

ಇನ್ನು ವಿದ್ಯುತ್ ವ್ಯವಸ್ಥೆ ಭಾರೀ ಪ್ರಮಾಣದಲ್ಲಿ ಅಸಮರ್ಪಕವಾಗಿ ನಡೆಯುತ್ತಿದೆ. ಒಂದೊಂದು ಸಂದರ್ಭದಲ್ಲಿ ಟ್ರಾನ್ಸ್‌ಫಾರ್ಮರ್ ಸುಟ್ಟು ಹೋದಾಗ ಅದನ್ನು ಸಕಾಲದಲ್ಲಿ ಬದಲಾವಣೆ ಮಾಡುವುದಿಲ್ಲ. ಇದರಿಂದಾಗಿ ನೀರು ಹರಿಯುವ ಭೂಮಿಯಲ್ಲಿ ನೀರು ಹರಿಯದೇ ಬೆಳೆದುನಿಂತ ಬೆಳೆಯೆಲ್ಲಾ ಒಣಗಿ ಹೋಗಿರುವುದನ್ನು ನಾವು ನೋಡಿದ್ದೇವೆ. ಇಡೀ ರಾಷ್ಟ್ರದಲ್ಲಿ ಒಂದು ಹೆಚ್.ಪಿ.ಗೆ ಕೇವಲ ೫೦ ರೂಪಾಯಿಗಳ ದರವನ್ನು ಮಾನ್ಯ ಗುಂಡೂರಾಯರ ಸರಕಾರ ನಿಗದಿಪಡಿಸಿತ್ತು. ಇದು ಇಡೀ ರಾಜ್ಯದಲ್ಲಿ ಅಲ್ಲ ಭಾರತ ದೇಶದ ಕೃಷಿಕ ಸಮಾಜದವರೂ ಕೂಡಾ ಇದರ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದರು. ಈ ವಿಷಯದಲ್ಲಿ ಜನತಾ ಸರಕಾರ ಒಂದು ಹೆಚ್.ಪಿ.ಗೆ, ೫೦ ರೂಪಾಯಿ ಇದ್ದುದನ್ನು ೭೫ ರೂಪಾಯಿಗಳಿಗೆ ಏರಿಸಿದೆ. ಇದು ಯೋಗ್ಯವಾದುದಲ್ಲ. ನಾವು ರೈತರ ರೂವಾರಿಗಳು, ರೈತರಿಗಾಗಿ ಬರುತ್ತೇವೆ. ರೈತರಿಗಾಗಿ ಸರಕಾರ ರಚಿಸುತ್ತೇವೆ ಎಂದು ಹೇಳಿಕೊಂಡು ಅಧಿಕಾರಕ್ಕೆ ಬಂದು ಈಗ ೨೫ ರೂಪಾಯಿಗಳನ್ನು ಜಾಸ್ತಿ ಮಾಡಿದ್ದೀರಿ. ರೈತರ ತಲೆಯ ಮೇಲೆ ಭಾರ ಹೇರುತ್ತಿದ್ದೀರಿ. ದಯವಿಟ್ಟು ತಾವು ಅದನ್ನು ೫೦ ರೂಪಾಯಿಗೆ ಇಳಿಸಿ. ನಾನು ಇನ್ನೂ ಒಂದು ವಿಚಾರ ಕೇಳಿದ್ದೇನೆ. ಪಂಪುಸೆಟ್‌ಗಳಿಗೆ ವಿದ್ಯುತ್ ಮೋಟರ್ ಕೊಡಿಸುವಂತಹ ವ್ಯವಸ್ಥೆ ಮಾಡುತ್ತಿದ್ದೀರಿ ಎಂದು ಕೇಳಿದ್ದೇನೆ, ಇವತ್ತು ಇರತಕ್ಕಂಥ ವಿದ್ಯುತ್ ದರದಲ್ಲಿ ಒಂದು ತೋಟಕ್ಕೆ ಮೋಟರ್ ಕೊಡಿಸಿದರೆ, ಆಗ ಬರತಕ್ಕಂಥ ವಿದ್ಯುಚ್ಛಕ್ತಿ ಬಿಲ್‌ಗೆ ಇಡೀ ತೋಟವನ್ನೇ ಮಾರಿ ಬಿಲ್ಲನ್ನು ತುಂಬುವಂತಹ ಸಂದರ್ಭ ಬಂದೀತು ಎಂದು ಎಚ್ಚರಿಕೆಯನ್ನು ನೀಡುತ್ತಾ ಇದನ್ನು ಗಮನಿಸಬೇಕೆಂದು ಹೇಳುತ್ತೇನೆ. ಯಾವ ರೀತಿ ಒಂದು ಹೆಚ್.ಪಿ.ಗೆ ೫೦ ರೂಪಾಯಿಯಂತೆ ಹಿಂದೆ ನಿಗದಿ ಮಾಡಿದ್ದರು ಅದನ್ನೇ ಮುಂದುವರೆಸಿ ೭೫ ಹೆಚ್.ಪಿ ವರೆಗೆ ಮುಂದುವರೆಸಿದರೆ, ರೈತರಿಗೆ ಒಳ್ಳೆಯ ಆಡಳಿತವನ್ನು ಕೊಟ್ಟಂತಾದೀತು, ವರವನ್ನು ಕೊಟ್ಟಂತಾದೀತು ಎಂದು ಹೇಳುತ್ತೇನೆ.

ಅಧ್ಯಕ್ಷರೇ ತಮ್ಮ ಮುಖಾಂತರ ಸರಕಾರಕ್ಕೆ ಹೇಳುವ ಅನೇಕ ವಿಚಾರಗಳಲ್ಲಿ ಒಂದು ವಿಚಾರ ಮುಖ್ಯವಾದದು. ತಾವು ಕೆಲವು ಕೃಷಿ ಸಲಕರಣೆಗಳನ್ನು ರೈತರಿಗೆ ಕೊಡುತ್ತೀರಿ. ಕೂರಿಗೆ, ಕುಂಟೆ,

ಮಡಿಕೆ (ನೇಗಿಲು) ಇವುಗಳನ್ನು ರಿಯಾಯಿತಿ ದರದ ಮೇಲೆ ಬಡ ರೈತರಿಗೆ, ಹಿಂದುಳಿದ ವರ್ಗದವರಿಗೆ ಕೊಡುವ ವ್ಯವಸ್ಥೆ ಮಾಡುತ್ತೀರಿ. ಯಾವ ಯಾವ ಹಳ್ಳಿಗಳಲ್ಲಿ ಇದನ್ನು ವ್ಯವಸ್ಥೆ ಮಾಡಿದ್ದೀರಿ, ಆ ಹಳ್ಳಿಗಳಲ್ಲಿ ಇವು ಇನ್ನೂ ಕಟ್ಟೆಯ ಮೇಲೆ ಕುಳಿತಿವೆಯೋ ಹೊರತಾಗಿ ಹೊಲಕ್ಕೆ ಹೋಗಿಲ್ಲ. ಅವುಗಳು ಉಪಯೋಗಕ್ಕೆ ಬಾರದ ರೀತಿಯಲ್ಲಿವೆ. ಅವುಗಳನ್ನು ಆ ರೀತಿ ನಿರ್ಮಾಣ ಮಾಡಿದ್ದಾರೆ. ಇದರ ಬಗ್ಗೆ ಒಂದು ಉದಾಹರಣೆಯನ್ನು ತಮಗೆ ಹೇಳಬೇಕೆಂದರೆ ಧಾರವಾಡದಲ್ಲಿ ಯಾವುದೋ ಒಂದು ಸಮಾರಂಭ ದಲ್ಲಿ ಇವುಗಳ ಪ್ರದರ್ಶನವನ್ನು ಇಟ್ಟಿದ್ದರು. ಆಗ ಕೃಷಿ ಮಂತ್ರಿಗಳಾಗಿದ್ದವರೊಬ್ಬರು ಒಂದು ಅರ್ಧ ಫರ್ಲಾಂಗ್ ದೂರ ಈ ಕೂರಿಗೆಯನ್ನು ಜಗ್ಗಿಕೊಂಡು ಹೋದರು, ಆಗ ಅದಕ್ಕೆ ಹಾಕಿದ್ದ ಪ್ಲಾಸ್ಟಿಕ್ ನಳಿಕೆ ಆಗಲೇ ಹರಿದು ಹೋಯಿತು. ಅದು ಇನ್ನೂ ಹೊರಕ್ಕೇ ಹೋಗಲಿಲ್ಲ ಆಗಲೇ ಈ ರೀತಿ ಆಗಿ ಹೋಯಿತು. ನೀವು ಎರಡು ನೂರು ರೂಪಾಯಿಗಳ ಈ ಕುಂಟೆ ಕೂರಿಗೆ ಮತ್ತು ಮಡಿಕೆ (ನೇಗಿಲು) ಗಳನ್ನು ಕೊಟ್ಟರೆ, ಆ ಬಡ ರೈತ ಅದಕ್ಕೆ ನಾಲ್ಕು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಒಂದು ಜೊತೆ ಎತ್ತನ್ನು ತರಬೇಕಾದ ಪರಿಸ್ಥಿತಿ ಇದೆ. ಇದರಿಂದ ಯಾರಿಗೆ ಉಪಯೋಗವಾಗುತ್ತದೆ ಅವರಿಗೆ ಕೊಡಿ, ಸಮರ್ಪಕವಾದ ಉತ್ತಮವಾದ ವ್ಯವಸ್ಥೆ ಮಾಡಿ. ಅದನ್ನು ಬಿಟ್ಟು ೨೦೦ ರೂಪಾಯಿನ ಸಲಕರಣೆಗಳನ್ನು ಕೊಟ್ಟು ನಾಲ್ಕು ಸಾವಿರ ರೂಪಾಯಿ ಸಾಲ ಮಾಡಿ ಎತ್ತನ್ನು ತರಬೇಕಾದ ಪರಿಸ್ಥಿತಿ ಯನ್ನು ನಿರ್ಮಾಣ ಮಾಡಬೇಡಿ. ಮಡಿಕೆ (ನೇಗಿಲು) ಎಂದು ಏನು ಇರುತ್ತದೆ ಅದು ಗಟ್ಟಿಯಾಗಿರುವ ನೆಲವನ್ನು ಉತ್ತು ಸಡಿಲ ಮಾಡಿ ಹರಗಿ (ಹರವು) ಬಿತ್ತುವಂತಹ ವ್ಯವಸ್ಥೆ ಮಾಡಬೇಕು. ಆದರೆ ಸರಕಾರ ಕೊಡತಕ್ಕಂಥ ಮಡಿಕೆ ಹೇಗಿದೆ ಎಂದರೆ ಮೊದಲು ಟ್ರ್ಯಾಕ್ಟರ್‌ನಲ್ಲಿ ಹೊಲ ಉತ್ತು ಗೀರು ಹಾಕುವುದಕ್ಕೆ ಮಾತ್ರ ಉಪಯೋಗವಾಗುವಂತೆ ಇದೆ. ಈ ಮಡಿಕೆ ಎಂದರೆ ಹೇಗಿರಬೇಕು ಎಂಬುದು ನಿಮಗೆ ಅರ್ಥವಾಗಿರಬಹುದು. ಇದರಲ್ಲಿ ಏನೋ ನಡೆಯುತ್ತಿದೆ ಎಂಬ ಸಂಶಯ ನನಗೆ ಇದೆ. ಇನ್ನು ಒಂದೇ ಒಂದು ವಿಚಾರ ಹೇಳಬೇಕೆಂದರೆ ಈ ಕೃಷಿಯ ಅವಲಂಬಿತರಲ್ಲಿ ಕೆಲವರು ಎಷ್ಟು ಬುದ್ಧಿ ವಂತರು ಎಂದು ಹೇಳಬೇಕಾಗಿದೆ. ಒಬ್ಬ ಕೃಷಿ ಸಂಶೋಧನೆ ಮಾಡಬೇಕೆಂದು ಸರಕಾರದಿಂದ ನಾಲ್ಕು ಎಕರೆ ಜಮೀನು ತೆಗೆದುಕೊಂಡ.

ಕೃಷಿ ಸಂಶೋಧನೆಯನ್ನು ಮಾಡುತ್ತೇನೆಂದು ಸರ್ಕಾರದಿಂದ ಒಬ್ಬವ್ಯಕ್ತಿ ನಾಲ್ಕು ಎಕರೆ ಜಮೀನನ್ನು ಗುಡ್ಡಗಾಡು ಪ್ರದೇಶದಲ್ಲಿ ಮಂಜೂರು ಮಾಡಿಸಿಕೊಂಡ. ಆ ಜಮೀನನ್ನು ಸಮ ಮಾಡಬೇಕೆಂದು ಸರ್ಕಾರದಿಂದಲೇ ಒಂದು ಬುಲ್ಡೋಜರ್‌ನ್ನು ತೆಗೆದುಕೊಂಡ. ಆಮೇಲೆ ಅಲ್ಲಿಯೇ ವಾಸ ಮಾಡಬೇಕೆಂದು ಹೇಳಿ ಒಂದು ಆರ್.ಸಿ.ಸಿ. ಬಿಲ್ಡಿಂಗ್‌ನ್ನು ಕಟ್ಟಿಸಿಕೊಂಡ. ಇಷ್ಟೆಲ್ಲಾ ಆಗುವಷ್ಟರಲ್ಲಿ ಆರು ವರ್ಷಗಳಾಯಿತು. ಅವರು ಅಲ್ಲಿ ಏನು ಸಂಶೋಧನೆ ಮಾಡಿದರೆಂದರೆ ಸರ್ಕಾರ ಕೊಟ್ಟ ಜಮೀನಿನಲ್ಲಿ ತೆಂಗಾ ಬೆಳೆ ಬೆಳೆದುಕೊಂಡು ಇದ್ದಾನೆ. ಆವರ ಮನೆಯಲ್ಲಿ ನಾಲ್ಕು ಕಡೆ ನಾಲ್ಕು ಕುಂಡಲಿಗಳನ್ನು ಇಟ್ಟಿದ್ದಾರೆ. ಆ ಕುಂಡಲಿಗಳಲ್ಲಿ ಒಂದರಲ್ಲಿ ಲವಂಗ ಗಿಡ, ಇನ್ನೊಂದರಲ್ಲಿ ಏಲಕ್ಕಿ ಗಿಡ, ಇನ್ನೊಂದರಲ್ಲಿ ದ್ರಾಕ್ಷೆ ಹೀಗೆ ಗಿಡಗಳನ್ನು ಇಟ್ಟು ಯಾರಾದರೂ ಹೋಗಿ ಏನು ಸಂಶೋಧನೆ ಮಾಡಿದಿರಿ ಎಂದು ಕೇಳಿದರೆ ಈ ನಾಲ್ಕು ಕುಂಡಲಿಗಳನ್ನು ತೋರಿಸಿ ನೋಡಿ ನಾನು ಇದೇ ಸಂಶೋಧನೆ ಮಾಡುತ್ತಿರುವುದೆಂದು ಹೇಳುತ್ತಾರೆ. ಸರ್ಕಾರ ಕೊಟ್ಟ ಜಮೀನಿನಲ್ಲಿ ಅವರು ತೆಂಗಾ ಬೆಳೆ ಬೆಳೆದು ವ್ಯವಸಾಯ ಮಾಡುತ್ತಿದ್ದಾರೆ. ಇದೆಲ್ಲದಕ್ಕಿಂತ ಮುಖ್ಯವಾಗಿ ರೈತರ ಪರಿಸ್ಥಿತಿ ಸುಧಾರಿಸಬೇಕಾದರೆ ನೀರಾವರಿ ಸೌಲಭ್ಯ ಬೇಕಾಗುತ್ತದೆ. ವ್ಯವಸಾಯ ಕೇವಲ ಸಮಯಕ್ಕೆ ಅನುಕೂಲವಾಗತಕ್ಕಂಥದ್ದು ಆಗದೆ ಶಾಶ್ವತವಾದಂತಹ ನೀರಾವರಿ ವ್ಯವಸ್ಥೆಯಾಗಬೇಕು. ನೀರಾವರಿಯೇ ರೈತರಿಗೆ ಇರುವ ಮುಖ್ಯ ಸಮಸ್ಯೆ. ಈ ಸಮಸ್ಯೆಯನ್ನು ನಿವಾರಣೆ ಮಾಡುವುದಕ್ಕೆ ಸಾಧ್ಯವಿದೆ. ಈ ವರ್ಷ ನೀರಾವರಿಗೆ ೩೦೦ ಕೋಟಿ ರೂಪಾಯಿಗಳನ್ನು ಬಳಸುತ್ತೇವೆಂದು ಹೇಳಿದಿರಿ ಅದು ಆಗಲಿಲ್ಲ. ಅದಕ್ಕಾಗಿ ಪ್ರಯತ್ನ ಮಾಡಿದಂತಹ ವ್ಯಕ್ತಿ ತಮ್ಮ ಅಂತಃಕರಣ ನೊಂದು ಹೊರಗೆ ಹೋದರು, ಆ ಮಾತು ಬೇರೆ ದುರಾದೃಷ್ಟವಶಾತ್ ತಾವು ರೈತರ ರುವಾರಿಯಾಗಿ ಅಧಿಕಾರಕ್ಕೆ ಬಂದಿರಿ. ಕೃಷಿ ಆಧಾರಿತ ರೈತ ಈ ದೇಶದ ಸಮಸ್ತ ಜನರಿಗೂ ಅನ್ನ ಕೊಡುವ ಅನ್ನದಾತ ಎನ್ನುವ ಮಾತನ್ನು ನಾವು ಹೇಳುತ್ತೇವೆ, ಆದರೆ ಅವನ ಸಲುವಾಗಿ ನಾವು ಏನನ್ನೂ ಮಾಡಿಲ್ಲ. ಕೇಂದ್ರ ಸರ್ಕಾರದವರು ಈ ಸಾರಿ ಬಡ್ಜೆಟ್‌ನಲ್ಲಿ ಸಾಕಷ್ಟು ರಿಯಾಯಿತಿಗಳನ್ನು ತೋರಿಸಿ ಕೃಷಿಗೆ ಶೇಕಡ ೧೮ ಪರ್ಸೆಂಟ್ ರೈತರ ಸಲುವಾಗಿಯೇ ರಿಯಾಯಿತಿಯನ್ನು ತೋರಿಸಿದ್ದಾರೆ. ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಯಡಿಯೂರಪ್ಪನವರು ಮಾತನಾಡುತ್ತಾ ಹೇಳಿದರು ಕೇಂದ್ರ ಸರ್ಕಾರವೇ ಆಗಲಿ, ರಾಜ್ಯ ಸರ್ಕಾರವೇ ಆಗಲಿ ರೈತರ ಸಲುವಾಗಿ

ಏನೂ ಮಾಡಿಲ್ಲವೆಂದು ಹೇಳಿದರು. ಆದರೆ ಕೇಂದ್ರ ಸರ್ಕಾರ ಸಾಕಷ್ಟು ರಿಯಾಯಿತಿಯನ್ನು ಕೊಟ್ಟಿರುವುದರ ಜೊತೆಗೆ ರಾಜ್ಯ ಸರ್ಕಾರವು ಸಹ ಅಷ್ಟೇ ಪ್ರಮಾಣದಲ್ಲಿ ರಿಯಾಯಿತಿಯನ್ನು ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಪ್ರಕಟಿಸಬಹುದೆಂದು ನಾನು ನಿರೀಕ್ಷೆ ಮಾಡಿದ್ದೇನೆ. ಆದರೆ ರೈತರ ಸಲುವಾಗಿ ಮಾನ್ಯ ಸದಸ್ಯರಾದ ಶ್ರೀಮಾನ್ ಯಡಿಯೂರಪ್ಪನವರ ಜೀವಿತ ಪರ್ಯಂತ ರೈತರ ಸಲುವಾಗಿ ಏನನ್ನೂ ನಿರ್ಮಾಣ ಮಾಡಲು ಸಾಧ್ಯವಿಲ್ಲ. ಅವರು ಮಾಡುವುದಕ್ಕೂ ಆಗುವುದಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ವೈಯಕ್ತಿಕವಾಗಿ ಮಾಡಿದರೆ ಅದು ಬೇರೆ ವಿಷಯ. ಸರ್ಕಾರ ಇವತ್ತು ರೈತರ ಸಲುವಾಗಿ ಪರಿಣಾಮಕಾರಿಯಾದ ಕೆಲಸ ಮಾಡಬೇಕು, ರೈತರಿಗೆ ಅನುಕೂಲ ಮಾಡಿ ಕೊಡಬೇಕು, ಮತ್ತು ಆದಷ್ಟು ಜಾಗ್ರತೆ ಸವಳು ಭೂಮಿಯನ್ನು ಕೃಷಿಗೆ ಯೋಗ್ಯ ಭೂಮಿಯನ್ನಾಗಿ ಮಾಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಶ್ರೀ ಆರ್. ವೆಂಕಟರಾಮಯ್ಯನವರು, ಶ್ರೀ ಬಾಬುರೆಡ್ಡಿ ತುಂಗಳ್‌ರವರು ಹಾಗೂ ಶ್ರೀಮಾನ್ ರಾಮಯ್ಯನವರು ಆದ್ದರಿಂದ ಈಗ ಮಾನ್ಯ ಮಂತ್ರಿಗಳು ಉತ್ತರ ಕೊಡಬಹುದು.

ಶ್ರೀ ಆರ್. ರಾಮಯ್ಯ.—ಮಾನ್ಯ ಅಧ್ಯಕ್ಷರೇ, ನಾನು ಇದ್ದೇನೆ.

ಅಧ್ಯಕ್ಷರು.—ನೀವು ನಿಮ್ಮ ಸೀಟ್‌ನಲ್ಲಿ ಇಲ್ಲ. ಹೋಗಲಿ ನಾಳೆ ಬರುವ ಡಿಮ್ಯಾಂಡ್ ಮೇಲೆ ಮಾತನಾಡಿ.

ಶ್ರೀ ಆರ್. ರಾಮಯ್ಯ.—ಇಲ್ಲ ಅಧ್ಯಕ್ಷರೇ ೫ ನಿಮಿಷ ಅವಕಾಶ ಕೊಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೫ ನಿಮಿಷ ಅವಕಾಶ ಕೊಡಿ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಬೇಕಾದರೆ ನಾಳೆ ಉತ್ತರ ಕೊಡಲಿ. ಅವರು ಉತ್ತರ ಕೊಟ್ಟು ಕ್ಲಾರಿಫಿಕೇಷನ್ ಕೇಳುವಷ್ಟರಲ್ಲಿ ಸಾಕಷ್ಟು ಸಮಯವಾಗುತ್ತದೆ.

ಅಧ್ಯಕ್ಷರು.—ಆಗಲಿ.

ಶ್ರೀ ಆರ್. ರಾಮಯ್ಯ (ಹಿರಿಯೂರು).—ಮಾನ್ಯ ಅಧ್ಯಕ್ಷರೇ, ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳ ಬೇಡಿಕೆಗಳ ಮೇಲೆ ನಾನು ನಾಲ್ಕಾರು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ವಿನೋಬಭಾವೆಯವರು ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ ಅನ್ನದಾತನಿಗಿಂತ ಮಿಗಿಲಾದದಾತನಿಲ್ಲವೆಂದು. ಅನ್ನದಾತನನ್ನು ಸಾಕಷ್ಟು ಪುಸ್ತಕಗಳಲ್ಲಿ ಪರಿಚಯ ಮಾಡಿ ಕೊಟ್ಟಿದ್ದಾರೆ. ಕೃಷಿ ನಮ್ಮ ದೇಶದ ಬಹು ಜನರ ಕುಲ ಕಸಬು ಮತ್ತು ಚೇತನ ಶೀಲವಾದುದು, ಇದನ್ನು ಪರಿಣಾಮ ಕಾರಿಯನ್ನಾಗಿ ಮಾಡುವುದು ಸರ್ಕಾರದ ಕರ್ತವ್ಯ. ಹಸಿರು ಕ್ರಾಂತಿಯಾದಾಗ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ಸಹಕಾರದಿಂದ ಕೃಷಿ ಅಭಿವೃದ್ಧಿಯಾಗಬೇಕಾಗಿತ್ತು. ಆದರೆ ಕೃಷಿ ಅಷ್ಟಾಗಿ ಅಭಿವೃದ್ಧಿಯಾಗುತ್ತಿಲ್ಲ. ೧೯೮೭-೮೮ನೇ ಸಾಲಿನ ರಾಜ್ಯ ಸರ್ಕಾರದ ಒಂದು ವರದಿಯನ್ನು ನಾವು ಅವಲೋಕಿಸಿದಾಗ ಸಾಕಷ್ಟು ಕಾರ್ಯಕ್ರಮಗಳನ್ನು ನಾವು ಅಳವಡಿಸಿಕೊಂಡಿಲ್ಲವೆನ್ನುವುದು ಕಾಣುತ್ತದೆ.

ಸರ್ಕಾರ ಅಳವಡಿಸಿದಂಥ ಕಾರ್ಯಕ್ರಮಗಳಿಂದ ರೈತರಿಗೆ ಎಷ್ಟು ಪರಿಣಾಮಕಾರಿಯಾಗಿದೆ ಎಂಬ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ರೈತರುಗಳ ಅಭಿವೃದ್ಧಿಗಾಗಿ ಹಣವನ್ನು ಬಿಡುಗಡೆ ಮಾಡಲಾಗಿದೆ ಎಂದು ಹೇಳಿರುವುದು ಬರೀ ಪುಸ್ತಕದಲ್ಲಿ ಇದೆಯೇ ಹೊರತು ಬೇರೆ ಏನೂ ಆಗಿಲ್ಲ. ರೈತರುಗಳ ಕಸುಬಿಗೆ ಪೂರಕವಾದ ಅಭಿವೃದ್ಧಿ ಕೆಲಸಗಳಿಗೆ ಹಣವನ್ನು ಖರ್ಚು ಮಾಡತಕ್ಕ ವ್ಯವಸ್ಥೆ ಕಡಿಮೆಯಾಗುತ್ತಿದೆ ಎಂದು ನಮಗೆಲ್ಲರಿಗೂ ಅರ್ಥವಾಗುತ್ತದೆ. ನಮ್ಮ ರಾಜ್ಯದಲ್ಲಿ ಇರುವ ಒಟ್ಟು ಭೂಮಿಯಲ್ಲಿ ಕೇವಲ ೨೨ ಪರ್‌ಸೆಂಟ್‌ನಷ್ಟು ಭೂಮಿಗೆ ಮಾತ್ರ ನೀರಾವರಿ ಸೌಕರ್ಯ ಇದೆ. ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯತಕ್ಕ ಮಹತ್ತರ ಜವಾಬ್ದಾರಿ ನಮ್ಮ ಮೇಲೆ ಇದೆ. ಆದರೆ ನಮ್ಮ ರಾಜ್ಯದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಆಹಾರ ಧಾನ್ಯಗಳ ಉತ್ಪಾದನೆ ಕಡಿಮೆಯಾಗಿ ಲೆವಿ ವಸೂಲಾತಿ ಕಡಿಮೆಯಾಗಿದೆಯೆಂದು ಅಂಕಿ ಅಂಶಗಳಿಂದ ತಿಳಿದು ಬಂದಿದೆ. ಆಹಾರಧಾನ್ಯಗಳ ಉತ್ಪಾದನೆ ಕಡಿಮೆಯಾಗಿರುವುದರಿಂದ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ನೆರವನ್ನು ಕೇಳುವುದಕ್ಕೆ ಹೋಗ

ಬೇಕಾಗಿದೆಯೆಂದೂ ಸಹ ಹೇಳಿದ್ದೀರಿ. ಅಂದರೆ, ರಾಜ್ಯ ಸರ್ಕಾರವು ಆಹಾರ ಧಾನ್ಯಗಳನ್ನು ಎಷ್ಟು ಬೆಳೆಯಬೇಕೆಂದು ಗುರಿಯನ್ನು ನಿಗದಿ ಮಾಡಿಕೊಂಡಿತ್ತೋ, ಅಷ್ಟು ಗುರಿಯನ್ನು ಸಾಧಿಸುವುದಕ್ಕೆ ಆಗಲಿಲ್ಲವೆಂದಾಯಿತು. ಆಹಾರಧಾನ್ಯಗಳ ಬೆಳೆಗಳು ಕಡಿಮೆಯಾಗುವುದಕ್ಕೆ ಪ್ರಕೃತಿಯು ಅಡಚಣೆಯೂ ಇರಬಹುದು. ಅದೇ ಜಪಾನ್ ದೇಶವನ್ನು ಹೋಲಿಸಿ ನೋಡಿದರೆ, ಅಲ್ಲಿರತಕ್ಕ ಸ್ವಲ್ಪದೇ ಭೂಮಿಯಲ್ಲಿ ಅವರಿಗೆ ಬೇಕಾಗಿರುವುದಕ್ಕಿಂತ ಹೆಚ್ಚು ಆಹಾರಧಾನ್ಯಗಳನ್ನು ಬೆಳೆಯುತ್ತಾರೆ. ಜಪಾನ್ ದೇಶದಲ್ಲಿ ಯಾವ ರೀತಿ ಸೈಂಟಿಫಿಕ್ ಆಗಿ ಬೇಸಾಯವನ್ನು ಮಾಡುತ್ತಾರೋ ಅದೇ ನಿಯಮವನ್ನು ಅನುಸರಿಸಿ ಹೆಚ್ಚು ಆಹಾರಧಾನ್ಯಗಳನ್ನು ನಮ್ಮದೇಶದಲ್ಲಿ ಬೆಳೆಯುವುದಕ್ಕೆ ಏಕೆ ಪ್ರಯತ್ನ ಮಾಡುತ್ತಿಲ್ಲವೆಂದು ನಾವು ಯೋಚನೆ ಮಾಡಬೇಕಾಗಿದೆ. ನಮ್ಮ ದೇಶದಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರುಗಳಿಗೆ ಹಾಗೂ ಪರಿಶಿಷ್ಟ ಜಾತಿ ಜನಾಂಗದ ರೈತರುಗಳ ಬದುಕನ್ನು ಹಸನು ಮಾಡುವುದಕ್ಕೆಂದು ಸರ್ಕಾರ ಸಾಲ ಕೊಡುತ್ತಾ ಬಂದಿದೆಯೇ ವಿನಃ ರೈತರುಗಳು ತಮ್ಮ ಕಾಲ ಮೇಲೆ ತಾವು ನಿಲ್ಲುವುದಕ್ಕೆ ಏನೇನು ಅವಕಾಶಗಳನ್ನು ಕಲ್ಪಿಸಬೇಕೋ ಅವುಗಳನ್ನು ಕಲ್ಪಿಸುತ್ತಿಲ್ಲ. ಆದ್ದರಿಂದ ರೈತರುಗಳಿಗೆ ಅನಾವಶ್ಯಕವಾಗಿ ಕೊಡತಕ್ಕ ಸಾಲವನ್ನು ಕಡಿಮೆ ಮಾಡಿ ರೈತರುಗಳು ತಮ್ಮ ಕಾಲ ಮೇಲೆ ತಾವು ನಿಂತುಕೊಳ್ಳತಕ್ಕಂಥ ಅವಕಾಶವನ್ನು ಮಾಡಬೇಕು. ಆಮೇಲೆ, ನಮ್ಮ ರಾಜ್ಯದಲ್ಲಿ ಆಗಾಧ ಪ್ರಮಾಣದ ಭೂಮಿಯು ಮಳೆಯನ್ನೇ ಆಶ್ರಯಿಸಿಕೊಂಡಿದೆ, ಮಳೆ ಇಲ್ಲದಿದ್ದರೆ ಇಂಥ ಭೂಮಿಯಲ್ಲಿ ಬೆಳೆಯನ್ನು ಬೆಳೆಯುವುದಕ್ಕೆ ಸಾಧ್ಯವೇ ಇಲ್ಲ. ನಮ್ಮ ರಾಜ್ಯದಲ್ಲಿ ಒಣ ಬೇಸಾಯಕ್ಕೆ ಅನುಕೂಲವಾಗಲೆಂದು ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡನ್ನು ಮಾಡಲಾಗಿದೆ. ಈ ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡನವರು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಖರ್ಚು ಮಾಡುವ ಹಣವು ಸರಿಯಾದ ರೀತಿಯಲ್ಲಿ ಖರ್ಚಾಗುತ್ತಿದೆಯೇ ಎಂಬುದನ್ನು ಮಾನ್ಯ ಮಂತ್ರಿಯವರು ನೋಡುತ್ತಿರಬೇಕು. ಇಲ್ಲದಿದ್ದರೆ ಉದ್ದೇಶ ಸಫಲವಾಗುವುದಿಲ್ಲ. ಇದುವರೆಗೆ ಮಾಡಿರುವ ಖರ್ಚಿನಿಂದ ಒಣ ಬೇಸಾಯದ ಬಗ್ಗೆ ಏನಾದರೂ ಅಭಿವೃದ್ಧಿಯಾಗಿದೆಯೇ ಇಲ್ಲವೇ ಎಂಬ ಬಗ್ಗೆ ಕಾಳಜಿ ವಹಿಸಿ ನೋಡಿಕೊಳ್ಳಬೇಕು. ಸರಿಯಾದ ರೀತಿಯಲ್ಲಿ ಕಾಳಜಿ ವಹಿಸದಿದ್ದರೆ ಈ ಡ್ರೈಲಾಂಡ್ ಡೆವೆಲಪ್‌ಮೆಂಟ್ ಪ್ರಯೋಗವು ಪ್ರಯೋಗವಾಗಿಯೇ ಉಳಿಯುತ್ತದೆಯೆ ವಿನಃ ಬೇರೆ ಅಭಿವೃದ್ಧಿ ಆಗುವುದಿಲ್ಲ. ಆಮೇಲೆ, ಕೃಷಿ ಇಲಾಖೆಯು ಸಣ್ಣ ಮತ್ತು ಅತಿ ಸಣ್ಣ ರೈತರುಗಳಿಗೆ ಮಿನಿ ಕಿಟ್ (ವ್ಯವಸಾಯದ ಉಪಕರಣಗಳ ಪೆಟ್ಟಿಗೆ) ಕೊಡುವ ಒಂದು ಪ್ರೋಗ್ರಾಮ್ ಇದೆ. ಈ ಪ್ರೋಗ್ರಾಮ್ ಎಷ್ಟರಮಟ್ಟಿಗೆ ನಡೆದಿದೆಯೋ ಗೊತ್ತಿಲ್ಲ. ಮಿನಿ ಕಿಟ್ ಕೊಡುವ ಬಗ್ಗೆ ಸರ್ಕಾರದಲ್ಲಿ ವಿಚಾರಿಸಿದರೆ, ಅವರು ಅಧಿಕಾರ ವಿಕೇಂದ್ರೀಕರಣವಾದ ಮೇಲೆ ಮಿನಿ ಕಿಟ್‌ಗಳನ್ನು ಕೊಡುವ ವ್ಯವಸ್ಥೆಯನ್ನು ಮಂಡಲ ಪಂಚಾಯಿತಿಗಳಿಗೆ ವರ್ಗಾವಣೆ ಮಾಡಲಾಗಿದೆ ಎಂದು ಹೇಳುತ್ತಾರೆ. ಮಂಡಲ ಪಂಚಾಯಿತಿಯಲ್ಲಿ ವಿಚಾರ ಮಾಡಿದರೆ, ನಮಗೆ ಆ ತರಹ ಯಾವುದೇ ಸೂಚನೆ ಅಥವಾ ನೆರವು ಬಂದಿಲ್ಲವೆಂದು ಹೇಳುತ್ತಾರೆ. ಈ ಮಿನಿ ಕಿಟ್ಟ್‌ಗಳು ಯಾರಿಗೆ ಸಿಗುತ್ತಿದೆಯೋ ನಮಗಂತೂ ಗೊತ್ತಾಗುತ್ತಿಲ್ಲ. ಸರ್ಕಾರ ಮಾಡಿರುವ ಈ ಯೋಜನೆ ಎಲ್ಲಾ ರೈತರುಗಳಿಗೆ ಸಿಗುವಂತಾಗಬೇಕು. ಆದ್ದರಿಂದ, ಮಿನಿ ಕಿಟ್‌ಗಳು ಸರಿಯಾದ ರೀತಿಯಲ್ಲಿ ಅರ್ಹ ರೈತರುಗಳಿಗೆ ಸಿಗುವಂತಾಗಲು ಮಾನ್ಯ ಸಚಿವರು ಮೇಲ್ವಿಚಾರಣೆ ಮಾಡಬೇಕು. ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ಕೃಷಿಯನ್ನು ಕೈಗಾರಿಕೆಯಾಗಿ ಘೋಷಿಸಬೇಕು. ಯಾವ ರೀತಿ ಕೈಗಾರಿಕೆಗಳಿಗೆ ಸಹಾಯಧನ ಕೊಡುತ್ತೀರೋ, ಕೈಗಾರಿಕೆಗಳಿಗೆ ತೊಂದರೆ ಬಂದಾಗ ಅನುಕೂಲವಾಗಲೆಂದು ಇನ್‌ಷ್ಯೂರೆನ್ಸ್ ಮಾಡುವ ನಿಯಮವನ್ನು ಹೇಗೆ ಮಾಡಿದ್ದೀರೋ ಅದೇ ರೀತಿ ಅನುಕೂಲಗಳನ್ನು ಕೃಷಿಗೂ ಕೊಡಬೇಕು. ಕೃಷಿಯನ್ನು ಕೈಗಾರಿಕೆಯೆಂದು ಘೋಷಣೆ ಮಾಡಬೇಕು. ಜೊತೆಗೆ ರೈತರು ಬೆಳೆದ ಮಾಲನ್ನು ಸರ್ಕಾರವು ಬೆಂಬಲ ಬೆಲೆ ಕೊಟ್ಟು ಕೊಂಡುಕೊಳ್ಳಬೇಕು. ಕರ್ನಾಟಕದಲ್ಲಿ ಕಬ್ಬನ್ನು ಬೆಳೆಯಬೇಕಾದರೆ ದುಬಾರಿ ಖರ್ಚು ತಗಲುತ್ತದೆ. ಕಬ್ಬು ಬೆಳೆ ಬೆಳೆಯುತಕ್ಕ ರೈತರಿಗೆ ಲಾಭ ಬರತಕ್ಕ ರೀತಿಯಲ್ಲಿ ಸರಿಯಾದ ಬೆಲೆಯನ್ನು ಕೊಡತಕ್ಕಂಥ ಕೆಲಸ ಮಾಡಬೇಕು. ಹತ್ತಿ ಬೆಳೆಯನ್ನು ನಮ್ಮ ರಾಜ್ಯದಲ್ಲಿ ಸಾಕಷ್ಟು ಹೆಕ್ಟೇರ್ ಭೂಮಿಯಲ್ಲಿ ಬೆಳೆಯುವುದಕ್ಕೆ ರೈತರು ಸಿದ್ಧರಿದ್ದಾರೆ.

೬-೩೦ ಪಿ.ಎಂ.

ಆದರೆ ನಮ್ಮಲ್ಲಿ ಬೀಜಗಳ ಕೊರತೆ ಇದೆ ಎನ್ನತಕ್ಕಂಥಾದ್ದು ಸಾಮಾನ್ಯವಾಗಿ ಮಾನ್ಯ ಸಚಿವರಿಗೂ ಗೊತ್ತಿದೆ. ಈ ವಿಚಾರ ಅವರಿಗೂ ಮನವರಿಕೆ ಆಗಿದೆ ಎಂದು ತಿಳಿದುಕೊಂಡಿದ್ದೇವೆ.

ಇವೊತ್ತು ಕೆಲವು ಭಾಗಗಳಲ್ಲಿ ನಾವು ಬೀಜಗಳನ್ನು ಪೂರೈಕೆ ಮಾಡುತ್ತಿದ್ದೇವೆ. ಇನ್ನು ಉಳಿದುದಕೆ ಖಾಸಗಿಯವರು ಕೊಡತಕ್ಕಂಥಾದ್ದರ ಮೇಲೆ ಅವಲಂಬಿಸಬೇಕಾಗಿದೆ, ಬಹುಶಃ ಹಿಂದೆ ಈ ಕುರಿತು ನರಗುಂದ ಮತ್ತು ನವಲಗುಂದ ಭಾಗಗಳಲ್ಲಿ ಅನಾಹುತಗಳು ಆದುದ್ದನ್ನು ನಾವು ಗಮನಿಸಬಹುದು. ಅಲ್ಲಿ ಕಳಪೇ ಬೀಜಗಳನ್ನು ಕೊಟ್ಟ ಪರಿಣಾಮವಾಗಿ ನಡೆದ ಆಂಧೋಳನ ಎಲ್ಲರಿಗೂ ಗೊತ್ತಿರುವ ವಿಷಯವಾಗಿದೆ. ಅದು ಮರುಕಳಿಸದಂತೆ ನಾವು ಇಂದು ಗಮನ ಕೊಡಬೇಕಾಗಿದೆ. ಅದರ ಹೊಣೆಗಾರಿಕೆಯು ಸರಕಾರದ ಮೇಲೆ ಇರಬೇಕು. ರೈತರ ಹಿತದೃಷ್ಟಿಯನ್ನು ನಾವು ಕಾಪಾಡಬೇಕು. ಆ ಒಂದು ದೃಷ್ಟಿಯನ್ನು ಇಟ್ಟುಕೊಂಡು ಎಲ್ಲಾ ಬೆಳೆಗಳಿಗೆ ಇನ್‌ಷ್ಯೂರೆನ್ಸ್‌ನ್ನು ಕಡ್ಡಾಯವಾಗಿ ತರತಕ್ಕಂಥ ಒಂದು ಪ್ರಯತ್ನವನ್ನು ಈ ಕೃಷಿ ವಿಚಾರದಲ್ಲಿ ಮಾಡಿದರೆ ರೈತರಿಗೆ ಆಗತಕ್ಕಂಥ ನಷ್ಟವನ್ನು ಅಂದರೆ ಪ್ರಕೃತಿಯ ವಿಕೋಪದಿಂದ ಮುಂದಾಗಿ ಆಗತಕ್ಕಂಥ ನಷ್ಟವನ್ನು ತುಂಬಿಕೊಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಬಯಸುತ್ತೇನೆ. ಇನ್ನೂ ಸ್ವಲ್ಪ ಮಟ್ಟಿಗೆ ಹೇಳುವುದಾದರೆ, ಈ ಹಸಿರು ಕ್ರಾಂತಿ ಸಾಧಾರಣೆ ಮಾಡತಕ್ಕಂಥಾದ್ದರಲ್ಲಿ ಕೇಂದ್ರ ಸರಕಾರದ ಕೊಡುಗೆಯ ಬಗ್ಗೆ ಈಗಾಗಲೇ ಹಲವಾರು ಜನ ಮಾನ್ಯ ಸದಸ್ಯರು ಹೇಳಿದ್ದಾರೆ. ಅವುಗಳಲ್ಲಿ ಡಿ.ಪಿ.ಎ.ಪಿ., ಎನ್.ಆರ್.ಇ.ಪಿ., ಆರ್.ಎಲ್.ಇ.ಜಿ.ಪಿ. ಮುಂತಾದವುಗಳು ಇವೆ. ಕೆಲವು ವಿಶಿಷ್ಟ ವರ್ಗಗಳಿಗೆ ಎಷ್ಟು ಹಣವನ್ನು ಖರ್ಚು ಮಾಡತಕ್ಕಂಥದ್ದು ಎಂದು ನಿರ್ದಿಷ್ಟವಾಗಿ ಇದೆ. ಆ ಗುರಿ ಮತ್ತು ಹಣ ಎರಡನ್ನೂ ಕೂಡ ಸಕಾಲಿಕವಾಗಿ, ಸೂಕ್ತವಾಗಿ ಬಳಸಿಕೊಳ್ಳಬೇಕು. ಅದನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು. ಯಾರು ಅತ್ಯಂತ ಕೆಳಮಟ್ಟದಲ್ಲಿ ಇದ್ದಾರೆ, ಅವರಿಗೆ ತಮ್ಮ ಜೀವನವನ್ನು ಉತ್ತಮ ಮಟ್ಟಕ್ಕೆ ತರುವುದಕ್ಕೆ ಉಪಯೋಗವಾಗುವಂತೆ ಧಾರಾಳವಾಗಿ ಆ ಯೋಜನೆಯನ್ನು ಬಳಸಿಕೊಳ್ಳಬೇಕು. ಇಲ್ಲದೇ ಹೋದರೆ ಯೋಜನೆಯ ನಿರ್ದಿಷ್ಟಪಡಿಸಿದ ಹಣವು ಹಾಗೆಯೇ ಉಳಿಯುವ ಸಂದರ್ಭ ಬರುತ್ತದೆ. ಇಲಾಖೆಯವರು ನಮ್ಮ ರಾಜ್ಯ ಸರ್ಕಾರದವರಿಂದ ಸುಮಾರು ೧೬-೧೭ ಕೋಟಿ ರೂಪಾಯಿಗಳು ಹೀಗೆ ಉಳಿದಿರುವುದನ್ನು ಕೆಲವು ನಿದರ್ಶನಗಳ ಮೂಲಕ ಗಮನಿಸಬಹುದಾಗಿದೆ. ಆದುದರಿಂದ ಆ ಹಣವನ್ನು ವ್ಯವಸ್ಥಿತವಾಗಿ ಖರ್ಚು ಮಾಡುವುದಕ್ಕೆ ಆಸಕ್ತಿಯನ್ನು ವಹಿಸಬೇಕೆಂದು ಹೇಳುತ್ತಾ, ಈ ಸಂದರ್ಭದಲ್ಲಿ ನನಗೆ ಮಾತನಾಡಲು ಅವಕಾಶವನ್ನು ಕೊಟ್ಟ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ,

ಅಧ್ಯಕ್ಷರು.—ಒಟ್ಟು ಈಗಾಗಲೇ ೧೬ ಜನ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಇದರಲ್ಲಿ ೫ ಜನರು ಜನತಾ ಪಕ್ಷದ ಸದಸ್ಯರು ೧ ಘಂಟೆ ೨೧ ನಿಮಿಷಗಳ ಕಾಲ ಮಾತನಾಡಿದ್ದಾರೆ. ೧೧ ಜನ ಮಾನ್ಯ ಸದಸ್ಯರು ಉಳಿದ ಪಕ್ಷಗಳವರು ಎಲ್ಲಾ ಸೇರಿ- ೩ ಘಂಟೆ ೫೧ ನಿಮಿಷಗಳ ಕಾ ಮಾತನಾಡಿದ್ದಾರೆ. ಒಟ್ಟು ೫ ಘಂಟೆ ೨೦ ನಿಮಿಷಗಳ ಕಾಲ ಮಾತನಾಡಿದ್ದಾರೆ. ಈಗ ಮಾನ್ಯ ಮಂತ್ರಿಯವರಿಂದ ಚರ್ಚೆಗೆ ಉತ್ತರ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಅಧ್ಯಕ್ಷರೇ, ಇಲ್ಲಿಯ ತನಕ ತಾವುಗಳು ಹೇಳಿದ ಹಾಗೆ ನಾವು ಕುಳಿತುಕೊಂಡಿದ್ದೇವೆ. ಇನ್ನು ಈ ದಿವಸ ಮತ್ತೆ ಚರ್ಚೆ ಮುಂದುವರಿಸುವುದು ಬೇಡ. ಮಾನ್ಯ ಮಂತ್ರಿಯವರು ನಾಳೆ ಉತ್ತರವನ್ನು ಕೊಡಲಿ. ನಾವು ತಮಗೆ ಸಹಕಾರ ನೀಡಿದ್ದೇವೆ. ಇನ್ನು ಸಮಯ ಆಗಿದೆ. ನಾಳೆಗೆ ಮುಂದುವರಿಸಿದರೆ ಅನುಕೂಲವಾಗುತ್ತದೆ.

ಅಧ್ಯಕ್ಷರು.—ಮಾನ್ಯ ಖರ್ಗೆಯವರೇ, ದಯಮಾಡಿ ಕುಳಿತುಕೊಳ್ಳಿ. ಇವೊತ್ತು ಮಂತ್ರಿಗಳಿಂದ ಉತ್ತರ ಮುಗಿಯಲಿ. ನಾಳೆ ಬೇರೆ ಚರ್ಚೆಗಳು ಇವೆ. ರಶೀದ್ ಪ್ರಕರಣದ ಬಗ್ಗೆ ಪ್ರಸ್ತಾಪ ಇದೆ. ಮಧ್ಯಾಹ್ನ ಮತ್ತೆ ಡಿಮಾಂಡ್ಸ್ ಇವೆ. ಆದುದರಿಂದ ಇವೊತ್ತು ಮುಗಿಸೋಣ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಯಾವ ಪ್ರಸ್ತಾಪ ಇದ್ದರೂ ನಾಳೆಗೆ ಮಾಡಬಹುದು, ಈಗ ತುಂಬಾ ಸಮಯ ಆಗಿದೆ.

ಅಧ್ಯಕ್ಷರು.—ನಿನ್ನೆ ಮುಗಿಯ ಬೇಕಾಗಿದ್ದುದು ಇವೊತ್ತು ಮುಗಿಸೋಣ. ಒಟ್ಟಿನಲ್ಲಿ ಸ್ನಾನ ಕಾರ್ಯ ಮತ್ತು ಸ್ವಕಾರ್ಯ ಎರಡೂ ಆಗಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಈಗ ಚರ್ಚೆಗೆ ಇಬ್ಬರು ಮಂತ್ರಿಯವರಿಂದ ಉತ್ತರ ಆಗಬೇಕು. ಅಷ್ಟು ಬೇಗ ಮುಗಿಸುವುದಕ್ಕೆ ಆಗುತ್ತದೆಯೇ? ನಾಳೆ ಮುಗಿಸೋಣ.

ಅಧ್ಯಕ್ಷರು.—ಈ ಹಿಂದೆಯೂ ಕೂಡ ನಾವೆಲ್ಲರೂ ಸಾಕಷ್ಟು ಹೊತ್ತು ಕುಳಿತುಕೊಂಡು ಕಾರ್ಯಕಲಾಪಗಳನ್ನು ಮಾಡಿದ್ದೇವೆ. ಈಗ ಈ ಚರ್ಚೆಗೆ ಉತ್ತರವನ್ನು ಮುಗಿಸೋಣ. ನಾಳೆ ಬೇಕಾದರೆ ೫ ಘಂಟೆಗೆ ಕಲಾಪಗಳನ್ನು ಮುಗಿಸೋಣ. ೬ ಘಂಟೆ ೩೫ ನಿಮಿಷ ಈಗ ಆಗಿದೆ. ಅದು ಅಷ್ಟು ಹೊತ್ತೇನೂ ಅಲ್ಲ. ರಾತ್ರಿ ೧೦–೧೧ ಘಂಟೆಯವರೆಗೂ ನಾವು ಕುಳಿತುಕೊಂಡು ಕೆಲಸ ಮಾಡಿಲ್ಲವೇ ?

(ಗೊಂದಲ)

ಶ್ರೀ ಯು. ಭೂಪತಿ.— ಮಾನ್ಯ ಮಂತ್ರಿಗಳು ಪ್ರಿಪರೇಷನ್ ಇಲ್ಲದೆ ಉತ್ತರವನ್ನು ಕೊಡುವುದಾದರೂ ಹೇಗೆ ? ಚರ್ಚೆ ಈಗ ತಾನೆ ಮುಗಿದಿದೆ. ಮಂತ್ರಿಯವರು ಸಮರ್ಪಕವಾದ ಉತ್ತರವನ್ನು ಕೊಡ ಬೇಕಾಗುತ್ತದೆ. ಆದುದರಿಂದ ನಾಳೆಗೆ ಇಟ್ಟುಕೊಳ್ಳೋಣ.

(ಗೊಂದಲ)

ಅಧ್ಯಕ್ಷರು.—ಸಭೆಯ ಅಭಿಪ್ರಾಯದ ಪ್ರಕಾರ ಹೋಗುವುದನ್ನು ನೀವು ಕಲಿಯಬೇಕು. ಆಡಳಿತ ಪಕ್ಷದವರ ಅಭಿಪ್ರಾಯವನ್ನೂ ಕೇಳಿ. ಎಲ್ಲ ನಿಮ್ಮದೇ ಆಗಿದೆಯಲ್ಲಾ. ಕೂಡ್ರಿ, ಎಲ್ಲ ಕೂಡ್ರಿ.

(ಗೊಂದಲ)

ಶ್ರೀ ಯು. ಭೂಪತಿ.—ರಾತ್ರಿ ೧೨ ಗಂಟೆಯವರೆಗೂ ನಾವಿರಲು ಸಿದ್ಧ, ಆದರೆ

(ಗೊಂದಲ)

ಅಧ್ಯಕ್ಷರು.—ನಾನು ಇಡೀ ಸಭೆಯ ಅಭಿಪ್ರಾಯದ ಪ್ರಕಾರ ಸಭೆ ನಡೆಸಬೇಕಾಗುತ್ತದೆ. ನಾನು ಏನು ಮಾಡಲಿ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕೊಶ್ಚನ್ ಹವರ್‌ನಲ್ಲಿ ಐದು ನಿಮಿಷ ಕೊಡುವುದಕ್ಕೆ ಆಗುವುದಿಲ್ಲ. ಇಂಥಾ ವಿಷಯಕ್ಕೂ ರೂಲ್ಸ್ ಎಂದರೆ ಹೇಗೆ ?

(ಗೊಂದಲ)

ಶ್ರೀ ಯು. ಭೂಪತಿ.—ಬೇಕಾದರೆ ರಾತ್ರಿ ೧೨ ರವರೆಗೆ ಕೂತುಕೊಳ್ಳುತ್ತೇವೆ. ಒಂದು ನಿಮಿಷ ಕೇಳಿ. ಚರ್ಚೆ ಈಗತಾನೇ ಮುಗಿದಿದೆ. ಉತ್ತರ ಕೊಡಲು ಮಂತ್ರಿಗಳಿಗೆ ಸಮಯ ಬೇಡವೇ ?

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಒಂದು ಸಲಹೆಯನ್ನು ಸಭೆಯ ಮುಂದಿಡುತ್ತೇನೆ. ಮಾನ್ಯ ಖರ್ಗೆಯವರು ಒಪ್ಪುತ್ತಾರೆಂದು ನನ್ನ ನಂಬಿಕೆ. ನಾಳೆ ಬೆಳಿಗ್ಗೆ ೧೦ ಗಂಟೆಗೆ ಸೇರೋಣ, ಇದಕ್ಕೆ ಒಪ್ಪುತ್ತಾರೆಯೇ ?

ಮಾನ್ಯ ಸದಸ್ಯರು.—ಅಗ್ರೀಡ್

(ಸದಸ್ಯರ ಗೈರು ಹಾಜರಿಗೆ ಅನುಮತಿ ಕೋರಿಕೆ)